ಗುರುವಾರ, ಆಗಸ್ಟ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 225 | ಪುಟ 16
prajavani.net prajavani www.prajavani.net

ವಾಂಗ್ ಯಿ ಭೇಟಿ

ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಆ.18ರಂದು ಭಾರತಕ್ಕೆ ಭೇಟಿ ನೀಡಲಿದ್ದು, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಬಾಲ್ ಅವರೊಂದಿಗೆ ಗಡಿ ವಿಷಯದ ಕುರಿತು ಮಾತುಕತೆ ನಡೆಸಲಿದ್ದಾರೆ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 80,539 | ನಿಫ್ಟಿ 24,619 | $/₹ 87.47 | ಚಿನ್ನ (Std. 10g) ₹1,04,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,800 (ಬೆಂಗಳೂರು)

ಸ್ವಾತಂತ್ರ್ಯದ ಸಂಭ್ರಮ

ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಚೆನ್ನೈನ ಸಮುದ್ರದಾಳದಲ್ಲಿನ ಅಕ್ವೇರಿಯಂನಲ್ಲಿ ಸ್ಕೂಬಾ ಡೈವರ್‌ವೊಬ್ಬರು ತ್ರಿವರ್ಣ ಧ್ವಜವನ್ನು ಹಾರಿಸಿ ಬುಧವಾರ ಸಂಭ್ರಮಿಸಿದರು

ಕಂದಾಯ ದಾಖಲೆ ದಾರಿ ಸಲೀಸು

ಡಿಜಿಟಲ್ ಸಹಿ ಕಡ್ಡಾಯಗೊಳಿಸುವ ನೋಂದಣಿ ಮಸೂದೆ–2025'ಕ್ಕೆ ಅಂಗೀಕಾರ ನೀಡಿದ ವಿಧಾನಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ, ಮನೆಗಳ ಅಕ್ರಮ–ಸಕ್ರಮ, ಕೃಷಿ ಸಾಲದ ಋಣಮುಕ್ತ ಪ್ರಮಾಣಪತ್ರ ಸೇರಿದಂತೆ ಕಂದಾಯ ದಾಖಲೆಗಳಿಗಾಗಿ ಸರ್ಕಾರಿ ಕಚೇರಿಗಳ ಬಾಗಿಲಿಂದ ಬಾಗಿಲಿಗೆ ನಾಗರಿಕರು ಅಲೆದಾಡುವುದನ್ನು ತಪ್ಪಿಸುವತ್ತ ಸರ್ಕಾರ ಹೆಜ್ಜೆ ಇಟ್ಟಿದೆ.

ಸ್ವತ್ತುಗಳ ನೋಂದಣಿ ಪ್ರಕ್ರಿಯೆಯನ್ನು ಸರಳ ಮತ್ತು ಸುಲಲಿತಗೊಳಿಸುವ ಉದ್ದೇಶದಿಂದ 'ಕಂಪ್ಯೂಟರ್ ಡಿಜಿಟಲ್ ಸಹಿ ಕಡ್ಡಾಯ ವ್ಯವಸ್ಥೆ' ರಾಜ್ಯದಲ್ಲಿ ಜಾರಿಗೆ ಬರಲಿದೆ. ಇದರಿಂದ ಮಧ್ಯವರ್ತಿಗಳ ಹಾವಳಿಗೂ ಕಡಿವಾಣ ಬೀಳಲಿದೆ ಎಂದು ಸರ್ಕಾರ ಹೇಳಿದೆ.

ಈ ಉದ್ದೇಶದಿಂದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಂಡಿಸಿದ 'ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ 2025'ಕ್ಕೆ ವಿಧಾನಸಭೆ ಬುಧವಾರ ಅನುಮೋದನೆ ನೀಡಿದೆ.

'ಈ ತಿದ್ದುಪಡಿಯ ಮೂಲಕ ಸೆಕ್ಷನ್ 9(ಎ) ಅಡಿ ಕಂಪ್ಯೂಟರ್ ಡಿಜಿಟಲ್ ಸಹಿ ವ್ಯವಸ್ಥೆ ಕಡ್ಡಾಯಗೊಳಿಸಲಾಗಿದೆ. ಅಧಿಕಾರಿಗಳ ಮಧ್ಯಪ್ರವೇಶ ಕಡಿಮೆಗೊಳಿಸಿ, ಸ್ವಯಂಚಾಲಿತವಾಗಿ (ಆಟೋಮ್ಯಾಟಿಕ್) ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸುವ ವ್ಯವಸ್ಥೆ ಇದಾಗಿದೆ. ಇನ್ನು ಮುಂದೆ ನೋಂದಣಿ ಪತ್ರಕ್ಕೆ ಉಪನೋಂದಣಾಧಿಕಾರಿ ಕೈಬರಹದ ಸಹಿ ಇರುವುದಿಲ್ಲ' ಎಂದು ಮಸೂದೆಯ ಕುರಿತು ವಿವರ ನೀಡಿದ ಕೃಷ್ಣ ಬೈರೇಗೌಡ ಹೇಳಿದರು.



ವಿಧಾನಸಭೆಯಲ್ಲಿ ಮಸೂದೆ ಕುರಿತು ವಿವರಿಸಿದ ಕೃಷ್ಣ ಬೈರೇಗೌಡ

ಸುಗಮ ಕೆಲಸಕ್ಕೆ ಮಸೂದೆ ದಾರಿ:

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ಕೆಎಚ್‌ಬಿ), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಥವಾ ಯಾವುದೇ ಪ್ರಾಧಿಕಾರ ಒಬ್ಬರಿಗೆ ನಿವೇಶನ ಮಂಜೂರು ಮಾಡಿದರೆ ಉಪನೋಂದಣಾಧಿಕಾರಿ ಕಚೇರಿಗೆ ಹೋಗುವ ಅಗತ್ಯವಿಲ್ಲ. ಹಂಚಿಕೆದಾರನಿಗೆ ಸ್ವಯಂಚಾಲಿತವಾಗಿ ನಿವೇಶನದ ನೋಂದಣಿ ಮಾಡಿಕೊಡಲಾಗುತ್ತದೆ. ಇದು ಡಿಜಿಟಲ್ ಸಹಿ ಹೊಂದಿರುತ್ತದೆ.
- ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡ ಅಕ್ರಮ ಮನೆಗಳನ್ನು ಸಕ್ರಮಗೊಳಿಸುವ 94 ಸಿ, 94 ಸಿ.ಸಿ ಅಡಿ ನೀಡಲಾಗುವ ಹಕ್ಕುಪತ್ರಗಳನ್ನು ನೋಂದಣಿ ಮಾಡಿಕೊಡುವ ಅಧಿಕಾರ ತಹಶೀಲ್ದಾರ್ ಅವರಿಗೆ ನೀಡಲಾಗಿದೆ.

11

ದಾಖಲೆಗಳನ್ನು ಅಪ್‌ಲೋಡ್ ಮಾಡುವಾಗ ಸಣ್ಣ ತಪ್ಪುಗಳಾದರೂ ಅಪ್‌ಲೋಡ್ ಮಾಡುವ ಸಿಬ್ಬಂದಿಯನ್ನೇ ಹೊಣೆಗಾರರನ್ನಾಗಿ ಮಾಡಿ ಕ್ರಮ ತೆಗೆದುಕೊಳ್ಳಬೇಕು

ಯು.ಟಿ.ಖಾದರ್, ಸಭಾಧ್ಯಕ್ಷ

ರಾಜ್ಯದ ಎಲ್ಲ ಕಡೆ ಸರ್ವರ್ ಡೌನ್ ಆಗ್ತಾ ಇದೆ. ಇ–ಖಾತಾ ನೋಂದಣಿ ಒತ್ತಡ ಜಾಸ್ತಿ ಆಗುತ್ತಿರುವುದರಿಂದ ಸಮಸ್ಯೆ ಉಂಟಾಗಿದೆ. ಸರ್ವರ್ ಸಾಮರ್ಥ್ಯ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಿ

ತನ್ವೀರ್ ಸೇಠ್, ಕಾಂಗ್ರೆಸ್ ಸದಸ್ಯ

ಆಶ್ರಯ ನಿವೇಶನಗಳು ನೋಂದಣಿ ಆಗುತ್ತಾ ಇಲ್ಲ. ಕಂದಾಯ ನಿವೇಶನಗಳಲ್ಲೂ ಇದೇ ಸಮಸ್ಯೆ ಇದೆ. ನೋಂದಣಿ ಮಾಡಿಸಲು ಕ್ರಮ ತೆಗೆದುಕೊಳ್ಳಬೇಕು

ಎಸ್.ಆರ್.ವಿಶ್ವನಾಥ್, ಬಿಜೆಪಿ ಸದಸ್ಯ

ಕೃಷಿ ಜಮೀನು ಖರೀದಿ: ಅನುಮತಿ ಅಧಿಕಾರ ಜಿಲ್ಲಾಧಿಕಾರಿಗೆ

ಶಿಕ್ಷಣ ಸಂಸ್ಥೆಗಳು, ಸಣ್ಣ ಸಂಸ್ಥೆಗಳು ಹಾಗೂ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಸೆಕ್ಷನ್ 109ರ ಅಡಿ ಕೃಷಿ ಜಮೀನು ಖರೀದಿಸಲು ಅನುಮತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

ಇನ್ನು ಮುಂದೆ ಜಿಲ್ಲಾಧಿಕಾರಿಗಳೇ 4 ಹೆಕ್ಟೇರ್‌ವರೆಗಿನ ಜಮೀನು ಖರೀದಿಗೆ ಅನುಮತಿ ನೀಡಬಹುದು. ಪ್ರಸ್ತಾವವನ್ನು ಮುಖ್ಯ ಕಾರ್ಯದರ್ಶಿವರೆಗೆ ತರುವ ಅಗತ್ಯವಿಲ್ಲ. ಈ ರೀತಿ ನೀಡುವ ಅನುಮತಿ ಸ್ವಯಂಚಾಲಿತವಾಗಿ ಭೂ–ಪರಿವರ್ತನೆಯಾಗಿರುತ್ತದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿವರಣೆ ನೀಡಿದರು.

ಇದಕ್ಕಾಗಿ ತರಲಾದ 'ಕರ್ನಾಟಕ ಭೂಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಮಸೂದೆ' ಮಂಡಿಸಿದ ಸಚಿವರು, ಈ ಕುರಿತು ವಿವರ ನೀಡಿದರು.

- ಈ ಹಿಂದೆ ಸಣ್ಣ ಉದ್ದಿಮೆದಾರರು ಅಥವಾ ಶಿಕ್ಷಣ ಸಂಸ್ಥೆಗಳು ಜಮೀನನ್ನು ಯಾವುದೋ ಉದ್ದೇಶಕ್ಕೆ ಪಡೆದು ಬೇರೆ ಯಾವುದೋ ಉದ್ದೇಶಕ್ಕೆ ಬಳಸಿಕೊಳ್ಳಲು ಅನುಮತಿ ಕೇಳುತ್ತಿದ್ದರು. ಅದಕ್ಕೆ ಅವಕಾಶವಿರಲಿಲ್ಲ. ಈಗ ಅದಕ್ಕೆ ಅವಕಾಶ ನೀಡಲಾಗಿದೆ.
- ರಾಜ್ಯ ಯಾವುದೇ ಭಾಗದಲ್ಲಿ 2 ಎಕರೆಯವರೆಗಿನ ಕೃಷಿ ಜಮೀನನ್ನು ಕೈಗಾರಿಕೆ ಉದ್ದೇಶಕ್ಕೆ ಪರಿವರ್ತನೆ ಮಾಡುವುದಕ್ಕೆ ವಿನಾಯಿತಿ ನೀಡಲಾಗುವುದು.
- ಸೌರ ಶಕ್ತಿ, ಪವನ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಕೃಷಿ ಜಮೀನಿನ ಸ್ವಯಂಚಾಲಿತ ಪರಿವರ್ತನೆಗೆ ಅವಕಾಶ ನೀಡಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಒತ್ತಾಯವೂ ಇತ್ತು. ಬಹಳ ದಿನಗಳ ಚರ್ಚೆಯ ಬಳಿಕ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಅಕ್ರಮ ನೋಂದಣಿ ತಡೆ; ಶೀಘ್ರ ನಿಯಮ

ನಿಯಮಬಾಹಿರ, ಅಕ್ರಮ ನೋಂದಣಿ ಪ್ರಕರಣಗಳನ್ನು ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾ ನೋಂದಣಾಧಿಕಾರಿಗೆ ನೀಡಿರುವ ಕರ್ನಾಟಕ ನೋಂದಣಿ ತಿದ್ದುಪಡಿ ಕಾಯ್ದೆ–2023ಕ್ಕೆ ಸೆಪ್ಟೆಂಬರ್ ಒಳಗೆ ಕರಡು ನಿಯಮಗಳನ್ನು ಪ್ರಕಟಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಎಂ.ಟಿ.ಬಿ. ನಾಗರಾಜು, ಹೇಮಲತಾ ನಾಯಕ್, ಕಾಂಗ್ರೆಸ್‌ನ ರಾಮೋಜಿಗೌಡ ಅವರ ಪ್ರತ್ಯೇಕ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ವಿಧಾನಮಂಡಲ ಅಂಗೀಕರಿಸಿದ್ದ ಮಸೂದೆಯನ್ನು ರಾಜ್ಯಪಾಲರು ರಾಷ್ಟ್ರಪತಿಗೆ ಕಳುಹಿಸಿದ್ದರು. 14 ತಿಂಗಳ ಬಳಿಕ ರಾಷ್ಟ್ರಪತಿಯವರ ಅಂಕಿತ ಬಿದ್ದಿದೆ ಎಂದರು.

11

ಮೈನವಿರೇಳಿಸಿದ ಕಸರತ್ತು

ಪ್ರಜಾವಾಣಿ ಚಿತ್ರ:

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಬುಧವಾರ ಬಸವೇಶ್ವರ (ಮೂಲನಂದೀಶ್ವರ) ಜಾತ್ರೋತ್ಸವದ ಪ್ರಯುಕ್ತ ಕಸರತ್ತು ಮತ್ತು ಭಾರ ಎತ್ತುವ ಸ್ಪರ್ಧೆ ವೀಕ್ಷಿಸಲು ಅಪಾರ ಸಂಖ್ಯೆಯಲ್ಲಿ ಜನರು ಸೇರಿದ್ದರು

ಅಕ್ರಮವಾಗಿ ಕಬ್ಬಿಣದ ಅದಿರು ಸಾಗಿಸಿದ ಪ್ರಕರಣ

ಸೈಲ್ ಮನೆಯಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಕಾರವಾರ/ಹೊಸಪೇಟೆ: ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಕಬ್ಬಿಣದ ಅದಿರು ಸಾಗಿಸಿದ ಪ್ರಕರಣದ ಸಂಬಂಧ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಶಾಸಕ ಸತೀಶ ಸೈಲ್ ಅವರ ಕಾರವಾರದ ಮನೆಯಲ್ಲಿ ಮತ್ತು ಉದ್ಯಮಿಗಳಾದ ಖಾರದಪುಡಿ ಮಹೇಶ್ ಮತ್ತು ಸ್ವಸ್ತಿಕ್ ನಾಗರಾಜ್ ಅವರ ಹೊಸಪೇಟೆಯ ಮನೆಗಳು, ಕಚೇರಿಗಳಲ್ಲಿ ಬುಧವಾರ ಶೋಧ ನಡೆಸಿದರು. ಸಂಜೆಯವರೆಗೂ ಪರಿಶೀಲನೆ ನಡೆಯಿತು.

ಸತೀಶ ಸೈಲ್

ಕಾರವಾರದಲ್ಲಿ ಇರುವ ಶಾಸಕ ಸತೀಶ ಸೈಲ್ ಅವರ ಮನೆ

'ಇ.ಡಿ ಅಧಿಕಾರಿ ಕೇಶವ ರಾವ್ ನೇತೃತ್ವದಲ್ಲಿ 24 ಮಂದಿಯ ತಂಡ ಕಾರವಾರದಲ್ಲಿ ಪರಿಶೀಲನೆ ನಡೆಸಿತು. ಮನೆಯಲ್ಲಿ ಶಾಸಕ ಸೈಲ್ ಅವರ ಅತ್ತೆ (ಪತ್ನಿಯ ತಾಯಿ) ಮತ್ತು ಮನೆ ಕೆಲಸದವರು ಇದ್ದರು. ವಿಷಯ ತಿಳಿದರೂ ಸತೀಶ ಸೈಲ್ ಮತ್ತು ಅವರ ಬೆಂಬಲಿಗರು ಮನೆಯ ಬಳಿ ಸುಳಿಯಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಉದ್ಯಮಿಗಳಾದ ಖಾರದಪುಡಿ ಮಹೇಶ್ ಮತ್ತು ಸ್ವಸ್ತಿಕ್ ನಾಗರಾಜ್ ಅವರ ಮನೆಗಳು, ಕಚೇರಿಗಳು ಸೇರಿ ಒಟ್ಟು ಆರು ಕಡೆ ಪರಿಶೀಲನೆ ನಡೆಯಿತು.

'ಬೇಲೆಕೇರಿ ಬಂದರಿನಿಂದ ಕಬ್ಬಿಣದ ಅದಿರು ಅಕ್ರಮ ಸಾಗಣೆ ಪ್ರಕರಣದಲ್ಲಿ ಈ ಇಬ್ಬರೂ ಬಂಧಿತರಾಗಿದ್ದರು. ದೊಡ್ಡ ಮೊತ್ತದ ಹಣಕಾಸಿನ ವ್ಯವಹಾರ ನಡೆಸಿದ್ದನ್ನು ಗಮನಿಸಿ ಈಗ ದಾಳಿ ನಡೆದಿರುವ ಸಾಧ್ಯತೆ ಇದೆ' ಎಂದು ಲೆಕ್ಕಪರಿಶೋಧಕರೊಬ್ಬರು ತಿಳಿಸಿದರು.

ಪ್ರಜಾವಾಣಿ ನೋಡಿಯೊ

ವಾಕ್‌ಸ್ವಾತಂತ್ರ್ಯ ಮತ್ತು ನ್ಯಾಯಾಲಯಗಳ ಗ್ಯಾಗ್ ಆದೇಶಗಳ ಬಗ್ಗೆ ಈಗ ಹೆಚ್ಚು ಚರ್ಚೆ ನಡೆಯುತ್ತಿದೆ. ಈ ಚರ್ಚೆಗೆ ಪ್ರಮುಖ ಕಾರಣ, ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಅಪರಾಧ ಪ್ರಕರಣಗಳು ಮತ್ತು ಈ ಪ್ರಕರಣದ ಮಾಧ್ಯಮ ವರದಿ ಅಥವಾ ಪ್ರಸಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿದ ಆದೇಶಗಳು. ಯಾವುದು ವಾಕ್‌ಸ್ವಾತಂತ್ರ್ಯ? ಯಾವುದು ಮಾನಹಾನಿಕರ? ಯಾವ ಹೇಳಿಕೆ ಅವಹೇಳನಕಾರಿ ಎಂಬ ಚರ್ಚೆಯಾಧಾರಿತ ವಿಸ್ತೃತ ವಿವರ ಈ ವಿಡಿಯೊದಲ್ಲಿ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಚೆಕ್ ಸಲ್ಲಿಸಿದ ಗಂಟೆಗಳಲ್ಲಿ ಹಣ ವರ್ಗಾವಣೆ: ಆರ್‌ಬಿಐ

ಮುಂಬೈ (ಪಿಟಿಐ): ಚೆಕ್‌ಗಳನ್ನು ಬ್ಯಾಂಕ್‌ಗೆ ಸಲ್ಲಿಸಿದ ಕೆಲವೇ ತಾಸುಗಳಲ್ಲಿ ಹಣದ ವರ್ಗಾವಣೆ ಆಗುವ ಸೌಲಭ್ಯವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಕ್ಟೋಬರ್ 4ರಿಂದ ಜಾರಿಗೆ ತರಲಿದೆ.

ಈಗಿರುವ ವ್ಯವಸ್ಥೆಯಲ್ಲಿ ಚೆಕ್ ಸಲ್ಲಿಸಿದ ನಂತರ, ಹಣದ ವರ್ಗಾವಣೆ ಪೂರ್ಣಗೊಳ್ಳಲು ಗರಿಷ್ಠ ಎರಡು ಕೆಲಸದ ದಿನಗಳು ಬೇಕಾಗುತ್ತವೆ.

ಹೊಸ ವ್ಯವಸ್ಥೆಯು ಜಾರಿಗೆ ಬಂದ ನಂತರದಲ್ಲಿ ಚೆಕ್‌ಗಳನ್ನು ಸ್ಕ್ಯಾನ್ ಮಾಡಿ, ಸಂಬಂಧಪಟ್ಟ ವಿಭಾಗಕ್ಕೆ/ಏಜೆನ್ಸಿಗೆ ಅದನ್ನು ಸಲ್ಲಿಸಿ, ಕೆಲವೇ ಗಂಟೆಗಳಲ್ಲಿ ಹಣದ ವರ್ಗಾವಣೆಗೆ ಅನುಮೋದನೆ ಸಿಗಲಿದೆ.

ಚೆಕ್ ಸಲ್ಲಿಕೆಯಾದ ನಂತರ ಹಣದ ವರ್ಗಾವಣೆಯನ್ನು ಪೂರ್ಣಗೊಳಿಸುವ ವ್ಯವಸ್ಥೆಯಲ್ಲಿನ ದಕ್ಷತೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ ಹಾಗೂ ಹಣದ ವರ್ಗಾವಣೆಯಲ್ಲಿನ ಅಪಾಯಗಳನ್ನು ತಗ್ಗಿಸಲು ಆರ್‌ಬಿಐ ಈಗಿನ ಪ್ರಕ್ರಿಯೆಗಳಲ್ಲಿ ಬದಲಾವಣೆ ತರಲಿದೆ. ಚೆಕ್‌ಗಳನ್ನು ಒಂದೊಂದು ಬ್ಯಾಚ್‌ನಲ್ಲಿ ಪರಿಶೀಲಿಸುವ ಬದಲು, ಅವುಗಳನ್ನು ನಿರಂತರವಾಗಿ ಪರಿಶೀಲಿಸಿ, ಹಣದ ವರ್ಗಾವಣೆ ಪೂರ್ಣಗೊಳಿಸುವ ವ್ಯವಸ್ಥೆ ಬರಲಿದೆ.

ಚೆಕ್ ಸ್ವೀಕರಿಸುವ ಬ್ಯಾಂಕ್‌ಗಳು ಅವುಗಳನ್ನು ಸ್ಕ್ಯಾನ್ ಮಾಡಿ ಸಂಬಂಧಪಟ್ಟ ಏಜೆನ್ಸಿಗೆ ತಕ್ಷಣವೇ, ನಿರಂತರವಾಗಿ ರವಾನಿಸುತ್ತವೆ ಎಂದು ಆರ್‌ಬಿಐ ಹೇಳಿದೆ. ವ್ಯವಸ್ಥೆಯಲ್ಲಿ ತರಲಿರುವ ಬದಲಾವಣೆಯನ್ನು ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಸಮರ್ಪಕವಾಗಿ ತಿಳಿಸಬೇಕು ಎಂದು ಆರ್‌ಬಿಐ ಹೇಳಿದೆ.

ಮುಖ್ಯಾಂಶಗಳು

- ಆರ್‌ಬಿಐಯಿಂದ ಸುತ್ತೋಲೆ
- ಮೊದಲ ಹಂತವು ಅಕ್ಟೋಬರ್ 4ರಿಂದ ಜಾರಿ
- ಎರಡನೆಯ ಹಂತವು 2026ರ ಜನವರಿ 3ರಿಂದ ಜಾರಿ

ಬಿಸಿಯೂಟ: ಮೊಟ್ಟೆ ವಿರೋಧಿಸಿ ಟಿ.ಸಿ ಪಡೆದ 84 ಮಕ್ಕಳು

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಆಲಕೆರೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮೊಟ್ಟೆ ಕೊಡುವುದನ್ನು ವಿರೋಧಿಸಿದ ಪೋಷಕರು, 84 ಮಕ್ಕಳ ವರ್ಗಾವಣೆ ಪತ್ರ ಪಡೆದಿದ್ದು, ಅಕ್ಕಪಕ್ಕದ ಕೀಲಾರ, ಹನಕೆರೆ, ಬೆಸಗರಹಳ್ಳಿ ಸರ್ಕಾರಿ ಶಾಲೆಗೆ ದಾಖಲಿಸಿದ್ದಾರೆ.

ಎಲ್‌ಕೆಜಿ, ಯುಕೆಜಿ ಸೇರಿ 144 ಮಕ್ಕಳಿರುವ ಶಾಲೆಯ ಬಳಿ ಇತಿಹಾಸ ಪ್ರಸಿದ್ಧ ವೀರಭದ್ರೇಶ್ವರಸ್ವಾಮಿ ದೇವಾಲಯವಿದೆ ಎಂಬ ಕಾರಣಕ್ಕೆ ಮೊಟ್ಟೆ ಬದಲು ಬಾಳೆಹಣ್ಣು ನೀಡಲಾಗುತ್ತಿತ್ತು.

'ಮಕ್ಕಳಿಗೆ ಮೊಟ್ಟೆ ನೀಡಬೇಕು ಎಂಬ ಕೆಲ ಪೋಷಕರ ಮಾತಿಗೆ ಇತರೆ ಪೋಷಕರು ವಿರೋಧ ವ್ಯಕ್ತಪಡಿಸಿದ್ದರು. ಅವರನ್ನು ಮನವೊಲಿಸುವ ಅಧಿಕಾರಿಗಳ ಪ್ರಯತ್ನ ಫಲ ನೀಡಿಲ್ಲ' ಎಂದು ಮುಖಂಡ ಮಹೇಶ್ ಹೇಳಿದರು.

'ಮೊಟ್ಟೆ ತಿನ್ನುವುದನ್ನು ನಾವು ವಿರೋಧಿಸುವುದಿಲ್ಲ. ದೇವಾಲಯ ಇರುವುದರಿಂದ ಕೊಡಬಾರದು, ಮನೆಗೇ ಕೊಟ್ಟು ಕಳುಹಿಸಲಿ ಎಂದಿದ್ದೆವು. ಬೇಯಿಸಿ ಕೊಡಬೇಕು ಎಂದು ಕೆಲವರು ಪಟ್ಟುಹಿಡಿದಿದ್ದರು. ಆಚಾರ ವಿಚಾರಕ್ಕೆ ಅಡೆತಡೆ ಆಗುತ್ತದೆಂದು ನಮ್ಮ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸಿದೆವು' ಎಂದು ಎಸ್‌ಡಿಎಂಸಿ ಸದಸ್ಯ ಚಂದ್ರು ಆಲಕೆರೆ ಹೇಳಿದರು.

ಹಿಂದಿನ ಪರಿಷ್ಕರಣೆಯಲ್ಲಿ 7 ದಾಖಲೆಗಳ ಪಟ್ಟಿ

ಎಸ್‌ಐಆರ್ 'ಮತದಾರ ಸ್ನೇಹಿ': ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): 'ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮತದಾರರು 11 ದಾಖಲೆಗಳ ಪೈಕಿ ಒಂದನ್ನು ಸಲ್ಲಿಸಬೇಕಿದೆ. ಹಿಂದಿನ ಪರಿಷ್ಕರಣೆ ವೇಳೆ ಅದು ಏಳು ದಾಖಲೆಗಳಿಗೆ ಸೀಮಿತವಾಗಿತ್ತು. ಹೀಗಾಗಿ ಎಸ್‌ಐಆರ್ ಪ್ರಕ್ರಿಯೆಯು ಮತದಾರರ ಸ್ನೇಹಿಯಂತೆ ಕಾಣುತ್ತಿದೆ' ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

ಚುನಾವಣಾ ಆಯೋಗ ಬಿಹಾರದಲ್ಲಿ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ವಿರುದ್ಧ ಸಲ್ಲಿಕೆ ಆಗಿರುವ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ನಡೆಸಿದರು.

'ಈ ಪ್ರಕ್ರಿಯೆಯಿಂದ ಆಧಾರ್ ಅನ್ನು ಹೊರಗಿಟ್ಟಿರುವುದು ಸರಿಯಲ್ಲ' ಎಂದು ಅರ್ಜಿದಾರರು ವಾದಿಸಿದರು. 'ಅದರ ಹೊರತಾಗಿಯೂ ಹೆಚ್ಚಿನ ಸಂಖ್ಯೆಯ ದಾಖಲೆಗಳನ್ನು ಸಲ್ಲಿಸಲು ವಾಸ್ತವವಾಗಿ ಅವಕಾಶಗಳಿವೆಯಲ್ಲ' ಎಂದು ಪೀಠ ಪ್ರಶ್ನಿಸಿತು.

'ನಿಮ್ಮ ವಾದ ನಮಗೆ ಅರ್ಥ ಆಗುತ್ತದೆ. ಆದರೆ, ಹಿಂದಿನ ಪರಿಷ್ಕರಣೆ ವೇಳೆ ಕೇವಲ ಏಳು ದಾಖಲೆಗಳನ್ನು ಕೇಳಲಾಗುತ್ತಿತ್ತು. ಈ ಬಾರಿಯ ಎಸ್‌ಐಆರ್‌ನಲ್ಲಿ 11 ದಾಖಲೆಗಳ ಪಟ್ಟಿಯಿದೆ. ಅವುಗಳಲ್ಲಿ ಒಂದನ್ನಷ್ಟೇ ಸಲ್ಲಿಸಬೇಕಾಗಿದೆ. ಹೀಗಾಗಿ ಈ ಪ್ರಕ್ರಿಯೆ ಮತದಾರ ಸ್ನೇಹಿಯಾಗಿ ತೋರುತ್ತಿದೆ' ಎಂದು ಪೀಠ ಹೇಳಿತು.

ಅರ್ಜಿದಾರರ ಪರ ಹಾಜರದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ದಾಖಲೆಗಳ ಸಂಖ್ಯೆ ಹೆಚ್ಚಿರಬಹುದು. ಆದರೆ ಅವುಗಳನ್ನು ಹೊಂದಿರುವವರ ಸಂಖ್ಯೆ ಕಡಿಮೆಯಿದೆ' ಎಂದು ವಾದಿಸಿದರು.

'ಪಾಸ್‌ಪೋರ್ಟ್ ದಾಖಲೆ ಕುರಿತು ವಿವರಿಸುವುದಾದರೆ, ಬಿಹಾರದಲ್ಲಿ ಕೇವಲ ಶೇಕಡ 1ರಿಂದ ಶೇ 2ರಷ್ಟು ಜನರ ಬಳಿ ಪಾಸ್‌ಪೋರ್ಟ್ ಇದೆ ಮತ್ತು ಅವರಿಗೆ ರಾಜ್ಯದಲ್ಲಿ ಶಾಶ್ವತ ನಿವಾಸಿ ಪ್ರಮಾಣಪತ್ರ ನೀಡಲು ಅವಕಾಶವಿಲ್ಲ' ಎಂದು ಹೇಳಿದರು. ಆಗ ಪೀಠವು, 'ಬಿಹಾರದಲ್ಲಿ 36 ಲಕ್ಷ ಪಾಸ್‌ಪೋರ್ಟ್ ಹೊಂದಿರುವವರು ಇದ್ದಾರೆ ಎಂಬುದು ಉತ್ತಮವೇ ಅಲ್ಲವೇ' ಎಂದಿತು.

'ಹೆಚ್ಚಿನ ಜನರ ಬಳಿ ಲಭ್ಯ ಇರುವ ದಾಖಲೆಗಳನ್ನು ಖಚಿತಪಡಿಸುವ ಕುರಿತು ವಿವಿಧ ಇಲಾಖೆಗಳಿಂದ ಪ್ರತಿಕ್ರಿಯೆಗಳನ್ನು ಪಡೆದ ಬಳಿಕವೇ ಅಲ್ಲವೇ ಸಾಮಾನ್ಯವಾಗಿ ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸುವುದು' ಎಂದು ನ್ಯಾಯಮೂರ್ತಿ ಬಾಗ್ಚಿ ಗಮನ ಸೆಳೆದರು.

ಮತದಾರರ ಪಟ್ಟಿಗೆ ಜನರನ್ನು ಸೇರಿಸುವುದು ಮತ್ತು ಹೊರಗಿಡುವುದು ಚುನಾವಣಾ ಆಯೋಗದ ವ್ಯಾಪ್ತಿಗೆ ಬರುತ್ತದೆ ಎಂದು ಪೀಠ ಮಂಗಳವಾರ ತಿಳಿಸಿತ್ತು. ಬಿಹಾರದ ಎಸ್‌ಐಆರ್‌ನಲ್ಲಿ ಪೌರತ್ವವನ್ನು ದೃಢೀಕರಿಸಲು ಆಧಾರ್ ಕಾರ್ಡ್ ಅನ್ನು ನಿರ್ಣಾಯಕ ದಾಖಲೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂಬ ಆಯೋಗದ ನಿಲುವನ್ನೂ ಸುಪ್ರೀಂ ಕೋರ್ಟ್ ಬೆಂಬಲಿಸಿತ್ತು.

ಪ್ರಮಾಣ ಪತ್ರಕ್ಕಾಗಿ ಅಲೆದಾಟ; ಕೂಲಿ ಇಲ್ಲದೆ ಪರದಾಟ

ಅಹಮದಾಬಾದ್: ವರ್ಷದ ಹಿಂದಷ್ಟೇ ಸಾರ್ವತ್ರಿಕ ಚುನಾವಣೆಯಲ್ಲಿ ಮತ ಚಲಾಯಿಸಿದ್ದೇವೆ. ಆದರೆ, ಇತ್ತೀಚೆಗೆ ಚುನಾವಣಾ ಆಯೋಗ ಬಿಡುಗಡೆ ಮಾಡಿರುವ ಕರಡು ಮತದಾರರ ಪಟ್ಟಿಯಲ್ಲಿ ನನ್ನ ಮತ್ತು ಪತ್ನಿಯ ಹೆಸರಿಲ್ಲ. ಮತಗಟ್ಟೆ ಅಧಿಕಾರಿಯನ್ನು ವಿಚಾರಿಸಿದರೆ, ವಾಸಸ್ಥಳದ ದೃಢೀಕರಣ ಪತ್ರ, ಪೂರಕ ಪ್ರಮಾಣ ಪತ್ರಗಳನ್ನು ತಂದು ಕೊಡಿ ಎನ್ನುತ್ತಿದ್ದಾರೆ. ಹೀಗಾದರೆ ನಮ್ಮ ಹೊಟ್ಟೆಪಾಡಿಗೆ ಏನು ಮಾಡುವುದು?...

11

ಬೀದಿ ನಾಯಿ: ಇಂದು ತ್ರಿಸದಸ್ಯ ಪೀಠದಿಂದ ವಿಚಾರಣೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದಲ್ಲಿ (ದೆಹಲಿ–ಎನ್‌ಸಿಆರ್) ಬೀದಿ ನಾಯಿಗಳ ಸ್ಥಳಾಂತರಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳು ಇರುವ ಹೊಸ ಪೀಠವು ಆಗಸ್ಟ್ 14ರಂದು (ಗುರುವಾರ) ನಡೆಸಲಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರು ಇರುವ ತ್ರಿಸದಸ್ಯ ಪೀಠವನ್ನು ಈ ಪ್ರಕರಣದ ವಿಚಾರಣೆಗಾಗಿ ರಚಿಸಲಾಗಿದೆ. ಬೀದಿ ನಾಯಿಗಳನ್ನು ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಇದಕ್ಕೆ ದೇಶದಾದ್ಯಂತ ವಿರೋಧ ವ್ಯಕ್ತವಾದ ಕಾರಣ, ಸುಪ್ರೀಂ ಕೋರ್ಟ್ ಬುಧವಾರ ಈ ಕುರಿತು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ ಕೊಂಡಿದ್ದು, ವಿಚಾರಣೆಗೆ ಮೂವರು ನ್ಯಾಯಮೂರ್ತಿಗಳಿರುವ ಪೀಠ ರಚಿಸಿದೆ.

12

ಗುರುತು ಪತ್ತೆಯಾಗದ 279 ಮೃತದೇಹ ವಿಲೇ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮ ಪಂಚಾಯಿತಿಯವರು 1987ರಿಂದ 2025 ಮಾರ್ಚ್‌ವರೆಗೆ ಗುರುತು ಪತ್ತೆಯಾಗದ ಒಟ್ಟು 279 ಮೃತದೇಹಗಳನ್ನು ವಿಲೇವಾರಿ ಮಾಡಿದ್ದಾರೆ.

'ಈ ಅವಧಿಯಲ್ಲಿ, ಗುರುತು ಪತ್ತೆಯಾಗದ 279 ಮೃತದೇಹಗಳಲ್ಲಿ 219 ಗಂಡು, 46 ಹೆಣ್ಣಿನ ಶವಗಳು. 13 ಮೃತದೇಹಗಳ ಲಿಂಗ ಪತ್ತೆಯಾಗಿಲ್ಲ. ಒಂದು ನವಜಾತ ಶಿಶು' ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ ಅರ್ಜಿಗೆ ಪಂಚಾಯಿತಿಯ ಸಾರ್ವಜನಿಕ ಮಾಹಿತಿ ಅಧಿಕಾರಿ ಉತ್ತರಿಸಿದ್ದಾರೆ.

ಧರ್ಮಸ್ಥಳ ಗ್ರಾಮದಲ್ಲಿ 1987ರಿಂದ ಇಲ್ಲಿಯವರೆಗೆ ಎಷ್ಟು ಮೃತದೇಹಗಳನ್ನು ಗ್ರಾಮ ಪಂಚಾಯಿತಿ ವತಿಯಿಂದ ಹೂಳಲಾಗಿದೆ ಎಂದು ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆ ವತಿಯಿಂದ ಮಾಹಿತಿ ಕೇಳಲಾಗಿತ್ತು.

ಮಾಹಿತಿ ಪ್ರಕಾರ 2003–04, 2006–07, 2014–15ನೇ ಸಾಲಿನಲ್ಲಿ ಅತಿ ಹೆಚ್ಚು (ತಲಾ 17) ಮೃತದೇಹಗಳನ್ನು ವಿಲೇ ಮಾಡಲಾಗಿದೆ. ಈ ವರ್ಷಗಳನ್ನು ಹೊರತುಪಡಿಸಿದರೆ ಪಂಚಾಯಿತಿಯವರು ಅತಿ ಹೆಚ್ಚು (14) ಮೃತದೇಹಗಳನ್ನು ಹೂತಿರುವುದು 2024–25ರಲ್ಲಿ.

2009–10, 2011–12ರಲ್ಲಿ ತಲಾ 13 ಹಾಗೂ 1990–91, 2005–06, 2007–08, 2018–19 ಹಾಗೂ 2023–24ರಲ್ಲಿ ತಲಾ 12, 2008–09 ಮತ್ತು 2022–23ರಲ್ಲಿ ತಲಾ 11 ಹಾಗೂ 2020–21ರಲ್ಲಿ 10 ಮೃತದೇಹಗಳನ್ನು ಪಂಚಾಯಿತಿ ವ್ಯಾಪ್ತಿಯಲ್ಲಿ ವಿಲೇ ಮಾಡಲಾಗಿದೆ. 16 ವರ್ಷಗಳಲ್ಲಿ ಸರಾಸರಿ 10ಕ್ಕೂ ಹೆಚ್ಚು ಮೃತದೇಹಗಳನ್ನು ವಿಲೇ ಮಾಡಲಾಗಿದೆ.

ಮುಖ್ಯಾಂಶಗಳು

- ಪಂಚಾಯಿತಿಯ ಮಾಹಿತಿ ಅಧಿಕಾರಿ ಉತ್ತರ
- ಮಾಹಿತಿ ಹಕ್ಕು ಕಾಯ್ದೆಯಡಿ ವಿವರ

ಧರ್ಮಸ್ಥಳ: ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ

16 ಅಡಿ ಆಳ ಅಗೆದರೂ ಸಿಗದ ಕುರುಹು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ಸಾಕ್ಷಿ ದೂರುದಾರ ತೋರಿಸಿದ್ದ 13 ನೇ ಜಾಗದಲ್ಲಿ ಯಂತ್ರದ ಮೂಲಕ ನೆಲ ಅಗೆಯುವ ಕಾರ್ಯ ಬುಧವಾರ ಮುಂದುವರಿಯಿತು.

'ಸುಮಾರು 16 ಅಡಿ ಆಳಕ್ಕೆ ಅಗೆದರೂ ಮೃತದೇಹದ ಯಾವುದೇ ಕುರುಹು ಪತ್ತೆಯಾಗಿಲ್ಲ' ಎಂದು ವಿಶೇಷ ತನಿಖಾ ತಂಡದ (ಎಸ್‌ಐಟಿ) ಮೂಲಗಳು ತಿಳಿಸಿವೆ.

ನೇತ್ರಾವತಿ ಸ್ನಾನಘಟ್ಟದ ಬಳಿಯ ಈ ಜಾಗದಲ್ಲಿ ವಿದ್ಯುತ್ ಮಾರ್ಗ, ಮೂರು ವಿದ್ಯುತ್ ಕಂಬಗಳಿವೆ. ಗ್ರೌಂಡ್ ಪೆನೆಟ್ರೇಟಿಂಗ್ ರೇಡಾರ್ (ಜಿಪಿಆರ್) ಸಾಧನ ಬಳಸಿ ನೆಲದಡಿಯ ಸಂರಚನೆ ತಿಳಿದುಕೊಂಡ ಬಳಿಕವೇ ಅಗೆಯುವ ಕಾರ್ಯ ಆರಂಭಿಸಲಾಗಿತ್ತು. ಮಂಗಳವಾರ ಕತ್ತಲಾವರಿಸಿದ್ದರಿಂದ ಶೋಧ ಕಾರ್ಯವನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು. ಬುಧವಾರ ಒಂದು ದೊಡ್ಡ ಯಂತ್ರ ಹಾಗೂ ಸಣ್ಣ ಯಂತ್ರ ಬಳಸಿ ಗುಂಡಿ ತೋಡಲಾಯಿತು. ಸುಮಾರು 30 ಅಡಿ ಉದ್ದ, 25 ಅಡಿ ಅಗಲ, 16 ಅಡಿ ಆಳದಷ್ಟು ಜಾಗದಲ್ಲಿ ಅಗೆಯಲಾಯಿತು. ಸಂಜೆ 6.50ರವರೆಗೂ ಈ ಕಾರ್ಯಾಚರಣೆ ಮುಂದುವರಿಯಿತು.

ಸಾಕ್ಷಿ ದೂರುದಾರ ಸ್ಥಳದಲ್ಲೇ ಇದ್ದು ಎಲ್ಲೆಲ್ಲಿ ಅಗೆಯಬೇಕು ಎಂದು ತೋರಿಸುತ್ತಿದ್ದರು. ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್, ಎಸ್‌ಐಟಿ ಎಸ್.ಪಿ ಜಿತೇಂದ್ರ ಕುಮಾರ್ ದಯಾಮ, ವಿಧಿ ವಿಜ್ಞಾನ ತಜ್ಞರು ಸ್ಥಳದಲ್ಲಿದ್ದರು.



ಧರ್ಮಸ್ಥಳ ಸ್ನಾನಘಟ್ಟದ ಸಮೀಪ ಸಾಕ್ಷಿ ದೂರುದಾರ ತೋರಿಸಿದ್ದ 13 ನೇ ಜಾಗದಲ್ಲಿ ಬುಧವಾರ ಶೋಧ ಕಾರ್ಯ ನಡೆಸಲಾಯಿತು

ಮೃತದೇಹ ಹೂತಿದ್ದು ನೋಡಿದ್ದೇವೆ: ಮತ್ತಿಬ್ಬರಿಂದ ಹೇಳಿಕೆ

'ಧರ್ಮಸ್ಥಳ ಗ್ರಾಮದ ನೇತ್ರಾವತಿ ಸ್ನಾನ ಘಟ್ಟದ ಬಳಿ ಮೃತದೇಹಗಳನ್ನು ಹೂತು ಹಾಕಿದ್ದನ್ನು ನೋಡಿದ್ದೇವೆ' ಎಂದು ಎಸ್‌ಐಟಿಗೆ ದೂರು ನೀಡಿರುವುದಾಗಿ ಇಬ್ಬರು ವ್ಯಕ್ತಿಗಳು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ.

ಬೆಳ್ತಂಗಡಿಯ ಎಸ್‌ಐಟಿ ಕಚೇರಿ ಬಳಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಧರ್ಮಸ್ಥಳ ಗ್ರಾಮದ ಪುರಂದರ ಗೌಡ, 'ನೇತ್ರಾವತಿ ಸ್ನಾನಘಟ್ಟದ ಬಳಿಯ ಅಂಗಡಿಯಲ್ಲಿ 2003ರಿಂದ 2017ರವರೆಗೆ ಇದ್ದೆ. ಸಾಕ್ಷಿ ದೂರುದಾರ ಸ್ನಾನಘಟ್ಟದ ಬಳಿ ತೋರಿಸಿದ್ದ 1ನೇ ಜಾಗದ ಬಳಿ ಅಂಬಾಸಿಡರ್ ಕಾರಿನಲ್ಲಿ ತಂದಿದ್ದ ಮೃತದೇಹವನ್ನು ಎರಡು ಮೂರು ಜನ ಸೇರಿ ಹೂತು ಹಾಕಿದ್ದನ್ನು ನೋಡಿದ್ದೆ. ಆಗ ಪೊಲೀಸರು ಅಥವಾ ವೈದ್ಯರು ಜೊತೆಗಿದ್ದುದನ್ನು ನೋಡಿಲ್ಲ. ಆಗ ಶವಗಳನ್ನು ಹೂತಿದ್ದ ಒಬ್ಬ ವ್ಯಕ್ತಿಯ ಮೈಕಟ್ಟು ಸಾಕ್ಷಿ ದೂರುದಾರನನ್ನೇ ಹೋಲುತ್ತಿತ್ತು' ಎಂದು ತಿಳಿಸಿದರು.

'ಸಾಕ್ಷಿ ದೂರುದಾರ ತೋರಿಸಿದ್ದ 13ನೇ ಜಾಗದ ಬಳಿ ಹಿಂದೆ ಪೊದೆಗಳಿದ್ದವು. ಶೌಚಾಲಯವಿತ್ತು. ಒಂದು ದಿನ ಸಂಜೆ ವ್ಯಕ್ತಿಯೊಬ್ಬ ಕೈಗಾಡಿಯಲ್ಲಿ ಮೃತದೇಹ ತಂದು ಅಲ್ಲಿ ಹೂತು ಹಾಕುವುದನ್ನು ನೋಡಿದ್ದೇನೆ. ಸಾಕ್ಷಿ ದೂರುದಾರನ ಹೇಳಿಕೆ ನಿಜ ಇರಬಹುದು' ಎಂದರು.

'ಈ ಬಗ್ಗೆ ಆ. 8ರಂದು ಧರ್ಮಸ್ಥಳ ಠಾಣೆಗೆ ದೂರು ನೀಡಿದ್ದೇವೆ. ಈಗ ಎಸ್‌ಐಟಿ ಮುಂದೆ ಹೇಳಿಕೆ ನೀಡಲು ಬಂದಿದ್ದೇನೆ' ಎಂದು ತಿಳಿಸಿದರು.

'ನದಿಯ ಇನ್ನೊಂದು ಕಡೆ ಮೃತದೇಹ ಹೂತು ಹಾಕಿದ್ದ ಬಗ್ಗೆಯೂ ನನಗೆ ತಿಳಿದಿದ್ದು, ಆ ಬಗ್ಗೆಯೂ ಎಸ್‌ಐಟಿಗೆ ಮಾಹಿತಿ ನೀಡುತ್ತೇನೆ' ಎಂದರು.

ಧರ್ಮಸ್ಥಳ ಗ್ರಾಮದ ತುಕಾರಾಮ ಗೌಡ, 'ಮೃತದೇಹ ಹೂತು ಹಾಕಿದ್ದನ್ನು ನೋಡಿದ್ದೇನೆ. ಸಾಕ್ಷಿ ದೂರುದಾರ ತೋರಿಸಿರುವ ಜಾಗಗಳಲ್ಲಿ ಆ ಜಾಗ ಸೇರಿಲ್ಲ. ಎಸ್‌ಐಟಿಗೆ ಮಾಹಿತಿ ನೀಡುತ್ತೇನೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ತುಂತುರು ಮಳೆಯಾಗುವ ಸಾಧ್ಯತೆ ಇದೆ.

ಆಂಬುಲೆನ್ಸ್ : ಉಪಕರಣ ಖರೀದಿಗೆ ಅಸ್ತು

ಬೆಂಗಳೂರು: ರಾಜ್ಯದಲ್ಲಿ '108 ಆರೋಗ್ಯ ಕವಚ' ಯೋಜನೆಯಡಿ ಆರೋಗ್ಯ ಇಲಾಖೆಯೇ ಆಂಬುಲೆನ್ಸ್‌ಗಳನ್ನು ನಿರ್ವಹಣೆ ಮಾಡಲಿದ್ದು, 'ಕಮಾಂಡ್ ಕಂಟ್ರೋಲ್' ಕೇಂದ್ರಕ್ಕೆ ಅಗತ್ಯವಿರುವ ಉಪಕರಣಗಳ ಖರೀದಿಗೆ ರಾಜ್ಯ ಸರ್ಕಾರದ ಅನುಮೋದನೆ ದೊರೆತಿದೆ.

ಈ ಬಗ್ಗೆ ಇಲಾಖೆ ಆದೇಶ ಹೊರಡಿಸಿದೆ. ರಾಜ್ಯದಲ್ಲಿನ 108 ಆಂಬುಲೆನ್ಸ್ ಸೇವೆಯನ್ನು ಉತ್ತಮಗೊಳಿಸುವ ಉದ್ದೇಶದಿಂದ, '108 ಆರೋಗ್ಯ ಕವಚ' ಯೋಜನೆಯಡಿ ಜಿವಿಕೆ–ಇಎಂಆರ್‌ಐ ಸಂಸ್ಥೆ ಜತೆಗಿನ ಒಡಂಬಡಿಕೆ ಹಿಂಪಡೆಯಲಾಗಿದೆ. ಇಲಾಖೆಯಿಂದಲೇ ಆಂಬುಲೆನ್ಸ್ ನಿರ್ವಹಿಸಲು '112 ಎನ್‌ಜಿ ಇಆರ್‌ಎಸ್' ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತದೆ. 'ಕಮಾಂಡ್ ಕಂಟ್ರೋಲ್' ಸೆಂಟರ್ ಸ್ಥಾಪಿಸಲು ಹಾಗೂ ಜಿಲ್ಲಾಡಳಿತದ ಮೂಲಕ ಆಂಬುಲೆನ್ಸ್‌ಗಳ ನಿರ್ವಹಣೆಗೆ ಅನುಮೋದನೆ ನೀಡಲಾಗಿದೆ ಎಂದು ಆದೇಶದಲ್ಲಿದೆ.

108 ಆರೋಗ್ಯ ಕವಚ, 104 ಆರೋಗ್ಯ ಸಹಾಯವಾಣಿ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಅನ್ನು ಸರ್ಕಾರದ ಅಧೀನಕ್ಕೆ ಪಡೆದು ನಿರ್ವಹಿಸುವ ಉದ್ದೇಶದಿಂದ, ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿ ನಿಗದಿಪಡಿಸಲಾಗಿದೆ. ₹ 6.09 ಕೋಟಿಯಲ್ಲಿ ಅಗತ್ಯ ಉಪಕರಣಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕತೆ ಕಾಯ್ದೆಯಡಿ ಅನುಮೋದನೆ ನೀಡಲಾಗಿದೆ ಎಂದು ತಿಳಿಸಲಾಗಿದೆ.

ವೇದ ವೆಲ್ನೆಸ್ ಸೆಂಟರ್, ನಿಸರ್ಗ ಮನೆ ಶಿರಸಿ

Nisarga Mane

ಡಾ. ವೆಂಕಟರಮಣ ಹೆಗಡೆರವರು ಮುಖತಃ ಭೇಟಿಗೆ ಬೆಂಗಳೂರಿನಲ್ಲಿ ಲಭ್ಯ!

ದಿನಾಂಕ : ಆಗಸ್ಟ್ 15,16,17
ಶುಕ್ರವಾರ - 10 AM TO 5 PM
ಶನಿವಾರ - 10 AM TO 5 PM
ಭಾನುವಾರ - 10 AM TO 4 PM
ಸ್ಥಳ : ನಿಸರ್ಗ ಕ್ಲಿನಿಕ್, ನಾಗರಬಾವಿ BDA COMPLEX ಹತ್ತಿರ, ಅನ್ನಪೂರ್ಣೇಶ್ವರಿ ದೇವಸ್ಥಾನದ ಎದುರು, ನಾಗರಬಾವಿ, ಬೆಂಗಳೂರು

ಸಂದರ್ಶನ ಉಚಿತ

ನೋಂದಣಿಗೆ ಇಂದೇ ಕರೆ ಮಾಡಿ
9632867180, 9353981093

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ. 16/SBC/25, ದಿನಾಂಕ: 29.07.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಬೆಂಗಳೂರು – ಜೋಲಾರ್‌ಪೇಟೆ ವಿಭಾಗ:** ದೇವನಗೊಂಥಿ (ಡಿಕೆಎನ್) ನಿಲ್ದಾಣದಲ್ಲಿ ಮೆ. ಬಿಪಿಸಿಎಲ್ ಲಿಮಿಟೆಡ್‌ರವರ ಪ್ರಸ್ತಾವಿತ ಜಿಸಿಟಿ ಸ್ಲೈಡಿಂಗ್ ಕಾಮಗಾರಿ. **ಉಪ ಕಾಮಗಾರಿ–1:** ಟ್ರ್ಯಾಕ್‌ಗಳನ್ನು ಅಳವಡಿಸುವುದು, ಟರ್ನ್‌ಔಟ್‌ಗಳು ಮತ್ತು ಸಂಬಂಧಿತ ಕೆಲಸಗಳು. **ಉಪ ಕಾಮಗಾರಿ–2:** 1 ನಂ. ರೈಲ್ ಟೈಪ್ ಬಫರ್‌ಗಳು. **ಉಪ ಕಾಮಗಾರಿ–3:** ಕಾಸ್ಟ್ ಇನ್–ಸಿಟು ಮಾದರಿಯಲ್ಲಿ ಪ್ರಸ್ತಾವಿತ ಬ್ರಿಡ್ಜ್ ಸಂ. 813ಎ ಯ ವಿಸ್ತರಣೆ. **ಉಪ ಕಾಮಗಾರಿ–4:** ಬೆಂಗಳೂರು ಯಾರ್ಡ್‌ನಲ್ಲಿ ಪ್ಲಾಟ್‌ಫಾರ್ಮ್ ನಂ. 01, 02, 03, 04, 05, 07, 08, 09 ಮತ್ತು 10ರಲ್ಲಿ ಸಿಸಿ ಏಪ್ರನ್‌ಗಳಿಗೆ ದುರಸ್ತಿ ಕೆಲಸಗಳು. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು. (ಸಂಯುಕ್ತ ಕಾಮಗಾರಿ)	ರೂ. 2,33,35,186/-
2	**ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು:** ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ – ಬೆಂಗಳೂರು (ಎಸ್‌ಎಂವಿಬಿ) ಇಲ್ಲಿ ಹೊಸ ಎಸಿ ಲೋಕೊ ಶೆಡ್‌ನ ನಿರ್ಮಾಣ. **ಉಪ ಕಾಮಗಾರಿ–1:** ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ – ಬೆಂಗಳೂರು (ಎಸ್‌ಎಂವಿಬಿ) ಇಲ್ಲಿ ಪ್ರತೀ 50 ಮೀ. ರಂತೆ 2 ಪಿಟ್ ಲೈನ್‌ಗಳು ಸೇರಿದಂತೆ ಪ್ರಸ್ತಾವಿತ 60x15 ಮೀ. ಅಳತೆಯ ಕವರ್ಡ್ ಶೆಡ್‌ನ ನಿರ್ಮಾಣ. **ಉಪ ಕಾಮಗಾರಿ–2:** ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ – ಬೆಂಗಳೂರು (ಎಸ್‌ಎಂವಿಬಿ) ಇಲ್ಲಿ ಪ್ರಸ್ತಾವಿತ (60ಮೀ x 60ಮೀ) ಅಳತೆಯ ಸರ್ವಿಸ್ ಬಿಲ್ಡಿಂಗ್‌ನ ನಿರ್ಮಾಣ. **ಉಪ ಕಾಮಗಾರಿ–3:** ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ – ಬೆಂಗಳೂರು (ಎಸ್‌ಎಂವಿಬಿ) ಇಲ್ಲಿ ಎಸಿ ಲೋಕೊ ಟ್ರಿಪ್ ಶೆಡ್‌ನ ಎರಡೂ ಕೊನೆಗಳಲ್ಲಿ ಪ್ರಸ್ತಾವಿತ ಸಿಸಿ ಏಪ್ರನ್‌ನ ನಿರ್ಮಾಣ. ನಿರ್ವಹಣೆಯ ಅವಧಿ 12 ತಿಂಗಳುಗಳು. (ಸಂಯುಕ್ತ ಕಾಮಗಾರಿ)	ರೂ. 6,73,53,028/-
3	**ಸ್ಯಾಟಲೈಟ್ ಗುಡ್ಸ್ ಟರ್ಮಿನಲ್ (ಎಸ್‌ಜಿಟಿ):** 2027 ರೊಳಗೆ ಫ್ರೈಟ್ ಲೋಡಿಂಗ್‌ಅನ್ನು 3000 ಮೆಟ. ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಗುರಿಯಾಗಿಸುವ ಉದ್ದೇಶಕ್ಕೆ ಅನುಗುಣವಾಗಿ ಎಸ್‌ಜಿಟಿ ವೇಗನ್ ಡಿಪೋನಲ್ಲಿ ಮೂಲಭೂತ ಸೌಕರ್ಯಗಳ ಮೇಲಿನ ಪ್ರಸ್ತಾವಿತ ವರ್ಧನೆ. **ಉಪ ಕಾಮಗಾರಿ–1:** ಎಸ್‌ಜಿಟಿ ಯಲ್ಲಿ ಪ್ರಸ್ತಾವನೆಯಂತೆ ಡಬ್ಲ್ಯೂಎಫ್‌ಡಿ ಕೊನೆಯಲ್ಲಿ ಶೆಡ್‌ಅನ್ನು 50ಮೀ. ಗೆ ವಿಸ್ತರಿಸುವುದು ಮತ್ತು ಎಸ್‌ಜಿಟಿ ಯಲ್ಲಿ ಡಬ್ಲ್ಯೂಎಫ್‌ಡಿ ಕೊನೆಯಲ್ಲಿ ಸಿಕ್ ಲೈನ್ 2 ಮೇಲೆ 26 ಮೀ. ಪಿಟ್ ಲೈನಿನ ನಿರ್ಮಾಣ. **ಉಪ ಕಾಮಗಾರಿ–2:** 4 ಯಾರ್ಡ್ ಪರೀಕ್ಷಣಾ ಲೈನಿನ ಟ್ರಾಲಿ ಪಾಥ್‌ಗಳ ಪ್ರಸ್ತಾವಿತ ರೇ–ಸರ್ಫೇಸಿಂಗ್ ಮತ್ತು ಹೊಸ ಕಚೇರಿ ಕಾಂಪ್ಲೆಕ್ಸ್‌ನ ಪಿಡಬ್ಲ್ಯೂಎಲ್ ಶೆಡ್‌ಗೆ ಪಾಥ್‌ವೇಯ ನಿರ್ಮಾಣ (8400 ಚ.ಮೀ.). **ಉಪ ಕಾಮಗಾರಿ–3:** ವೈಟ್‌ಫೀಲ್ಡ್ ಕೊನೆಯಲ್ಲಿ ಆರ್‌ಓಹೆಚ್ ಶೆಡ್‌ಅನ್ನು ವಿಸ್ತರಿಸುವುದಕ್ಕಾಗಿ ಈಗಿರುವ ಕಟ್ಟಡದ ಪ್ರಸ್ತಾವಿತ ನೆಲಸಮ ಹಾಗೂ 22x5 ಮೀ (ಜಿ+1) 220 ಚ.ಮೀ. ನ ಅವಶೇಷಗಳನ್ನು ತೆರವುಗೊಳಿಸುವುದು. **ಉಪ ಕಾಮಗಾರಿ–4:** ಈಗಿರುವ ಮೆಕ್ಯಾನಿಕಲ್ ಬಿಲ್ಡಿಂಗ್ ಎಫ್‌ಎಫ್–252 ಚ.ಮೀ. ನಲ್ಲಿ ಪ್ರಸ್ತಾವಿತ ಆಡಳಿತ ಕಟ್ಟಡದ ನಿರ್ಮಾಣ. **ಉಪ ಕಾಮಗಾರಿ–5:** ಎಸ್‌ಜಿಟಿ ಯಲ್ಲಿ ಈಗಿನ ಹಳೆಯ ಶೆಡ್ ಭಾಗದಲ್ಲಿ ಪ್ರಸ್ತಾವಿತ ಸೈಡ್ ಟ್ರಾನ್ಸ್‌ಪರೆಂಟ್ ಶೀಟ್‌ಗಳ ವ್ಯವಸ್ಥೆ. **ಉಪ ಕಾಮಗಾರಿ–6:** ಎಸ್‌ಜಿಟಿಯಲ್ಲಿ ಎಂಎಫ್‌ಡಿ ಉಪಕರಣಗಳಿಗಾಗಿ ಪ್ರಸ್ತಾವಿತ ಕೊಠಡಿಯ ನಿರ್ಮಾಣ. **ಉಪ ಕಾಮಗಾರಿ–7:** ಎಸ್‌ಜಿಟಿಯಲ್ಲಿ ವೇಸ್ಟ್ ಲೆವೆಲ್ 3 ಸೈಡ್ ಗೋಡೆಯೊಂದಿಗೆ ಆರ್‌ಸಿಸಿ ಹೆವಿ ಡ್ಯೂಟಿ ಫ್ಲೋರಿಂಗ್‌ನೊಂದಿಗೆ ಪ್ರಸ್ತಾವಿತ ಸ್ಕ್ರಾಪ್ ಯಾರ್ಡ್‌ನ ನಿರ್ಮಾಣ. **ಉಪ ಕಾಮಗಾರಿ–8:** ಟ್ರ್ಯಾಕ್‌ಗಳನ್ನು ಅಳವಡಿಸುವುದು ಮತ್ತು ಸಂಬಂಧಿತ ಕೆಲಸಗಳು. **ಉಪ ಕಾಮಗಾರಿ–9: ಸ್ಯಾಟಲೈಟ್ ಗುಡ್ಸ್ ಟರ್ಮಿನಲ್ (ಎಸ್‌ಜಿಟಿ):** ಆರ್‌ಸಿಸಿ ಬಫರ್ – 2 ನಂ. ನಿರ್ವಹಣೆಯ ಅವಧಿ 12 ತಿಂಗಳುಗಳು. (ಸಂಯುಕ್ತ ಕಾಮಗಾರಿ)	ರೂ. 7,78,53,862/-
4	**ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ–1:** ಬಿಡದಿ (ಬಿಐಡಿ) – ಬೆಂಗಳೂರಿನ ಕಡೆಗಿನ ಕೊನೆಯ ರೋಡ್–5 ರ ಬದಿಯಲ್ಲಿ ಈಗಿರುವ ಸರಕು ಅನ್‌ಲೋಡಿಂಗ್ ಪ್ಲಾಟ್‌ಫಾರ್ಮ್‌ಅನ್ನು ಸರಿಯಾದ ರೀತಿಯಲ್ಲಿ ತೆರವುಗೊಳಿಸಿ 650ಮೀ.ನ ಶಂಟಿಂಗ್ ನೆಕ್‌ನೊಂದಿಗೆ ರೋಡ್–06 (686 ಮೀ. ನ ಸ್ಪರ್ ಲೈನ್) ನ ವ್ಯವಸ್ಥೆ. **ಉಪ ಕಾಮಗಾರಿ–2:** ಬಿಡದಿಯಲ್ಲಿ ಸೆಸ್ ದುರಸ್ತಿ / ಅಗಲೀಕರಣ. **ಉಪ ಕಾಮಗಾರಿ–3:** ಬಿಡದಿಯಲ್ಲಿ 500 ಮೀ. ಉದ್ದಕ್ಕೆ ಆರ್‌ಸಿಸಿ ಡ್ರೈನ್‌ನ ನಿರ್ಮಾಣ. **ಉಪ ಕಾಮಗಾರಿ–4:** ಬಿಡದಿ ನಿಲ್ದಾಣದ ಯಾರ್ಡ್‌ನಲ್ಲಿ ಬ್ರಿಡ್ಜ್ ನಂ. 498, 499 ಮತ್ತು 500 ರ ಪ್ರಸ್ತಾವಿತ ವಿಸ್ತರಣೆ. ನಿರ್ವಹಣೆಯ ಅವಧಿ 4 ತಿಂಗಳುಗಳು. (ಸಂಯುಕ್ತ ಕಾಮಗಾರಿ)	ರೂ. 2,54,08,419/-
5	**ಕೆಎಸ್‌ಆರ್ ಬೆಂಗಳೂರು:** ಕೆಎಸ್‌ಆರ್ ಬೆಂಗಳೂರಿನಲ್ಲಿರುವ ರೈಲ್ವೆ ಆಸ್ಪತ್ರೆಯಲ್ಲಿ ಹೊಸ ಹೊರ ರೋಗಿಗಳ ಬ್ಲಾಕ್‌ನ ಪ್ರಸ್ತಾವಿತ ನಿರ್ಮಾಣ ಕಾಮಗಾರಿ. ನಿರ್ವಹಣೆಯ ಅವಧಿ 12 ತಿಂಗಳುಗಳು. (ಸಂಯುಕ್ತ ಕಾಮಗಾರಿ)	ರೂ. 2,25,48,784/-
6	**ಬೆಂಗಳೂರು – ಮೈಸೂರು ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಉಪ ವಿಭಾಗದ ಎಸ್‌ಎಸ್‌ಇ/ಪಿ.ವೇ/ಕೆಂಗೇರಿ (ಕೆಜಿಐ) ವಿಭಾಗದಲ್ಲಿ ಚಿಕ್ಕ ಸೇತುವೆಗಳ (40 ನಂ.) ಮೇಲಿನ ಅಭಿವೃದ್ಧಿ ಕಾಮಗಾರಿಗಳು. ನಿರ್ವಹಣೆಯ ಅವಧಿ 4 ತಿಂಗಳುಗಳು.	ರೂ. 1,05,50,247/-
7	**ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ–1:** ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ವಿಭಾಗದಲ್ಲಿ ಈಗಿರುವ ಕರ್ವ್ಡ್ ಸ್ವಿಚ್ ಮತ್ತು ಸಿಎಂಎಸ್ ಕ್ರಾಸಿಂಗ್‌ಗಳನ್ನು 60 ಕೆಜಿ. ಟಿಡಬ್ಲ್ಯೂಎಸ್ ಮತ್ತು ಡಬ್ಲ್ಯೂಸಿಎಂಎಸ್ ಕ್ರಾಸಿಂಗ್ 23 ಸೆಟ್‌ಗಳಿಂದ ಥ್ರೂ ಟರ್ನ್‌ಔಟ್ ರಿನ್ಯೂವಲ್ ಕಾಮಗಾರಿ. **ಉಪ ಕಾಮಗಾರಿ–2:** ಎಸ್‌ಎಸ್‌ಇ/ಪಿ.ವೇ/ಮಂಡ್ಯ ವಿಭಾಗಲ್ಲಿ ಕಿಮೀ. 55/000–101/107 ನ ಅಪ್ ಲೈನಿನ ನಡುವಿನ ಪ್ರತ್ಯೇಕ ಸ್ಥಳಗಳಲ್ಲಿ 37.457 ಕಿಮೀ. ಉದ್ದಕ್ಕೆ ಥ್ರೂ ಫಿಟಿಂಗ್ ರಿನ್ಯೂವಲ್ ಕಾಮಗಾರಿ. **ಉಪ ಕಾಮಗಾರಿ–3:** ಎಸ್‌ಎಸ್‌ಇ/ಪಿ.ವೇ./ಕೆಂಗೇರಿ ವಿಭಾಗದಲ್ಲಿ 1660/ಕಿಮೀ. ರಲ್ಲಿ 1.83 ಕಿಮೀ. ಉದ್ದದ ಬೆಂಡುಗಳಲ್ಲಿ ಬರುವ ಪ್ರತ್ಯೇಕ ಸ್ಥಳಗಳಲ್ಲಿ ಕಿಮೀ. 1/347 ರಿಂದ 13/254 (ಡೌನ್‌ಲೈನಿನಲ್ಲಿ) 60ಕೆಜಿ. ವೈಡರ್ ಬೇಸ್ ಪಿಎಸ್‌ಸಿ ಮೂಲಕ 1660 ನಂ. / ಕಿಮೀ. ರಲ್ಲಿ ಈಗಿರುವ 60 ಕೆಜಿ. ರೈಲ್‌ಗಳನ್ನು 60 ಕೆಜಿ. ಪಿಎಸ್‌ಸಿ ಇಂದ ಟಿಆರ್‌ಆರ್(ಪಿ) ಕಾಮಗಾರಿ.	ರೂ. 1,50,86,436/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.08.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/366/AAF/PRB/SWR/2025-26 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಪಥಸಂಚಲನದ ಆಕರ್ಷಣೆ, ಸಾಂಸ್ಕೃತಿಕ ಮೆರುಗು

ರಾಜ್ಯಮಟ್ಟದ ಸ್ವಾತಂತ್ರ್ಯೋತ್ಸವಕ್ಕೆ ನಗರದ ಮಾಣೆಕ್ ಷಾ ಕವಾಯತು ಮೈದಾನ ಸಜ್ಜು, ಬಿಗಿ ಭದ್ರತೆ

ಪಥಸಂಚಲನದ ತಾಲೀಮು ನಡೆಸಿದ ಮಕ್ಕಳು — ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಕಬ್ಬನ್ ರಸ್ತೆಯಲ್ಲಿ ಇರುವ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಕವಾಯತು ಮೈದಾನದಲ್ಲಿ ಆಗಸ್ಟ್ 15ರಂದು (ಶುಕ್ರವಾರ) ರಾಜ್ಯಮಟ್ಟದ 79ನೇ ಸ್ವಾತಂತ್ರ್ಯ ದಿನಾಚರಣೆ ನಡೆಯಲಿದ್ದು, ಬೆಂಗಳೂರು ಜಿಲ್ಲಾಡಳಿತ, ಬಿಬಿಎಂಪಿ ಹಾಗೂ ನಗರ ಪೊಲೀಸ್ ಇಲಾಖೆಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಶುಕ್ರವಾರ ಬೆಳಿಗ್ಗೆ 9ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧ್ವಜಾರೋಹಣ ನೆರವೇರಿಸಲಿದ್ದು, ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಡೆಯುವ ವಿಶೇಷ ಕವಾಯತನ್ನು ಅವರು ವೀಕ್ಷಣೆ ಮಾಡಲಿದ್ದಾರೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮೆರುಗು ನೀಡಲಿವೆ.

ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಬುಧವಾರ ಮೈದಾನದಲ್ಲಿ ಸಿದ್ಧತೆ ಪರಿಶೀಲಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಕಾನೂನು ಸುವ್ಯವಸ್ಥೆ ಹಾಗೂ ಸಂಚಾರ ನಿರ್ವಹಣೆಗೆ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ಮೈದಾನದ ಸುತ್ತಮುತ್ತ ಎಲ್ಲ ಘಟನೆಗಳ ಮೇಲೆ ನಿಗಾ ವಹಿಸಲು ಸಿಸಿಟಿವಿ ಕ್ಯಾಮೆರಾ, ಬ್ಯಾಗೇಜ್ ಸ್ಕ್ಯಾನರ್ ಅಳವಡಿಸಲಾಗಿದೆ ಎಂದು ಹೇಳಿದರು.

ಪಾಸ್ ವಿತರಣೆ: ಆಹ್ವಾನಿತರಿಗೆ ಪಾಸ್‌ಗಳನ್ನು ವಿತರಿಸಿದ್ದು, ಪಾಸ್‌ಗಳನ್ನು ಗೇಟ್ ಬಳಿಯ ಸಿಬ್ಬಂದಿಗೆ ತೋರಿಸಿ ಮೈದಾನದ ಒಳಗಿನ ನಿಗದಿತ ಗ್ಯಾಲರಿಗೆ ಪ್ರವೇಶಿಸಬೇಕು. ಡಾರ್ಕ್ ಪಿಂಕ್ ಬಣ್ಣದ ವಿವಿಐಪಿ ಪಾಸ್ ಹೊಂದಿರುವವರು ಗೇಟ್ ಸಂಖ್ಯೆ 2ರಲ್ಲಿ (ಬ್ಲಾಕ್ 1) (ಕ್ರಮ ಸಂಖ್ಯೆ 1ರಿಂದ 500ರ ವರೆಗೆ) ಪ್ರವೇಶಿಸಬೇಕು.

ಲೈಟ್ ಪಿಂಕ್ ಬಣ್ಣದ ಪಾಸ್ ಹೊಂದಿರುವ ಗಣ್ಯರು/ಅಧಿಕಾರಿಗಳು (ಕ್ರಮ ಸಂಖ್ಯೆ 501ರಿಂದ 2,500ರ ವರೆಗೆ) ಗೇಟ್ 2ರಲ್ಲೇ ಪ್ರವೇಶಿಸಿ ಬ್ಲಾಕ್ 2 ಹಾಗೂ 3ರಲ್ಲಿ ಆಸೀನರಾಗಬೇಕು. ಬಿಳಿ ಬಣ್ಣದ ಪಾಸ್ ಹೊಂದಿರುವವರು ಗೇಟ್ ಸಂಖ್ಯೆ 4ರಲ್ಲಿ, ಗೇಟ್ ಸಂಖ್ಯೆ 5ರಲ್ಲಿ ಹಸಿರು ಬಣ್ಣದ ಪಾಸ್ ಹೊಂದಿರುವ ಸಾರ್ವಜನಿಕರಿಗೆ ಪ್ರವೇಶ ಕಲ್ಪಿಸಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ಮೈದಾನದಲ್ಲಿ ಶಾಮಿಯಾನ, ವೇದಿಕೆ ನಿರ್ಮಾಣ, ಬ್ಯಾರಿಕೇಡ್ ಅಳವಡಿಕೆ ಮತ್ತು ಆಸನಗಳ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಬೆಳಿಗ್ಗೆ 8.58ಕ್ಕೆ ಮುಖ್ಯಮಂತ್ರಿ ಅವರು ಮೈದಾನಕ್ಕೆ ಆಗಮಿಸುತ್ತಾರೆ. ಧ್ವಜಾರೋಹಣದ ಬಳಿಕ ಮುಖ್ಯಮಂತ್ರಿ ತೆರೆದ ಜೀಪಿನಲ್ಲಿ ಪರೇಡ್ ಪರಿವೀಕ್ಷಣೆ ಮತ್ತು ಗೌರವ ರಕ್ಷೆ ಸ್ವೀಕರಿಸಲಿದ್ದಾರೆ. ನಂತರ, ಸ್ವಾತಂತ್ರ್ಯ ದಿನಾಚರಣೆಯ ಸಂದೇಶ ನೀಡಲಿದ್ದಾರೆ ಎಂದರು.

ಗೌರವ ರಕ್ಷೆ ಸ್ವೀಕರಿಸಲು ಸಿಎಆರ್, ಕೆಎಸ್‌ಆರ್‌ಪಿ, ಸಿಆರ್‌ಪಿಎಫ್, ಬಿಎಸ್‌ಎಫ್, ಸಿಎಆರ್, ಗೋವಾ ಪೊಲೀಸ್, ಕೆಎಸ್‌ಐಎಸ್‌ಎಫ್, ಸಂಚಾರ ಪೊಲೀಸ್, ಮಹಿಳಾ ಪೊಲೀಸ್, ಗೃಹ ರಕ್ಷಕ ದಳ, ಸಂಚಾರ ವಾರ್ಡನ್, ಅಗ್ನಿಶಾಮಕ ದಳ ಸಿಬ್ಬಂದಿ, ಶ್ವಾನ ದಳ, ಬ್ಯಾಂಡ್ ಸೇರಿ ಒಟ್ಟು 35 ತುಕಡಿಗಳಲ್ಲಿ ಸುಮಾರು 1,150 ಮಂದಿ ಭಾಗವಹಿಸಲಿದ್ದಾರೆ ಎಂದರು.

ಮೈದಾನದಲ್ಲಿ ಭದ್ರತೆ ಮತ್ತು ಸುರಕ್ಷತೆಗಾಗಿ 100 ಸಿಸಿಟಿವಿ ಕ್ಯಾಮೆರಾ, ಎರಡು ಬ್ಯಾಗೇಜ್ ಸ್ಕ್ಯಾನರ್ ಅಳವಡಿಸಲಾಗಿದೆ. ಆಕಸ್ಮಿಕ ವಿಪತ್ತು ಸಂಭವಿಸಿದಲ್ಲಿ ತಕ್ಷಣ ಪ್ರತಿಕ್ರಿಯಿಸಲು ಆಂಬುಲೆನ್ಸ್‌ಗಳು, ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ಹಲವು ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯ ಹಾಸಿಗೆ ಕಾಯ್ದಿರಿಸಲಾಗಿದೆ ಎಂದು ಮಹೇಶ್ವರ ರಾವ್ ಮಾಹಿತಿ ನೀಡಿದರು.

ನೋಂದಣಿ: ಪ್ರಥಮ ಬಾರಿಗೆ ಸಾರ್ವಜನಿಕರಿಗೆ ಸ್ವಾತಂತ್ರ್ಯ ದಿನಾಚರಣೆ ವೀಕ್ಷಿಸಲು ಆನ್‌ಲೈನ್ ಮೂಲಕ ಇ-ಪಾಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಆಸಕ್ತರು ಸೇವಾ ಸಿಂಧು ವೆಬ್‌ಸೈಟ್ (www.sevasindhu.karnataka.gov.in) ಇ-ಪಾಸ್ ಅನ್ನು ಪಡೆಯಬಹುದು.

ದೂರದರ್ಶನದಲ್ಲಿ ಕಾರ್ಯಕ್ರಮದ ನೇರ ಪ್ರಸಾರ ಮಾಡಲು ಕ್ರಮ ವಹಿಸಲಾಗಿದೆ. ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ ಎಂದರು.

ವಾಹನ ನಿಲುಗಡೆ ನಿಷೇಧಿತ ರಸ್ತೆಗಳು

- **ಸೆಂಟ್ರಲ್ ಸ್ಟ್ರೀಟ್:** ಅನಿಲ್ ಕುಂಬ್ಳೆ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣದವರೆಗೆ
- **ಕಬ್ಬನ್ ರಸ್ತೆ:** ಸಿಟಿಒ ವೃತ್ತದಿಂದ ಕೆ.ಆರ್.ರಸ್ತೆ ಹಾಗೂ ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ
- **ಎಂ.ಜಿ. ರಸ್ತೆ:** ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ

ಏನೆಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು

- **ನಾಡಗೀತೆ ಹಾಗೂ ರೈತ ಗೀತೆ:** ರಾಜೇಶ್, ಡಿ.ಆರ್.ನಿರ್ಮಲಾ ಮತ್ತು ತಂಡ
- **ಸ್ವಾತಂತ್ರ್ಯ ಸಂಗ್ರಾಮದ ವೀರ ಕನ್ನಡತಿಯರು:** ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಹೇರೋಹಳ್ಳಿ, ಬೆಂಗಳೂರು
- **ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು:** ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಬೆಂಗಳೂರು (ಒಟ್ಟು 500 ಮಕ್ಕಳು)
- **ವಾದ್ಯಮೇಳ:** ಪೊಲೀಸ್ ಇಲಾಖೆಯ ಸಿಬ್ಬಂದಿ ಹಾಗೂ ಅಧಿಕಾರಿಗಳು (ಒಟ್ಟು 253 ಮಂದಿ)

> ಕಾರ್ಯಕ್ರಮಕ್ಕೆ ಬರುವವರ ಪ್ರವೇಶ ದ್ವಾರದಲ್ಲಿ ಆಹ್ವಾನ ಪತ್ರಿಕೆಯ ಜತೆಗೆ ಗುರುತಿನ ಚೀಟಿ ಹಾಜರು ಪಡಿಸಬೇಕು. ಗ್ಯಾಲರಿಯಲ್ಲಿ ವಿಸ್ತರಿಸಿ ಹೆಚ್ಚಿನ ಜನರು ವೀಕ್ಷಿಸಲು ವ್ಯವಸ್ಥೆ ಮಾಡಲಾಗಿದೆ
>
> **ಜಿ.ಜಗದೀಶ್**, ಜಿಲ್ಲಾಧಿಕಾರಿ

> ಆಕಸ್ಮಿಕ ಬೆಂಕಿ ಅವಘಡಗಳನ್ನು ನಿಭಾಯಿಸಲು ಅಗ್ನಿಶಾಮಕ ವಾಹನ ಜತೆಗೆ ಸ್ಥಳದಲ್ಲಿ ಸಾಕಷ್ಟು ಸಿಬ್ಬಂದಿ ನಿಯೋಜನೆ ಮಾಡಲಾಗುತ್ತಿದೆ
>
> **ಮಹೇಶ್ವರ ರಾವ್**, ಮುಖ್ಯ ಆಯುಕ್ತ, ಬಿಬಿಎಂಪಿ

> ಪರೇಡ್ ಮೈದಾನ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ಸ್ಥಳದ ಕೊರತೆ ಇದೆ. ಕಾರ್ಯಕ್ರಮಕ್ಕೆ ಬರುವವರು 'ನಮ್ಮ ಮೆಟ್ರೊ' ಬಳಸಿ
>
> **ಸೀಮಂತ್ ಕುಮಾರ್ ಸಿಂಗ್**, ನಗರ ಪೊಲೀಸ್ ಕಮಿಷನರ್

ಸಾರ್ವಜನಿಕರಿಗೆ ಸೂಚನೆ

- ಸಮಾರಂಭಕ್ಕೆ ಬರುವ ಸಾರ್ವಜನಿಕರು ಬೆಳಿಗ್ಗೆ 8.30ರ ಒಳಗಾಗಿ ನಿಗದಿತ ಆಸನಗಳಲ್ಲಿ ಆಸೀನರಾಗಬೇಕು. ಮೈದಾನದ ಒಳಗೆ ಪ್ರವೇಶಿಸುವಂತಿಲ್ಲ
- ಹಸಿರು ಬಣ್ಣದ ಪಾಸ್ (ಇ-ಪಾಸ್) ಹೊಂದಿರುವವರು ಮಣಿಪಾಲ್ ಸೆಂಟರ್ ಕಡೆಯಿಂದ ಕಬ್ಬನ್ ರಸ್ತೆ ಮೂಲಕ ಗೇಟ್ ಸಂಖ್ಯೆ 5ರಲ್ಲಿ ಪ್ರವೇಶಿಸಬೇಕು
- ಕಾರ್ಯಕ್ರಮಕ್ಕೆ ಬರುವವರು ತಮ್ಮೊಂದಿಗೆ ಅನಗತ್ಯವಾದ ಲಗೇಜು ಹಾಗೂ ಇತರ ವಸ್ತುಗಳನ್ನು ತರುವಂತಿಲ್ಲ
- ಅನುಮಾನಾಸ್ಪದ ವಸ್ತುಗಳು, ವ್ಯಕ್ತಿಗಳು ಕಂಡುಬಂದರೆ ಕೂಡಲೇ ಸಮವಸ್ತ್ರದಲ್ಲಿ ಇರುವ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು

ನಿಷೇಧಿತ ವಸ್ತುಗಳು

ಸಿಗರೇಟ್, ಬೆಂಕಿ ಪೊಟ್ಟಣ, ಕರಪತ್ರಗಳು, ಬಣ್ಣದ ದ್ರಾವಣಗಳು, ವಿಡಿಯೊ ಹಾಗೂ ಸ್ಟಿಲ್ ಕ್ಯಾಮೆರಾ, ನೀರಿನ ಬಾಟಲ್ ಹಾಗೂ ಕ್ಯಾನ್, ಶಸ್ತ್ರಾಸ್ತ್ರ, ಹರಿತವಾದ ವಸ್ತುಗಳು, ಕಪ್ಪು ಕರವಸ್ತ್ರ, ತಿಂಡಿ-ತಿನಿಸುಗಳು, ಮದ್ಯದ ಬಾಟಲು ಹಾಗೂ ಮಾದಕ ವಸ್ತುಗಳು, ಪಟಾಕಿ ಹಾಗೂ ಸ್ಫೋಟಕ ವಸ್ತುಗಳನ್ನು ನಿಷೇಧಿಸಲಾಗಿದೆ.

ವರ್ಗಾವಣೆ

ಬೆಂಗಳೂರು: ಇಬ್ಬರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಒ ಹರೀಶ್ ಕುಮಾರ್ ಕೆ. ಅವರನ್ನು ಬಿಬಿಎಂಪಿ ವಿಶೇಷ ಆಯುಕ್ತರ (ಹಣಕಾಸು) ಹುದ್ದೆಗೆ ವರ್ಗಾವಣೆ ಮಾಡಿ, ಆ ಜಾಗಕ್ಕೆ ಬಿಬಿಎಂಪಿ ಯಲಹಂಕ ವಲಯ ಆಯುಕ್ತರಾಗಿದ್ದ ಕರಿಗೌಡ ಅವರನ್ನು ವರ್ಗಾಯಿಸಲಾಗಿದೆ.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ ಬಿ/ಟಿಆರ್‌ಡಿ. 2025–26/16 ದಿನಾಂಕ: 08.08.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ವೈಟ್‌ಫೀಲ್ಡ್/ಟಿಎಸ್‌ಎಸ್‌ನಲ್ಲಿ 30/42 ಎಂವಿಎ ಪವರ್ ಟ್ರಾನ್ಸ್‌ಫಾರ್ಮರ್ ಅನ್ನು ಒದಗಿಸುವ ಮೂಲಕ ಬೆಂಗಳೂರು ಪ್ರದೇಶದ ಸಾಮರ್ಥ್ಯ ಹೆಚ್ಚಿಸುವುದು. ಮತ್ತು ಯಲಹಂಕ/ಟಿಎಸ್‌ಎಸ್‌ನಲ್ಲಿ ರಿಲೀಸ್ ಮಾಡಿದ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವುದು. **ಪೂರ್ಣಗೊಳಿಸುವ ಅವಧಿ: 10 ತಿಂಗಳುಗಳು.**	ರೂ. 3,61,86,857.82

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29–08–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್/ಟಿಆರ್‌ಡಿ ಬೆಂಗಳೂರು

ಪಿಯುಬಿ/376/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

CSIR-CENTRAL INSTITUTE OF MEDICINAL & AROMATIC PLANTS
(Council of Scientific & Industrial Research)
Research Centre, Allalasandra, GKVK Post, Bengaluru - 560 065. Ph: 080-28460563, 28565652

OPEN DAY FOR STUDENTS, FARMERS AND GENERAL PUBLIC - 18th August 2025

CSIR-CIMAP Research Centre Bengaluru will remain open for students, farmers and general public on **18th August 2025** on the occasion of CSIR-CIMAP Annual Day. The Centre will be open from **10.00 AM To 3.00 PM** to provide an insight of CSIR-CIMAP activities to visitors.

SCIENTIST IN-CHARGE

ಬಸ್‌ನಲ್ಲಿ ಮಲಗಿದ್ದ ವ್ಯಕ್ತಿ ಸಜೀವದಹನ

ಪ್ರಜಾವಾಣಿ ವಾರ್ತೆ



ಹೊತ್ತಿ ಉರಿದ ಶಾಲಾ ಬಸ್

ಬೆಂಗಳೂರು: ಕೆಟ್ಟು ನಿಂತಿದ್ದ ಶಾಲಾ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ನಿದ್ರಿಸುತ್ತಿದ್ದ ಅಪರಿಚಿತ ವ್ಯಕ್ತಿಯೊಬ್ಬ ಸಜೀವ ದಹನ ಆಗಿರುವ ಘಟನೆ ರಾಮಮೂರ್ತಿನಗರ ಠಾಣಾ ವ್ಯಾಪ್ತಿಯ ಶ್ರೀನಿಧಿ ಲೇಔಟ್‌ನಲ್ಲಿ ಮಂಗಳವಾರ ತಡರಾತ್ರಿ ನಡೆದಿದೆ.

ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. 40 ವರ್ಷದ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮಂಗಳವಾರ ತಡರಾತ್ರಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಬೆಂಕಿಯ ಕೆನ್ನಾಲಿಗೆ ಕೆಲವೇ ಕ್ಷಣಗಳಲ್ಲಿ ಇಡೀ ಬಸ್‌ಗೆ ಆವರಿಸಿಕೊಂಡಿತ್ತು. ಬಸ್ ಒಳಗೆ ಮಲಗಿದ್ದ ವ್ಯಕ್ತಿ ಸಜೀವ ದಹನವಾಗಿದ್ದಾರೆ.

ಚಿಂದಿ ಆಯುವ ವ್ಯಕ್ತಿಯೊಬ್ಬರು ಬಸ್‌ನಲ್ಲಿ ಮಲಗುತ್ತಿದ್ದರು. ಅವರೇ ಮೃತಪಟ್ಟಿರುವ ಸಾಧ್ಯತೆಯಿದೆ ಎಂದು ಸ್ಥಳೀಯರು ಶಂಕಿಸಿದ್ದಾರೆ. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬೆಂಕಿ ಗಮನಿಸಿ ಮಾಹಿತಿ: ಬಸ್‌ಗೆ ಬೆಂಕಿ ಬಿದ್ದಿರುವುದನ್ನು ಗಮನಿಸಿದ್ದ ಸ್ಥಳೀಯರು, ಅಗ್ನಿ ಶಾಮಕ ದಳ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದರು. ಕೂಡಲೇ ಅಗ್ನಿ ಶಾಮಕ ವಾಹನದೊಂದಿಗೆ ಆಗಮಿಸಿ ಬೆಂಕಿಯನ್ನು ನಂದಿಸಿದ್ದಾರೆ. ಬಳಿಕ ಪೊಲೀಸರು ಬಸ್ ಪರಿಶೀಲಿಸಿದಾಗ ಬಸ್ ಒಳಗಡೆ ಅಪರಿಚಿತ ವ್ಯಕ್ತಿ ಸಜೀವ ದಹನವಾಗಿರುವುದು ಕಂಡು ಬಂದಿತ್ತು ಎಂದು ಮೂಲಗಳು ತಿಳಿಸಿವೆ.

ಖಾಸಗಿ ಶಾಲೆಯ ಈ ಬಸ್ ಅರುಣ್ ಎಂಬುವರಿಗೆ ಸೇರಿದೆ. ಬಸ್ ಕೆಟ್ಟು ಹೋಗಿದ್ದರಿಂದ ನಾಲ್ಕು ತಿಂಗಳಿಂದ ರಸ್ತೆಯಲ್ಲಿ ನಿಲುಗಡೆ ಮಾಡಲಾಗಿತ್ತು. ಪ್ರತಿನಿತ್ಯ ಸಂಜೆ ಅರುಣ್ ಬಸ್ ಬಳಿ ಬಂದು ನೋಡಿಕೊಂಡು ಹೋಗುತ್ತಿದ್ದರು. ಮಂಗಳವಾರ ಸಂಜೆ ಕೂಡ ಬಂದು ಹೋಗಿದ್ದರು. ಬಸ್‌ನ ಡೋರ್ ಸರಿ ಇಲ್ಲದ ಕಾರಣ ಅಪರಿಚಿತ ವ್ಯಕ್ತಿಗಳು ಬಂದು ಬಸ್‌ನಲ್ಲೇ ಮದ್ಯ ಸೇವಿಸಿ ಹೋಗುತ್ತಿದ್ದರು. ಅದೇ ರೀತಿ ಈ ವ್ಯಕ್ತಿ ಕೂಡ ಮಂಗಳವಾರ ರಾತ್ರಿ ಬಂದು ಮದ್ಯ ಸೇವಿಸಿ ಮಲಗಿರುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಮೃತದೇಹವನ್ನು ಅಂಬೇಡ್ಕರ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಬೆಂಕಿ ಹೊತ್ತಿಕೊಳ್ಳಲು ಕಾರಣ ಏನು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಆಕಸ್ಮಿಕ ಘಟನೆಯೇ ಅಥವಾ ಯಾರಾದರೂ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿ ಕೊಲೆ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿಯನ್ನು ಸಂಗ್ರಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬೆಸ್ಕಾಂ ಎಂಜಿನಿಯರ್‌ಗೆ ಚಾಕು ತೋರಿಸಿ ಮೊಬೈಲ್ ಕಳವು

ಬೆಂಗಳೂರು: ಯಲಹಂಕದ ಶಿವಾಸ್ ಪೇಯಿಂಗ್ ಗೆಸ್ಟ್‌ಗೆ (ಪಿ.ಜಿ) ನುಗ್ಗಿದ ದುಷ್ಕರ್ಮಿಯೊಬ್ಬ, ಬೆಸ್ಕಾಂ ಸಹಾಯಕ ಎಂಜಿನಿಯರ್ ಎಚ್.ಸಿ.ಸುಷ್ಮಿತಾ ಅವರ ಎದುರು ಅಸಭ್ಯವಾಗಿ ವರ್ತಿಸಿ ಎರಡು ಮೊಬೈಲ್ ಕಳವು ಮಾಡಿಕೊಂಡು ಪರಾರಿ ಆಗಿದ್ದಾನೆ.

ಎಂಜಿನಿಯರ್ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಪೇಯಿಂಗ್ ಗೆಸ್ಟ್ ಸುತ್ತಮುತ್ತ ರಸ್ತೆ ಹಾಗೂ ಪಿ.ಜಿಯಲ್ಲಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಯನ್ನು ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರರು ಯಲಹಂಕದ ಬೆಸ್ಕಾಂ ಸಿ–7ರಲ್ಲಿ ಸಹಾಯಕ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ಆಗಸ್ಟ್ 11ರಂದು ಮಧ್ಯಾಹ್ನ ಕಚೇರಿಯಿಂದ ಪಿ.ಜಿಗೆ ಬಂದು ತಮ್ಮ ಕೊಠಡಿಗೆ ತೆರಳಿದ್ದರು. ಆ ಸಂದರ್ಭದಲ್ಲಿ ಕೊಠಡಿಯ ಬಾಗಿಲು ಬಡಿದ ಶಬ್ದವಾಗಿತ್ತು. ಪಿ.ಜಿ ನಿವಾಸಿಗಳು ಅಥವಾ ಮಾಲೀಕರು ಇರಬಹುದೆಂದು ಭಾವಿಸಿ ಸುಷ್ಮಿತಾ ಅವರು ಕೊಠಡಿಯ ಬಾಗಿಲು ತೆರೆದಿದ್ದರು. ಆಗ ಆರೋಪಿ ಕೊಠಡಿಯ ಒಳಗೆ ನುಗ್ಗಿದ್ದ. ದೂರುದಾರರ ಕುತ್ತಿಗೆಗೆ ಚಾಕು ಇಟ್ಟು ಕೈಯಲ್ಲಿದ್ದ ಚಿನ್ನದ ಬಳೆಯನ್ನು ತೆಗೆಯುವಂತೆ ಬೆದರಿಕೆ ಹಾಕಿದ್ದ. ನಂತರ, ಅಸಭ್ಯವಾಗಿ ವರ್ತಿಸಿದ್ದ. ಬಳೆಯನ್ನು ತೆಗೆಯಲು ಸಾಧ್ಯವಾಗಿರಲಿಲ್ಲ. ನಂತರ ಹಣ ಕೊಡುವಂತೆ ಪೀಡಿಸಿದ್ದ. ಸುಷ್ಮಿತಾ ರೂಮ್‌ನಲ್ಲಿದ್ದ ಶೌಚಾಲಯಕ್ಕೆ ಹೋಗಿ ಬಾಗಿಲು ಹಾಕಿಕೊಂಡಿದ್ದರು. ಆಗ ಕಳ್ಳ ಎರಡು ಮೊಬೈಲ್ ಕಳವು ಮಾಡಿಕೊಂಡು ಪರಾರಿ ಆಗಿದ್ದಾನೆ' ಎಂದು ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಯ ಗುರುತು ಪತ್ತೆ: ಆರೋಪಿ ದೋಚಿರುವ ಮೊಬೈಲ್‌ಗಳ ಮೌಲ್ಯ ಸುಮಾರು ₹ 1.05 ಲಕ್ಷ ಎಂದು ಸುಷ್ಮಿತಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಆರೋಪಿ ಜುಡಿಷಿಯಲ್ ಲೇಔಟ್‌ನ ರೈಲು ಹಳಿಯ ಬಳಿ ಮೊಬೈಲ್‌ಗಳನ್ನು ಎಸೆದು ಹೋಗಿದ್ದಾನೆ. ಆತನ ಗುರುತು ಪತ್ತೆಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಎಂಟಿಸಿ ಬಸ್ ಚಕ್ರ ಹರಿದು ಸ್ಕೂಟರ್ ಸವಾರ ಸಾವು

ಬೆಂಗಳೂರು: ನಗರದ ಹೊಸೂರು ಮುಖ್ಯರಸ್ತೆಯ ರೂಪೇನ ಅಗ್ರಹಾರ ಬಸ್ ನಿಲ್ದಾಣ ಬಳಿ ಬಿಎಂಟಿಸಿ ಬಸ್ ಹಾಗೂ ಸ್ಕೂಟರ್ ನಡುವೆ ಬುಧವಾರ ಮಧ್ಯಾಹ್ನ ಸಂಭವಿಸಿದ ಅಪಘಾತದಲ್ಲಿ ಸ್ಕೂಟರ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸೈಯದ್ ಜಾಫರ್ ಹುಸೇನ್ (33) ಮೃತಪಟ್ಟ ಸವಾರ.

ಹೊಸೂರು ಮುಖ್ಯರಸ್ತೆಯ ಎಲೆಕ್ಟ್ರಾನಿಕ್ ಸಿಟಿ ಕಡೆಯಿಂದ ಸಿಲ್ಕ್ ಬೋರ್ಡ್ ಮೇಲ್ಸೇತುವೆ ಜಂಕ್ಷನ್ ಕಡೆಗೆ ತೆರಳುತ್ತಿದ್ದ ಬಿಎಂಟಿಸಿ ಬಸ್‌ವೊಂದು ಸ್ಕೂಟರ್‌ಗೆ ಡಿಕ್ಕಿಯಾದ ಪರಿಣಾಮ ಸವಾರ ರಸ್ತೆಯ ಮೇಲೆ ಬಿದ್ದಿದ್ದರು. ಬಸ್‌ನ ಚಕ್ರಗಳು ಅವರ ಮೇಲೆ ಹರಿದು ಸ್ಥಳದಲ್ಲಿಯೇ ಮೃತಪಟ್ಟರು ಎಂದು ಮಡಿವಾಳ ಸಂಚಾರ ಪೊಲೀಸರು ಹೇಳಿದರು. ಬಸ್ ಚಾಲಕ ಆರ್. ಜಯರಾಮಯ್ಯ ಅವರ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಕಂಡುಬಂದಿದೆ. ಅವರನ್ನು ವಶಕ್ಕೆ ಪಡೆಯಲಾಗಿದೆ ಪೊಲೀಸರು ಹೇಳಿದರು. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕ್ಲಸ್ಟರ್ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಗಂಗಾನಗರ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆಯ ಬಾಲಕರು ಮತ್ತು ಬಾಲಕಿಯರ ತಂಡವು ಕಬಡ್ಡಿಯಲ್ಲಿ ಪ್ರಥಮ ಸ್ಥಾನ ಪಡೆಯಿತು. ಮುಖ್ಯ ಶಿಕ್ಷಕಿ ಅಮೀನಾ ಕೆ. ಎಸ್‌ಡಿಎಂಸಿ ಅಧ್ಯಕ್ಷರಾದ ವಿಜಯಶ್ರೀ, ದೈಹಿಕ ಶಿಕ್ಷಣ ಶಿಕ್ಷಕಿ ರೋಹಿಣಿ ಹಾಗೂ ಕ್ರೀಡಾ ವ್ಯವಸ್ಥಾಪಕ ಷಣ್ಮುಖ ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು

DIAGEO India

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಕರ್ನಾಟಕ, ಭಾರತ. **ಫೋನ್:** +91 80 2221 0705; **ಫ್ಯಾಕ್ಸ್:** +91 80 2224 5253;
ಇಮೇಲ್: investor.india@diageo.com; **ವೆಬ್‌ಸೈಟ್:** www.diageoindia.com

30ನೇ ಜೂನ್ 2025ಕ್ಕೆ ಅಂತ್ಯವಾದ ತ್ರೈಮಾಸಿಕ (ಪ್ರತ್ಯೇಕಿತ ಮತ್ತು ಕ್ರೋಢೀಕೃತ) ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶಗಳ ವಿವರಣೆ

ಕಂಪನಿಯ ನಿರ್ದೇಶಕರ ಮಂಡಳಿಯು, ಆಗಸ್ಟ್ 13, 2025 ರಂದು ನಡೆದ ಸಭೆಯಲ್ಲಿ, ಜೂನ್ 30, 2025ಕ್ಕೆ ಕೊನೆಗೊಂಡ ತ್ರೈಮಾಸಿಕದ ಲೆಕ್ಕಪರಿಶೋಧನೆ ಮಾಡದ ಹಣಕಾಸು ಫಲಿತಾಂಶಗಳನ್ನು (ಪ್ರತ್ಯೇಕಿತ ಮತ್ತು ಕ್ರೋಢೀಕೃತ) ಇತರ ವಿಷಯಗಳ ನಡುವೆ ಅನುಮೋದಿಸಿದೆ.

ಭಾರತದ ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015ರ ನಿಯಮ 33 ರೊಂದಿಗೆ ಓದಲಾದ ನಿಯಮ 47 ಪ್ರಕಾರ, ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಹೊರಡಿಸಿದ ಸೀಮಿತ ಪರಿಶೀಲನಾ ವರದಿಯೊಂದಿಗೆ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ Weblink: https://www.diageoindia.com/tools/viewer.aspx?src=%2F%7E%2Fmedia%2FFiles%2FD%2FDiageo-V2%2FDiageo-India%2Finvestors%2Fproduction-library%2Foutcome-of-the-board-meeting-unaudited-financial-results-for-the-first-quarter-ended-30-June-2025.pdf ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ ಮತ್ತು ಕ್ವಿಕ್ ರೆಸ್ಪಾನ್ಸ್ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರವೇಶಿಸಬಹುದು.

ಇದನ್ನು ಸ್ಟಾಕ್ ಎಕ್ಸ್ಚೇಂಜ್‌ಗಳ ವೆಬ್‌ಸೈಟ್, ಅಂದರೆ BSE ಲಿಮಿಟೆಡ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಸಹ ಲಭ್ಯವಾಗುವಂತೆ ಮಾಡಲಾಗಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
ಸಹಿ/–
ಪ್ರವೀಣ್ ಸೋಮೇಶ್ವರ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
DIN: 01802656

ಸ್ಥಳ : ಬೆಂಗಳೂರು
ದಿನಾಂಕ : 13ನೇ ಆಗಸ್ಟ್ 2025

ಕಾಲ್ತುಳಿತ: ಆಕ್ಷೇಪಣೆ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ವಿಚಾರಣಾ ಆಯೋಗದ ವರದಿ ರದ್ದುಪಡಿಸಲು ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ 'ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್' ನಿರ್ದೇಶಕ ಸುನಿಲ್ ಮ್ಯಾಥ್ಯೂ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ನ್ಯಾ.ಕುನ್ಹ ಆಯೋಗವು ಅರ್ಜಿದಾರರ ವಾದ ಆಲಿಸದೆ ಮತ್ತು ಪ್ರಕರಣದ ಸಾಕ್ಷಿಗಳನ್ನು ಪಾಟಿ ಸವಾಲು ನಡೆಸಲು ಅವಕಾಶ ನೀಡದೆ ಏಕಪಕ್ಷೀಯ ವಾದ ಆಲಿಕೆ ಮಾಡಿ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದೆ. ವರದಿಯ ಪ್ರತಿಯನ್ನು ಅರ್ಜಿದಾರರಿಗೆ ನೀಡಿಲ್ಲ. ಆದರೆ, ಈ ವರದಿ ಸುದ್ದಿ ಮಾಧ್ಯಮಗಳಿಗೆ ಸೋರಿಕೆಯಾಗಿದೆ. ವರದಿಯಲ್ಲಿ ಉಲ್ಲೇಖಿಸಿರುವ ಅಂಶಗಳಿಂದ ಅರ್ಜಿದಾರರ ಘನತೆಗೆ ಧಕ್ಕೆಯಾಗಿದೆ' ಎಂದು ಆಕ್ಷೇಪಿಸಿದರು.

ಇದನ್ನು ತಳ್ಳಿ ಹಾಕಿದ ಸರ್ಕಾರದ ಪರ ಹಾಜರಿದ್ದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ 'ಸದ್ಯಕ್ಕೆ ನ್ಯಾ.ಕುನ್ಹ ವರದಿಯನ್ನು ಬಹಿರಂಗ ಮಾಡುವುದಿಲ್ಲ. ಹಾಗಾಗಿ, ವರದಿ ಬಗ್ಗೆ ನ್ಯಾಯಪೀಠ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಬಾರದು' ಎಂದು ಮನವಿ ಮಾಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, 'ನ್ಯಾ.ಕುನ್ಹ ವರದಿಗೆ ತಡೆ ನೀಡಬೇಕು. ತನಿಖೆ ಆಧರಿಸಿ ಯಾವುದೇ ಕ್ರಮ ಜರುಗಿಸದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂಬ ಅರ್ಜಿದಾರರ ಮಧ್ಯಂತರ ಮನವಿ ಕುರಿತು ಆದೇಶ ಹೊರಡಿಸುವ ಅಗತ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಅಂತೆಯೇ, ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.

ನಗರದಲ್ಲಿ ಇಂದು

'ಟ್ರಾನ್ಸ್‌ಫಾರ್ಮೇಷನ್ ಫಾರ್ ದಿ ನೇಷನ್' ರಾಜ್ಯಮಟ್ಟದ ವಿಚಾರಸಂಕಿರಣ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಶರತ್ ಬಚ್ಚೇಗೌಡ, ಡಾ. ವಿಜಯಲಕ್ಷ್ಮಿ ದೇಶಮಾನೆ, ಎಂ.ಜಿ. ಬಾಲಕೃಷ್ಣ, ಟಿ. ತಿಮ್ಮೇಗೌಡ, ಮುನಿರಾಜು ಡಿ., ಆಯೋಜನೆ: ವಿಶ್ವಮಾನವ ಯುವ ವೇದಿಕೆ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಡಾ. ವಿಜಯಲಕ್ಷ್ಮಿ ದೇಶಮಾನೆ

ನಾಣ್ಯಗಳ ಪ್ರದರ್ಶನ, ಭಾರತ ಮತ್ತು ಕರ್ನಾಟಕದ ಪರಂಪರೆಯ ಕುರಿತು ಛಾಯಾಚಿತ್ರಗಳ ಪ್ರದರ್ಶನ: ಅಧ್ಯಕ್ಷತೆ: ಸುಜೀತ್ ನಯನ್, ಅತಿಥಿಗಳು: ಎಂ.ವಿ. ವೆಂಕಟೇಶ್, ಸಿ.ಬಿ. ಪಾಟೀಲ್, ದೀಪಾ ಸಿ. ಮೆನನ್, ಧರ್ಮೇಂದರ್, ಆಯೋಜನೆ: ಹರ್ ಘರ್ ತಿರಂಗಾ, ಸ್ಥಳ: ಟಿಪ್ಪು ಸುಲ್ತಾನ್ ಅರಮನೆ, ಚಾಮರಾಜಪೇಟೆ, ಬೆಳಿಗ್ಗೆ 11.30

'ಬಾಹತ್ತರ ನಿಯೋಗ' ದತ್ತಿ ಉಪನ್ಯಾಸ: ಕೆ.ಎಸ್. ಮಧುಸೂದನ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 5

ಕಸ್ತೂರಬಾ ಗಾಂಧಿ ಆಪ್ತ ರಂಗಮಂದಿರ ಲೋಕಾರ್ಪಣೆ: ಎಸ್. ಟಿ. ಸೋಮಶೇಖರ್, ಆಯೋಜನೆ: ಬಿಬಿಎಂಪಿ, ಸ್ಥಳ: ಗಾಂಧಿ ಉದ್ಯಾನ, ಭಾರತ್ ನಗರ ಎರಡನೇ ಹಂತ, ಸಂಜೆ 6

'ವಂದೇ ಮಾತರಂ' ಸಂಗೀತ ಕಛೇರಿ: ಶಂಕರ್ ಶಾನಭೋಗ್, ಕೃಷ್ಣ ಉಡುಪ, ರಮೇಶ್ ಕುಮಾರ್ ಜಿ.ಎಲ್., ಮೇಘನಾ ಹಳಿಯಾಳ, ಪದ್ಮನಾಭ ಕಾಮತ್, ಲೋಕೇಶ್ ಆರ್., ಸುದತ್ತ ಎಲ್. ಶ್ರೀಪಾದ್, ಆಯೋಜನೆ: ಪರಂಪರಾ, ಸ್ಥಳ: ಡಾ.ಸಿ. ಅಶ್ವತ್ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 6

'ಶ್ರೀಕೃಷ್ಣನ ಬಾಲ ಲೀಲೆಗಳು' ಪ್ರವಚನ: ಕಲ್ಲಾಪುರ ಪವಮಾನಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಹೆಬ್ಬಾಳ: ಲೂಪ್‌ನಲ್ಲಿ ಸಂಚಾರಕ್ಕೆ ಅವಕಾಶ

2 ವಾರಗಳ ಹಿಂದೆಯೇ ಸಿದ್ಧಗೊಂಡಿದ್ದರೂ ಉದ್ಘಾಟನೆಯಾಗದ ಕಾರಣಕ್ಕೆ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಾಣವಾಗಿರುವ 700 ಮೀಟರ್ ಉದ್ದದ ಪಥದಲ್ಲಿ ಪ್ರಾಯೋಗಿಕ ಸಂಚಾರಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕೊನೆಗೂ ಅವಕಾಶ ನೀಡಿದೆ.

ಇದು ವಾಹನ ದಟ್ಟಣೆ ನಿವಾರಣೆಗೆ ಸಹಕಾರಿಯಾಗಿದ್ದು, ಈ ಪಥವು (ಲೂಪ್) ಕೆ.ಆರ್. ಪುರವನ್ನು ಸಂಪರ್ಕಿಸಲಿದೆ. ಸುಮಾರು ಎರಡು ವಾರಗಳ ಹಿಂದೆಯೇ ಸಿದ್ಧವಾಗಿದ್ದರೂ, ಉದ್ಘಾಟನಾ ಸಮಾರಂಭದ ಕಾರಣ ಬಿಡಿಎ ಇಲ್ಲಿ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿರಲಿಲ್ಲ.

ಇತ್ತೀಚೆಗೆ ಮೇಲ್ಸೇತುವೆ ಪರಿಶೀಲಿಸಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅನುಮತಿ ಪಡೆದ ಬಳಿಕ ಎಲಿವೇಟೆಡ್ ಲೂಪ್ ಅನ್ನು ಉದ್ಘಾಟಿಸಲಾಗುವುದು' ಎಂದು ಹೇಳಿದ್ದರು. ಅದಾಗಿಯೂ, ಬಿಡಿಎ ಪ್ರಾಯೋಗಿಕವಾಗಿ ಬುಧವಾರ ಮಧ್ಯಾಹ್ನದಿಂದ ಸಂಚಾರಕ್ಕೆ ಅವಕಾಶ ನೀಡಿದೆ.

'ಹೊಸದಾಗಿ ನಿರ್ಮಿಸಲಾದ ಈ ಲೂಪ್‌ನಲ್ಲಿ ನಿರೀಕ್ಷೆಯಂತೆ ಹೆಚ್ಚಿನ ದಟ್ಟಣೆ ಕಂಡುಬಂದಿಲ್ಲ' ಎಂದು ಸಂಚಾರ ಪೊಲೀಸರು ತಿಳಿಸಿದರು.

ಕೊಡಿಗೇಹಳ್ಳಿ, ಸಹಕಾರನಗರ ಒಳಗೊಂಡಂತೆ ವಿಮಾನ ನಿಲ್ದಾಣದ ಕಡೆಯಿಂದ ನಗರದ ಕಡೆಗೆ ಸಂಚಾರಕ್ಕೆ ಅನುಕೂಲವಾಗುವಂತೆ ಮೇಲ್ಸೇತುವೆಯಲ್ಲಿ ಎರಡು ಪಥಗಳನ್ನು ನಿರ್ಮಿಸಲಾಗುತ್ತಿದೆ. ಹೊಸ ಲೂಪ್ ಮೂರು ತಿಂಗಳಲ್ಲಿ ಸಿದ್ಧವಾಗಲಿದೆ ಎಂದು ಬಿಡಿಎ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು
- 'ದಟ್ಟಣೆ ನಿರೀಕ್ಷೆಯಷ್ಟಿಲ್ಲ'
- ಹೊಸ ಲೂಪ್ ಮೂರು ತಿಂಗಳಲ್ಲಿ ಸಿದ್ಧ

ಹೆಬ್ಬಾಳ ಜಂಕ್ಷನ್ ಬಳಿಯ ಲೂಪ್‌ನಲ್ಲಿ ದ್ವಿಚಕ್ರ ವಾಹನ ಸವಾರರೊಬ್ಬರು ಸಂಚರಿಸಿದರು ಪ್ರಜಾವಾಣಿ ಚಿತ್ರ

ಸುರಂಗ ರಸ್ತೆ: ಬಿಡ್ ಸಲ್ಲಿಕೆಗೆ ಅವಧಿ ವಿಸ್ತರಣೆ

ಬೆಂಗಳೂರು: ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆ ಯೋಜನೆಯ ಟೆಂಡರ್ ಸಲ್ಲಿಕೆಗೆ ಕಾಲಾವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿದೆ.

ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) 16.74 ಕಿ.ಮೀ. ಸುರಂಗ ರಸ್ತೆಗೆ ಟೆಂಡರ್ ಆಹ್ವಾನಿಸಿದ್ದು, ಪ್ರಕ್ರಿಯೆ ಶುರುವಾಗಿದೆ. ಇದರ ನಡುವೆಯೇ ಈ ಯೋಜನೆಯ ಬಿಡ್ ಪಡೆಯಲು ಬಯಸುವ ಸಂಸ್ಥೆಗಳಿಗೆ ಭೂ ತಾಂತ್ರಿಕ ಸಮೀಕ್ಷೆ ಕೈಗೊಳ್ಳಲು ಒಂದು ತಿಂಗಳ ಅವಧಿ ನೀಡಲಾಗಿದೆ.

ಹೆಬ್ಬಾಳದ ಎಸ್ಟೀಮ್ ಮಾಲ್ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಮೂರು ಪಥದ ಅವಳಿ ಸುರಂಗ ರಸ್ತೆ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ. ಬಿಡ್‌ಗಳನ್ನು ಸಲ್ಲಿಸಲು ಅಕ್ಟೋಬರ್ 3ರವರೆಗೆ ಅವಕಾಶ ನೀಡಲಾಗಿದೆ. ಇದಾದ ಬಳಿಕ ತಾಂತ್ರಿಕ ಭದ್ರತೆ ಪರಿಶೀಲನೆ ಪ್ರಕ್ರಿಯೆಯನ್ನು ಬಿ ಸ್ಮೈಲ್ ಆರಂಭಿಸಲಿದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ತಿಳಿಸಲಾಗಿದೆ.

ಬೀದಿ ನಾಯಿ: ಇನ್ನಷ್ಟು ನಿಗಾ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಬೀದಿ ನಾಯಿಗಳಿಗಾಗಿ ಎರಡು ನಿಗಾ ಕೇಂದ್ರಗಳಿವೆ. ಇನ್ನಷ್ಟು ಕೇಂದ್ರಗಳನ್ನು ನಿರ್ಮಿಸಿ, ಬೀದಿ ನಾಯಿಗಳಿಗೆ ಉತ್ತಮ ಪರಿಸರ ನಿರ್ಮಿಸಬೇಕಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದರು.

'ಸುಪ್ರೀಂ ಕೋರ್ಟ್ ದೆಹಲಿ ಸರ್ಕಾರಕ್ಕೆ ನೀಡಿರುವ ಆದೇಶವನ್ನು ಪರಿಶೀಲಿಸಿ, ಸರ್ಕಾರದ ಜೊತೆ ಚರ್ಚಿಸಿ ಇಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಬೀದಿ ನಾಯಿಗಳಿಗೆ ಆಹಾರ ನೀಡಲು ಟೆಂಡರ್ ಕರೆಯಲಾಗಿದೆ. ಅದರೆ ಇನ್ನೂ ಅಂತಿಮಗೊಂಡಿಲ್ಲ. ನಾವು 'ಬಿರಿಯಾನಿ' ನೀಡುತ್ತಿಲ್ಲ. ಪೌಷ್ಟಿಕ ಆಹಾರ ನೀಡಲು ಯೋಚಿಸಲಾಗಿದೆ. ಬೀದಿ ನಾಯಿಗಳು ತಮ್ಮ ಪ್ರದೇಶ ಹಾಗೂ ಆಹಾರಕ್ಕಾಗಿ ಮಾತ್ರ ವ್ಯಗ್ರಗೊಳ್ಳುತ್ತವೆ' ಎಂದರು.

'ಬೀದಿ ನಾಯಿಗಳ ಬಗ್ಗೆ ಕೈಗೊಳ್ಳಬೇಕಾದ ಮಾರ್ಗಸೂಚಿಗಳನ್ನು ಸರ್ಕಾರ ನಿಗದಿಪಡಿಸಿದೆ. ಅದನ್ನು ಮರು ಪರಿಶೀಲಿಸುವ ಅಗತ್ಯವಿದೆಯೇ ಎಂಬ ಬಗ್ಗೆ ಯೋಚಿಸಲಾಗುತ್ತಿದೆ' ಎಂದರು.

'ಕನ್ನಡ ಮನೆ-ಕನ್ನಡದ ಮನ' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 'ಕನ್ನಡ ಮನೆ-ಕನ್ನಡದ ಮನ' ಅಭಿಯಾನ ಹಮ್ಮಿಕೊಂಡಿದೆ.

ಈ ಅಭಿಯಾನಕ್ಕೆ ಇದೇ 15ರಂದು ಚಾಲನೆ ದೊರೆಯಲಿದೆ. ಈ ಅಭಿಯಾನದಲ್ಲಿ ಪಾಲ್ಗೊಳ್ಳುವವರು ಮನೆಗಳಲ್ಲಿ ಬಳಸುವ ಕನ್ನಡ ಪದಗಳ ಪಟ್ಟಿಯನ್ನು ಪರಿಷತ್ತಿಗೆ ಕಳುಹಿಸಬೇಕಿದೆ. ಆ ಪದಗಳನ್ನು ಸಂಪಾದಕ ಮಂಡಳಿ ಪರಿಶೀಲಿಸಿ, 'ನಿತ್ಯ ಕನ್ನಡದ ನಿಘಂಟು' ಸಿದ್ಧಪಡಿಸಲಿದೆ. ಅತಿ ಹೆಚ್ಚು ಮನೆ ಬಳಕೆಯ ಕನ್ನಡ ಪದಗಳನ್ನು ಕಳಿಸಿದವರಿಗೆ ಬಹುಮಾನವನ್ನೂ ನೀಡಲಾಗುತ್ತದೆ ಎಂದು ಕಸಾಪ ತಿಳಿಸಿದೆ.

'ಕನ್ನಡದ ಅಪಾರ ಪದ ಸಂಪತ್ತನ್ನು ನಾವು ಬಳಸಿ ಉಳಿಸಿಕೊಳ್ಳಬೇಕಿದೆ. ಆದ್ದರಿಂದ 'ಕನ್ನಡದ ಮನೆ-ಕನ್ನಡದ ಮನ' ಎಂಬ ಅಭಿಯಾನವನ್ನು ಪರಿಷತ್ತು ಆರಂಭಿಸಲಿದೆ. ಮನೆಯಲ್ಲಿ ಬಳಕೆಯಾಗುತ್ತಿರುವ ಕನ್ನಡ ಪದಗಳ ಪಟ್ಟಿಯನ್ನು, ಕನ್ನಡ ಪದಗಳನ್ನು ಉಳಿಸಲು ಮಾಡುತ್ತಿರುವ ಪ್ರಯತ್ನವನ್ನು ಹಂಚಿಕೊಳ್ಳಲು ಅವಕಾಶ ನೀಡಲಾಗುತ್ತಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಮನೆಗಳಲ್ಲಿ ಬಳಕೆಯಲ್ಲಿರುವ ಪದಗಳನ್ನು ಒಟ್ಟುಗೂಡಿಸಿ, ನಿಘಂಟು ಸಿದ್ಧಪಡಿಸಲಾಗುತ್ತದೆ. ಅಧಿಕ ಅಚ್ಚಗನ್ನಡ ಪದಗಳನ್ನು ಬಳಸುವ ಮನೆಗಳನ್ನು ಗುರುತಿಸಿ, 'ಕನ್ನಡದ ಮನೆ-ಕನ್ನಡದ ಮನ'ಎಂಬ ಅಭಿಮಾನದ ಗೌರವವನ್ನೂ ನೀಡಲಾಗುತ್ತದೆ. ನಮ್ಮ ಮನೆಗಳಲ್ಲಿ ಕನ್ನಡ ಉಳಿದರೆ ಅದು ಮನಕ್ಕೆ ತಾನಾಗಿಯೇ ಬರುತ್ತದೆ. ಆದ್ದರಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದ್ದಾರೆ.

ಪದಗಳನ್ನು ಕಳುಹಿಸಬೇಕಾದ ವಿಳಾಸ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು– 560018





‘ಸಾಮಾಜಿಕ ನ್ಯಾಯಕ್ಕಾಗಿ ಜಾರಿ ಮಾಡಿ’

ಒಳಮೀಸಲಾತಿ: ನ್ಯಾ. ನಾಗಮೋಹನ್ ದಾಸ್ ವರದಿ ಅನುಷ್ಠಾನಕ್ಕೆ ಸಮಾನ ಮನಸ್ಕರ ಸಭೆಯಲ್ಲಿ ಸರ್ಕಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗದ ಮಾದಾರ ಚೆನ್ನಯ್ಯ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಒಳಮೀಸಲಾತಿ ಜಾರಿ ಕುರಿತು ಆ.16ರ ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಬೇಕೆಂದು ಆಗ್ರಹಿಸಿ ಮನವಿ ಸಲ್ಲಿಸಿದರು. ಮಾಜಿ ಸಂಸದರಾದ ಎಲ್. ಹನುಮಂತಯ್ಯ, ಬಿ.ಎನ್. ಚಂದ್ರಪ್ಪ ಜೊತೆಗಿದ್ದರು.

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದಂತೆ ಒಳಮೀಸಲಾತಿ ಜಾರಿಗಾಗಿ ನ್ಯಾ. ನಾಗಮೋಹನ್ ದಾಸ್ ವರದಿಯನ್ನು ಆ.16ರಂದು ಅಂಗೀಕರಿಸಿ ಅನುಷ್ಠಾನಕ್ಕೆ ತರಬೇಕು ಎಂದು ‘ಸಾಮಾಜಿಕ ನ್ಯಾಯಕ್ಕಾಗಿ ಸಮಾನ ಮನಸ್ಕರು’ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಬುಧವಾರ ನಡೆದ ಸಭೆಯಲ್ಲಿ ಸಾಹಿತಿಗಳು, ಚಿಂತಕರು, ಶಿಕ್ಷಣ ತಜ್ಞರು, ದಲಿತ ಚಳವಳಿಯ ಮುಖಂಡರು, ಪ್ರಾಧ್ಯಾಪಕರು, ಲಿಂಗತ್ವ ಅಲ್ಪಸಂಖ್ಯಾತರು, ವಿದ್ಯಾರ್ಥಿ ಸಂಘಟನೆಗಳ ನಾಯಕರು, ಒಳಮೀಸಲಾತಿ ಪರ ಹೋರಾಟಗಾರರು ಭಾಗವಹಿಸಿದ್ದರು.

ನ್ಯಾ. ನಾಗಮೋಹನ್ ದಾಸ್ ಆಯೋಗ ನೀಡಿರುವ ವರದಿಯಲ್ಲಿ ತಾಂತ್ರಿಕವಾಗಿ ಏನೇ ಸಮಸ್ಯೆ ಇದ್ದರೂ ತಾತ್ವಿಕವಾಗಿ ಸರಿ ಇದೆ. ಒಳ ಮೀಸಲಾತಿ ಬಗ್ಗೆ ಖಚಿತ ನಿಲುವು ತಳೆದು ಜಾರಿ ಮಾಡಬೇಕು ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

‘ನ್ಯಾ. ಸದಾಶಿವ ಆಯೋಗದ ವರದಿ ಹಾಗೂ ಮಾಧುಸ್ವಾಮಿ ವರದಿಗೆ ಹೋಲಿಸಿದರೆ, ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿ ಬಹುತೇಕರಿಗೆ ಒಪ್ಪಿತವಾಗಿದೆ’ ಎಂದು ಪ್ರಾಧ್ಯಾಪಕ ರವಿಕುಮಾರ್ ಬಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಯಾವುದೇ ಸಮೀಕ್ಷೆಗಳು ಶೇಕಡ ನೂರರಷ್ಟು ಸರಿ ಇರುವುದಿಲ್ಲ. ಈ ವರದಿಯನ್ನು ದತ್ತಾಂಶ ಸಂಗ್ರಹಿಸಿ ತಯಾರಿಸಲಾಗಿದೆ. ತಪ್ಪುಗಳಿದ್ದರೆ ಸರಿಪಡಿಸಲು ಅವಕಾಶ ಇದೆ. ಸಾಮಾಜಿಕ ಜಾಲತಾಣಗಳಲ್ಲಿ ನಕಾರಾತ್ಮಕವಾಗಿ ಪ್ರಚಾರ ಮಾಡುವ ಬದಲು ಎಲ್ಲರೂ ಒಗ್ಗಟ್ಟಾಗಿ ವರದಿ ಜಾರಿಗೆ ಒತ್ತಾಯಿಸಬೇಕು ಎಂದು ಚಿಂತಕ ಸಿ.ಜಿ. ಲಕ್ಷ್ಮೀಪತಿ ಆಗ್ರಹಿಸಿದರು.

ಒಳಮೀಸಲಾತಿ ವಿವಾದವನ್ನು ಮುಂದಿಟ್ಟುಕೊಂಡು ಸಮುದಾಯಗಳನ್ನು ಒಡೆಯುವುದಕ್ಕೆ ಕೋಮುವಾದಿಗಳು ಕುಮ್ಮಕ್ಕು ನೀಡುತ್ತಿದ್ದಾರೆ. ಅದಕ್ಕಾಗಿ ನಮ್ಮಲ್ಲೇ ಕೆಲವರನ್ನು ಬಳಸಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ಪ್ರಭುತ್ವ ನಿಲುವು ಬದಲಾಯಿಸಿದರೆ ಸಮುದಾಯಗಳಿಗೆ ನಷ್ಟ ಉಂಟಾಗಲಿದೆ ಎಂದು ಅಧ್ಯಾಪಕ ಹುಲಿಕುಂಟೆ ಮೂರ್ತಿ ಆತಂಕ ವ್ಯಕ್ತಪಡಿಸಿದರು.

ದಲಿತ ಸಂಘಷ ಸಮಿತಿ (ಅಂಬೇಡ್ಕರ್ ವಾದ) ಮಾವಳ್ಳಿ ಶಂಕರ್ ಮಾತನಾಡಿ, ‘ನಾಗಮೋಹನ್ ದಾಸ್ ಆಯೋಗ ನೀಡಿರುವ ಪ್ರವರ್ಗ ‘ಎ’, ‘ಬಿ’ ಹಾಗೆಯೇ ಉಳಿಸಿಕೊಳ್ಳಬೇಕು. ‘ಇ’ ಅಲ್ಲಿರುವ ಎಕೆ- ಎಡಿ ಅನ್ನು ‘ಸಿ’ ಗೆ ವರ್ಗಾವಣೆ ಮಾಡಿದರೆ ಅಸಮಾಧಾನ ಶಮನ ಆಗುತ್ತದೆ’ ಎಂದು ಸಲಹೆ ನೀಡಿದರು.

ಶಿಕ್ಷಣ ತಜ್ಞ ಬಿ.ಶ್ರೀಪಾದ ಭಟ್, ಪತ್ರಕರ್ತರಾದ ಹರ್ಷಕುಮಾರ್ ಕುಗ್ವೆ, ಎಚ್.ವಿ. ವಾಸು, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, ಪ್ರಾಧ್ಯಾಪಕ ಎಸ್. ಗೋವಿಂದಯ್ಯ ಸೇರಿದಂತೆ ಹಲವರು ಅಭಿಪ್ರಾಯ ವ್ಯಕ್ತಪಡಿಸಿದರು.

‘ಒಳ ಮೀಸಲಾತಿ: ಬಲಗೈ ಸಮುದಾಯಕ್ಕೆ ಅನ್ಯಾಯ’

ಬೆಂಗಳೂರು: ನಾಗಮೋಹನ್ ದಾಸ್ ಆಯೋಗದ ವರದಿಯಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಜನಸಂಖ್ಯೆಯನ್ನು ವ್ಯವಸ್ಥಿತವಾಗಿ ಮತ್ತು ಉದ್ದೇಶಪೂರ್ವಕವಾಗಿ ಕಡಿಮೆ ತೋರಿಸುವ ಮೂಲಕ ಒಳ ಮೀಸಲಾತಿ ಪ್ರಮಾಣವನ್ನು ಕಡಿಮೆಗೊಳಿಸಲಾಗಿದೆ. ಇದರಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಛಲವಾದಿ ಮೀಸಲಾತಿ ರಕ್ಷಣಾ ವೇದಿಕೆ ಆರೋಪಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಸಂಚಾಲಕ ಪಟಾಪಟ್ ಶ್ರೀನಿವಾಸ್, ‘ನಾಗಮೋಹನ್ ದಾಸ್ ಆಯೋಗದ ವರದಿಯಲ್ಲಿ ಹೊಲೆಯ ಸಂಬಂಧಿತ ಬಲಗೈ ಜಾತಿಗಳಿಗೆ ಶೇಕಡ 5ರಷ್ಟು ಒಳ ಮೀಸಲಾತಿ ಪ್ರಮಾಣ ಹಂಚಿಕೆ ಮಾಡಿರುವುದು ಖಂಡನೀಯ. ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಬೇಕು’ ಎಂದು ಒತ್ತಾಯಿಸಿದರು.

ಆದಿ ಆಂಧ್ರ, ಆದಿ ಕರ್ನಾಟಕ ಹಾಗೂ ಆದಿ ದ್ರಾವಿಡ ಜಾತಿಗಳೇ ಅಲ್ಲವೆಂದು ನಾಗಮೋಹನ್ ದಾಸ್ ಆಯೋಗವೇ ಹೇಳಿದೆ. ಆದಿ ಆಂಧ್ರ, ಆದಿ ಕರ್ನಾಟಕ, ಆದಿ ದ್ರಾವಿಡ ಗುಂಪುಗಳಿಗೆ ಶೇ 1ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡುವ ಮೂಲಕ ಬಲಗೈ ಜಾತಿಗಳಿಗೆ ಅನ್ಯಾಯ ಮಾಡಿದೆ. ನಾಗಮೋಹನ್ ದಾಸ್ ಅವರು ಬಲಗೈ ಜಾತಿಗಳ ಬಗ್ಗೆ ಪೂರ್ವಗ್ರಹಪೀಡಿತರಾಗಿದ್ದಾರೆ. ವ್ಯವಸ್ಥಿತವಾಗಿ ಪ್ರಜ್ಞಾಪೂರ್ವಕವಾಗಿಯೇ ನಮ್ಮ ಸಮುದಾಯದ ಜನಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ’ ಎಂದು ದೂರಿದರು. ಒಳ ಮೀಸಲಾತಿ ಜಾಗೃತಿ ಸಮಿತಿಯ ಸಂಚಾಲಕ ನವೀನ್ ಮನಿಯ ಸುದ್ದಿಗೋಷ್ಠಿಯಲ್ಲಿದ್ದರು.

‘ಸಚಿವ ಸಂಪುಟ ಉಪ ಸಮಿತಿ ಬೇಡ’

ಎಚ್. ಆಂಜನೇಯ

ಬೆಂಗಳೂರು: ‘ಒಳಮೀಸಲಾತಿ ಕುರಿತು ಕೆಲವರು ಅನಗತ್ಯವಾಗಿ ಗೊಂದಲ ಹುಟ್ಟುಹಾಕುತ್ತಿದ್ದಾರೆ. ಇವರ ಒತ್ತಡಕ್ಕೆ ಮನ್ನಣೆ ನೀಡಬಾರದು. ನ್ಯಾ.‘ನಾಗಮೋಹನ್ ದಾಸ್ ವರದಿ ಬಗ್ಗೆ ಸಚಿವ ಸಂಪುಟ ಉಪ ಸಮಿತಿ ರಚನೆ ಮಾಡಬಾರದು’ ಎಂದು ಮಾಜಿ ಸಚಿವ ಎಚ್.ಆಂಜನೇಯ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಯಾವುದೇ ಗೊಂದಲಕ್ಕೆ ಆಸ್ಪದ ಇಲ್ಲದಂತೆ ಆ.16ರಂದು ಒಳಮೀಸಲಾತಿ ಜಾರಿ ಮಾಡಬೇಕು. ವರದಿ ಜಾರಿ ಮಾಡದೇ ಇದ್ದರೆ ಮಾದಿಗ ಸಮುದಾಯ ಆತಂಕಕ್ಕೆ ಒಳಗಾಗಲಿದೆ. ಇದನ್ನು ಬೇರೆಯವರು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವ ಸಾಧ್ಯತೆ ಇದೆ ಎಂದು ಅವರು ಎಚ್ಚರಿಸಿದ್ದಾರೆ.

ಪರಿಶಿಷ್ಟ ಜಾತಿ ಗುಂಪಿನಲ್ಲಿ 101 ಜಾತಿಗಳ ಮಧ್ಯೆ ಮೀಸಲಾತಿ ಪಡೆಯಲು ಅಶಕ್ತರಾಗಿರುವ ಮಾದಿಗ ಸಮುದಾಯದವರು ಒಳಮೀಸಲಾತಿ ಜಾರಿ ಹೋರಾಟ ಹುಟ್ಟು ಹಾಕಿದರು. ಈಗ ಮೀಸಲಾತಿ ವರ್ಗೀಕರಣ ಆಗುತ್ತಿರುವ ವೇಳೆ ಅನಗತ್ಯ ಗೊಂದಲವನ್ನುಂಟು ಮಾಡಲಾಗುತ್ತಿದೆ ಎಂದಿದ್ದಾರೆ.

ಸದಾಶಿವ ಆಯೋಗ, ಮಾಧುಸ್ವಾಮಿ ವರದಿ ವೇಳೆ ವಿರೋಧಿಸಿದವರು, ನ್ಯಾ.ನಾಗಮೋಹನದಾಸ್ ಆಯೋಗ ರಚನೆ ವೇಳೆ ಅಪಸ್ವರ ಎತ್ತಿರಲಿಲ್ಲ. ಜಾತಿಗಣತಿ ಸಮೀಕ್ಷೆ ನಡೆಯುವಾಗ ತಮ್ಮ ಸಮುದಾಯ ಗಳಲ್ಲಿ ಜಾಗೃತಿ ಮೂಡಿಸಿದರು. ಈಗ ನಮ್ಮ ಜಾತಿ ಸಂಖ್ಯೆ ಕಡಿಮೆ ತೋರಿಸಿದ್ದಾರೆ ಎಂದು ಆರೋಪಿಸುತ್ತಿರುವುದು ಸಂವಿಧಾನ ವಿರೋಧಿ ಮಾತುಗಳು ಎಂದು ಟೀಕಿಸಿದ್ದಾರೆ.

ಸುದ್ದಿ 2 ನಿಮಿಷ

ಮೆಟ್ರೊ ಹತ್ತಲಾರದೇ ವಾಪಸ್ ಬಂದಿದ್ದಕ್ಕೆ ಪ್ರಯಾಣಿಕನಿಗೆ ದಂಡ

ಬೆಂಗಳೂರು: ಕೇಂದ್ರ ರೇಷ್ಮೆ ಮಂಡಳಿ (ಸೆಂಟ್ರಲ್ ಸಿಲ್ಕ್ ಬೋರ್ಡ್) ನಿಲ್ದಾಣದಲ್ಲಿ ಮೆಟ್ರೊ ಹತ್ತಲಾರದೇ ವಾಪಸ್ ಹೊರಗೆ ಬಂದಿದ್ದಕ್ಕೆ ದಂಡ ವಿಧಿಸಿದ್ದಾರೆ ಎಂದು ಮೆಟ್ರೊ ಪ್ರಯಾಣಿಕ ನಿಖಿಲ್ ಎನ್ನುವವರು ತಮ್ಮ ‘ನಿಕ್‌ಲ್_ಭಟ್’ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘20 ನಿಮಿಷ ಕಾದೆ. ಆಗ ಬಂದ ಮೆಟ್ರೊ ತುಂಬಿದ್ದರಿಂದ ನನ್ನನ್ನು ಸೇರಿದಂತೆ ಹಲವರಿಗೆ ಹತ್ತಲು ಸಾಧ್ಯವಾಗಲಿಲ್ಲ. ನಾನು ನಿಲ್ದಾಣದಿಂದ ಹೊರಬಂದೆ. ಅದಕ್ಕಾಗಿ ₹ 50 + ₹ 9.5 ದಂಡ ವಿಧಿಸಿದ್ದಾರೆ’ ಎಂದು ಅವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

‘ಒಳಗೆ ಬಂದ ಮೆಟ್ರೊ ನಿಲ್ದಾಣದಿಂದ ವಾಪಸ್ ಹೊರಗೆ ಬಂದರೆ ಅವರು ₹ 10 (ಸ್ಮಾರ್ಟ್ ಕಾರ್ಡ್ ಇದ್ದರೆ ₹ 9.5) ದರ ಪಾವತಿ ಮಾಡಬೇಕಾಗುತ್ತದೆ. ನಿಗದಿ ಪಡಿಸಿದ್ದಕ್ಕಿಂತ ಹೆಚ್ಚು ಅವಧಿ ಕಳೆದು ಹೊರ ಬಂದರೆ ₹ 50 ದಂಡ ವಿಧಿಸಲಾಗುತ್ತದೆ. ನಿಯಮ ಇರುವುದೇ ಹಾಗೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಹಳದಿ ಮಾರ್ಗ: ತಲುಪಿದ ಮತ್ತೊಂದು ಬೋಗಿ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಪಶ್ಚಿಮ ಬಂಗಾಳದಿಂದ ಕಳುಹಿಸಲಾದ ನಾಲ್ಕನೇ ರೈಲಿನ ಒಂದು ಬೋಗಿ ಬುಧವಾರ ನಗರಕ್ಕೆ ತಲುಪಿದೆ. ಇನ್ನುಳಿದ ಐದು ಬೋಗಿಗಳು ಎರಡು ದಿನಗಳಲ್ಲಿ ತಲುಪಲಿವೆ.

ಪಶ್ಚಿಮ ಬಂಗಾಳದ ಟಿಟಾಗಢದಿಂದ ಎರಡು ವಾರಗಳ ಹಿಂದೆ ರವಾನೆಯಾಗಿತ್ತು. ಮಳೆಯಿಂದಾಗಿ ನಗರಕ್ಕೆ ತಲುಪುವುದು ತಡವಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಳದಿ ಮಾರ್ಗದಲ್ಲಿ ಸದ್ಯ ಮೂರು ರೈಲುಗಳು ಸಂಚರಿಸುತ್ತಿವೆ. ನಾಲ್ಕನೇ ರೈಲಿನ ಎರಡು ಬೋಗಿಗಳನ್ನು ಟಿಟಾಗಢದಿಂದ ಜುಲೈ 28ರಂದು ರಾತ್ರಿ ಕಳುಹಿಸಲಾಗಿತ್ತು. ಉಳಿದ ನಾಲ್ಕು ಬೋಗಿಗಳನ್ನು ಆಗಸ್ಟ್ 1ರಂದು ಕಳುಹಿಸಲಾಗಿತ್ತು. ಆಗಸ್ಟ್ 10ರ ಒಳಗೆ ಎಲ್ಲ ಬೋಗಿಗಳು ತಲುಪುವ ನಿರೀಕ್ಷೆ ಇತ್ತು ಎಂದು ಮಾಹಿತಿ ನೀಡಿದ್ದಾರೆ.

ಎಲ್ಲ ಆರು ಬೋಗಿಗಳು ತಲುಪಿದ ಬಳಿಕ ಪರೀಕ್ಷೆಗಳನ್ನು ನಡೆಸಬೇಕು. ಈಗ ಹಳದಿ ಮಾರ್ಗದಲ್ಲಿ ವಾಣಿಜ್ಯ ಸಂಚಾರ ಇರುವುದರಿಂದ ಹಗಲು ಹೊತ್ತಿನಲ್ಲಿ ಪರೀಕ್ಷೆ ನಡೆಸಲು ಸಾಧ್ಯವಾಗುವುದಿಲ್ಲ. ರಾತ್ರಿ ವೇಳೆ ಪರೀಕ್ಷೆಗಳನ್ನು ನಡೆಸಲಾಗುವುದು. ಮುಂದಿನ ತಿಂಗಳು ನಾಲ್ಕನೇ ರೈಲು ವಾಣಿಜ್ಯ ಸಂಚಾರಕ್ಕೆ ಲಭ್ಯವಾಗಲಿದೆ ಎಂದು ವಿವರ ನೀಡಿದ್ದಾರೆ.

‘ಬೈರತಿ ವಿರುದ್ಧ ಬಲವಂತದ ಕ್ರಮ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿಯಾಗಿರುವ ಕೆ.ಆರ್.ಪುರ ಶಾಸಕ ಬೈರತಿ ಬಸವರಾಜ್ ವಿರುದ್ಧ ಬಲವಂತದ ಕ್ರಮ ಜರುಗಿಸಬೇಡಿ’ ಎಂದು ಹೈಕೋರ್ಟ್ ಪ್ರಕರಣದ ತನಿಖಾಧಿಕಾರಿಗೆ ಆದೇಶಿಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಭಾರತಿ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಪ್ರಕರಣದ ಐದನೇ ಆರೋಪಿಯಾಗಿರುವ ಬೈರತಿ ಬಸವರಾಜ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ.

ವಿಚಾರಣೆ ವೇಳೆ ಬೈರತಿ ಬಸವರಾಜ್ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, ‘ಹೈಕೋರ್ಟ್ ಈ ಮುನ್ನ ನೀಡಿದ್ದ ನಿರ್ದೇಶನದ ಅನುಸಾರ ಅರ್ಜಿದಾರರು ತನಿಖಾಧಿಕಾರಿ ಮುಂದೆ ಹಾಜರಾಗಿದ್ದಾರೆ. ಈವರೆಗಿನ ತನಿಖೆಗೆ ಸಂಪೂರ್ಣ ಸಹಕಾರ ನೀಡಿದ್ದಾರೆ. ಮುಂದೆಯೂ ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡಲು ಸಿದ್ಧರಿದ್ದಾರೆ. ಅರ್ಜಿದಾರರ ವಿರುದ್ಧದ ಪ್ರಕರಣಕ್ಕೆ ತಡೆ ನೀಡಬೇಕು’ ಎಂದು ಕೋರಿದರು.

ಆದರೆ, ಇದಕ್ಕೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಅರ್ಜಿದಾರರು ತನಿಖೆಗೆ ಅಗತ್ಯ ಸಹಕಾರ ನೀಡಬೇಕು. ತನಿಖಾಧಿಕಾರಿಗಳು ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಜರುಗಿಸುವಂತಿಲ್ಲ’ ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ನಿರ್ಮಿತಿ ಕೇಂದ್ರಕ್ಕೆ ₹50 ಸಾವಿರ ದಂಡ

ಬೆಂಗಳೂರು: ‘ಮಾಹಿತಿ ಹಕ್ಕು ಕಾಯ್ದೆಯ ಅನುಸಾರ ನಿರ್ಮಿತಿ ಕೇಂದ್ರವು ಒಂದು ಸಾರ್ವಜನಿಕ ಪ್ರಾಧಿಕಾರ’ ಎಂಬ ಖಚಿತ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಅರ್ಜಿದಾರರಿಗೆ ಮಾಹಿತಿ ನೀಡಲು ನಿರಾಕರಿಸಿದ್ದ ಚಿತ್ರದುರ್ಗ ನಿರ್ಮಿತಿ ಕೇಂದ್ರಕ್ಕೆ ₹50 ಸಾವಿರ ದಂಡ ವಿಧಿಸಿದೆ.

ಈ ಸಂಬಂಧ, ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಆದ (ಪಿಐಒ) ಚಿತ್ರದುರ್ಗ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದ್ದು, ‘ದಂಡದ ಮೊತ್ತವನ್ನು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಿ’ ಎಂದು ನಿರ್ಮಿತಿ ಕೇಂದ್ರದ ಸಕ್ಷಮ ಅಧಿಕಾರಿಗಳಿಗೆ ತಾಕೀತು ಮಾಡಿದೆ.

ಪ್ರಕರಣದ ಪ್ರತಿವಾದಿ ಎಚ್. ಆರ್. ತಿಮ್ಮಯ್ಯ ಅವರ ಪರ ಹೈಕೋರ್ಟ್ ವಕೀಲ ಜೆ.ಪ್ರಶಾಂತ್ ಮಂಡಿಸಿದ ವಾದವನ್ನು ಮಾನ್ಯ ಮಾಡಿರುವ ನ್ಯಾಯಪೀಠ, ‘ನಿರ್ಮಿತಿ ಕೇಂದ್ರದ ಅಧಿಕಾರಿಗಳು ಆಡಳಿತ ಪಾರದರ್ಶಕತೆ ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾರೆ’ ಎಂದಿದೆ.

ನಗರದ ಬಿ.ಆರ್.ಅಂಬೇಡ್ಕರ್ ಬೀದಿಯಲ್ಲಿ ತ್ರಿವರ್ಣ ಧ್ವಜ ಮಾರಾಟ ಮಾಡುತ್ತಿದ್ದ ಬಾಲಕ ಮಳೆಯಲ್ಲಿಯೇ ಸಾಗಿದ ದೃಶ್ಯ ಚಿತ್ರ: ಎಂ. ಎಸ್. ಮಂಜುನಾಥ್

ನಗರದಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬುಧವಾರ ಬಿರುಸಿನಿಂದ ಮಳೆಯಾಗಿದೆ. ಹಲವೆಡೆ ರಸ್ತೆಯಲ್ಲೇ ನೀರು ನಿಂತಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಆಯಿತು.

ಕಸ್ತೂರಿ ನಗರದಿಂದ ಎಂಎಂಟಿ ಕಡೆಗೆ ಸಾಗುವ ರಸ್ತೆ, ಕೆ.ಆರ್. ಪುರ ಮೆಟ್ರೊ ನಿಲ್ದಾಣದಿಂದ ಬೆನ್ನಿಗಾನಹಳ್ಳಿ ಕಡೆಗೆ ಸಾಗುವ ರಸ್ತೆ, ಹಳೆಯ ಉದಯ ಟಿವಿ ಜಂಕ್ಷನ್‌ನಿಂದ ಜಯಮಹಲ್ ಕಡೆಗೆ ಸಾಗುವ ರಸ್ತೆ, ಮಾರತ್‌ಹಳ್ಳಿಯಿಂದ, ಮಾರತ್‌ಹಳ್ಳಿ ಪೊಲೀಸ್ ಠಾಣೆ ಕಡೆಗೆ ಸಾಗುವ ರಸ್ತೆ. ಪುರಭವನದಿಂದ ಕೆ.ಆರ್. ಮಾರುಕಟ್ಟೆ ಕಡೆಗೆ ಸಾಗುವ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರ ನಿಧಾನಗೊಂಡಿತು.

ಖೋಡೆ ಕೆಳಸೇತುವೆ ಬಳಿ ಮಳೆ ನೀರು ನಿಂತಿದ್ದರಿಂದ ಮಲ್ಲೇಶ್ವರ ಕಡೆಗೆ ಸಾಗುವ ವಾಹನಗಳಿಗೆ ಅಡ್ಡಿಯಾಯಿತು. ಮಳೆಯ ಕಾರಣದಿಂದ ವಾಹನಗಳು ನಿಧಾನವಾಗಿ ಸಾಗಿದ್ದರಿಂದ ನಗರದ ವಿವಿಧೆಡೆ ವಾಹನದಟ್ಟಣೆ ಉಂಟಾಯಿತು.

ಮಳೆ ವಿವರ: ಪೀಣ್ಯ ಕೈಗಾರಿಕಾ ವಲಯ 1.1 ಸೆಂ.ಮೀ., ಕೊಟ್ಟಿಗೆಪಾಳ್ಯ 1.1 ಸೆಂ.ಮೀ., ನಾಗಪುರ 1 ಸೆಂ.ಮೀ., ಮಾರತ್‌ಹಳ್ಳಿ 1 ಸೆಂ.ಮೀ., ಚೌಡೇಶ್ವರಿ 1 ಸೆಂ.ಮೀ. ಮಳೆ ದಾಖಲಾಗಿದೆ.

ನಟ ವಿಷ್ಣು ಸಮಾಧಿ ತೆರವು: ನ್ಯಾಯಾಂಗ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಟ ವಿಷ್ಣುವರ್ಧನ್ ಅವರ ಪುಣ್ಯಭೂಮಿ ನೆಲಸಮ ಆಗಿದ್ದು, ನಮ್ಮ ಹೃದಯಕ್ಕೆ ಚೂರಿ ಹಾಕಿದಂತಾಗಿದೆ. ಧೂರ್ತರ ಹಾಗೆ ವರ್ತಿಸಿರುವುದನ್ನು ನೋಡಿದರೆ ಇದರ ಹಿಂದಿನ ಮರ್ಮಗಳನ್ನು ಕನ್ನಡಿಗರು ತಿಳಿಯುವುದು ಅಗತ್ಯ. ಸ್ಟುಡಿಯೊಗೆ ಕೊಟ್ಟ ಜಾಗವನ್ನು ಲೇಔಟ್ ಮಾಡಿದ್ದು ಹೇಗೆ’ ಎಂದು ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಪ್ರಶ್ನಿಸಿದ್ದಾರೆ.

‘ಸಮಾಧಿ ತೆರವು ಮಾಡಿರುವ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು. ಇದರ ಹಿಂದೆ ಕೆಲವು ರಾಜಕಾರಣಿಗಳು, ಅಧಿಕಾರಿಗಳು ಮತ್ತು ಬಾಲಕೃಷ್ಣ ಕುಟುಂಬದವರು ಭಾಗಿ ಆಗಿರುವ ಶಂಕೆಯಿದೆ. ಅಭಿಮಾನ್ ಸ್ಟುಡಿಯೊದಲ್ಲಿ ಬೇರಾವುದೇ ಚಟುವಟಿಕೆ ನಡೆಯದಂತೆ ರಾಜ್ಯ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ಬಿಸಿಯು: ಪ್ರವೇಶಕ್ಕೆ ಆ.16ರ ವರೆಗೆ ಗಡುವು

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ವಿವಿಧ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಆಗಸ್ಟ್ 16ರವರೆಗೂ ಅವಕಾಶವಿದೆ.

ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗ, ವಿದೇಶಿ ಭಾಷೆಗಳು ಸೇರಿದಂತೆ 20 ವಿಷಯಗಳಿಗೆ ಪ್ರವೇಶ ಪಡೆಯಬಹುದು. ₹250 ದಂಡ ಶುಲ್ಕದೊಂದಿಗೆ ಪ್ರವೇಶ ಪಡೆಯಲು ಆ. 22 ಕೊನೆಯ ದಿನ.

ಕಲಾ ವಿಭಾಗದಲ್ಲಿ ಎಂ.ಎ ಕನ್ನಡ, ಇಂಗ್ಲಿಷ್, ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪನೀಸ್ ಭಾಷೆಗಳು ಹಾಗೂ ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಕಾರ್ಯ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ನಗರ ಅಧ್ಯಯನ ಮತ್ತು ಯೋಜನೆ ವಿಷಯಗಳಿವೆ.

ವಿಜ್ಞಾನ ವಿಭಾಗದಲ್ಲಿ ಎಂ.ಎಸ್ಸಿ ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ, ಜೈವಿಕ ರಸಾಯನ ವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಪರಿಸರ ವಿಜ್ಞಾನ, ಫ್ಯಾಷನ್ ಮತ್ತು ಉಡುಪು ವಿನ್ಯಾಸ ಹಾಗೂ ಗಣಕ ವಿಜ್ಞಾನ ಕೋರ್ಸ್‌ಗಳಿವೆ.

ವಾಣಿಜ್ಯ ವಿಭಾಗದಲ್ಲಿ ಎಂ.ಕಾಂ ಸಾಮಾನ್ಯ, ಹಣಕಾಸು ವಿಶ್ಲೇಷಣೆ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ಕೋರ್ಸ್ ಲಭ್ಯವಿದೆ. ಇದಲ್ಲದೆ ಸ್ವಯಂ ಹಣಕಾಸು ನಿರ್ವಹಣೆಯ ಪಿಜಿ ಡಿಪ್ಲೊಮಾ (ವಾಣಿಜ್ಯ ಆಡಳಿತ, ಮಾನವ ಸಂಪನ್ಮೂಲ, ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್, ಫೈನಾನ್ಸ್ ಮ್ಯಾನೇಜ್‌ಮೆಂಟ್) ಸಂಜೆ ತರಗತಿಗಳ ಪ್ರವೇಶಕ್ಕೂ ಅವಕಾಶವಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಆರಂಭವಾಗಿರುವ ಬ್ಯಾಟರಾಯನಪುರ-ಬಾಗಲೂರು ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಕಾಂ (ಸಾಮಾನ್ಯ) ಹಾಗೂ ಬಿಸಿಎ ಮತ್ತು ಬಿ.ಕಾಂ ಪದವಿ ಕೋರ್ಸ್‌ಗಳು ಲಭ್ಯ ಇವೆ. ಈ ಶೈಕ್ಷಣಿಕ ವರ್ಷದಿಂದ ಎಂಸಿಎ ಕೋರ್ಸ್ ಸಹ ಪ್ರಾರಂಭಿಸಲಾಗುತ್ತಿದ್ದು ಪಿಜಿಸಿಇಟಿ ಮೂಲಕ ಪ್ರವೇಶ ಪಡೆಯಬಹುದಾಗಿದೆ ಎಂದು ಬಿಸಿಯು ಕುಲಸಚಿವ ನವೀನ್ ಜೋಸೆಫ್ ತಿಳಿಸಿದ್ದಾರೆ.

ವಿವರಗಳಿಗೆ ವಿ.ವಿ. ವೆಬ್‌ಸೈಟ್ www.bcu.ac.in ಸಂಪರ್ಕಿಸಬಹುದು.

ಕಾರ್ಮಿಕ ಇಲಾಖೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029
ಕಛೇರಿ:080–29753350 ಇಮೇಲ್: karbuildworkerswelfare@gmail.com

ಸಂಖ್ಯೆ: KBOCWWB/E-Auction/FD-6/CR-04/2025-26 ದಿನಾಂಕ: 13.08.2025

ಇ–ಆಕ್ಷನ್ ಪ್ರಕಟಣೆ

ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/Non- Callable ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಉಳಿತಾಯ ಖಾತೆಯಲ್ಲಿ ಉಳಿದಿರುವ ಮೊತ್ತ ರೂ.600.00 ರಿಂದ 700.00 ಕೋಟಿ (ರೂಪಾಯಿ ಆರು ನೂರು ಕೋಟಿ ಯಿಂದ ಏಳು ನೂರು ಕೋಟಿ ಮಾತ್ರ) ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ / Non-Callable ನಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ ಕೆಪಿಪಿ ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.

ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 21.08.2025 ಸಂಜೆ 4.00 ರೊಳಗಾಗಿ ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ನಿಯಂತ್ರಕರು, ಫೋನ್: 080–29753350/54/56, ಫೋನ್:9164759606 ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಜಂಟಿ ಕಾರ್ಯದರ್ಶಿ, ಕ.ಕ&ಇ.ನಿ.ಕಾ.ಕ.ಮಂಡಳಿ
DIPR/CP/2295/Zen/2025-26

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್.ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, ‘ಡಿ’ ಕ್ರಾಸ್, ದೊಡ್ಡಬಳ್ಳಾಪುರ–561 203
ದೂರವಾಣಿ : 080–29562046
ಸಂಖ್ಯೆ: DPA/TP/CLU/25/2025-26 ದಿನಾಂಕ: 12.08.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ‘ವ್ಯವಸಾಯ’ ವಲಯದಿಂದ ‘ವಸತಿ’ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿನ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಎಂ.ಆರ್. ಅನಿಲ್‌ಕುಮಾರ್ ಬಿನ್ ಬಿ. ರಾಮಾಂಜಿನಪ್ಪ	ದೊಡ್ಡಬಳ್ಳಾಪುರ	ಕಸಬಾ	ಎಳ್ಳುಪುರ	53/1	1–08	ವ್ಯವಸಾಯ	ವಸತಿ
2.	ಶ್ರೀ ಶ್ರೀಕಾಂತ್ ಆರ್. ಬಿನ್ ರಾಜರೆಡ್ಡಿ	ದೊಡ್ಡಬಳ್ಳಾಪುರ	ಕಸಬಾ	ಎಳ್ಳುಪುರ	55/13	00–15.50	ವ್ಯವಸಾಯ	ವಸತಿ

ಷರಾ:– ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು ‘ವ್ಯವಸಾಯ’ ವಲಯದಿಂದ ‘ವಸತಿ’ ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Lost

PUBLIC NOTICE
This is to inform to public my client GAYATHRI K. W/o. Late Shivashankar Reddy .K.C, Aged about 62 Years, is the absolute owner of the Property Sy.No. 46/12, 46/14 & 17, measuring 1 Acre 35 Guntas. Situated at Bommanahalli Village, Begur Hobli, Bangalore South Taluk, This property Original Sale Deed Vide Reg Document No. 1619/1986-87, Book No. 1, Volume No. 3250, Pages : 269 To 277, Dated : 14.05.1986 Registered in the Office of the Joint Sub-Registrar-II, Card of District Registrar Chennai.
The above said property original Sale Deed documents have been lost by shifting house. In case anybody traced above said property original Sale Deed documents please send me my above mentioned address.
(H.G. VENKATARAMU)
Advocate
Contact Mob No: 9448324253
Place: Bangalore. Date: 14.08.2025

Change of Name

CHANGE OF NAME
I, Saveriamma Yesudass, of 40 Katherine Road, London, E6 1PB, now a widow, D/o Arokayaswamy Chinnappa R/o 650011 Bangalore, Karnataka, India, by sworn Affidavit before a Notary on 05.07.25 changed my married surname of Yesudass back to Chinnappa.

I, AMJAD_ALI KHAN AHMED R/a.#N71, First Floor, 2nd Cross, 3rd`Stage, 8th`Main Pillana Garden, Bengaluru 560045, have changed_name AMJAD ALI KHAN vide`affidavit 13.08.2025 before`Notary Hemalatha Bengaluru

I, HALICIA_MARIA DEMOS D/o.Peter Baldrey R/o.G-3 Royal Pearl Apartment,#11/2 3rd Main Road, Banaswadi Bangalore 560043 have changed my`name to HALICIA_MARIA BALDREY -_DEMOS for`all future purposes. vide`affidavit dated:12.8.2025 sworn before`notary B.Sheshagiri Bangalore.

AFFIDAVIT
I, SMT. VATSALA KOLAR VENKOBA RAO, Aged about 56 years, W/o. Vasudeva .H.N, Residing at No. 7C/33, 7th Cross, 5th Main, Near Maruthi School, Srinidhi Layout, Konanakunte, Bangalore - 560 062, do hereby declare that, VATSALA K.V, VATSALA VASUDEVA and VATSALA KOLAR VENKOBA RAO all names are one and the same person me. Vide affidavit dated 15.11.2023 sworn before G.R. Rajanna, Advocate & Notary, Bengaluru.

I NIKHILA Sastry Ramakrishna D/o HS Ramakrishna Shastry have changed my name to NIKHILA SASTRY BELAVADI vide affidavit dt 13/08/2025 Sworn before Notary

SATISH K.V. #46, 1st Floor, 5th Cross, Venkatapura, Koramangala 1st Block, Bengaluru-34, have changed my name to SATHISH K.V. vide affidavit dated-12/08/2025.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CHANGE OF NAME
I, KEERTHANA R, residing at No.945, 3rd Main Road, 3rd Cross, Vijayanagar, Bengaluru-560 040, have changed my name to KEERTHANA RADHESH HABIB vide affidavit dated 07.06.2025 before notary H.S. Sakalesh Aradhya, Bengaluru. Henceforth I shall be called KEERTHANA RADHESH HABIB only.

WE, DINAKKAAR and_SAVIITHA DINAKKAARA R/at`Flat`No.503, Multi_Ruby_Apartment , 15th`Main, 17th`C`Cross, J.P.Nagar 5th`Phase, Bengaluru-560078 have`changed our`minor Daughter's Name`from TANYA DINAKARA SAVITHA to TANYAASRI DINAKKAAR vide`Affidavit Dtd:12.08.2025 Sworn`Before Notary Mohammed Hussian.K, Bangalore

JOB OPPORTUNITIES

Teachers/ Professors

WANTED COMMERCE LECTURERS VIVEKANANDA DEGREE COLLEGE FOR WOMEN(JANATHA EDUCATION SOCIETY®) Dr.Rajkumar Road, 2nd Stage, Rajajinagar, Bengaluru - 560055 Ph: 080-23371952 / 6366733434 WALK-IN INTERVIEW Post: Lecturer in Commerce (Female) Qualification:M.Com Experience: Min. 3 years teaching Date & Time: 19.08.2025, 10:30 AM Venue: College Premises

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

BUSINESS

Business Offers

Finance

MSME LOANS Available for Any Startup Companies,Any Existing Companies NOTE:Also One Approved Loan Available Contact-7204995189

PUBLIC NOTICE
ಬಣ್ಣಾರಿ ಅಮ್ಮನ್ ಶುಗರ್ಸ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ನಂ.1212, ತ್ರಿಚಿ ರಸ್ತೆ, ಕೊಯಮತ್ತೂರು–641018
ಸಾರ್ವಜನಿಕ ತಿಳುವಳಿಕೆ
ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಅಳಗಂಚಿ ಗ್ರಾಮದಲ್ಲಿರುವ ನಮ್ಮ ಸಕ್ಕರೆ ಘಟಕದ ಸಾಮರ್ಥ್ಯವನ್ನು 7500 ಟಿ.ಸಿ.ಡಿ ಇಂದ 10000 ಟಿ.ಸಿ.ಡಿಗೆ ಹಾಗೂ ಡಿಸ್ಟಿಲರಿ ಘಟಕದ ಸಾಮರ್ಥ್ಯವನ್ನು 150 ಕೆ.ಎಲ್.ಪಿ.ಡಿ ಇಂದ 200 ಕೆ.ಎಲ್.ಪಿ.ಡಿಗೆ ವಿಸ್ತರಿಸಲು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ. ಐ.ಎ.ವಿಭಾಗ, ಭಾರತ ಸರ್ಕಾರ, ನವದೆಹಲಿರವರು ಪರಿಸರ ವಿಮೋಚನಾ ಪತ್ರವನ್ನು ನೀಡಿರುತ್ತಾರೆ. ಸದರಿ ಪರಿಸರ ವಿಮೋಚನಾ ಪತ್ರದ ಪ್ರತಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಲ್ಲಿ ಮತ್ತು ಸಚಿವಾಲಯದ ವೆಬ್ ಸೈಟ್ https://parivesh.nic.in ನಲ್ಲಿ ಲಭ್ಯವಿರುತ್ತದೆ.

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com
BOOK NOW
For more details contact:
+91 9845114560
+91 9900428036 | +91 9731810277
+91 9886213331 | 080- 45557163/164
*Conditions apply

ರಾಜಣ್ಣ ವಜಾ: ಸತೀಶ ಜಾರಕಿಹೊಳಿ ನೇತೃತ್ವದಲ್ಲಿ ಸಭೆ

‘ನಾವು ದೆಹಲಿಗೆ ಹೋಗುತ್ತೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಲ್ಮೀಕಿ ಸಮುದಾಯದ ಇಬ್ಬರನ್ನು ಸಚಿವ ಸಂಪುಟದಿಂದ ಕೈಬಿಡಲಾಗಿದೆ. ವಾಲ್ಮೀಕಿ ಸಮುದಾಯದವರನ್ನೇ ಸಂಪುಟಕ್ಕೆ ಸೇರಿಸುವಂತೆ ಒತ್ತಾಯಿಸಲು ನಾವು ದೆಹಲಿಗೆ ಹೋಗುತ್ತೇವೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಸತೀಶ ಜಾರಕಿಹೊಳಿ

ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಸತೀಶ ಜಾರಕಿಹೊಳಿ ಅವರ ನೇತೃತ್ವದಲ್ಲಿ ಸಮುದಾಯದ ಶಾಸಕರು, ಕಾಂಗ್ರೆಸ್ ನಾಯಕರ ಸಭೆ ಬುಧವಾರ ನಡೆಯಿತು.

ಸಭೆಯಲ್ಲಿ ಕೆ.ಎನ್. ರಾಜಣ್ಣ, ಶಾಸಕರಾದ ಟಿ. ರಘುಮೂರ್ತಿ, ಬಸನಗೌಡ ದದ್ದಲ್, ಬಸನಗೌಡ ತುರುವಿಹಾಳ, ಅನಿಲ್ ಚಿಕ್ಕಮಾದು, ಬಸವಂತಪ್ಪ, ವೆಂಕಟೇಶ್, ಎಚ್.ಎಂ. ಗಣೇಶ ಪ್ರಸಾದ್, ಕೆ. ಹರೀಶ್ ಗೌಡ, ರವಿಶಂಕರ್, ಮಾಜಿ ಸಚಿವ ವೆಂಕಟರಮಣಪ್ಪ ಮತ್ತಿತರರು ಇದ್ದರು.

ಸಭೆಯ ಬಳಿಕ ಮಾತನಾಡಿದ ಸತೀಶ ಜಾರಕಿಹೊಳಿ, ‘ಕೆ.ಎನ್. ರಾಜಣ್ಣ ಅವರಿಗೆ ಧೈರ್ಯ ಹೇಳಿದ್ದೇವೆ. ಬೇಸರ ಏನೂ ಇಲ್ಲ. ವರಿಷ್ಠರನ್ನು ಭೇಟಿ ಮಾಡಲು ದೆಹಲಿಗೆ ಹೋಗುತ್ತೇನೆಂದು ಅವರು ಹೇಳಿದ್ದಾರೆ. ದೆಹಲಿಗೆ ನಿಯೋಗ ಹೋಗುವುದು ಬೇರೆ, ಅವರು ಹೋಗುವುದು ಬೇರೆ. ನನ್ನನ್ನು ವಜಾ ಮಾಡಿರುವುದರ ಹಿಂದೆ ಷಡ್ಯಂತ್ರ ಇದೆ, ಸಮಯ ಬಂದಾಗ ಹೇಳುತ್ತೇನೆಂದು ಅವರು ಹೇಳಿದ್ದಾರೆ. ಅದು ಅವರಿಗೆ ಬಿಟ್ಟ ವಿಚಾರ’ ಎಂದರು.

‘ಸಮುದಾಯದ ಹೋರಾಟ ಬೇರೆ, ಪಕ್ಷ ಬೇರೆ. ಷಡ್ಯಂತ್ರದ ಬಗ್ಗೆ ಅವರು ಯಾವಾಗ ಹೇಳುತ್ತಾರೆ ಎನ್ನುವುದನ್ನು ಕಾದು ನೋಡೋಣ’ ಎಂದೂ ಹೇಳಿದರು.

‘ಸಂಪುಟದಿಂದ ಕೈಬಿಟ್ಟ ಇಬ್ಬರು ನಾಯಕರೂ (ನಾಗೇಂದ್ರ ಮತ್ತು ರಾಜಣ್ಣ) ವಾಲ್ಮೀಕಿ ಸಮುದಾಯದವರೇ ಆಗಿದ್ದಾರೆ. ಆ ಮೂಲಕ ಸಮುದಾಯಕ್ಕೆ ಮೇಲಿಂದ ಮೇಲೆ ಗದಾಪ್ರಹಾರ ಆಗುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ವಾಲ್ಮೀಕಿ ಸಮುದಾಯದ ಪಾತ್ರವೂ ದೊಡ್ಡದಿದೆ. ಅದನ್ನು ಪರಿಗಣಿಸಿ ತೆರವಾದ ಎರಡೂ ಸಚಿವ ಸ್ಥಾನಗಳಿಗೆ ವಾಲ್ಮೀಕಿ ಸಮುದಾಯದವರನ್ನೇ ನೇಮಿಸಬೇಕೆಂದು ಸಭೆಯಲ್ಲಿ ಒಕ್ಕೊರಲ ಅಭಿಪ್ರಾಯ ವ್ಯಕ್ತವಾಗಿದೆ. ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಒತ್ತಾಯಿಸುವುದು ಒಂದು ಕಡೆಯಾದರೆ, ದೆಹಲಿಗೆ ತೆರಳಿ ಪಕ್ಷದ ಹೈಕಮಾಂಡ್ ನಾಯಕರನ್ನೂ ಭೇಟಿ ಮಾಡಿ ಮನವೊಲಿಸಲು ನಿರ್ಧರಿಸಲಾಗಿದೆ’ ಎಂದು ಶಾಸಕರೊಬ್ಬರು ತಿಳಿಸಿದರು.

‘ಸತ್ಯವಿದ್ದರೂ ಹೇಳಬಾರದಿತ್ತು’

ಕೊತ್ತೂರು ಮಂಜುನಾಥ್

ಕೋಲಾರ: ‘ಮತಗಳ್ಳತನ ವಿಚಾರದಲ್ಲಿ ಕೆ.ಎನ್.ರಾಜಣ್ಣ ಮಾತಿನಲ್ಲಿ ಸತ್ಯವಿದ್ದರೂ ಆ ರೀತಿ ಅವರು ಹೇಳಬಾರದಿತ್ತು. ನಮ್ಮ ನಾಯಕರು ಒಂದು ವಿಚಾರದಲ್ಲಿ ನಿಲುವು ತೆಗೆದುಕೊಂಡಾಗ ಅದಕ್ಕೆ ಬದ್ಧವಾಗಿರಬೇಕು. ಇಲ್ಲವೇ ದೂರ ಇರಬೇಕು’ ಎಂದು ಕೋಲಾರ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೊತ್ತೂರು ಜಿ.ಮಂಜುನಾಥ್ ಹೇಳಿದರು.

ತಾಲ್ಲೂಕಿನ ವೇಮಗಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಹಕಾರ ಸಚಿವರಾಗಿದ್ದ ರಾಜಣ್ಣ ಅವರನ್ನು ಯಾವ ಕಾರಣಕ್ಕೆ ಸಚಿವ ಸಂಪುಟದಿಂದ ತೆಗೆದು ಹಾಕಲಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಆದರೆ, ಅವರಂಥ ನಾಯಕರನ್ನು ಸಚಿವ ಸಂಪುಟದಿಂದ ತೆಗೆಯಬಾರದಿತ್ತು ಎಂಬುದು ನನ್ನ ಅಭಿಪ್ರಾಯ. ಆ ಬಗ್ಗೆ ನನಗೂ ಬೇಸರವಿದೆ. ತಪ್ಪೇ ಮಾಡಿದ್ದರೂ ಕರೆದು ಮಾತನಾಡಿಸಿ ಬುದ್ಧಿವಾದ ಹೇಳಿ ಸರಿಪಡಿಸುವ ಪ್ರಯತ್ನ ಮಾಡಬಹುದಿತ್ತು. ತಾಯಿ ಹಾಲು ಕುಡಿಯುವಾಗ ಮಗು ಒಮ್ಮೊಮ್ಮೆ ಕಚ್ಚುತ್ತದೆ, ಹಾಗಂತ ಮಗುವಿಗೆ ಹೊಡೆಯುವುದು ಸರಿ ಅಲ್ಲ’ ಎಂದರು.

ಹಾಸ್ಟೆಲ್‌ನ 41 ವಿದ್ಯಾರ್ಥಿಗಳು ಅಸ್ವಸ್ಥ

ಕೋಲಾರ: ನಗರ ಹೊರವಲಯದ ಖಾಸಗಿ ಕಾಲೇಜೊಂದರ ಹಾಸ್ಟೆಲ್‌ನ ಸುಮಾರು 41 ವಿದ್ಯಾರ್ಥಿಗಳು ಅಸ್ವಸ್ಥಗೊಂಡು ಬುಧವಾರ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮಂಗಳವಾರ ರಾತ್ರಿ 8 ಗಂಟೆಗೆ ಈ ವಿದ್ಯಾರ್ಥಿಗಳು ಈರುಳ್ಳಿ ದೋಸೆ, ಚಟ್ನಿ ಹಾಗೂ ಆಲೂ ಸಾಗು ಸೇವಿಸಿದ್ದಾರೆ. ಮುಂಜಾನೆ ವೇಳೆಗೆ ಹೊಟ್ಟೆ ನೋವು ಕಾಣಿಸಿಕೊಂಡು ವಾಂತಿ ಹಾಗೂ ಭೇದಿಯಾಗಿದೆ. ತಕ್ಷಣವೇ ಎಸ್‌ಎನ್‌ಆರ್ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಆ.16ಕ್ಕೆ ಮಾಂಸ ಮಾರಾಟ ನಿಷೇಧ

ಬೆಂಗಳೂರು: ಶ್ರೀಕೃಷ್ಣ ಜನ್ಮಾಷ್ಟಮಿ ದಿನದ ಪ್ರಯುಕ್ತ ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಆ.16ರ ಶನಿವಾರದಂದು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.



ಆರತಿ ಸ್ಕ್ಯಾನ್ಸ್‌ನಲ್ಲಿ ಹೀಲಿಯಂ ಮುಕ್ತ 1.5 ಟೆಸ್ಲಾ ಎಂಆರ್‌ಐ ಸೌಲಭ್ಯ

ಬೆಂಗಳೂರು: ರೇಡಿಯಾಲಜಿ ಮತ್ತು ರೋಗಗಳ ಅಧ್ಯಯನದಲ್ಲಿ ಮುಂಚೂಣಿಯಲ್ಲಿರುವ ಆರತಿ ಸ್ಕ್ಯಾನ್ಸ್ ಆ್ಯಂಡ್ ಲ್ಯಾಬ್ಸ್‌ನಲ್ಲಿ ಭಾರತದ ಮೊದಲ ಹೀಲಿಯಂ-ಮುಕ್ತ 1.5 ಟೆಸ್ಲಾ ಎಂಆರ್‌ಐ ಸೌಲಭ್ಯ ಕಲ್ಪಿಸಲಾಗಿದೆ. ಸಿಮನ್ಸ್ ಹೆಲ್ತಿನಿಯರ್ಸ್ ಪರಿಚಯಿಸಿರುವ ಈ ಸೌಲಭ್ಯದಿಂದ ದೇಹದ ಆಂತರಿಕ ಅಂಗಾಂಗಗಳ ಚಿತ್ರಣ ಪಡೆಯಲು ಬಳಸುವ ತಂತ್ರಜ್ಞಾನದ ಸುಸ್ಥಿರತೆಯಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದಂತಾಗಿದೆ.

ವೈಟ್‌ಫೀಲ್ಡ್‌ನಲ್ಲಿ ಆರಂಭಿಸಲಾಗಿರುವ ಆರತಿ ಸ್ಕ್ಯಾನ್ಸ್‌ನ ನೂತನ ಕೇಂದ್ರದಲ್ಲಿ ಸಿಮನ್ಸ್ ಹೆಲ್ತಿನಿಯರ್ಸ್‌ನ ಮ್ಯಾಗ್ನೆಟಮ್ ಫ್ಲೋ ಪ್ಲಸ್ ಈ ಸೌಲಭ್ಯವನ್ನು ಪರಿಚಯಿಸಿದೆ. ರೋಗಿ ಸ್ನೇಹಿ ಹಾಗೂ ಪರಿಸರ ಸ್ನೇಹಿಯಾಗಿರುವ ಈ ಯಂತ್ರ ರೋಗ ಪತ್ತೆಯಲ್ಲಿ ಮಹತ್ವದ ಬೆಳವಣಿಗೆಗೆ ಸಾಕ್ಷಿಯಾಗಿದೆ.

ಆರತಿ ಸ್ಕ್ಯಾನ್ಸ್ ಆ್ಯಂಡ್ ಲ್ಯಾಬ್ಸ್‌ನ ರೇಡಿಯಾಲಜಿಸ್ಟ್ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಡಾ. ಪ್ರಸನ್ನ ವಿಘ್ನೇಶ್ ಅವರು ಮಾತನಾಡಿ, ‘ಆರೋಗ್ಯ ರಕ್ಷಣಾ ಕ್ಷೇತ್ರದಲ್ಲಿ ಮತ್ತೊಂದು ಹೊಸ ಆವಿಷ್ಕಾರವನ್ನು ದೇಶದಲ್ಲಿ ಮೊದಲ ಬಾರಿಗೆ ಪರಿಚಯಿಸುತ್ತಿರುವುದಕ್ಕೆ ನಾವು ಹೆಮ್ಮೆಪಡುತ್ತೇವೆ. ಈ ಹೀಲಿಯಂ-ಮುಕ್ತ ಎಂಆರ್‌ಐ ತಂತ್ರಜ್ಞಾನವು ದೇಹದ ಒಳಗಿನ ಅಂಗಾಂಗಗಳ ಚಿತ್ರಣ ಪಡೆಯಲು ಬಳಸುವ ತಂತ್ರಜ್ಞಾನದಲ್ಲಿ ಆಗಿರುವ ಗಮನಾರ್ಹ ಬದಲಾವಣೆಗೆ ನಿದರ್ಶನವಾಗಿದೆ. ಪರಿಸರ ಸಂರಕ್ಷಣೆ ಮತ್ತು ಆರ್ಥಿಕ ಸವಾಲುಗಳನ್ನು ಎದುರಿಸಲು ಇದು ಅಸಾಧಾರಣ ಮಟ್ಟದ ಕ್ಲಿನಿಕಲ್ ಫಲಿತಾಂಶಗಳನ್ನು ನೀಡಲಿದೆ’ ಎಂದು ಹೇಳಿದ್ದಾರೆ.

ಮ್ಯಾಗ್ನೆಟಮ್ ಫ್ಲೋ ಪ್ಲಸ್ ಸಂಪೂರ್ಣವಾಗಿ ಮುಚ್ಚಿದ ಮತ್ತು ಶೂನ್ಯ ನಷ್ಟದ ಮೂಲಕ ಕೇವಲ 0.7 ಲೀಟರ್ ಹೀಲಿಯಂ ಅನ್ನು ಮಾತ್ರ ಬಳಸಲಿದೆ. ಇದರೊಂದಿಗೆ ಎಂಆರ್‌ಐನಲ್ಲಿ ಹೀಲಿಯಂ ಬಳಸುವ ಈ ವಿಧಾನದಲ್ಲಿ ಗಮನಾರ್ಹ ಸುಧಾರಣೆ ತಂದಂತಾಗಿದೆ. ಈ ಪ್ರಗತಿಯು ನಿಯಮಿತವಾಗಿ ಹೀಲಿಯಂ ಮರುಭರ್ತಿ ಮಾಡುವ ಅಗತ್ಯವನ್ನು ನಿವಾರಿಸಲಿದೆ. ವಾತಾವರಣಕ್ಕೆ ಹೀಲಿಯಂ ಹೊರಸೂಸುವಿಕೆಯನ್ನೂ ತಡೆಯುತ್ತದೆ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಚಿಟಿಕೆ ಸುದ್ದಿ

ಇದೇ 17 ಕ್ಕೆ ಧರ್ಮಸ್ಥಳಕ್ಕೆ ಭೇಟಿ: ವಿಜಯೇಂದ್ರ

ಬೆಂಗಳೂರು: ‘ಇದೇ 17ರಂದು ಪಕ್ಷದ ಶಾಸಕರು, ಹಿರಿಯರ ನೇತೃತ್ವದಲ್ಲಿ ಧರ್ಮಸ್ಥಳಕ್ಕೆ ಭೇಟಿ ಕೊಡಲಿದ್ದೇವೆ. ಮಂಜುನಾಥನ ದರ್ಶನ ಪಡೆಯಲು ಭಕ್ತರಾಗಿ ಅಲ್ಲಿಗೆ ಹೋಗುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

‘ಎಸ್‌ಐಟಿ ತನಿಖೆ ಶೀಘ್ರ ಮುಗಿಸಬೇಕು. ಇದನ್ನು ಹೀಗೆ ಎಳೆದುಕೊಂಡು ಹೋಗಲು ಸಾಧ್ಯವಿಲ್ಲ. ಸತ್ಯಾಸತ್ಯತೆ ಬಹಿರಂಗ ಆಗಬೇಕು. ಗೊಂದಲಗಳಿಗೆ ಅತಿ ಶೀಘ್ರವೇ ತೆರೆ ಬೀಳಬೇಕಿದೆ’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಧರ್ಮಸ್ಥಳದ ವಿರುದ್ಧದ ಪಿತೂರಿಯ ಹಿಂದೆ ಕೆಲವು ಸಮಾಜಘಾತುಕ ಶಕ್ತಿಗಳು, ಎಸ್‌ಡಿಪಿಐ, ಬೇರೆ ಬೇರೆ ಸಂಘಟನೆಗಳು ಕುತಂತ್ರ ನಡೆಸುತ್ತಿವೆ ಎಂಬ ಚರ್ಚೆಗಳು ಜನಸಾಮಾನ್ಯರಲ್ಲಿ ನಡೆಯುತ್ತಿವೆ. ನಾವು ಮಂಜುನಾಥೇಶ್ವರ ಹಾಗೂ ಅಣ್ಣಪ್ಪ ಸ್ವಾಮಿಯ ದರ್ಶನ ಪಡೆಯಲು ಹೋಗಲಿದ್ದೇವೆ’ ಎಂದು ಹೇಳಿದರು.

‘ಧರ್ಮಸ್ಥಳ ಕ್ಷೇತ್ರ ಪಾವಿತ್ರ್ಯಕ್ಕೆ ಧಕ್ಕೆ ಸಲ್ಲ’

ಉಡುಪಿ: ‘ಶ್ರೀಕ್ಷೇತ್ರ ಧರ್ಮಸ್ಥಳ ಶ್ರದ್ಧಾ ಕೇಂದ್ರವಾಗಿದ್ದು, ಹೋರಾಟದ ಹೆಸರಿನಲ್ಲಿ ಕ್ಷೇತ್ರದ ಪಾವಿತ್ರ್ಯ ಮತ್ತು ಧರ್ಮಾಧಿಕಾರಿ ಗೌರವಕ್ಕೆ ಧಕ್ಕೆ ತರುವ ಹುನ್ನಾರ ಸಲ್ಲದು’ ಎಂದು ಉಡುಪಿ ಕೃಷ್ಣಮಠದ ಪರ್ಯಾಯ ಪುತ್ತಿಗೆ ಪೀಠಾಧಿಪತಿ ಸುಗುಣೇಂದ್ರತೀರ್ಥ ಶ್ರೀಪಾದರು ಹೇಳಿದ್ದಾರೆ.

ಪುತ್ತಿಗೆ ಶ್ರೀ

‘ತನಿಖಾ ಹಂತದಲ್ಲಿ ವ್ಯಾಪಕ ಗೊಂದಲ ಆಗಿರುವುದನ್ನು ಗಮನಿಸಿದಾಗ ಇದು ಪೂರ್ವಯೋಜಿತ ಕೃತ್ಯ ಎಂಬ ಸಂದೇಹ ಕಾಡುತ್ತಿದೆ. ನಾಗರಿಕರು ಜವಾಬ್ದಾರಿಯಿಂದ ವರ್ತಿಸಬೇಕು. ಅನವಶ್ಯಕ ವದಂತಿಗಳಿಗೆ ಕಿವಿಗೊಡುವುದು ಸಮಂಜಸ ಅಲ್ಲ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಟೆಸ್ಕೋ ಜಾಲ: 15 ಸಾವಿರ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರಿಟನ್ ಮೂಲದ ಟೆಸ್ಕೋ ಕಂಪನಿ ರಾಜ್ಯದಲ್ಲಿ ನೂತನ ವಿತರಣಾ ಕೇಂದ್ರ ಸ್ಥಾಪಿಸಲು ಮುಂದಾಗಿದ್ದು, 15 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಭಾರತ ಮತ್ತು ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದದ ಹಿನ್ನೆಲೆಯಲ್ಲಿ ಬ್ರಿಟಿಷ್ ಡೆಪ್ಯುಟಿ ಹೈಕಮಿಷನರ್ ಚಂದ್ರು ಅಯ್ಯರ್ ಹಮ್ಮಿಕೊಂಡಿದ್ದ ಸಂತೋಷಕೂಟದಲ್ಲಿ ಅವರು ಮಾತನಾಡಿದರು.

ರೋಲ್ಸ್-ರಾಯ್ಸ್ ಕಂಪನಿ ಕೂಡ ರಾಜ್ಯದಲ್ಲಿ ಬಂಡವಾಳ ಹೂಡಿಕೆಯ ಹೊಸ ಅವಕಾಶಗಳನ್ನು ಅರಸುತ್ತಿದೆ. ಸರ್ಕಾರ ಅಗತ್ಯ ಪ್ರಕ್ರಿಯೆಗಳನ್ನು ತ್ವರಿತವಾಗಿ ಪೂರೈಸಲಿದೆ. ಎರಡೂ ದೇಶಗಳ ನಡುವಿನ ಮುಕ್ತ ವ್ಯಾಪಾರ ಒಪ್ಪಂದದಿಂದ ಸದ್ಯಕ್ಕೆ ವಾರ್ಷಿಕ 2,500 ಕೋಟಿ ಪೌಂಡ್ ವಹಿವಾಟು ನಡೆಯಲಿದೆ. ಇದು ಮುಂದಿನ ಐದು ವರ್ಷಗಳಲ್ಲಿ 9,000 ಕೋಟಿ ಪೌಂಡ್‌ಗೆ ಹೆಚ್ಚಲಿದೆ ಎಂದರು.

ಬ್ರಿಟಿಷ್ ಟ್ರೇಡ್ ಕಮಿಷನರ್ ಹರಿಜಿಂದರ್ ಕಂಗ್ ಉಪಸ್ಥಿತರಿದ್ದರು.

FARNAZ



ಸಾರ್ವಜನಿಕ ನೋಟೀಸು – ಇ–ಹರಾಜು

ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation)
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ–ಹರಾಜು
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ
ಇ–ಹರಾಜಿನ ದಿನಗಳು: 03.09.2025 ಮತ್ತು 04.09.2025

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016 ಮತ್ತು ನಿಬಂಧನೆ 32(e) ಹಾಗು 32A ಸಮಾಪನ ಪ್ರಕ್ರಿಯೆ ನಿಬಂಧನೆಗಳು, 2016 ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಸಕ್ರಿಯ ಸಂಸ್ಥೆಯಂತೆ ಇಡಿಯಾಗಿ ಅಥವಾ ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು ‘ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ’ ಮತ್ತು ಮರು ಪಡೆಯುವಿಕೆ ಇಲ್ಲದೆ **("AS IS WHERE IS ", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ–ಹರಾಜು ವೇದಿಕೆಯ ಮೂಲಕ https://ibbi.baanknet.com/eauction-ibbi/home ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
‘ಎ’ ವರ್ಗ: ಕಾರ್ಪೋರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ಇ–ಹರಾಜಿನ ದಿನ ಮತ್ತು ಸಮಯ: 03.09.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ			
ಆಸ್ತಿ ಪಟ್ಟಿ 1	ಪ್ರಧಾನವಲ್ಲದ (non-core) ಆಸ್ತಿಗಳು ಸೇರಿದಂತೆ, ಕಾರ್ಪೋರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದು ಮತ್ತು ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	**12.46 ಕೋಟಿ**	**1.246 ಕೋಟಿ**
‘ಬಿ’ ವರ್ಗ: ಕಾರ್ಪೋರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ (‘ಎ’ ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 03.09.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ			
ಆಸ್ತಿ ಪಟ್ಟಿ 2	ಪ್ರಧಾನವಲ್ಲದ (non-core) ಆಸ್ತಿಗಳನ್ನು ಹೊರತುಪಡಿಸಿ ಕಾರ್ಪೋರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ ‘ಡಿ’ಯಲ್ಲಿ ಹೇಳಿರುವಂತೆ ಕಾರ್ಪೋರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	**6.69 ಕೋಟಿ**	**0.669 ಕೋಟಿ**
‘ಸಿ’ ವರ್ಗ: ಕಾರ್ಪೋರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ (‘ಎ ಮತ್ತು ಬಿ’ ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 03.09.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ			
ಆಸ್ತಿ ಪಟ್ಟಿ 3	ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಮತ್ತು ತಮಿಳುನಾಡಿನಲ್ಲಿ ಗುತ್ತಿಗೆಗೆ ತೆಗೆದುಕೊಂಡಿರುವ ಸ್ಥಳಗಳಲ್ಲಿರುವ ಯಂತ್ರೋಪಕರಣಗಳನ್ನು ಹೊರತುಪಡಿಸಿ ದಿವಾಳಿ ಪ್ರಕ್ರಿಯೆ ನಿಯಮಗಳ (ನಿಯಮ 32ಎ ಜೊತೆಗೆ ನಿಯಮ 32(ಇ) ಅನ್ನು ಓದಿಕೊಂಡಂತೆ) ಅಡಿಯಲ್ಲಿ ಕಾರ್ಪೋರೇಟ್ ಸಾಲಗಾರ ಕಂಪನಿಯನ್ನು ಅದು ಕಾರ್ಯನಿರ್ವಹಿಸುತ್ತಿರುವಂತೆಯೇ ಮಾರಾಟಮಾಡುವುದು. ಇದಕ್ಕೆ ಕೆಲವು ನಿರ್ದಿಷ್ಟ ವಿನಾಯತಿಗಳಿವೆ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ ‘ಡಿ’ಯಲ್ಲಿ ಹೇಳಿರುವಂತೆ ಕಾರ್ಪೋರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	**5.96 ಕೋಟಿ**	**0.596 ಕೋಟಿ**
‘ಡಿ’ ವರ್ಗ: ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಆಸ್ತಿಗಳ (ಭೂಭಾಗಗಳು ಮಾತ್ರ) ಮಾರಾಟ (ಒಂದೊಮ್ಮೆ ವರ್ಗ ಎ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 03.09.2025ರಂದು ಸಂಜೆ 05.00ರಿಂದ 06.00 ಗಂಟೆಯವರೆಗೆ			
ಆಸ್ತಿ ಪಟ್ಟಿ 4	ಮಂಗಳೂರು ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೋರೇಷನ್ನಿಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೆ ನಂ. 37–1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	**1.06 ಕೋಟಿ**	**0.106 ಕೋಟಿ**
ಆಸ್ತಿ ಪಟ್ಟಿ 5	ಮಂಗಳೂರಿನ ಬಾಂಗ್ರಾ ಕುಲೂರಿನ ನಂ. 15,16,17,24,25 ಮತ್ತು 26 –1ರಲ್ಲಿರುವ 14,081.65 ಚದರ ಅಡಿ ವಿಸ್ತೀರ್ಣದ, ಆರು ವಾಣಿಜ್ಯ ನಿವೇಶನಗಳು – ಇದರ ಸಂಪೂರ್ಣ ಸ್ವತ್ತು	**2.24 ಕೋಟಿ**	**0.224 ಕೋಟಿ**
ಆಸ್ತಿ ಪಟ್ಟಿ 6	ಉಡುಪಿ ಜಿಲ್ಲೆಯ ಬ್ರಹ್ಮಾವರದ ಆರ್.ಎಸ್. ನಂ. 110/3, 1ರಲ್ಲಿರುವ 3.17 ಎಕರೆ ವಿಸ್ತೀರ್ಣದ, ಇಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	**2.76 ಕೋಟಿ**	**0.276 ಕೋಟಿ**
‘ಇ’ ವರ್ಗ: ಭೋಗ್ಯದಲ್ಲಿರುವ ಆವರಣದಲ್ಲಿರುವ ಚರಾಸ್ತಿಗಳ ಮಾರಾಟ (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 04.09.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ			
ಆಸ್ತಿ ಪಟ್ಟಿ 7	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	**60.00 ಲಕ್ಷ**	**6.00 ಲಕ್ಷ**
ಆಸ್ತಿ ಪಟ್ಟಿ 8	ಸರ್ವೆ ನಂ. 209/1ರಲ್ಲಿ ಡಿ. ನಂ. 50/4ಎ ಮತ್ತು 4ಬಿ, ಜಿಂಜೀ ರಸ್ತೆ, ತಿರುವಮತೂರು ಗ್ರಾಮ, ವಿಕ್ರವಂಡಿ ತಾಲ್ಲೂಕು, ವಿಲ್ಲುಪುರಮ್, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು	**68.00 ಲಕ್ಷ**	**6.80 ಲಕ್ಷ**
ಆಸ್ತಿ ಪಟ್ಟಿ 9	ಸರ್ವೆ ನಂ. 261/6 ಮತ್ತು 267/2, ಕಟ್ಟಂಡಿಕುಪ್ಪಮ್, ಪನ್‌ರುಟಿ, ಕಡಲೂರು ಜಿಲ್ಲೆ, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳು	**33.00 ಲಕ್ಷ**	**3.30 ಲಕ್ಷ**
‘ಎಫ್’ ವರ್ಗ: ಆಸ್ತಿಗಳ ಪ್ರತ್ಯೇಕ ಯೂನಿಟ್‌ಗಳ ಮಾರಾಟ (ಚರ ಮತ್ತು ಸ್ಥಿರ ಆಸ್ತಿಗಳು) (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 04.09.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ			
ಆಸ್ತಿ ಪಟ್ಟಿ 10	**ಕೈಗಾರಿಕಾ ಸ್ವತ್ತು** (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	**2.40 ಕೋಟಿ**	**0.240 ಕೋಟಿ**
‘ಜಿ’ ವರ್ಗ: ಚರಾಸ್ತಿಗಳ ಮಾರಾಟ (ಒಂದೊಮ್ಮೆ ಅಸೆಟ್ ಸೆಟ್ 11 ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 04.09.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ			
ಆಸ್ತಿ ಪಟ್ಟಿ 11	**ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು** ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	**38.00 ಲಕ್ಷ**	**3.80 ಲಕ್ಷ**
‘ಹೆಚ್’ ವರ್ಗ: ಸ್ಥಿರಾಸ್ತಿಗಳ ಮಾರಾಟ (ಒಂದೊಮ್ಮೆ ಹರಾಜು ಯಶಸ್ವಿಯಾಗಿ ಅಸೆಟ್ ಸೆಟ್ 12 ಅಡಿಯಲ್ಲಿ ಹರಾಜಿಗೆ ಬಿಡ್ ಗಳು ಬಂದಿದ್ದರೆ, ಇ–ಹರಾಜು ಮೂಲಕ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ 04.09.2025 ರಂದು ಸಂಜೆ 05.00 ರಿಂದ 06.00 ರವರೆಗೆ			
ಆಸ್ತಿ ಪಟ್ಟಿ 12	**ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ)** ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	**2.02 ಕೋಟಿ**	**0.202 ಕೋಟಿ**

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ–ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ ‘ಇ–ಹರಾಜು ಪ್ರಕ್ರಿಯೆಯ ಮಾಹಿತಿ’ (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ibbi.baanknet.com/eauction-ibbi/home ನಲ್ಲಿ ದೊರೆಯುತ್ತದೆ, ಅಥವಾ ಹೆಚ್ಚಿನ ವಿವರಗಳಿಗೆ ಲಿಕ್ವಿಡೇಟರ್‌ರನ್ನು ಸಂಪರ್ಕಿಸಬಹುದು.
2. ದಯವಿಟ್ಟು ಗಮನಿಸಿ: **‘ಎ’ ಅಥವಾ ‘ಬಿ’ ಅಥವಾ ’ಸಿ’ ಆಸ್ತಿ ವರ್ಗಕ್ಕೆ** ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರುಗಳು ಪಾಲುಗೊಳ್ಳದೆ ಯಶಸ್ವಿಯಾಗದೆ ಇದ್ದಲ್ಲಿ ಸದರಿ ಆಸ್ತಿಗಳನ್ನು ಮೇಲಿನ ಕೋಷ್ಟಕದ ಅನುಸಾರ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವುದು. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ವರ್ಗದ(ಗಳ) ಅಡಿಯಲ್ಲಿ ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಇ–ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಲಿಕ್ವಿಡೇಟರ್ ಉಳಿಸಿಕೊಂಡಿರುತ್ತಾರೆ.
3. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳು ಮತ್ತು ಇಎಂಡಿ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **01.09.2025**ರಂದು ಇಲ್ಲವೆ ಅದಕ್ಕೆ ಮುನ್ನ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು.
4. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಯಾವುದೇ ಮಾಹಿತಿಯು ಇ–ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
5. ಸಂಭಾವ್ಯ ಬಿಡ್ಡುದಾರರು ಮುಂಗಡ ಹಣ ಪಾವತಿಯನ್ನು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮಾತ್ರ ಮಾಡಬೇಕು. ಬಿಡ್ಡುದಾರರು ಅನರ್ಹರೆಂದು ಕಂಡುಬಂದರೆ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ಸಹಿ/–
ರವೀಂದ್ರ ಬೆಳೆಯೂರ್
ಲಿಕ್ವಿಡೇಟರ್
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್,
428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11
ಈಮೇಲ್: Reliable_Cashew_CIRP@beleyur.com
ಫೋನ್: 080 26540193 ಮೊಬೈಲ್: +91 94481 46963

ದಿನಾಂಕ: 13.08.2025
ಸ್ಥಳ: ಬೆಂಗಳೂರು

ಚಿಕ್ಕದಾದ ವೆಚ್ಚದ ಬಗ್ಗೆಯೂ ಎಚ್ಚರಿಕೆಯಿಂದ ಇರಿ. ಸಣ್ಣ ಸೋರಿಕೆಯು ಸಹ ದೊಡ್ಡದಾದ ಹಡಗನ್ನು ಮುಳುಗಿಸುತ್ತದೆ
ಬೆಂಜಮಿನ್ ಫ್ರಾಂಕ್ಲಿನ್, ರಾಜನೀತಿಜ್ಞ ಹಾಗೂ ಹೂಡಿಕೆದಾರ

ದುಡ್ಡಿನಂಥಾ ಮಾತು

• ಪ್ರಮೋದ ಶ್ರೀಕಾಂತ ದೈತೋಟ

ಐ.ಟಿ. ವಿವರ: ಇನ್ನೊಂದೇ ತಿಂಗಳು ಸಮಯ

ದೇಶದ ಪ್ರಗತಿಯಲ್ಲಿ ವೈಯಕ್ತಿಕ ತೆರಿಗೆದಾರರ ಕೊಡುಗೆ ಗಮನಾರ್ಹ. 2025-26ರ ಒಟ್ಟು ₹50.65 ಲಕ್ಷ ಕೋಟಿ ಮೊತ್ತದ ಬೃಹತ್ ಬಜೆಟ್‌ನಲ್ಲಿ ತೆರಿಗೆ ಸಂಗ್ರಹದ ಗುರಿ ಸುಮಾರು ₹42.70 ಲಕ್ಷ ಕೋಟಿ. ಇದರಲ್ಲಿ ಸುಮಾರು ₹25.20 ಲಕ್ಷ ಕೋಟಿಯ ನೇರ ತೆರಿಗೆ ಸಂಗ್ರಹದ ಗುರಿಯೂ ಇದೆ. ಈ ಮೊತ್ತದಲ್ಲಿ ವೈಯಕ್ತಿಕ ತೆರಿಗೆದಾರರ ಪಾಲು ₹14.38 ಲಕ್ಷ ಕೋಟಿ. ಇತರ ಕಂಪನಿ, ಸಂಸ್ಥೆಗಳೆಲ್ಲಾ ಸೇರಿ ಪಾವತಿಸಬಹುದಾದ ನೇರ ತೆರಿಗೆ ಅಂದಾಜು ಮೊತ್ತ ₹10.82 ಲಕ್ಷ ಕೋಟಿ. ಅಂದರೆ ಸಂಗ್ರಹವಾಗುವ ನೇರ ತೆರಿಗೆಯಲ್ಲಿ ಶೇ 57ರಷ್ಟು ಪಾಲು ಸಾಮಾನ್ಯ ವರ್ಗದವರೂ ಅತಿ ಸಿರಿವಂತರೂ ಪಾವತಿಸುವ ಆದಾಯ ತೆರಿಗೆಯದ್ದು.

ದೇಶದಲ್ಲಿ ಕಳೆದ ವರ್ಷ ಸಕಾಲದಲ್ಲಿ ಸಲ್ಲಿಕೆಯಾದ ಒಟ್ಟು ಐ.ಟಿ. ವಿವರಗಳ ಸಂಖ್ಯೆ 7.29 ಕೋಟಿ. ಇದರಲ್ಲಿ ವೈಯಕ್ತಿಕ ತೆರಿಗೆದಾರರು ಸಲ್ಲಿಸಿದ ವಿವರದ ಪ್ರಮಾಣ ಶೇ 98ಕ್ಕೂ ಅಧಿಕ.

ವಿವರ ಯಾವಾಗ ಸಲ್ಲಿಸಬೇಕು?: ಆದಾಯ ತೆರಿಗೆ ಇಲಾಖೆಯ ಮಾರ್ಗಸೂಚಿ ಪ್ರಕಾರ ಪ್ರತಿವರ್ಷ, ತಮ್ಮ ಆದಾಯದ ಲೆಕ್ಕ ಪರಿಶೋಧನೆಯ ಅಗತ್ಯವಿಲ್ಲದ ವೈಯಕ್ತಿಕ ತೆರಿಗೆದಾರರು ಜುಲೈ 31ಕ್ಕೆ ಮೊದಲು ತೆರಿಗೆ ವಿವರ ಸಲ್ಲಿಸಬೇಕು. ಆದರೆ, ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರವು ಹೆಚ್ಚು ಕಾಲಾವಕಾಶ ನೀಡಬಹುದು. ಕಳೆದ ಆರ್ಥಿಕ ವರ್ಷಕ್ಕೆ (2024-25) ಸಂಬಂಧಿಸಿದ ಐಟಿಆರ್ ನಮೂನೆ ತಡವಾಗಿ ಬಿಡುಗಡೆಯಾದ ಕಾರಣಕ್ಕೆ ಸೆಪ್ಟೆಂಬರ್ 15ರವರೆಗೆ ಗಡುವು ವಿಸ್ತರಿಸಲಾಗಿದೆ. ಹೀಗಾಗಿ ತೆರಿಗೆದಾರರಿಗೆ ಈ ಬಾರಿ ಹೆಚ್ಚುವರಿಯಾಗಿ 45 ದಿನಗಳ ಅವಕಾಶ ಸಿಕ್ಕಿದೆ.

ಯಾರು ವಿವರ ಸಲ್ಲಿಸಬೇಕು?: ಬಹುತೇಕ ಸಂದರ್ಭಗಳಲ್ಲಿ ವಿವರ ಸಲ್ಲಿಸಲು ಆದಾಯ ಮಿತಿಯೇ ಆಧಾರ. ತೆರಿಗೆದಾರರು ತಮ್ಮ ವಯಸ್ಸು ಹಾಗೂ ಆದಾಯ ಪರಿಗಣಿಸಿ ವಿವರ ಸಲ್ಲಿಸಬೇಕು (ಕೋಷ್ಟಕ 1ನ್ನು ಗಮನಿಸಿ). ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 87ಎ ಅಡಿ ವಿನಾಯಿತಿ ಪಡೆಯುವವರು, ಕೋಷ್ಟಕದಲ್ಲಿ ಸೂಚಿಸಿದ ಮೊತ್ತಕ್ಕೆ ಮೇಲ್ಪಟ್ಟ ಆದಾಯ ಹೊಂದಿದ್ದಲ್ಲಿ, ವಿವರ ಸಲ್ಲಿಸಿ ವಿನಾಯಿತಿ ಪಡೆಯಬಹುದು. ವಿನಾಯಿತಿ ಇರುವ ಕಾರಣಕ್ಕೆ ತೆರಿಗೆ ಕಟ್ಟಬೇಕಾಗಿಲ್ಲ ಎಂದು ಭಾವಿಸಿ, ವಿವರವನ್ನೂ (ರಿಟರ್ನ್ಸ್) ಸಲ್ಲಿಸಬೇಕಾಗಿಲ್ಲ ಎನ್ನುವ ತಪ್ಪು ಕಲ್ಪನೆ ಬೇಡ. ಮೂಲ ತೆರಿಗೆ ಆದಾಯ ಮಿತಿಯನ್ನು ಪರಿಗಣಿಸಿ ತೆರಿಗೆದಾರರು ನಿರ್ಣಯ ತೆಗೆದುಕೊಳ್ಳಬೇಕು.

ಹಳೆಯ ಆದಾಯ ತೆರಿಗೆ ಪದ್ದತಿ ಆಯ್ಕೆ ಮಾಡಿಕೊಂಡವರ ಆದಾಯ ₹5 ಲಕ್ಷ ಮೀರಿದ್ದರೆ, ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಂಡವರ ಆದಾಯ ₹7 ಲಕ್ಷ ಮೀರಿದ್ದರೆ, ಕೆಳಗೆ ಉಲ್ಲೇಖಿಸಲಾದ ಯಾವುದೇ ವಿನಾಯಿತಿ ಲಭ್ಯವಿರುವುದಿಲ್ಲ.

ವಿವರ ಸಲ್ಲಿಸಬೇಕಾದ ಇತರ ಸಂದರ್ಭಗಳು: ವಿವರ ಸಲ್ಲಿಸಲು ಆದಾಯ ಮಾತ್ರವೇ ಪರಿಗಣನೆಗೆ ಬರುವುದಿಲ್ಲ. ಇತರ ಕೆಲವು ಸಂದರ್ಭಗಳೂ ಆದಾಯ ತೆರಿಗೆ ವಿವರ ಸಲ್ಲಿಸುವುದನ್ನು ಅನಿವಾರ್ಯ ಆಗಿಸಬಹುದು.

1. ಯಾವುದೇ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕ್‌ನ ಚಾಲ್ತಿ ಖಾತೆಯಲ್ಲಿ ಒಟ್ಟು ₹1 ಕೋಟಿಗೂ ಹೆಚ್ಚಿನ ಜಮಾ ಆಗಿದ್ದಲ್ಲಿ,

2. ಸ್ವಂತ ವಿದೇಶ ಪ್ರಯಾಣಕ್ಕೆ ಅಥವಾ ಇತರರ ವಿದೇಶ ಪ್ರಯಾಣಕ್ಕೆ ₹2 ಲಕ್ಷಕ್ಕಿಂತ ಅಧಿಕ ಮೊತ್ತ ವ್ಯಯಿಸಿದ್ದರೆ

3. ವಾರ್ಷಿಕ ₹1 ಲಕ್ಷಕ್ಕೂ ಅಧಿಕ ಮೊತ್ತವನ್ನು ವಿದ್ಯುತ್ ಬಿಲ್‌ಗಾಗಿ ಪಾವತಿಸಿದ್ದಲ್ಲಿ

4. ನಿವಾಸಿ ಭಾರತೀಯ ವ್ಯಕ್ತಿ ವಿದೇಶಿ ಆಸ್ತಿಗಳಲ್ಲಿ ಆರ್ಥಿಕ ಪಾಲು ಹೊಂದಿದ್ದರೆ ಅಥವಾ ಅದರ ವ್ಯವಹಾರಗಳನ್ನು ನಿರ್ವಹಿಸುವ ಅಧಿಕೃತ ಪ್ರತಿನಿಧಿಯಾಗಿದ್ದರೆ

5. ಇತರರ ಆದಾಯಕ್ಕೆ ಅವರ ವಾರಾಸುದಾರನಾಗಿ ಆದಾಯ ಘೋಷಿಸುವ ಸಂದರ್ಭದಲ್ಲಿ ಮೇಲೆ ಸೂಚಿಸಲ್ಪಟ್ಟ ಎಲ್ಲರೂ ರಿಟರ್ನ್ಸ್ ಸಲ್ಲಿಸಬೇಕಾಗಿರುತ್ತದೆ.

ಉದಾಹರಣೆಗೆ, ಆದಾಯ ತೆರಿಗೆಯ 'ನಿಯಮ 114ಇ' ಇದರಂತೆ, ಚಾಲ್ತಿ ಖಾತೆಯಲ್ಲಿ ಒಟ್ಟು ₹50 ಲಕ್ಷಕ್ಕೂ ಹೆಚ್ಚಿನ ನಗದು ಜಮಾ ಆದಾಗ ಅಥವಾ ಅಷ್ಟು ಮೊತ್ತವನ್ನು ಖಾತೆಯಿಂದ ಹಿಂಪಡೆದಾಗ, ನಗದು ಪಾವತಿ ಮೂಲಕ ಒಟ್ಟು ₹10 ಲಕ್ಷಕ್ಕಿಂತ ಅಧಿಕ ಮೊತ್ತದ ಡಿ.ಡಿ ಖರೀದಿಸಿದಾಗ, ಅಥವಾ ₹10 ಲಕ್ಷಕ್ಕಿಂತ ಅಧಿಕ ಮೊತ್ತ ನಿಶ್ಚಿತ ಠೇವಣಿ ಅಥವಾ ಉಳಿತಾಯ ಖಾತೆಗೆ ಜಮಾ ಆದಾಗ ಎಲ್ಲಾ ಬ್ಯಾಂಕ್‌ಗಳು (ಸಹಕಾರಿ ಬ್ಯಾಂಕ್ ಸೇರಿ) ಇಂತಹ ಮಾಹಿತಿಯನ್ನು ವಾರ್ಷಿಕವಾಗಿ ಮೇ 31ರೊಳಗೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕಾಗುತ್ತದೆ.

ಹೀಗಾಗಿ ಇಂತಹ ವ್ಯವಹಾರಗಳ ಮಾಹಿತಿ ಆದಾಯ ತೆರಿಗೆ ಇಲಾಖೆಯ ಬಳಿ ಇರುತ್ತದೆ. ಆದರೆ ಇಂತಹ ವಿಷಯಗಳ ಬಗ್ಗೆ ಖಾತೆದಾರರು ವಿವರ ಸಲ್ಲಿಸುವುದು ಕಡ್ಡಾಯವೆಂಬ ನಿಯಮ ಇಲ್ಲದಿದ್ದರೂ, ವಿವರ ಸಲ್ಲಿಸದೆ ಇದ್ದಲ್ಲಿ ತೆರಿಗೆ ಇಲಾಖೆಯ ನೋಟಿಸ್ ಬರಲಾರದು ಎಂದು ಖಚಿತವಾಗಿ ಹೇಳಲಾಗದು. ಹೀಗಾಗಿ ಅಂತಹ ವ್ಯವಹಾರ ಇದ್ದಾಗ ನಿಮ್ಮ ತೆರಿಗೆ ಸಲಹೆಗಾರರನ್ನು ಮೊದಲೇ ಸಂಪರ್ಕಿಸಿ ನಿರ್ಧಾರ ಕೈಗೊಳ್ಳಿ. ಇದಲ್ಲದೆ, ಯಾವುದೇ ರೀಫಂಡ್ ಪಡೆಯುವ ಸನ್ನಿವೇಶ ಇದ್ದ ಸಂದರ್ಭದಲ್ಲೂ ವಿವರ ಸಲ್ಲಿಕೆ ಅನಿವಾರ್ಯವಾಗಿರುತ್ತದೆ.

ಐಟಿಆರ್ ನಮೂನೆ ಆಯ್ಕೆ ಹೇಗೆ?: ಸಾಮಾನ್ಯವಾಗಿ ಈ ಕೆಳಗಿನ ನಮೂನೆಗಳನ್ನು (ಕೋಷ್ಟಕ 2ನ್ನು ಗಮನಿಸಿ) ವಿವರ ಸಲ್ಲಿಕೆಗೆ ಬಳಸಬಹುದು. ಆದರೆ, ನಿಮ್ಮ ಪ್ರತಿ ವರ್ಷದ ಆದಾಯದ ಮಾಹಿತಿ ಆಧರಿಸಿ, ನಿಮ್ಮ ತೆರಿಗೆ ಸಲಹೆಗಾರರ ಸೂಚನೆಯಂತೆ ನಮೂನೆಯಲ್ಲಿ ಬದಲಾವಣೆ ಮಾಡಬೇಕಾದ ಅಗತ್ಯವೂ ಇರಬಹುದು. ಈ ವರ್ಷದಿಂದ, ತೆರಿಗೆದಾರರಿಗೆ ತಮ್ಮ ಪ್ಯಾನ್ ಸಂಖ್ಯೆಯ ಜೊತೆ ನಮೂದಿಸಲಾದ ತೆರಿಗೆ ಕಡಿತದ ಸೆಕ್ಷನ್ ಆಧರಿಸಿ ನಮೂನೆ ಆಯ್ಕೆ ಆಗುವಂತೆ ಆಂತರಿಕ ವ್ಯವಸ್ಥೆ ರೂಪಿಸಲಾಗಿದೆ. ಉದಾಹರಣೆಗೆ, ತೆರಿಗೆ ಕಡಿತ ತಮ್ಮ ವೃತ್ತಿ ಆಧಾರಿತ ಆದಾಯ ಮೂಲಕ್ಕೆ ಸಂಬಂಧಿಸಿದ್ದಾಗಿದ್ದರೆ, ಅವರು ಐಟಿಆರ್ 1, 2 ಅನ್ನು ಆಯ್ಕೆ ಮಾಡುವ ಅವಕಾಶ ನೀಡದಂತೆ ಬದಲಾವಣೆ ತರಲಾಗಿದೆ. ಅದೇ ರೀತಿ ಹಳೆಯ ತೆರಿಗೆ ಪದ್ಧತಿ ಅನುಸರಿಸುವವರು ಹೂಡಿಕೆ, ವಿಮೆ ಇತ್ಯಾದಿಗಳ ನಿಖರ ವಿವರ ನೀಡಬೇಕಾಗಿದೆ.

(ಲೇಖಕ ವೈಯಕ್ತಿಕ ಹಣಕಾಸು ತಜ್ಞ)

ತಡವಾಗಿ ವಿವರ ಸಲ್ಲಿಕೆ, ಪರಿಷ್ಕರಣೆ

ಕಾಲಮಿತಿಯೊಳಗೆ ಅಥವಾ ಮುಂದೂಡಲಾದ ಗಡುವಿನೊಳಗೆ ವಿವರ ಸಲ್ಲಿಸದಿದ್ದರೆ ₹5,000 ದಂಡ ಪಾವತಿಸಬೇಕಾಗುತ್ತದೆ. ₹5 ಲಕ್ಷಕ್ಕೂ ಕಡಿಮೆ ತೆರಿಗೆ ಆದಾಯ ಇರುವ ವ್ಯಕ್ತಿಗಳಿಗೆ ದಂಡದ ಮೊತ್ತವನ್ನು ₹1,000ಕ್ಕೆ ಸೀಮಿತಗೊಳಿಸಲಾಗಿದೆ. ಆದರೆ ಈ ದಂಡ ಪಾವತಿಸಿ ತಮಗೆ ಬೇಕಾದ ಸಮಯಕ್ಕೆ ವಿವರ ಸಲ್ಲಿಸಲು ಅವಕಾಶವಿದೆಯೇ ಎಂದು ಕೇಳಿದರೆ, 'ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ' ಎನ್ನಬೇಕಾಗುತ್ತದೆ.

ಶುಲ್ಕ ಸಹಿತ ತೆರಿಗೆ ವಿವರ ಸಲ್ಲಿಸಲು ಆರ್ಥಿಕ ವರ್ಷ ಕೊನೆಗೊಂಡ ನಂತರ 9 ತಿಂಗಳೊಳಗೆ, ಅಂದರೆ 2024-25ನೇ ಸಾಲಿನ ಆದಾಯಕ್ಕೆ ಸಂಬಂಧಿಸಿದ ವಿವರಗಳನ್ನು 2025ರ ಡಿಸೆಂಬರ್ 31ರ ತನಕ ಸಲ್ಲಿಸಲು ಅವಕಾಶ ಇರುತ್ತದೆ. ಒಂದು ವೇಳೆ ಯಾವುದಾದರೂ ಮಾಹಿತಿ ತಪ್ಪಾಗಿ ಸಲ್ಲಿಕೆಯಾಗಿದ್ದರೆ ಅಂತಹ ವಿವರಗಳನ್ನು ಪರಿಷ್ಕರಿಸುವುದಕ್ಕೂ ಈ ಅವಧಿಯಲ್ಲಿ ಅವಕಾಶ ಇದೆ.

ಈ ಎಲ್ಲಾ ಗಡುವು ಕಳೆದರೆ, ವಿವರ ಸಲ್ಲಿಸಲು ಅವಕಾಶ ಇರುವುದಿಲ್ಲ. ಹೀಗಿದ್ದರೂ, ಯಾರಿಗಾದರೂ ವಿವರ ಸಲ್ಲಿಸಲು ಆಗದಿದ್ದ ಸಂದರ್ಭದಲ್ಲಿ, ಸೆಕ್ಷನ್ 139(8ಎ) ಅಡಿ, ಹಿಂದಿನ ವರ್ಷಗಳಿಗೆ ಸಂಬಂಧಿಸಿದ ವಿವರ ಸಲ್ಲಿಸಲು ಕೊನೆಯ ಅವಕಾಶ ಇರುತ್ತದೆ. ಆದರೆ ಅಂತಹ ತೆರಿಗೆ ವಿವರ ಸಲ್ಲಿಕೆಗಳು ಮರುಪಾವತಿ ಪಡೆಯುವ ಅಥವಾ ತೆರಿಗೆ ತಗ್ಗಿಸುವ ಉದ್ದೇಶಕ್ಕಾಗಿರಬಾರದು. ಇತ್ತೀಚಿನ ಬದಲಾವಣೆಯ ಅನ್ವಯ ನವೀಕೃತ ವಿವರ ಸಲ್ಲಿಸಲು ಆರ್ಥಿಕ ವರ್ಷ ಕೊನೆಗೊಂಡ ಸಮಯದಿಂದ ಐದು ವರ್ಷಗಳ (ಅಸೆಸ್ಮೆಂಟ್ ವರ್ಷದಿಂದ 48 ತಿಂಗಳು) ಕಾಲಮಿತಿ ಇರುತ್ತದೆ. ಆದರೆ ಇದಕ್ಕೆ ಅನ್ವಯವಾಗುವ ತೆರಿಗೆ, ಬಡ್ಡಿ ಇತ್ಯಾದಿಯಲ್ಲದೆ ಹೆಚ್ಚುವರಿ ದಂಡ ತೆರಬೇಕಾಗುತ್ತದೆ.

2

ಐಟಿಆರ್ ನಮೂನೆ ಸಂಖ್ಯೆ	ಆದಾಯ ಮೂಲ
ಐಟಿಆರ್ 1 (ಸಹಜ)	ವಾರ್ಷಿಕವಾಗಿ ಒಟ್ಟು ₹50 ಲಕ್ಷದೊಳಗೆ ವೇತನ ಆದಾಯ/ ಪಿಂಚಣಿ/ಕೌಟುಂಬಿಕ ಪಿಂಚಣಿ ಉಳ್ಳವರು, ಇತರೆ ಸಾಮಾನ್ಯ ಆದಾಯ (ಬಡ್ಡಿ, ಡಿವಿಡೆಂಡ್ ಇತ್ಯಾದಿ) ಹೊಂದಿದವರು ಹಾಗೂ ಒಂದೇ ಸ್ವಂತ ಮನೆ ಇದ್ದು ತಮ್ಮ ಉಪಯೋಗಕ್ಕಾಗಿ ಇರುವ ಮನೆಯ ಸಾಲದ ಬಡ್ಡಿಯ ಮೇಲೆ ಕಡಿತ ಪಡೆಯುವವರು. ಆದರೆ, ಬಂಡವಾಳ ಲಾಭ-ನಷ್ಟ ಉಳ್ಳವರು, ವ್ಯಾಪಾರ-ವೃತ್ತಿ ಉಳ್ಳವರು, ವಿದೇಶಿ ಆದಾಯ ಮೂಲ ಉಳ್ಳವರು, ಇತ್ಯಾದಿ ಇನ್ನೂ ಅನೇಕ ಸಂದರ್ಭದಲ್ಲಿ ಈ ನಮೂನೆ ಬಳಸುವಂತಿಲ್ಲ.
ಐಟಿಆರ್ 2	ವ್ಯಾಪಾರ ವ್ಯವಹಾರ ಆದಾಯ ಹೊಂದಿರದಿದ್ದ ಎಲ್ಲ ವೈಯಕ್ತಿಕ ತೆರಿಗೆದಾರರು
ಐಟಿಆರ್ 3	ವ್ಯಾಪಾರ ವ್ಯವಹಾರ ಆದಾಯ ಹೊಂದಿರುವ, ಆದರೆ ಮೇಲಿನ ಅಥವಾ ಕೆಳಗಿನ ವರ್ಗದಲ್ಲಿ ಒಳಪಡದವರು
ಐಟಿಆರ್ 4 (ಸುಗಮ)	ವ್ಯಾಪಾರ ವ್ಯವಹಾರ ಆದಾಯ ಹೊಂದಿರುವ, ಆದರೆ ಪೂರ್ವನಿರ್ಧಾರಿತ ದರದಲ್ಲಿ ಆದಾಯ ಘೋಷಿಸುವವರು

1

ತೆರಿಗೆ ಆದಾಯ ಮಿತಿಯ ಬಗ್ಗೆ	60 ವರ್ಷಕ್ಕಿಂತ ಕೆಳಗಿನವರಿಗೆ ವಿವರ ಸಲ್ಲಿಕೆಯಿಂದ ವಿನಾಯಿತಿ	ಹಿರಿಯ ನಾಗರಿಕರಿಗೆ ವಿವರ ಸಲ್ಲಿಕೆಯಿಂದ ವಿನಾಯಿತಿ	ಅತಿಹಿರಿಯ ನಾಗರಿಕರಿಗೆ ವಿವರ ಸಲ್ಲಿಕೆಯಿಂದ ವಿನಾಯಿತಿ	ತೆರಿಗೆ ನಿರ್ಣಯಿಸುವಾಗ ಸಿಗುವ ಕಡಿತಗಳು
ಹಳೆಯ ತೆರಿಗೆ ಪದ್ಧತಿಯಡಿ ಸಂಪೂರ್ಣ ತೆರಿಗೆ ವಿನಾಯಿತಿಯ ಗರಿಷ್ಠ ಆದಾಯ ಮಿತಿ: ಸೆಕ್ಷನ್ **87**ಎ ಇದರಡಿ ಹೇಳಲಾಗುವ ₹**5** ಲಕ್ಷದವರೆಗಿನ ಆದಾಯಕ್ಕೆ ₹**12,500**ರವರೆಗೆ ಆದಾಯ ತೆರಿಗೆ ವಿನಾಯಿತಿ ಇದೆ, ಆದರೆ ಇದಕ್ಕೆ ವಿವರ ಸಲ್ಲಿಸಬೇಕು	₹**2.50** ಲಕ್ಷಕ್ಕಿಂತ ಕಡಿಮೆ ಆದಾಯ ಇದ್ದಾಗ	₹**3** ಲಕ್ಷಕ್ಕಿಂತ ಕಡಿಮೆ ಆದಾಯ ಇದ್ದಾಗ	₹**5** ಲಕ್ಷಕ್ಕಿಂತ ಕಡಿಮೆ ಆದಾಯ ಇದ್ದಾಗ	ಅಧ್ಯಾಯ 6ಎ - ಇದರಲ್ಲಿ ಹೇಳಲಾದ ಎಲ್ಲಾ ತೆರಿಗೆ ವಿನಾಯಿತಿಗಳು, ವೇತನದಾರರಿಗೆ ₹**50,000** ಸ್ಟ್ಯಾಂಡರ್ಡ್ ಡಿಡಕ್ಷನ್, ವೃತ್ತಿ ತೆರಿಗೆ ಇತ್ಯಾದಿ
ಹೊಸ ತೆರಿಗೆ ಪದ್ಧತಿಯಡಿ ಸಂಪೂರ್ಣ ತೆರಿಗೆ ವಿನಾಯಿತಿಯ ಗರಿಷ್ಠ ಆದಾಯ ಮಿತಿ: ಸೆಕ್ಷನ್ **87**ಎ ಅಡಿ ಹೇಳಿರುವ ₹**7** ಲಕ್ಷದವರೆಗಿನ ಆದಾಯಕ್ಕೆ ₹**25,000**ದವರೆಗೆ ವಿನಾಯಿತಿ ಇದೆ. ಇದಕ್ಕೆ ವಿವರ ಸಲ್ಲಿಸಿ ವಿನಾಯಿತಿ ಪಡೆಯಬೇಕು	ವಯೋಮಿತಿ ಪರಿಗಣಿಸದೆ, ₹**3** ಲಕ್ಷದ ಕೆಳಗಿನ ಆದಾಯ ಇದ್ದಾಗ			ವೇತನದಾರರಿಗೆ ₹**75,000**ದ ಸ್ಟ್ಯಾಂಡರ್ಡ್ ಡಿಡಕ್ಷನ್ ಹಾಗೂ ಇತರ ಸೀಮಿತ ವಿನಾಯಿತಿಗಳು

ಮಾಹಿತಿ ಕಣಜ

ದೇಶದ ಹಣಕಾಸಿನ ಆಸ್ತಿಗಳಲ್ಲಿ ಯಾವುದರ ಪಾಲು ಎಷ್ಟು?



ಆಧಾರ: ಎಎಂಎಫ್‌ಐ-ಕ್ರಿಸಿಲ್ ಫ್ಯಾಕ್ಟ್‌ಬುಕ್

ವರ್ಷದಿಂದ ವರ್ಷಕ್ಕೆ ಬ್ಯಾಂಕ್ ಠೇವಣಿಗಳ ಪ್ರಮಾಣ ತಗ್ಗುತ್ತಿರುವುದನ್ನು, ಮ್ಯೂಚುವಲ್ ಫಂಡ್‌ಗಳಲ್ಲಿ ಜನರು ಹಣ ತೊಡಗಿಸುತ್ತಿರುವುದನ್ನು ಇದು ಸ್ಪಷ್ಟವಾಗಿ ಹೇಳುತ್ತಿದೆ.

ಭಾರತ್ ಡೈನಾಮಿಕ್ಸ್

ಬ್ರೋಕರೇಜ್ ಮಾತು

ಕೇಂದ್ರ ರಕ್ಷಣಾ ಸಚಿವಾಲಯದ ಅಧೀನದಲ್ಲಿರುವ ಕ್ಷಿಪಣಿ, ಮದ್ದುಗುಂಡು ತಯಾರಿಕಾ ಕಂಪನಿ ಭಾರತ್ ಡೈನಾಮಿಕ್ಸ್ ಲಿಮಿಟೆಡ್‌ನ ಷೇರು ಮೌಲ್ಯವು ₹1,900ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 30ರಷ್ಟು ಏರಿಕೆ ದಾಖಲಿಸಿದೆ. ಕಾರ್ಯಾದೇಶದಲ್ಲಿ ಹೆಚ್ಚಳ ಮತ್ತು ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಗಳು ಸುಧಾರಿಸಿರುವುದು ವರಮಾನ ಹೆಚ್ಚಳಕ್ಕೆ ಕಾರಣವಾಗಿ ಒದಗಿಬಂದಿವೆ. ಕಾರ್ಯಾದೇಶಗಳ ಮೊತ್ತ ₹23,300 ಕೋಟಿಯಷ್ಟಾಗಿದ್ದು, ಮುಂದಿನ ತ್ರೈಮಾಸಿಕಗಳಲ್ಲಿ ಅವುಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುವುದು ಸುಧಾರಿಸಲಿದೆ ಎಂದು ಕೂಡ ಬ್ರೋಕರೇಜ್ ಸಂಸ್ಥೆಯು ಹೇಳಿದೆ.

2024-25ರಿಂದ 2027-28ರ ಆರ್ಥಿಕ ವರ್ಷದವರೆಗೆ ಕಂಪನಿಯ ತೆರಿಗೆ ನಂತರದ ಲಾಭದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 51ರಷ್ಟು ಇರಲಿದೆ. ಷೇರು ಹೂಡಿಕೆ ಮೇಲಿನ ಗಳಿಕೆ (ಆರ್‌ಒಇ) ಮತ್ತು ತೊಡಗಿಸಿದ ಬಂಡವಾಳಕ್ಕೆ ಪ್ರತಿಯಾಗಿ ಲಾಭ (ಆರ್‌ಒಸಿಇ) ಶೇ 25ರಷ್ಟಿರಲಿದೆ ಎಂದು ಅಂದಾಜಿಸಿದೆ.

ಬುಧವಾರದ ವಹಿವಾಟಿನ ಅಂತ್ಯಕ್ಕೆ ಭಾರತ್ ಡೈನಾಮಿಕ್ಸ್ ಷೇರಿನ ಮೌಲ್ಯವು ₹1590.70 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Prose
Gentleman of Rio en Medio

4.Study the picture and describe the old man's orchard by using the words given below:
(a small stream, unpleasant, fruit bearing trees, old fashioned house, attractive)

Ans: The old man's orchard was big and beautiful. A small stream was flowing through the orchard. The house was unpleasant to look because it was old fashioned. Many trees were fruit-bearing trees. A number of fruits were more on the tree, so the orchard is attractive.

5. In paragraph 2 the words "who" and "these" refer to ______ and ______ respectively.

Ans: The words 'who' and 'these' refer to senator and people in the mountains.

6. Look at the picture and draw your inference about the old man's appearance and hissocial/living condition.



Ans: The old man was strong and disciplined. Though the dress was old and tom, he wore that to follow his tradition. He had social respect in the Community because he was a highly principled man. He loved his innumerable kins. His appearance was elegant

Share your responses

7.The word "innumerable kin" means that the old man had a number of

a) children **b) trees in his orchardc.**
c) relativesd. **d) followerse.**
e) canes.

Ans: (a) Children / (d) followers

Expln:- "Kin" refers to family members or relatives, and "innumerable" means too many to count, so 'innumerable kin" implies a very large family network.

Key point: "Children" could be considered a subset of "kin," but "innumerable" usually suggests a wider range beyond just children.

9. How did the old man the people who had been waiting for him?

Ans: The old man bowed to all the people who had been waiting for him.

10. The old man removed his hat and gloves carefully.

a. Was he afraid that they would get spoiled?
b. Whose style did it remind the writer of?

Ans:(a) No, he was not afraid but it was his practice

Ans:(b) The old man's style was similar to that of Charlie Chaplin.

Share your Responses:

Refer to Text(Part-I) Page No. 48 & 49:

1. In the meeting of the old man and the Americans, they talked about rain and the old man'slarge family. It was

a. to mock his large family
b. to break the ice
c. a custom of the Americans
d. to make themselves comfortable
e. to prepare everyone for the main talk
f. to make everyone know that it had not rained in that area

(You may think more than one among the above are appropriate. If so, tick them)

Ans: (d) to make themselves comfortable.

2. Why do you think the story teller spoke Spanish?

Ans: He was an American and knew Spanish. The man was from Mexico and he understood it.

3. The story teller offered the old man almost the double of what he had quoted earlier. Why?

Ans: Because he found out that the old man had more than eight acres of land. But the pact was agreed for only eight acres.

4. What was the reaction of the old man to the story teller's offer?

Ans:The old man reacted in a very strange way. One would even describe it as a stupid way. Instead of feeling happy that he was getting double of what he had earlier thought he would get, he refused to take the extra money saying that he did not like being insulted. His argument was that he had agreed to sell the property for twelve hundred dollars and offering more than that to him was an insult to him.

5.We respect elders in many ways. For example.

a. We shake hands
b. We touch their feet
c. ______
d. ______
e. ______
f. ______

Ans:
c. We salute them.
d. We greet theme.
e. We bend down.
f. We garland them and we smile them with respect

6.The storyteller respected the old man by ______
(Fill in the blanks with appropriate words)

Ans :Shaking his hand.

7.After the findings of the engineer, the offer was doubled for the old man's land.

a. Did the old man raise the rate?
b. Did the storyteller offer more?

Ans: (Contd........)

Biology

PRINCIPLES OF INHERITANCE AND VARIATION

21. Which are the different types of crossing over?

Ans:- The different types of crossing over are – single cross-over, double cross-over and multiple cross-over.

22. What is meant by Sex linked inheritance in humans?

Ans:- The inheritance of the body characters controlled by genes present on the sex chromosomes is known as sex-linked inheritance.

23. Give some examples for Sex linked inheritance.

Ans:- Inheritance of eye colour in Drosophila, inheritance of colour blindness and haemophilia in human beings are some of the good examples for sex linked inheritance.

24. State the law of Segregation.

Ans:- The law of Segregation states that when a pair of contrasting factors or allelomorphs or genes are brought together in a hybrid (heterozygote), these factors do not blend or mix-up but simply associate themselves and remain together and separate at the time of gamete formation.

25. Explain the law of segregation briefly?

Ans:- Alleles with respect to a pair of characters remain associated in pairs in all the cells of an organism. But during gamete formation the factors undergo separation or segregation.

26. Give an example for the law of segregation?

Ans:- An example for the law of segregation is - Suppose a tall plant with a pair of alleles Tt produces about 100 gametes during reproduction, 50 gametes receive the gene T and the other 50 gametes receive the gene t. Thus, segregation takes place in equal ratios with reference to any given character and so the gametes maintain purity.

Hence this law is also, called the Law of purity of gametes.

27. Explain the Law of independent assortment briefly?

Ans:- In an organism with many characters, the genes for different characters undergo segregation independently. This means, the separation of genes for a character does not interfere in the separation of genes for the other character. Hence, they assort independently. This is possible because the genes for various characters are located on different loci or in different homologous chromosomes.

29. Briefly mentioned the contribution of T.H. Morgan in genetics.

Ans:- T.H. Morgan (1866-1945) was an American genetist who was awarded Nobel Prize in 1933 for his work.

(1) Morgan found fruitfly Drosophila melanogaster to be better material for experiments on genetics as it was easy to rear and multiply it throughout the year.
(2) He estabilished the presence of genes over the chromosomes.
(3) Morgan estabilished the principle of linkage and crossing over.
(4) He discovered sex linkage and criss-cross inheritance.
(5) He developed the technique of chromosome mapping.
(6) He observed mutations.
(7) In 1926, Morgan wrote a book "The theory of Gene".

28. Mention some differences between Monohybird and Dihybird.

Ans:-

Monohybird	*Dihybird*
It is a cross made between individuals having contrasting traits in order to study the inheritance of a pair of alleles.	It is a cross made between individuals having contrasting traits in order to study the inheritance of a two pairs of alleles.
Phenotypic monohybrid ratio in F_2 generation is 3: 1.	Phenotypic dihybird ratio is 9 : 3 : 3 : 1.
Genotypic monohybrid ratio in F_2 generation is 1 : 2 : 1.	Genotypic mono-hybrid ratio in F_2 is 1:2:2:4:2:2:1:1:1.

30. Using Punnet square, work out the distribution of phenotypic features in first filial generation after a cross between homozygous female and a heterozygous male for single locus.

Ans:- Homozygous Female WW
Heterozygous Male Ww



All with dominate trait, 50% with homozygous and 50% with heterozygous nature.

(Contd.....)

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

‘ಪಂಪ್ಡ್ ಸ್ಟೋರೇಜ್’ಗೆ ಆಕ್ಷೇಪ

ರಾಜ್ಯ ಸರ್ಕಾರದಿಂದ ವಿವರಣೆ ಕೇಳಿದ ಕೇಂದ್ರ ಅರಣ್ಯ ಸಲಹಾ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿರುವ ಕೇಂದ್ರ ಅರಣ್ಯ ಸಚಿವಾಲಯದ ಅಧೀನದ ಅರಣ್ಯ ಸಲಹಾ ಸಮಿತಿಯು, ಯೋಜನೆಯ ಸಾಧಕ ಬಾಧಕಗಳ ಬಗ್ಗೆ ರಾಜ್ಯ ಸರ್ಕಾರದಿಂದ ವಿವರಣೆ ಕೇಳಿದೆ.

ಶರಾವತಿ ಅಭಯಾರಣ್ಯದಲ್ಲಿ 2000 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಗೆ ಷರತ್ತುಬದ್ಧ ಅನುಮತಿ ಕೊಟ್ಟಿದ್ದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯು, ಅರಣ್ಯ ಸಲಹಾ ಸಮಿತಿಯಿಂದಲೂ ಒಪ್ಪಿಗೆ ಪಡೆಯುವಂತೆ ನಿರ್ದೇಶನ ನೀಡಿತ್ತು. ಪಂಪ್ಡ್ ಸ್ಟೋರೇಜ್ ಘಟಕ ನಿರ್ಮಾಣಕ್ಕೆ 133.81 ಎಕರೆ ಅರಣ್ಯ ಬಳಕೆ ಮಾಡಲಾಗುತ್ತದೆ ಹಾಗೂ 16,041 ಮರಗಳನ್ನು ಹನನ ಮಾಡಲಾಗುತ್ತದೆ.

ಯೋಜನೆಯ ಪ್ರಸ್ತಾವದಲ್ಲಿ ಪ್ರಮುಖ ಹಾಗೂ ನಿರ್ಣಾಯಕ ವಿವರಗಳೇ ಇಲ್ಲ ಎಂದು ಅಭಿಪ್ರಾಯಪಟ್ಟಿರುವ ಸಮಿತಿ, ‘ಯೋಜನೆಯ ಒಟ್ಟು ಪರಿಣಾಮ, ಜಲಾನಯನ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಮತ್ತು ಮುಂಬರುವ ಜಲವಿದ್ಯುತ್ ಯೋಜನೆಗಳು, ಜಲಾನಯನ ಪ್ರದೇಶದ ಧಾರಣಾ ಶಕ್ತಿ ಸಾಮರ್ಥ್ಯದ ಬಗ್ಗೆ ಪ್ರಸ್ತಾವದಲ್ಲಿ ಬೆಳಕು ಚೆಲ್ಲಿಲ್ಲ. ಹೀಗಾಗಿ, ಕರ್ನಾಟಕ ವಿದ್ಯುತ್ ನಿಗಮವು ಪರಿಸರ ಪರಿಣಾಮ ಮೌಲ್ಯಮಾಪನದ ಭಾಗವಾಗಿ ಈ ಎರಡೂ ಅಧ್ಯಯನಗಳನ್ನು ಕೈಗೆತ್ತಿಕೊಳ್ಳುವುದು ಸೂಕ್ತ’ ಎಂದು ಹೇಳಿದೆ.



‘ಕೇಂದ್ರ ಜಲಶಕ್ತಿ ಸಚಿವಾಲಯದ ಅಧೀನದ ನೀರು ಹಾಗೂ ಇಂಧನ ಸಲಹಾ ಸಂಸ್ಥೆಯು ಈ ಹಿಂದೆ ನಡೆಸಿದ ಪರಿಸರ ಪರಿಣಾಮಗಳ ಮೌಲ್ಯಮಾಪನ ವರದಿಯು ಸಮಗ್ರವಾಗಿಲ್ಲ. ಯೋಜನೆಯಿಂದ ಸಸ್ಯ ಸಂಪತ್ತು ಹಾಗೂ ಕಾಡುಪ್ರಾಣಿಗಳ ಮೇಲಾಗುವ ಪರಿಣಾಮದ ಬಗ್ಗೆ ಪ್ರಸ್ತಾಪಿಸಿಲ್ಲ’ ಎಂದು ಸಮಿತಿ ತಿಳಿಸಿದೆ.

ಇದಲ್ಲದೆ, 12.3 ಕಿ.ಮೀ ಭೂಗತ ರಸ್ತೆ ನಿರ್ಮಿಸುವ ಮೂಲಕ 12,000 ಮರಗಳನ್ನು ಕಡಿಯುವುದನ್ನು ತಪ್ಪಿಸಲು ಪರ್ಯಾಯ ಮಾರ್ಗಗಳನ್ನು ಅನ್ವೇಷಿಸುವಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ನೀಡಿರುವ ಸೂಚನೆಯನ್ನು ಪಾಲಿಸುವಂತೆ ರಾಜ್ಯ ಸರ್ಕಾರಕ್ಕೆ ಸಮಿತಿ ಸೂಚಿಸಿದೆ.

‘ಅರಣ್ಯ ಕಾಯ್ದೆಯ ಉಲ್ಲಂಘನೆ’

ಅರಣ್ಯ ನಾಶಕ್ಕೆ ಕಾರಣವಾಗುವ ಈ ಯೋಜನೆಗೆ ಒಪ್ಪಿಗೆ ಕೊಡಬಾರದು ಎಂದು ಅರಣ್ಯ ಸಚಿವಾಲಯದ ಪ್ರಾದೇಶಿಕ ಕಚೇರಿಯ ಉಪ ಅರಣ್ಯ ಮಹಾನಿರ್ದೇಶಕರ (ಡಿಐಜಿಎಫ್) ಸ್ಥಳ ಪರಿಶೀಲನಾ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು. ಈ ವರದಿಯಲ್ಲಿನ ಅಂಶಗಳನ್ನು ಉಲ್ಲೇಖಿಸಿರುವ ಸಮಿತಿಯು, ಗೇರುಸೊಪ್ಪದಿಂದ ತಳಕೊಪ್ಪಕ್ಕೆ ನಿರ್ಮಿಸಲಾಗಿರುವ ವಿದ್ಯುತ್ ಪ್ರಸರಣಾ ಮಾರ್ಗವು 1980ರ ಅರಣ್ಯ ಕಾಯ್ದೆಯ ಉಲ್ಲಂಘನೆ ಎಂದು ಬೊಟ್ಟು ಮಾಡಿದೆ.

ಧಾರವಾಡದಲ್ಲಿ ಎಸ್‌ಇಜೆಡ್

ನವದೆಹಲಿ: ಧಾರವಾಡದ ಇಟ್ಟಿಗಟ್ಟಿಯಲ್ಲಿ ಎಲೆಕ್ಟ್ರಾನಿಕ್ ಘಟಕಗಳಿಗಾಗಿ ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್) ಸ್ಥಾಪನೆಗೆ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಎಸ್‌ಇಜೆಡ್ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರಿಗೆ ಮನವಿ ಸಲ್ಲಿಸಿದ್ದರು.

ಚಿಟಿಕೆ ಸುದ್ದಿ

ರಾಮಕೃಷ್ಣ ಮರಾಠೆಗೆ ಪುಸ್ತಕ ಬಹುಮಾನ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ ನೀಡುವ 2025ನೇ ಸಾಲಿನ ಪುಸ್ತಕ ಬಹುಮಾನಕ್ಕೆ ನಾಟಕಕಾರ ರಾಮಕೃಷ್ಣ ಮರಾಠೆ ಅವರ ‘ರಂಗಭೂಮಿಯ ಸ್ವಾತಂತ್ರ್ಯ ಸಂಗ್ರಾಮ’ ಕೃತಿ ಆಯ್ಕೆಯಾಗಿದೆ.

ಈ ಬಹುಮಾನವು ₹25 ಸಾವಿರ ನಗದು ಒಳಗೊಂಡಿದೆ. ರಂಗಪಠ್ಯಗಳ ಹೊರತಾಗಿ ಕನ್ನಡ ರಂಗಭೂಮಿಯ ಬಗ್ಗೆ ಬರಹಗಳನ್ನು ಮತ್ತು ಪುಸ್ತಕಗಳನ್ನು ಉತ್ತೇಜಿಸುವ ಸಲುವಾಗಿ ರಂಗಭೂಮಿ ಕುರಿತಾದ ಪುಸ್ತಕವೊಂದಕ್ಕೆ ಬಹುಮಾನ ನೀಡಲಾಗುತ್ತಿದೆ.

ಈ ಪ್ರಶಸ್ತಿ ಆಯ್ಕೆ ಸಮಿತಿಯು ಎಂ.ಎಸ್.ಆಶಾದೇವಿ, ಬಿ.ಆರ್.ವೆಂಕಟರಮಣ ಐತಾಳ್ ಮತ್ತು ಜಯದೇವಿ ಗಾಯಕವಾಡ ಅವರನ್ನು ಒಳಗೊಂಡಿದೆ. ಅಕ್ಟೋಬರ್ ಮೊದಲ ವಾರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗುವುದು ಎಂದು ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ತಿಳಿಸಿದ್ದಾರೆ.

ವೃತ್ತಿಪರ ಕೋರ್ಸ್: ಪರಿಷ್ಕೃತ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಮತ್ತಿತರ ವೃತ್ತಿಪರ ಕೋರ್ಸ್‌ಗಳಿಗೆ ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾದವರಿಗೆ ಛಾಯ್ಸ್ ದಾಖಲಿಸಲು ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಿದ್ದು, ನಿಗದಿತ ಅವಧಿಯಲ್ಲಿ ಶುಲ್ಕ ಪಾವತಿಸಿ ಕಾಲೇಜಿನಲ್ಲಿ ಪ್ರವೇಶ ಪಡೆಯುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಹಕ ನಿರ್ದೇಶಕ ಎಚ್.ಪ್ರಸನ್ನ ಸಲಹೆ ನೀಡಿದ್ದಾರೆ.

ಎಂಜಿನಿಯರಿಂಗ್, ಕೃಷಿವಿಜ್ಞಾನ, ಪಶುವೈದ್ಯಕೀಯ, ಬಿ-ಫಾರ್ಮ, ಡಿ-ಫಾರ್ಮ, ಯೋಗ ಮತ್ತು ನ್ಯಾಚುರೋಪಥಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್, ಆರ್ಕಿಟೆಕ್ಚರ್, ಬಿಎಸ್‌ಸಿ ನರ್ಸಿಂಗ್, ಹೋಮಿಯೋಪಥಿ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿರುವವರು ಛಾಯ್ಸ್ ದಾಖಲಿಸಲು ಆಗಸ್ಟ್ 14ರ ಬೆಳಿಗ್ಗೆ 11 ಗಂಟೆವರೆಗೆ ಅವಕಾಶ ನೀಡಲಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶುಲ್ಕ ಪಾವತಿಗೆ ಆಗಸ್ಟ್ 14ರಂದು ಸಂಜೆ 4ರವರೆಗೆ ಅವಕಾಶ ನೀಡಲಾಗಿದೆ. ಕಾಲೇಜಿಗೆ ವರದಿ ಮಾಡಿಕೊಳ್ಳಲು ಆಗಸ್ಟ್ 15 ಕೊನೆ ದಿನ. ಈ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ದಿನಾಂಕ ಕೂಡ ವಿಸ್ತರಿಸುವುದಿಲ್ಲ ಎಂದು ಅವರು ಎಚ್ಚರಿಸಿದ್ದಾರೆ.

ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿರುವವರಿಗೆ ಛಾಯ್ಸ್ ದಾಖಲಿಸಲು ಆಗಸ್ಟ್ 14ರಂದು ಮಧ್ಯಾಹ್ನ 1 ಗಂಟೆಯಿಂದ ಲಿಂಕ್ ತೆರೆಯಲಾಗುವುದು. ಆಗಸ್ಟ್ 16ರವರೆಗೆ ಛಾಯ್ಸ್ ದಾಖಲಿಸಬಹುದು. ಶುಲ್ಕ ಪಾವತಿಸಲು ಆಗಸ್ಟ್ 18 ಹಾಗೂ ಕಾಲೇಜಿಗೆ ವರದಿ ಮಾಡಿಕೊಳ್ಳಲು ಆಗಸ್ಟ್ 19 ಕೊನೆ. ಛಾಯ್ಸ್-1 ಆಯ್ಕೆ ಮಾಡಿದವರು ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಿ, ಸೀಟು ಖಾತರಿಯ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ಪ್ರವೇಶ ಪ್ರಕ್ರಿಯೆಗೆ ಸಮಯದ ಅಭಾವ ಇರುವ ಕಾರಣ ರಜಾ ದಿನಗಳಂದು ಕಾಲೇಜುಗಳು ಕಾರ್ಯನಿರ್ವಹಿಸಬೇಕು ಎಂದು ಪ್ರಸನ್ನ ಅವರು ಸಲಹೆ ನೀಡಿದ್ದಾರೆ.

ನೂರಾರು ಎಕರೆ ಬೆಳೆ ಜಲಾವೃತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ವಿಜಯಪುರ, ವಿಜಯನಗರ, ಉತ್ತರ ಕನ್ನಡ ಸೇರಿ ವಿವಿಧ ಜಿಲ್ಲೆಗಳಲ್ಲಿ ಬುಧವಾರ ಉತ್ತಮ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಕಾರವಾರ ಸೇರಿ ಕರಾವಳಿ ತಾಲ್ಲೂಕಿನಾದ್ಯಂತ, ಶಿರಸಿ ಸೇರಿ ಮಲೆನಾಡು ಭಾಗದಲ್ಲಿ ಗಾಳಿ ಸಹಿತ ಮಳೆ ಬೀಳುತ್ತಿದೆ. ಹೆಚ್ಚಿನ ಕಡೆ ತುಂತುರು ಮಳೆ ಇದೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ವಿವಿಧೆಡೆ ಸುರಿದ ಮಳೆಗೆ ನೂರಾರು ಎಕರೆ ಬೆಳೆ ಜಲಾವೃತಗೊಂಡಿದೆ. ಕೆಲ ಹಳ್ಳಿಗಳ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ.

ನಿಧನ ವಾರ್ತೆ

ಎಸ್.ಮುರಳಿ ಮೋಹನ್



ಮುರಳಿ ಮೋಹನ್

ಬೆಂಗಳೂರು: ಚಲನಚಿತ್ರ ನಿರ್ದೇಶಕ, ಸಂಭಾಷಣೆಕಾರ ಮುರಳಿ ಮೋಹನ್ (57) ಬುಧವಾರ ನಿಧನರಾದರು. ಕೋಲಾರ ಜಿಲ್ಲೆಯ ಕೆಜಿಎಫ್‌ನವರಾದ ಇವರು ಬೆಂಗಳೂರಿನಲ್ಲಿ ನೆಲಸಿದ್ದರು.

ಮೂತ್ರಪಿಂಡ (ಕಿಡ್ನಿ) ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಕೆಲ ದಿನಗಳ ಹಿಂದೆ ಜೆ.ಸಿ. ರಸ್ತೆಯ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಶಿವರಾಜ್‌ಕುಮಾರ್ ಅಭಿನಯದ ‘ಸಂತ’, ರವಿಚಂದ್ರನ್ ನಟನೆಯ ‘ಮಲ್ಲಿಕಾರ್ಜುನ’, ಉಪೇಂದ್ರ ಅಭಿನಯದ ‘ನಾಗರಹಾವು’ ಸಿನಿಮಾಗಳನ್ನು ನಿರ್ದೇಶಿಸಿದ್ದರು. ಅವರಿಗೆ ಸಹೋದರ, ಸಹೋದರಿ ಇದ್ದಾರೆ.

‘ಪಿಎಸ್‌ಟಿ ಶಿಕ್ಷಕರಿಗೆ ಶೀಘ್ರ ಪದೋನ್ನತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಪೂರೈಸಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ (ಪಿಎಸ್‌ಟಿ) ಪದವೀಧರ ಪ್ರಾಥಮಿಕ ಶಿಕ್ಷಕರ ಹುದ್ದೆಗೆ (ಜಿಪಿಟಿ) ಪದೋನ್ನತಿ ನೀಡಲು ಮುಖ್ಯಮಂತ್ರಿ ಜತೆ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರ ಪ್ರಕಟಿಸಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಲು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಶಿಕ್ಷಕ ಮತ್ತು ಪದವೀಧರ ಕ್ಷೇತ್ರ ಪ್ರತಿನಿಧಿಸುವ ವಿಧಾನಪರಿಷತ್ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 2020ರವರೆಗಿನ ಖಾಲಿ ಹುದ್ದೆಗಳ ಭರ್ತಿಗೆ ವೇತನಾನುದಾನ ಅಧಿನಿಯಮಕ್ಕೆ ತಿದ್ದುಪಡಿ ತರಬೇಕಿದೆ. ಕಾರ್ಯಭಾರದ ಕೊರತೆ ಇರುವ ಅನುದಾನಿತ ಪದವಿ ಕಾಲೇಜುಗಳ ಉಪನ್ಯಾಸಕರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ನಿಯೋಜನೆ ಮಾಡುವ ಕುರಿತು ಈಗಾಗಲೇ ಸಮಿತಿ ನೇಮಿಸಲಾಗಿದೆ. ವರದಿ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪದೋನ್ನತಿ ಕುರಿತು ಇಲಾಖೆ ಸೂಕ್ತ ಕ್ರಮ ಕೈಗೊಂಡಿದೆ. ಈ ಕುರಿತು ಮುಖ್ಯಮಂತ್ರಿ ಸಮ್ಮತಿ ವ್ಯಕ್ತಪಡಿಸಿದ್ದಾರೆ. ಅಂತಿಮವಾಗಿ ಚರ್ಚೆ ನಡೆಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಸ್ನಾತಕೋತ್ತರ ಪದವಿ ಹೊಂದಿದ ಪ್ರೌಢಶಾಲಾ ಸಹ ಶಿಕ್ಷಕರಿಗೆ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲು ಪರೀಕ್ಷೆ ನಡೆಸಬೇಕು ಎಂಬ ನಿಯಮಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಹೊರಟ್ಟಿ, ‘ಇದು ನ್ಯಾಯ ಸಮ್ಮತವಲ್ಲ. ಈ ಬಗ್ಗೆ ಸಚಿವರು ಅಗತ್ಯ ಕ್ರಮ ವಹಿಸಬೇಕು’ ಎಂದು ಸೂಚಿಸಿದರು.

‘ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಬಿ.ಕಾಂ, ಬಿ.ಇಡಿ ಪದವೀಧರರನ್ನು ಪರಿಗಣಿಸಲು ನಿಯಮದಲ್ಲಿ ಅವಕಾಶ ಇಲ್ಲ. ಕಾನೂನಿಗೆ ತಿದ್ದುಪಡಿ ತರಬೇಕು’ ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಹೇಳಿದರು.

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ನಂ.42, ಎಂಸಿಎ ಹೌಸ್, ಮಿಲ್ಲರ್ಸ್ ರಸ್ತೆ, ಬೆಂಗಳೂರು - 560 001.
ಸಂಖ್ಯೆ: ಕೆಎಸ್‌ಎಂಸಿಎ/ಎಂಪ್ಯಾನೆಲ್‌ಮೆಂಟ್-ಬಿಎ/ಟೆಕ್ನಾಕ್/2025-26 ದಿನಾಂಕ: 14.08.2025

ಅರ್ಹತಾ ವಿವರ ಸಲ್ಲಿಸಲು ಆಹ್ವಾನ (RFQ)

ಕೆಎಸ್‌ಎಂಸಿಎ ಲಿಮಿಟೆಡ್, ವಿವಿಧ ಕಾರ್ಯಕ್ರಮಗಳಿಗೆ (ಇವೆಂಟ್ಸ್) ಸಂಬಂಧಿಸಿದ ಮತ್ತು ಮುದ್ರಣ ಕಾರ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರ್ವಹಿಸಲು ವ್ಯವಹಾರ ಸಹವರ್ತಿಗಳನ್ನಾಗಿ ಎಂಪ್ಯಾನೆಲ್‌ಮೆಂಟ್ ಮಾಡಿಕೊಳ್ಳಲು ಏಜೆನ್ಸಿಗಳ ಆಯ್ಕೆಗಾಗಿ ಏಜೆನ್ಸಿಗಳು/ಸಂಸ್ಥೆಗಳಿಂದ ಕೆಟಿಪಿಪಿ ಕಾಯ್ದೆ, 1999 ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹತಾ ವಿವರಗಳನ್ನು (RFQ) ಆಹ್ವಾನಿಸಿದೆ. ಆಸಕ್ತಿಯುಳ್ಳವರು RFQ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. RFQ ಸಲ್ಲಿಸಲು ಕಡೆಯ **ದಿನಾಂಕ: 31.08.2025ರಂದು ಸಂಜೆ 5.00 ಗಂಟೆವರೆಗೆ.** ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ RFQಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100
ದೂರವಾಣಿ: +91 80 2852 0261, ಫ್ಯಾಕ್ಸ್: +91 80 2852 0362
investors@infosys.com, www.infosys.com

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 (ನಿಯಮಾವಳಿಗಳು) ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದೆ ಏಳು ವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2018-19ರಲ್ಲಿ ಘೋಷಿಸಲಾದ ಮಧ್ಯಮಾವಧಿ ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಮೇಲೆ ಹೇಳಲಾದ ನಿಯಮಾವಳಿಗನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ನವೆಂಬರ್ 18, 2025** ರಂದು ವರ್ಗಾಯಿಸಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ನಿಯಮಾವಳಿಗನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವೆಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

1) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂ ರದ್ದಾಗುತ್ತವೆ.
2) **ಷೇರುಗಳನ್ನು ನೀವು ವಿದ್ಯುನ್ಮಾನ ರೂಪದಲ್ಲಿ ಹೊಂದಿದ್ದಿರೆ:** ಐಇಪಿಎಫ್ ಖಾತೆಗೆ ವರ್ಗವಾಗಲು ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ನವೆಂಬರ್ 15, 2025**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ತತ್ಸಂಬಂಧಿತ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ಕೊಡದೆ ಜಾರಿಮಾಡುತ್ತದೆ. ನಿಯಮಾವಳಿಗನುಸಾರ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ತತ್ಸಂಬಂಧಿತ ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಬಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ತಮ್ಮ ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ನಿಂದ ಮರಳಿ ಪಡೆಯಲು ಕಂಪನಿಯಿಂದ ಹಕ್ಕು ಪತ್ರ ಪಡೆದ ನಂತರ ಐಇಪಿಎಫ್‌ಗೆ ನಿಗದಿತ ಐಇಪಿಎಫ್-5 ನಮೂನೆಯಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ತಮ್ಮ ಷೇರುಗಳು ಹಾಗೂ ಲಾಭಾಂಶವನ್ನು ಪಡೆಯಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೇನಿಯಮ್ ಬಿಲ್ಡಿಂಗ್, ಟವರ್ ಬಿ, ಪ್ಲಾಟ್ ನಂ. 31-32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ, ರಂಗಾರೆಡ್ಡಿ, ತೆಲಂಗಾಣ, ಭಾರತ – 500032. ದೂರವಾಣಿ: +91 40 6716 2222 ಅಥವಾ ಇ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/-
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಆಗಸ್ಟ್ 13, 2025
ಬೆಂಗಳೂರು, ಭಾರತ

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ
(ಷೆಡ್ಯೂಲ್ಡ್ ಬ್ಯಾಂಕ್)
“ಉತ್ತುಂಗ”, ನಂ. 1, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018. ದೂರವಾಣಿ: 080-26983700/22976600/22976622, ಫ್ಯಾಕ್ಸ್: 080-26628521,
ಇ-ಮೇಲ್: admin@karnatakaapex.com, ವೆಬ್‌ಸೈಟ್: www.karnatakaapex.com

ಸಭಾಧ್ಯಕ್ಷರ ಭಾಷಣ

100ನೇ ವಾರ್ಷಿಕ ಮಹಾಸಭೆ
ಬುಧವಾರ, 13.08.2025

ಆತ್ಮೀಯ ಸಹಕಾರಿ ಬಂಧುಗಳೇ,

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು, ಇದರ 100ನೇ ವಾರ್ಷಿಕ ಮಹಾಸಭೆಗೆ ಬ್ಯಾಂಕಿನ ಆಡಳಿತ ಮಂಡಳಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ತಮ್ಮೆಲ್ಲರಿಗೂ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತೇನೆ.

- ಬ್ಯಾಂಕು ಸಹಕಾರ ತತ್ವ ಹಾಗೂ ಧ್ಯೇಯೋದ್ದೇಶಗಳನ್ನನುಸರಿಸಿ ಯಶಸ್ವಿಯಾಗಿ 110 ವರ್ಷಗಳ ಸೇವೆಯನ್ನು ಪೂರೈಸಿದ್ದು, ದೇಶದ ರಾಜ್ಯ ಸಹಕಾರಿ ಬ್ಯಾಂಕುಗಳ ಪೈಕಿ ಅತ್ಯುತ್ತಮ ಬ್ಯಾಂಕೆಂಬ ಪ್ರಶಂಸೆಗೆ ಪಾತ್ರವಾಗಿದೆ ಎಂಬುದನ್ನು ತಿಳಿಸಲು ಹರ್ಷಿಸುತ್ತೇನೆ.
- 2024-25 ನೇ ಸಾಲಿನಲ್ಲಿ ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆಯನ್ನು ಮಾಡಿದ್ದು, ದಿನಾಂಕ 31.03.2025 ರ ಅಂತ್ಯಕ್ಕೆ ರೂ. 14275.05 ಕೋಟಿಗಳ ಠೇವಣಿಯನ್ನು ಸಂಗ್ರಹಿಸಿದ್ದು, ದುಡಿಯುವ ಬಂಡವಾಳವು ರೂ. 35046.46 ಕೋಟಿಗಳಿಗೆ ಏರಿಕೆಯಾಗಿದ್ದು, ವರದಿ ಸಾಲಿನಲ್ಲಿ ರೂ.370.29 ಕೋಟಿಗಳಷ್ಟು ಲಾಭವನ್ನು ಗಳಿಸಿರುತ್ತದೆ. ಅದರಲ್ಲಿ ಶಾಸನಬದ್ಧ ಅವಕಾಶಗಳನ್ನು ಕಲ್ಪಿಸಿ ಹಾಗೂ ಆದಾಯ ತೆರಿಗೆಯನ್ನು ಪಾವತಿಸಿದ ನಂತರ ರೂ. 67.00 ಕೋಟಿಗಳ ಲಾಭವನ್ನು ಗಳಿಸಿರುತ್ತದೆ. ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣವು ದಿನಾಂಕ 31.03.2025 ರ ಅಂತ್ಯಕ್ಕೆ ಶೇ.3.12 ರಷ್ಟಿರುತ್ತದೆಂದು ತಿಳಿಸಲಿಚ್ಛಿಸುತ್ತೇನೆ.
- ಬ್ಯಾಂಕು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಪ್ರೋತ್ಸಾಹಧನ ನೀಡುತ್ತಿದೆ, ಅಲ್ಲದೇ ನಬಾರ್ಡ್‌ನಿಂದ ಕೃಷಿ ಸಾಲ ಪಡೆದು ಜಿಲ್ಲಾ ಬ್ಯಾಂಕುಗಳಿಗೆ ವಿತರಿಸಲಾಗುತ್ತಿದೆ.
- ಕೇಂದ್ರ ಸರ್ಕಾರವು ಗ್ರಾಮಾಂತರ ಮಟ್ಟದಲ್ಲಿ ಸಹಕಾರ ಸಂಘಗಳನ್ನು ಬಹುಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸಲು ಪ್ರಾರಂಭಿಸಿರುವ PACS-as-MSC ಯೋಜನೆಯನ್ನು ಬ್ಯಾಂಕಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.
- ಬ್ಯಾಂಕು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ತನ್ನ ಎಲ್ಲಾ 52 ಶಾಖೆಗಳು BSNL SDWAN (Fortinet) ನ್ನು, MPLS ನ್ನು, ಪ್ರಾಥಮಿಕ ಸಿಮ್ ಹಾಗೂ ಬ್ರಾಡ್‌ಬ್ಯಾಂಡ್‌ನ್ನು ಸುರಕ್ಷಿತ ಫೈರ್‌ವಾಲ್, ಸ್ವಿಚ್ ಮತ್ತು ನೆಟ್‌ವರ್ಕಿಂಗ್ ಭದ್ರತೆಯೊಂದಿಗೆ ದ್ವಿತೀಯ ಲಿಂಕ್ ಆಗಿ ಸಂಪರ್ಕಿಸುವ ಮೂಲಕ CBS ಅಡಿಯಲ್ಲಿದೆ. RBI ಮತ್ತು NABARD ಸೂಚನೆಯನ್ವಯ ಬ್ಯಾಂಕು IT / IS Policy, Cyber Security Policy, ಇತ್ಯಾದಿ ಪಾಲಿಸಿಗಳನ್ನು ಅಳವಡಿಸಿಕೊಂಡಿದೆ. ಸೈಬರ್ ಭದ್ರತಾ ನೀತಿಯ ಪ್ರಕಾರ ಬ್ಯಾಂಕ್ C-Soc & SIEM ನ್ನು ಜಾರಿಗೆ ತಂದಿರುವುದರ ಜೊತೆಗೆ ವಾಣಿಜ್ಯ ಬ್ಯಾಂಕುಗಳಲ್ಲಿ ನೀಡುತ್ತಿರುವ ಬಹುತೇಕ ಸೌಕರ್ಯಗಳನ್ನು ಗ್ರಾಹಕರಿಗೆ ಒದಗಿಸಲಾಗುತ್ತಿದೆ.
- UPI, IMPS, BBPS, AUA / KUA (AEPS), e-KYC, NFS (RuPay – ATM), E-com, PoS-Issuer, RTGS, NEFT, CCIL-NDS-Call-Om-TREPS, CTS, NACH, ABPS, DBT ಗಳು RBI ಗೆ ನೇರ ಸದಸ್ಯರಾಗಿರುತ್ತೇವೆ.
- ಬ್ಯಾಂಕು UPI (BHIM / Phonepay / Paytm / Googlepay / Amezonpay), IMPS, Mobile Banking ಲೈವ್ ಆಗಿದೆ. ಅಲ್ಲದೆ (ಮೂರನೇ ವ್ಯಕ್ತಿಯಿಂದ) MPOS ಸ್ವಾಧೀನವನ್ನು ಜಾರಿಗೆ ತರಲಾಗಿದೆ.
- ಬ್ಯಾಂಕು NPCI ರವ NFS ಇ-ಫ್ರಾಡ್ ರಿಸ್ಕ್ ಮ್ಯಾನೇಜ್‌ಮೆಂಟ್‌ನಲ್ಲಿ ಲೈವ್ ಆಗಿದೆ.
- ರಾಜ್ಯ ಸರ್ಕಾರಿ ನೌಕರರ ಅನುಕೂಲಕ್ಕಾಗಿ ಸದರಿಯವರ ಉಳಿತಾಯ ಖಾತೆಗಳನ್ನು ರಾಜ್ಯ ಸರ್ಕಾರದ ನಿರ್ದೇಶನದಂತೆ “ಸಮಗ್ರ ಸಂಬಳ ಪ್ಯಾಕೇಜ್ ಖಾತೆ”ಗಳನ್ನಾಗಿ ಪರಿವರ್ತಿಸಿ, ಸರ್ಕಾರಿ ನೌಕರರಿಗೆ ಸಂಬಳದ ಆಧಾರದ ಮೇಲೆ ಮೀರೆಳೆತ ಸಾಲ ಸೌಲಭ್ಯ, ವಿಮಾ ಸೌಲಭ್ಯ ಹಾಗೂ ಗೃಹ / ಅಡಮಾನ / ಕಂತು ಇನ್ನಿತರೆ ಸಾಲಗಳನ್ನು ಪಡೆದಲ್ಲಿ ರಿಯಾಯಿತಿ ಬಡ್ಡಿ ದರ ಸೇರಿದಂತೆ, ಪ್ರೊಸೆಸಿಂಗ್ ಚಾರ್ಜಸ್‌ನಲ್ಲಿಯೂ ರಿಯಾಯಿತಿ ನೀಡಲಾಗುತ್ತಿದೆ.
- 2025-26 ನೇ ಸಾಲಿನಲ್ಲಿ ಬ್ಯಾಂಕಿನ ಸ್ವಂತ ನಿಧಿಯನ್ನು ರೂ. 2890.00 ಕೋಟಿಗಳಿಗೆ ತಲುಪಲು, ಠೇವಣಾತಿಗಳನ್ನು ರೂ. 15800.00 ಕೋಟಿಗಳಿಗೆ ಹೆಚ್ಚಿಸಲು, ದುಡಿಯುವ ಬಂಡವಾಳವನ್ನು ರೂ. 36490.00 ಕೋಟಿಗಳಿಗೆ ಹೆಚ್ಚಳಗೊಳಿಸಲು ಹಾಗೂ ರೂ.80.00 ಕೋಟಿಗಳಷ್ಟು ನಿವ್ವಳ ಲಾಭಾಂಶವನ್ನು ಹೊಂದಲು ಯೋಜನೆಯನ್ನು ಹಮ್ಮಿಕೊಂಡಿದ್ದು, ಈ ನಿಟ್ಟಿನಲ್ಲಿ ಕಾರ್ಯಯೋಜನೆಯನ್ನು ರೂಪಿಸಲಾಗಿದೆ.
- 2024-25 ನೇ ಸಾಲಿನಲ್ಲಿ ವಿತರಿಸಲಾದ ರೂ. 14505.48 ಕೋಟಿ ಕೆ.ಸಿ.ಸಿ ಅಲ್ಪಾವಧಿ ಕೃಷಿ ಸಾಲಗಳ ಪೈಕಿ, ನಬಾರ್ಡ್ ಪುನರ್ಧನ ರೂ. 12339.06 ಕೋಟಿಗಳ ಜೊತೆಗೆ ಅಪೆಕ್ಸ್ ಬ್ಯಾಂಕು ತನ್ನ ಸ್ವಂತ ಬಂಡವಾಳದಿಂದ ರೂ.2166.42 ಕೋಟಿಗಳನ್ನು 28,46,256 ರೈತರಿಗೆ ಬಿಡುಗಡೆ ಮಾಡಲಾಗಿದೆ ಹಾಗೂ 2025-26 ನೇ ಸಾಲಿಗೂ ಇನ್ನೂ ಹೆಚ್ಚಿನ ಸಾಲವನ್ನು ನೀಡುವ ಗುರಿ ಹೊಂದಲಾಗಿದೆ.
- ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಕಾರದೊಂದಿಗೆ ಅಪೆಕ್ಸ್ ಬ್ಯಾಂಕು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.
- ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಗ್ರಾಮೀಣ ರೈತರು ಹಾಗೂ ದುರ್ಬಲ ವರ್ಗದವರ ಸಾಮಾಜಿಕ ಮತ್ತು ಆರ್ಥಿಕ ಏಳಿಗೆಗಾಗಿ ಹಲವಾರು ನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ. ಸಿದ್ದರಾಮಯ್ಯರವರಿಗೆ, ಕೇಂದ್ರ ಸರ್ಕಾರದ ಗೃಹ ಹಾಗೂ ಸಹಕಾರ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಅಮಿತ್ ಶಾ ರವರಿಗೆ, ರಾಜ್ಯದ ಉಪ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೆ, ಮಾಜಿ ಸಹಕಾರ ಸಚಿವರಾದ ಮಾನ್ಯ ಶ್ರೀ ಕೆ.ಎನ್.ರಾಜಣ್ಣರವರಿಗೆ ಹಾಗೂ ರಾಜ್ಯ ಸಚಿವ ಸಂಪುಟದ ಎಲ್ಲಾ ಸಚಿವರುಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂಜಯ್ ಬಿ. ಶೆಟ್ಟಣ್ಣನವರ್, ಭಾ.ಆ.ಸೇ. ರವರಿಗೆ, ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಕುಮಾರ್ ಟಿ.ಹೆಚ್.ಎಂ, ಭಾ.ಆ.ಸೇ. ರವರಿಗೆ, ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಡಾ. ಸುರೇಂದ್ರ ಬಾಬು ರವರಿಗೆ, ಭಾರತೀಯ ರಿಸರ್ವ್ ಬ್ಯಾಂಕಿಗೆ, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ, ರಾಜ್ಯ ಸಹಕಾರಿ ಬ್ಯಾಂಕುಗಳ ರಾಷ್ಟ್ರೀಯ ಒಕ್ಕೂಟಕ್ಕೆ, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಹಾಗೂ ವಿವಿಧ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ, ರಾಜ್ಯದ ರೈತ ಸಮುದಾಯಕ್ಕೆ, ಬ್ಯಾಂಕಿನ ಸಮಸ್ತ ಗ್ರಾಹಕರುಗಳಿಗೆ ಅವರುಗಳು ನೀಡುತ್ತಿರುವ ಬೆಂಬಲ, ಮಾರ್ಗದರ್ಶನ ಹಾಗೂ ಬ್ಯಾಂಕಿನ ಬಗ್ಗೆ ತೋರುತ್ತಿರುವ ಸದ್ಭಾವನೆಗಳಿಗೆ ನಾನು ಅಭಾರಿಯಾಗಿದ್ದೇನೆ.

- ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಸಂಪೂರ್ಣ ಸಹಕಾರ ಮತ್ತು ಬೆಂಬಲವನ್ನು ನೀಡಿದ ಬ್ಯಾಂಕಿನ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ, ಬ್ಯಾಂಕಿನ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ಬ್ಯಾಂಕಿನ 2024-25 ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯ ನಿರ್ವಹಿಸಿದ ಮೆ॥ ರಾವ್ & ಎಮ್ಮಾರ್‌ರವರಿಗೆ ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಜೈ ಕರ್ನಾಟಕ – ಜೈ ಸಹಕಾರ
ಶ್ರೀ ಬೆಳ್ಳಿಪ್ರಕಾಶ್,
ಅಧ್ಯಕ್ಷರು, ಕ.ರಾ.ಸ. ಅಪೆಕ್ಸ್ ಬ್ಯಾಂಕ್ ನಿ.,

ಬ್ಯಾಂಕು 110 ವರ್ಷಗಳ ಸುದೀರ್ಘ ಸೇವೆಯನ್ನು ಪೂರೈಸಿ, ರಾಜ್ಯದ ರೈತರ ಅಭಿವೃದ್ಧಿಗಾಗಿ ವಿವಿಧ ಕೃಷಿ ಸಾಲಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ವಿತರಿಸುತ್ತಿದೆ.

ವಿದೇಶದಲ್ಲಿ ವ್ಯಾಸಂಗ: 17ಕ್ಕೆ ವಿಶೇಷ ಮೇಳ

ಸರ್ಕಾರದ ಕಾರ್ಯಕ್ರಮದಲ್ಲಿ 50 ಜಾಗತಿಕ ವಿಶ್ವವಿದ್ಯಾಲಯಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶದಲ್ಲಿ ಶಿಕ್ಷಣ ಪಡೆಯುವುದು ಮಧ್ಯಮ ವರ್ಗದವರಿಗೆ ಗಗನ ಕುಸುಮ ಎನ್ನುವ ಸನ್ನಿವೇಶ ಬದಲಾಗುತ್ತಿದ್ದು, ಸಮಾಜದಲ್ಲಿನ ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಅಧ್ಯಯನ ಮಾಡಲು ಬೇಕಾದ ಅವಕಾಶವನ್ನು ಕಲ್ಪಿಸಿಕೊಡಲು ರಾಜ್ಯ ಸರ್ಕಾರ ಮುಂದಾಗಿದೆ.

ಲಕ್ಷಗಟ್ಟಲೇ ಖರ್ಚು ಮಾಡಿ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ಆಗದವರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ ಅಭಿವೃದ್ಧಿ ನಿಗಮ (ಕೆವಿಟಿಎಸ್‌ಡಿಸಿ) ವಿದೇಶಿ ಅಧ್ಯಯನ ಮೇಳವನ್ನು ಮೊದಲ ಬಾರಿಗೆ ಬೆಂಗಳೂರಿನಲ್ಲಿ ಹಮ್ಮಿಕೊಂಡಿದೆ ಎಂದು ಕೌಶಲಾಭಿವೃದ್ಧಿ, ಜೀವನೋಪಾಯ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆರ್ಥಿಕವಾಗಿ ದುರ್ಬಲವಾಗಿರುವ, ಮಧ್ಯಮ ವರ್ಗದ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಇಲ್ಲದೆ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ನಿಗಮವು ಆ.17ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ಲಲಿತ್ ಅಶೋಕ ಹೋಟೆಲ್‌ನಲ್ಲಿ ಮೇಳ ಆಯೋಜಿಸಿದೆ ಎಂದರು.

> ವಿದೇಶದಲ್ಲಿನ ವ್ಯಾಸಂಗ ಶ್ರೀಮಂತರಿಗೆ ಮಾತ್ರವಲ್ಲ ಎಲ್ಲರಿಗೂ ಕೈಗೆಟುಕಲಿದೆ. ವಿದೇಶದಲ್ಲಿ ಅಧ್ಯಯನ ಮಾಡಬೇಕೆಂಬ ಕನಸು ಕಂಡಿರುವವರಿಗೆ ವಿದೇಶಿ ಅಧ್ಯಯನ ಮೇಳ ಆಯೋಜಿಸಲಾಗಿದೆ
>
> **ಡಾ.ಶರಣ ಪ್ರಕಾಶ ಪಾಟೀಲ್,** ಸಚಿವ

ಉನ್ನತ ಶಿಕ್ಷಣ ಪಡೆಯಲು ಬಯಸುವವರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಆರಂಭಿಸಿರುವ ಹೊಸ ಯೋಜನೆಯಡಿ ಮೇಳ ಆಯೋಜಿಸಲಾಗಿದೆ. ಇದರಲ್ಲಿ 10ಕ್ಕೂ ಹೆಚ್ಚು ದೇಶಗಳ, 50ಕ್ಕೂ ಅಧಿಕ ಜಾಗತಿಕ ವಿಶ್ವವಿದ್ಯಾಲಯಗಳು ಭಾಗವಹಿಸುವ ನಿರೀಕ್ಷೆ ಇದೆ. ಈ ಸಂಸ್ಥೆಗಳು ವಿಶ್ವದ ಟಾಪ್ 500ರಲ್ಲಿ ಸ್ಥಾನ ಪಡೆದಿವೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ವಿದೇಶದಲ್ಲಿ ವ್ಯಾಸಂಗ ಮಾಡಲು ತೆರಳಿದರೆ ಅವರಿಗೆ ಬೆಂಬಲ ನೀಡುವುದು ನಮ್ಮ ಗುರಿ. ಈ ಅಧ್ಯಯನ ಮೇಳ ವಿದ್ಯಾರ್ಥಿಗಳಿಗೆ ಹೆಚ್ಚು ಆಪ್ತವಾಗಿರಲಿದೆ. ವಿಶ್ವವಿದ್ಯಾಲಯ, ಕೋರ್ಸ್‌ಗಳ ಆಯ್ಕೆ ಬಗ್ಗೆ ಯಾವುದೇ ಶುಲ್ಕವಿಲ್ಲದೇ ಉಚಿತ ಮಾರ್ಗದರ್ಶನ ನೀಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಎಕ್ಸ್‌ಪೋ ಹೇಗಿರಲಿದೆ?: ವಿಶ್ವವಿದ್ಯಾಲಯದ ಪ್ರತಿನಿಧಿಗಳೊಂದಿಗೆ ನೇರ ಸಂವಾದ, ವಿದ್ಯಾರ್ಥಿ ವೇತನ ಮತ್ತು ಅರ್ಹತಾ ಮೌಲ್ಯಮಾಪನ, ವೀಸಾ ಪ್ರಕ್ರಿಯೆ, ಹಣಕಾಸು ಯೋಜನೆ, ಆರೋಗ್ಯ ವಿಮೆ, ಭಾಷಾ ಪ್ರಾವೀಣ್ಯ ಮತ್ತು ಇತರೆ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ. ಆಸ್ಟ್ರೇಲಿಯ, ಬ್ರಿಟನ್, ಅಮೆರಿಕ, ಐರ್ಲೆಂಡ್, ನ್ಯೂಜಿಲೆಂಡ್ ಸೇರಿದಂತೆ ವಿವಿಧ ದೇಶಗಳ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು ಮೇಳದಲ್ಲಿ ಭಾಗವಹಿಸಲಿದ್ದಾರೆ.

ವಿದ್ಯಾರ್ಥಿ ವೇತನ ಲಭ್ಯ

ಬ್ಯಾಂಗೋರ್ ವಿಶ್ವವಿದ್ಯಾಲಯ (ಬ್ರಿಟನ್)	₹3 ಲಕ್ಷದಿಂದ ₹5 ಲಕ್ಷ
ಉತ್ತರ ಟೆಕ್ಸಾಸ್ ವಿಶ್ವವಿದ್ಯಾಲಯ (ಅಮೆರಿಕ)	₹8 ಲಕ್ಷದಿಂದ ₹10 ಲಕ್ಷ
ಜೇಮ್ಸ್ ಕುಕ್ ವಿಶ್ವವಿದ್ಯಾಲಯ (ಆಸ್ಟ್ರೇಲಿಯ)	₹8 ಲಕ್ಷದಿಂದ ₹10 ಲಕ್ಷ
ಕರ್ಟಿನ್ ವಿಶ್ವವಿದ್ಯಾಲಯ (ಸಿಂಗಪುರ)	₹5 ಲಕ್ಷ
ಮುರ್ಡೋಕ್ ದುಬೈ (ಅಮೆರಿಕ)	₹5 ಲಕ್ಷ
ಜಿಐಎಸ್‌ಎಂಎ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ (ಜರ್ಮನಿ)	₹10 ಲಕ್ಷ

ಭಾಗವಹಿಸುವುದು ಹೇಗೆ?

ಮೇಳದಲ್ಲಿ ಭಾಗವಹಿಸಲು http://studyabroad.ksdckarnataka.com ನಲ್ಲಿ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ 7338674791, 7338674792, 7338674794, 7338674798 ಸಂಪರ್ಕಿಸಬಹುದು.

ಸುದ್ದಿ 2 ನಿಮಿಷ

ದರ್ಶನ್ ಜಾಮೀನು ಭವಿಷ್ಯ ಇಂದು

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಅವರಿಗೆ ನಿಯಮಿತ ಜಾಮೀನು ನೀಡಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯ ಕುರಿತು ಸುಪ್ರೀಂ ಕೋರ್ಟ್ ಗುರುವಾರ ತನ್ನ ತೀರ್ಪು ಪ್ರಕಟಿಸಲಿದೆ.

ಆಗಸ್ಟ್ 14ರಂದು ಬೆಳಿಗ್ಗೆ 10.30ಕ್ಕೆ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠವು ತೀರ್ಪು ನೀಡಲಿದೆ.

ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್ ಪ್ರಕಾರ, ನ್ಯಾಯಮೂರ್ತಿ ಮಹಾದೇವನ್ ಪೀಠದ ಪರವಾಗಿ ತೀರ್ಪು ಪ್ರಕಟಿಸುವರು.

ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, ವಕೀಲರಾದ ಅನಿಲ್ ಸಿ. ನಿಶಾನಿ ಮತ್ತು ಡಿ.ಎಲ್. ಚಿದಾನಂದ ಅವರ ಮೂಲಕ ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ತೀರ್ಪನ್ನು ನ್ಯಾಯಾಲಯ ಜುಲೈ 24ರಂದು ಕಾಯ್ದಿರಿಸಿತ್ತು.

ದರ್ಶನ್ ಮತ್ತು ಇತರೆ ಆರು ಆರೋಪಿಗಳಿಗೆ ಜಾಮೀನು ನೀಡಿರುವ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿತ್ತು. 'ಆದೇಶ ಹೊರಡಿಸಿದ ರೀತಿ ನೋಡಿದರೆ ಇದು ಖುಲಾಸೆಗೊಳಿಸುವ ಪ್ರಕರಣ ಎಂದು ನಿರ್ಧರಿಸಿದಂತೆ ಕಾಣುತ್ತಿದೆ' ಎಂದು ಟೀಕಿಸಿತ್ತು.

ಜುಲೈ 17ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ಪೀಠವು, 'ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ತನ್ನ ವಿವೇಚನಾ ಅಧಿಕಾರವನ್ನು ಬಳಕೆ ಮಾಡಿರುವ ರೀತಿಯು ಸ್ವಲ್ಪವೂ ಒಪ್ಪುವಂತಿಲ್ಲ' ಎಂದು ಹೇಳಿತ್ತು.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ 47 ವರ್ಷದ ದರ್ಶನ್ ಅವರನ್ನು 2024ರ ಜೂನ್ 11ರಂದು ಬಂಧಿಸಲಾಗಿತ್ತು.

ಪ್ರಚೋದನಕಾರಿ ಹೇಳಿಕೆ: ಯತ್ನಾಳ ವಿರುದ್ಧ ಎರಡು ಕಡೆ ಎಫ್‌ಐಆರ್

ಕಲಬುರಗಿ: 'ಮುಸ್ಲಿಂ ಯುವತಿಯರನ್ನು ಮದುವೆಯಾಗುವ ಹಿಂದೂ ಯುವಕರಿಗೆ ₹5 ಲಕ್ಷ ನೀಡುವೆ' ಎಂದು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ' ಎಂಬ ಆರೋಪದಡಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಇಲ್ಲಿನ ರೋಜಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶಾಸಕ ಯತ್ನಾಳ ಹೇಳಿಕೆ ಒಂದು ಸಮುದಾಯವನ್ನು ಪ್ರಚೋದಿಸುವಂತಿದೆ. ಕಾನೂನು ಸುವ್ಯವಸ್ಥೆ ಸಮಸ್ಯೆ ಸೃಷ್ಟಿಸುವಂತಿದೆ" ಎಂದು ಆರೋಪಿಸಿ ಕಲಬುರಗಿಯ ಖಮರ್ ಕಾಲೊನಿಯ ಖಿದ್ಮತ್-ಎ-ಮಿಲ್ಲತ್ ಕಮಿಟಿಯ ಅಧ್ಯಕ್ಷ ಖಮರ್ ಜುನೈದ್ ಖುರೇಶಿ ಅವರು ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಕೊಪ್ಪಳದಲ್ಲಿ ಮುಸ್ಲಿಂ ಯುವಕನಿಂದ ಕೊಲೆಯಾದ ಗವಿಸಿದ್ಧಪ್ಪ ನಾಯಕ ಅವರ ಮನೆಗೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಯತ್ನಾಳ ಅವರು ಸುದ್ದಿಗಾರರೊಂದಿಗೆ ಮಾತನಾಡಿದಾಗ ಈ ಹೇಳಿಕೆ ನೀಡಿದ್ದರು.

ವಿಜಯಪುರ ವರದಿ: 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಹೇಳಿಕೆ ಕುರಿತು ಇಲ್ಲಿಯೂ ಮೊಕದ್ದಮೆ ದಾಖಲಾಗಿದೆ.

ವಿಜಯಪುರ ಮಹಾನಗರ ಪಾಲಿಕೆ ಮಾಜಿ ಸದಸ್ಯ ಮೈನುದ್ದೀನ್ ಬೀಳಗಿ ಅವರು ನಗರದ ಗಾಂಧಿಚೌಕಿ ಪೊಲೀಸ್ ಠಾಣೆಯಲ್ಲಿ ಬುಧವಾರ ಯತ್ನಾಳ ವಿರುದ್ಧ ದೂರು ದಾಖಲಿಸಿದ್ದಾರೆ.

ಚಿಟಿಕೆ ಸುದ್ದಿ

ರಾಜ್ಯಪಾಲರ ಹೆಸರಿನಲ್ಲಿ ನಕಲಿ ಖಾತೆ: ಎಫ್‌ಐಆರ್

ಬೆಂಗಳೂರು: ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ ತೆರೆಯಲಾಗಿದ್ದು, ಈ ಸಂಬಂಧ ಕೇಂದ್ರ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರು ನೀಡಿದ ದೂರು ಆಧರಿಸಿ ಭಾರತೀಯ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66(ಸಿ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಪೊಲೀಸರು ಹೇಳಿದರು.

'ರಾಜ್ಯಪಾಲರ ಹೆಸರಿನಲ್ಲಿ ತೆರೆದ ಫೇಸ್‌ಬುಕ್ ಖಾತೆಯಿಂದ ಕಿಡಿಗೇಡಿಯೊಬ್ಬ ಸಾರ್ವಜನಿಕರಿಗೆ ಸಂದೇಶ ಕಳುಹಿಸುತ್ತಿರುವುದು ಗೊತ್ತಾಗಿದೆ. ನಕಲಿ ಖಾತೆ ತೆರೆದಿರುವ ಆರೋಪಿಯನ್ನು ಪತ್ತೆಹಚ್ಚಿ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಕಕ್ಷಿದಾರೆ ಮೇಲೆ ಅತ್ಯಾಚಾರ: ವಕೀಲ ಸೆರೆ

ಕಲಬುರಗಿ: ವಿಚ್ಛೇದನ ಹಾಗೂ ಜೀವನಾಂಶ ಕೊಡಿಸುವಂತೆ ಬಂದ ಕಕ್ಷಿದಾರ ಮಹಿಳೆ ಮೇಲೆ ಅವರ ಪರ ವಾದಿಸುತ್ತಿದ್ದ ವಕೀಲನೇ ಅತ್ಯಾಚಾರ ಎಸಗಿದ ಆರೋಪದಡಿ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತ್ರಸ್ತೆ ದೂರಿನನ್ವಯ 55 ವಯಸ್ಸಿನ ವಕೀಲ ಮಲ್ಲಿಕಾರ್ಜುನ ನರೋಣಿ ಅವರನ್ನು ಬಂಧಿಸಲಾಗಿದೆ. ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತೆ 2019ರಲ್ಲಿ ಸೋದರ ಮಾವನನ್ನೇ ವರಿಸಿದ್ದರು. ವಿಚ್ಛೇದನ ಹಾಗೂ ಜೀವನಾಂಶ ಕೋರಿ 2021ರಲ್ಲಿ ಪ್ರಕರಣ ದಾಖಲಿಸಿದ್ದರು.

ಪರಮೇಶ್ವರ ಮೊಹಾಂತಿ ಚರ್ಚೆ

ಬೆಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ವಿಚಾರಣೆ ನಡೆಸುತ್ತಿರುವ ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರನ್ನು ಬುಧವಾರ ಭೇಟಿ ಮಾಡಿ ಅರ್ಧ ಗಂಟೆ ಚರ್ಚೆ ನಡೆಸಿದರು.

ಪ್ರಕರಣ ಕುರಿತು ಇದುವರೆಗೂ ನಡೆದ ಬೆಳವಣಿಗೆ ಹಾಗೂ ತನಿಖೆಯ ಕುರಿತು ಗೃಹ ಸಚಿವರ ಜತೆ ಮಾಹಿತಿ ಹಂಚಿಕೊಂಡರು. ಎಸ್‌ಐಟಿ ಸದಸ್ಯರೂ ಆದ ಡಿಐಜಿ ಎಂ.ಎನ್.ಅನುಚೇತ್ ಜತೆಗಿದ್ದರು. ಮೊಹಾಂತಿ ಜತೆಗಿನ ಚರ್ಚೆಯ ನಂತರ ಪರಮೇಶ್ವರ ಅವರು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ವಿವರ ನೀಡಿದರು ಎಂದು ಗೊತ್ತಾಗಿದೆ.

ಪುತ್ರಿ ಕೃತಿ ಆರೋಪ ಮುಕ್ತ, ಕೋರ್ಟ್‌ಗೆ 1,150 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಕೆ

ಓಂ ಪ್ರಕಾಶ್ ಕೊಲೆ: ಪತ್ನಿ ಕೃತ್ಯ ಸಾಬೀತು

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಓಂ ಪ್ರಕಾಶ್ (68) ಅವರ ಕೊಲೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಸಿಸಿಬಿ ಪೊಲೀಸರು, ನ್ಯಾಯಾಲಯಕ್ಕೆ 1,150 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಅವರ ಪತ್ನಿ ಪಲ್ಲವಿ ಪ್ರಕರಣದ ಪ್ರಮುಖ ಆರೋಪಿ ಎಂದು ಉಲ್ಲೇಖಿಸಲಾಗಿದೆ.

ಏಪ್ರಿಲ್ 20ರಂದು ಓಂ ಪ್ರಕಾಶ್ ಅವರ ಕೊಲೆ ನಡೆದಿತ್ತು. ಕೊಲೆ ಪ್ರಕರಣದ ಆರೋಪದಡಿ ಪಲ್ಲವಿ (ಮೊದಲ ಆರೋಪಿ) ಹಾಗೂ ಅವರ ಪುತ್ರಿ ಕೃತಿಕಾ (ಎರಡನೇ ಆರೋಪಿ) ವಿರುದ್ಧ ಎಚ್‌ಎಸ್‌ಆರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಏಪ್ರಿಲ್ 21ರಂದು ಪಲ್ಲವಿ ಅವರನ್ನು ಪೊಲೀಸರು ಬಂಧಿಸಿದ್ದರು. ಓಂ ಪ್ರಕಾಶ್ ಅವರ ಪುತ್ರ ಕಾರ್ತಿಕೇಶ್ ಅವರು ದೂರು ನೀಡಿದ್ದರು.

'ತಂದೆ ಓಂ ಪ್ರಕಾಶ್ ಅವರಿಗೆ ತಾಯಿ ಪಲ್ಲವಿ ಕೊಲೆ ಬೆದರಿಕೆ ಹಾಕುತ್ತಿದ್ದರು. ಹೆದರಿದ್ದ ತಂದೆ,

ಪಲ್ಲವಿ ಹಾಗೂ ಓಂ ಪ್ರಕಾಶ್

ಅವರ ಸಹೋದರಿ ಸರಿತಾ ಕುಮಾರಿ ಅವರ ಮನೆಯಲ್ಲಿ ವಾಸ ಇದ್ದರು. ನನ್ನ ತಂಗಿ ಕೃತಿ ಹೋಗಿ ಮರಳಿ ಮನೆಗೆ ಬರುವಂತೆ ಪೀಡಿಸಿ ಕರೆದುಕೊಂಡು ಬಂದಿದ್ದರು. ಮನೆಗೆ ಬಂದ ಮೇಲೆ ತಂದೆಯನ್ನು ಕೊಲೆ ಮಾಡಲಾಗಿದೆ' ಎಂದು ಕಾರ್ತಿಕೇಶ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

ನಂತರ, ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಿ ಹಿಂದಿನ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಆದೇಶಿಸಿದ್ದರು. ತನಿಖೆ ಪೂರ್ಣಗೊಳಿಸಿರುವ ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ಡಿಜಿಟಲ್ ಸಾಕ್ಷ್ಯಾಧಾರ ಒಳಗೊಂಡಂತೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

'ಕೊಲೆ ಪ್ರಕರಣದಲ್ಲಿ ಪುತ್ರಿಯ ಪಾತ್ರ ಕಂಡುಬಂದಿಲ್ಲ. ಆಕೆಯ ಹೆಸರನ್ನು ದೋಷಾರೋಪ ಪಟ್ಟಿಯಿಂದ ಕೈಬಿಟ್ಟು ಆರೋಪ ಮುಕ್ತಗೊಳಿಸಲಾಗಿದೆ. ಪಲ್ಲವಿ ಅವರೇ ಕೃತ್ಯ ಎಸಗಿರುವುದು ತನಿಖೆಯಿಂದ ಸಾಬೀತಾಗಿದ್ದು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕೊಲೆ ಪಿತೂರಿಯಲ್ಲಿ ಕೃತಿ ಅವರ ಪಾತ್ರವಿದೆ ಎಂದು ಹೇಳಲು ಸಾಕಷ್ಟು ಪುರಾವೆಗಳಿಲ್ಲ. ಕೃತ್ಯ ನಡೆದಾಗ ಕೃತಿ ಅವರು ಮನೆಯ ಮಹಡಿಯಲ್ಲಿ ಇದ್ದರು. ಕಿರುಚಾಟ ಕೇಳಿಸಿಕೊಂಡು ಕೃತ್ಯ ನಡೆದಿದ್ದ ಸ್ಥಳಕ್ಕೆ ಬಂದಿದ್ದರು. ನಂತರ ತಾಯಿ ಜತೆಗೆ ಮೊದಲ ಮಹಡಿಗೆ ತೆರಳಿದ್ದರು' ಎಂದು ಅಧಿಕಾರಿಯೊಬ್ಬರು ಹೇಳಿದರು.

ಆಸ್ತಿ ವಿವಾದವೇ ಕಾರಣ: '1981ನೇ ಬ್ಯಾಚ್‌ನ ನಿವೃತ್ತ ಐಪಿಎಸ್ ಅಧಿಕಾರಿ ಓಂ ಪ್ರಕಾಶ್ ಅವರನ್ನು ನಗರದ ಎಚ್‌ಎಸ್‌ಆರ್ ಲೇಔಟ್ ನಿವಾಸದಲ್ಲಿ ಪಲ್ಲವಿ ಕೊಲೆ ಮಾಡಿದ್ದರು. ಪಲ್ಲವಿ ಹಾಗೂ ಓಂ ಪ್ರಕಾಶ್ ನಡುವೆ ಆಸ್ತಿಗೆ ಸಂಬಂಧಿಸಿದಂತೆ ಪ್ರತಿನಿತ್ಯ ಗಲಾಟೆ ನಡೆಯುತ್ತಿತ್ತು. ಓಂ ಪ್ರಕಾಶ್ ಅವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅದೇ ಜಿಲ್ಲೆಯ ವಿವಿಧೆಡೆ ಜಮೀನು ಖರೀದಿಸಿದ್ದರು. ಅದರಲ್ಲಿ ಸ್ವಲ್ಪ ಭಾಗವನ್ನು ಸಹೋದರಿ ಹೆಸರಿಗೆ ನೋಂದಣಿ ಮಾಡಲು ಬಯಸಿದ್ದರು. ಅದು ಪಲ್ಲವಿ ಅವರಿಗೆ ಕೋಪ ತರಿಸಿತ್ತು. ಆಸ್ತಿ ವಿವಾದವೇ ಕೊಲೆಗೆ ಪ್ರಮುಖ ಕಾರಣವಾಗಿದೆ ಎಂಬುದು ತನಿಖೆಯಿಂದ ಕಂಡುಬಂದಿದೆ. ಬೇರೆ ಯಾವುದೇ ಕಾರಣಗಳು ಸಾಬೀತಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

ಪಲ್ಲವಿ ಅವರು ಸದ್ಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ವಿವರವಾದ ತನಿಖೆಯ ಬಳಿಕ ಸಿಸಿಬಿ ಅಧಿಕಾರಿಗಳು ಪಲ್ಲವಿ ವಿರುದ್ಧ ಸಾಕ್ಷ್ಯಗಳನ್ನು ಸಂಗ್ರಹಿಸಿ ಆರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

ಹೇಗೆ ನಡೆದಿತ್ತು ಕೊಲೆ?

ಏಪ್ರಿಲ್ 20ರಂದು ಮಧ್ಯಾಹ್ನ ಓಂ ಪ್ರಕಾಶ್ ಅವರು ಊಟ ಮಾಡುತ್ತಿದ್ದರು. ಹೋಟೆಲ್‌ನಿಂದ ಮೀನು ಫ್ರೈ ತರಿಸಿಕೊಂಡಿದ್ದರು. ಅದೇ ವೇಳೆ ಗಲಾಟೆ ವಿಕೋಪಕ್ಕೆ ತಿರುಗಿ ಹತ್ಯೆ ಮಾಡಲಾಗಿತ್ತು.

ಚಾಕು ಹಾಗೂ ಸ್ಕ್ರೂಡ್ರೈವರ್‌ನಿಂದ ಇರಿತಕ್ಕೆ ಒಳಗಾದ ಓಂ ಪ್ರಕಾಶ್ ಅವರು ರಕ್ತದ ಮಡುವಿನಲ್ಲಿ ಬಿದ್ದು, 15 ನಿಮಿಷ ಒದ್ದಾಡಿದ್ದರು. ಪತಿ ಮೃತಪಟ್ಟಿರುವುದನ್ನು ಖಚಿತ ಪಡಿಸಿಕೊಂಡಿದ್ದ ಪಲ್ಲವಿ ಮೂರನೇ ಮಹಡಿಗೆ ತೆರಳಿ ಬಾಗಿಲು ಹಾಕಿಕೊಂಡಿದ್ದರು. ಅಲ್ಲದೇ ಓಂ ಪ್ರಕಾಶ್ ಅವರ ಮೇಲೆ ಖಾರದಪುಡಿ ಎರಚಿ, ಬಳಿಕ ಅಡುಗೆ ಎಣ್ಣೆಯನ್ನೂ ಸುರಿಯಲಾಗಿತ್ತು. ಕೈ-ಕಾಲು ಕಟ್ಟಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡಲಾಗಿತ್ತು. ದೇಹದ 10 ಕಡೆ ಇರಿದ ಗುರುತುಗಳು ಮರಣೋತ್ತರ ಪರೀಕ್ಷೆಯಲ್ಲಿ ಪತ್ತೆ ಆಗಿದ್ದವು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಯಾದಗಿರಿಯಲ್ಲಿ ವಾಲ್ಮೀಕಿ ನಾಯಕ ಸಮಾಜದಿಂದ ಪ್ರತಿಭಟನೆ

ನಕಲಿ ಜಾತಿ ಪ್ರಮಾಣಪತ್ರ ತಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಯಾದಗಿರಿ: ನಕಲಿ ಜಾತಿ ಪ್ರಮಾಣ ಪತ್ರಗಳ ವಿತರಣೆ ತಡೆಯಬೇಕು ಎಂದು ಆಗ್ರಹಪಡಿಸಿ ಉತ್ತರ ಕರ್ನಾಟಕ ವಾಲ್ಮೀಕಿ ನಾಯಕ ಸಮಾಜದವರು ಇಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ತಹಶೀಲ್ದಾರ್ ಕಚೇರಿ ಮುಂಭಾಗದಲ್ಲಿ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಬಾವುಟಗಳನ್ನು ಹಿಡಿದು ಜಮಾಯಿಸಿದರು. ಶಾಸ್ತ್ರಿ ವೃತ್ತದಲ್ಲಿ ಕ್ರಾಂತಿ ಗೀತೆಗಳನ್ನು ಹಾಡಿದರು. ಸುಭಾಷ್ ವೃತ್ತದಲ್ಲಿ ರಸ್ತೆ ತಡೆ ಮಾಡಿ, ಬಹಿರಂಗ ಸಭೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

'ಅನರ್ಹರಿಗೆ ಎಸ್‌ಟಿ ಪ್ರಮಾಣಪತ್ರ ನೀಡುವುದನ್ನು ತಡೆಯಲು ಸರ್ಕಾರ ಅಧಿಕಾರಿಗಳಿಗೆ ಆದೇಶಿಸಬೇಕು. ಇಲ್ಲದೆ ಇದ್ದರೆ ವಿಧಾನಸೌಧ ಹಾಗೂ ಸಂಸತ್ತಿಗೆ ಮುತ್ತಿಗೆ ಹಾಕುವ ಹೋರಾಟ ಮಾಡಬೇಕಾಗುತ್ತದೆ' ಎಂದು ಮುಖಂಡರು ಎಚ್ಚರಿಸಿದರು.

ನಕಲಿ ಜಾತಿ ಪ್ರಮಾಣ ಪತ್ರ ವಿತರಣೆ ತಡೆಯುವಂತೆ ಆಗ್ರಹಿಸಿ ಉತ್ತರ ಕರ್ನಾಟಕ ವಾಲ್ಮೀಕಿ ನಾಯಕ ಸಮಾಜದವರು ಯಾದಗಿರಿಯಲ್ಲಿ ಬುಧವಾರ ಪ್ರತಿಭಟಿಸಿದರು ಚಿತ್ರ: ರಾಜಕುಮಾರ ನಳ್ಳಿಕರ

'ರಾಜ್ಯದಲ್ಲಿ 2 ಲಕ್ಷಕ್ಕೂ ಹೆಚ್ಚು ಜನರಿಗೆ ನಕಲಿ ಎಸ್‌ಟಿ ಪ್ರಮಾಣಪತ್ರ ನೀಡಲಾಗಿದೆ. ಮುಂದೆ ಕಡಿವಾಣ ಹಾಕದೆ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಅಟ್ರಾಸಿಟಿ, ಕ್ರಿಮಿನಲ್ ಪ್ರಕರಣ ದಾಖಲಿಸುತ್ತೇವೆ' ಎಂದು ದಾವಣಗೆರೆಯ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ವರದಾನಂದ ಗೋಲಪಲ್ಲಿ ಸ್ವಾಮೀಜಿ, ರಂಗಲಿಂಗೇಶ್ವರದ ತ್ರಿಶೂಲಪ್ಪ ಶರಣರು ಸೇರಿ ನೆರೆಯ ರಾಯಚೂರು, ಕಲಬುರಗಿ, ವಿಜಯಪುರ, ಬೀದರ್ ಜಿಲ್ಲೆಯ ವಾಲ್ಮೀಕಿ ಸಮಾಜದ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸ್ಮಾರ್ಟ್ ಮೀಟರ್ ಪ್ರಶ್ನಿಸಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರು ಕಡ್ಡಾಯವಾಗಿ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿಕೊಳ್ಳಬೇಕು' ಎಂಬ ರಾಜ್ಯ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

'ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದಂತೆ ಬೆಸ್ಕಾಂ ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿ ದೊಡ್ಡಬಳ್ಳಾಪುರದ ಪಿ.ಎಂ. ಹರೀಶ್ ಮತ್ತು ಎಂ.ಜಯಲಕ್ಷ್ಮಿ ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ಸ್ಮಾರ್ಟ್ ಮೀಟರ್ ಅಳವಡಿಕೆ ವಿಚಾರದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮಾರ್ಗಸೂಚಿಗಳಿಗೆ ಅನುಗುಣವಾಗಿಯೇ ರಾಜ್ಯ ಸರ್ಕಾರ ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ನಡೆದುಕೊಳ್ಳುತ್ತಿದೆ. ಹೊಸದಾಗಿ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳುವವರಿಗೆ ಮಾತ್ರವೇ ಪರಿಪಾಲನಾ ನಿರ್ದೇಶನಗಳು ಅನ್ವಯವಾಗಲಿವೆ. ಅಷ್ಟಕ್ಕೂ ಇದು ಪೋಸ್ಟ್ ಪೇಯ್ಡ್ ಆಗಿದೆ' ಎಂಬ ಸಮಜಾಯಿಷಿಯನ್ನು ನ್ಯಾಯಪೀಠ ಪುರಸ್ಕರಿಸಿದೆ.

> ವಿಭಾಗೀಯ ಪೀಠದಲ್ಲಿ ವಿಚಾರಣೆಗೆ ಬಾಕಿ ಇರುವ ಪಿಐಎಲ್‌ಗೂ ಈ ಅರ್ಜಿಗೂ ಎಳ್ಳಷ್ಟೂ ವ್ಯತ್ಯಾಸ ಇಲ್ಲದಿರುವುದು ಅಚ್ಚರಿ. ಇದು ನ್ಯಾಯಾಂಗ ಶಿಸ್ತಿಗೆ ವಿರುದ್ಧವಾಗಿರುವುದು ಸ್ಪಷ್ಟ
>
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

'ವಿಭಾಗೀಯ ನ್ಯಾಯಪೀಠದಲ್ಲೂ ಇದೇ ವಿಷಯಕ್ಕೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಗೆ ಬಾಕಿ ಇದೆ ಎಂಬ ವಿಚಾರ ಮತ್ತು ಆ ಅರ್ಜಿಯಲ್ಲಿನ ಖಂಡಿಕೆ ಅನುಸಾರದ ವಿವರಗಳು ಈ ಅರ್ಜಿಯಲ್ಲೂ ಯಥಾವತ್ತಾಗಿ ನಕಲುಗೊಂಡಿವೆ. ಹಾಗಾಗಿ, ಈ ಅರ್ಜಿಯನ್ನು ತಿರಸ್ಕರಿಸಲಾಗುತ್ತಿದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಅರ್ಜಿಯಲ್ಲಿ ಏನಿತ್ತು?: 'ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪ್ರೀ ಪೇಯ್ಡ್ ಸ್ಮಾರ್ಟ್ ಮೀಟರ್) ನಿಯಮಗಳು-2024ರ ಅನ್ವಯ ಎಲ್ಲ ವರ್ಗದ ಗ್ರಾಹಕರೂ ಪ್ರೀ ಪೇಯ್ಡ್ ಮೀಟರ್‌ಗಳನ್ನು ಪಡೆಯಲು ಅವಕಾಶ ಇದೆ. ಈ ಕ್ರಮ 2025ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ನಿಯಮ ರೂಪಿಸಲಾಗಿದೆ. ಈ ಪ್ರಕ್ರಿಯೆ ತಾತ್ಕಾಲಿಕ ಸಂಪರ್ಕಕ್ಕೆ ಮಾತ್ರ ಎಂದೂ ತಿಳಿಸಲಾಗಿದೆ. ನಮ್ಮ ಸಂಪರ್ಕ ಶಾಶ್ವತವಾದದ್ದು. ಆದರೆ, ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಂವಹನಾ ಪತ್ರ ನೀಡಿದ್ದಾರೆ. ಈ ಮೀಟರ್‌ಗಳನ್ನು ಹೊರಗುತ್ತಿಗೆ ಆಧಾರದಲ್ಲಿರುವ ಹೊರಗಿನ ಏಜೆನ್ಸಿಗಳ ಮೂಲಕ ಖರೀದಿಸಬೇಕಿದೆ. ಏಜೆನ್ಸಿಗಳು ₹2 ಸಾವಿರ ಬೆಲೆಯ ಮೀಟರ್ ಅನ್ನು ₹10 ಸಾವಿರಕ್ಕೆ ಖರೀದಿಸಲು ಒತ್ತಾಯಿಸುತ್ತಿವೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ಮತೀಯ ಗೂಂಡಾಗಿರಿ: 6 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಮತೀಯ ಗೂಂಡಾಗಿರಿ ನಡೆಸಿದ ಆರೋಪದ ಮೇಲೆ ಆರು ಮಂದಿಯನ್ನು ನಗರದ ಪಾಂಡೇಶ್ವರದ ದಕ್ಷಿಣ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಗಣೇಶ, ಶ್ರೇಯಸ್, ಚಿಂಟು, ಚಂದನ್, ನಾಗರಾಜ್ ಹಾಗೂ ರಾಮಚಂದ್ರ ಬಂಧಿತ ಆರೋಪಿಗಳು ಎಂದು ಪೊಲೀಸರು ತಿಳಿಸಿದ್ದಾರೆ.

'ಬೇರೆ ಬೇರೆ ಧರ್ಮಕ್ಕೆ ಸೇರಿದ ಯುವಕ ಹಾಗೂ ಕಾಲೇಜು ವಿದ್ಯಾರ್ಥಿನಿ ಸೋಮವಾರ (ಆ 11) ಸಂಜೆ ಒಟ್ಟಿಗೆ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಗಳು ತಡೆದು ನಿಲ್ಲಿಸಿದ್ದು, ವಿದ್ಯಾರ್ಥಿನಿಯನ್ನು ತರಾಟೆಗೆ ತೆಗೆದುಕೊಂಡಿದ್ದರು. ವಿದ್ಯಾರ್ಥಿನಿ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ನಗರದ ಪದವಿ ಪೂರ್ವ ಕಾಲೇಜೊಂದರ ವಿದ್ಯಾರ್ಥಿನಿಯು ತರಗತಿಗಳು ಮುಗಿದ ಬಳಿಕ ಸರ್ವಿಸ್ ಬಸ್ ನಿಲ್ದಾಣಕ್ಕೆ ತನ್ನ ಗೆಳೆಯನ ಜೊತೆ ತೆರಳಿದ್ದಾಗ ಘಟನೆ ನಡೆದಿತ್ತು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಪುಟದಿಂದ ರಾಜಣ್ಣ ವಜಾ ಖಂಡಿಸಿ ಪ್ರತಿಭಟನೆ

ತುಮಕೂರು: ಸಚಿವ ಸಂಪುಟದಿಂದ ಕೆ.ಎನ್.ರಾಜಣ್ಣ ವಜಾ ವಿರೋಧಿಸಿ ಅವರ ಬೆಂಬಲಿಗರು, ಅಭಿಮಾನಿಗಳು ಹಾಗೂ ವಿವಿಧ ಸಂಘಟನೆಗಳು, ವಾಲ್ಮೀಕಿ ಸಮುದಾಯದ ಪ್ರಮುಖರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ರಾಜಣ್ಣ ಅವರಿಗೆ ಬೆಂಬಲ ವ್ಯಕ್ತಪಡಿಸಿ ಹಾಗೂ ಕಾಂಗ್ರೆಸ್ ನಾಯಕರ ವಿರುದ್ಧ ಘೋಷಣೆ ಕೂಗಿ, ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಬೇಸರ ವ್ಯಕ್ತಪಡಿಸಿದರು. ಪಕ್ಷದ ನಾಯಕರ ವಿರುದ್ಧ ಆಕ್ರೋಶ ಹೊರ ಹಾಕಿದರು. ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳುವಂತೆ ಆಗ್ರಹಿಸಿದರು.

ಸಭೆಯಲ್ಲಿ ಮಾತನಾಡಿದ ಪ್ರಮುಖರು, 'ರಾಜಣ್ಣ ಅವರ ವಜಾದಿಂದ ಅಹಿಂದ ವರ್ಗಕ್ಕೆ ನೋವಾಗಿದೆ. ಐದು ದಶಕಗಳಿಂದ ಪಕ್ಷಕ್ಕಾಗಿ ದುಡಿದಿದ್ದಾರೆ. ಕಳೆದ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ 7 ಸ್ಥಾನ ಗೆಲ್ಲಲು ಕೊಡುಗೆ ನೀಡಿದ್ದಾರೆ. ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ, ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲಿಸಿಕೊಂಡಿದ್ದಾರೆ. ಪರಿಶಿಷ್ಟರು, ಅಹಿಂದ ವರ್ಗದವರಿಗೆ ನೆರವಾಗುತ್ತಾ ಬಂದಿದ್ದಾರೆ' ಎಂದು ಪ್ರತಿಪಾದಿಸಿದರು.

> ಬೇಡ, ವಾಲ್ಮೀಕಿ ಸಮಾಜದ ಜನಪ್ರತಿಧಿಗಳ ವಿರುದ್ಧ ಪಿತೂರಿ ಮಾಡಿ ವಜಾಗೊಳಿಸುವ ಷಡ್ಯಂತ್ರ ನಡೆಯುತ್ತಿದೆ. ರಾಜಣ್ಣ ವಿರುದ್ಧವೂ ಪಿತೂರಿ ಮಾಡಲಾಗಿದೆ.
>
> **ಪ್ರಸನ್ನಾನಂದ ಸ್ವಾಮೀಜಿ**
> ಮಹರ್ಷಿ ವಾಲ್ಮೀಕಿ ಗುರುಪೀಠ, ದಾವಣಗೆರೆ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಉದ್ಬೂರು ಗೇಟ್ ಸಮೀಪ ಸ್ಮಾರಕ • ನಿರ್ಮಾಣವಾಗಿ 2 ವರ್ಷ ಕಳೆದರೂ ಇಲ್ಲ ರಸ್ತೆ

ಮೈಸೂರಿನ 'ವಿಷ್ಣು ಸ್ಮಾರಕ'ಕ್ಕೂ ತಪ್ಪದ ವಿವಾದ

• ಸುಧೀರ್‌ಕುಮಾರ್ ಎಚ್.ಕೆ.

ಮೈಸೂರು: ನಗರದ ಹೊರವಲಯದಲ್ಲಿ ಇರುವ 'ವಿಷ್ಣು ಸ್ಮಾರಕ'ಕ್ಕೂ ವಿವಾದಗಳು ಬೆನ್ನು ಹತ್ತಿವೆ. ಸ್ಮಾರಕಕ್ಕೆ ಸಂಪರ್ಕಿಸುವ ರಸ್ತೆ ನಿರ್ಮಾಣಕ್ಕೆ ಕಂದಾಯ ಜಮೀನು ನೀಡುವಲ್ಲಿ ಜಿಲ್ಲಾಡಳಿತ ನಿರ್ಲಕ್ಷ್ಯ ಧೋರಣೆ ತಾಳಿದೆ.

ಮಾನಂದವಾಡಿ ರಸ್ತೆಯ ಹಾಲಾಳು ಗ್ರಾಮದ 'ಉದ್ಬೂರು ಗೇಟ್' ಬಳಿ ಸುಂದರ ಸ್ಮಾರಕ ನಿರ್ಮಾಣವಾಗಿದೆ. ಇಲ್ಲಿಗೆ ಮಣ್ಣಿನ ರಸ್ತೆಯಲ್ಲೇ ಸಾಗಬೇಕು. ಸಾಂಸ್ಕೃತಿಕ ರಾಜಧಾನಿಯ ವಿಷ್ಣು ಸ್ಮಾರಕವೂ ವಿವಾದದ ಸುಳಿಯಲ್ಲಿರುವುದು ಅಭಿಮಾನಿಗಳಲ್ಲಿ ಬೇಸರ ತಂದಿದೆ.



ವಿಷ್ಣು ಸ್ಮಾರಕಕ್ಕೆ ತೆರಳುವ ಮಣ್ಣಿನ ರಸ್ತೆ (ಎಡಚಿತ್ರ). ವಿಷ್ಣು ಕಡಗ, ಮೂರ್ತಿಯುಳ್ಳ ಸ್ಮಾರಕ

ಹಾಲಾಳು ಗ್ರಾಮದ ಸರ್ವೆ ಸಂಖ್ಯೆ 8ರಲ್ಲಿ ಸ್ಮಾರಕವಿದೆ. ಸಂಪರ್ಕ ಕಲ್ಪಿಸುವ ರಸ್ತೆ ಸರ್ವೆ ಸಂಖ್ಯೆ 69, 67ರಲ್ಲಿ ಹಂಚಿಹೋಗಿದೆ. ಇದರಲ್ಲಿ ಕಂದಾಯ ಭೂಮಿ ಇದ್ದು, ಗಡಿ ಗುರುತಿಸಿ, ರಸ್ತೆ ನಿರ್ಮಿಸುವ ಕೆಲಸ ಸ್ಮಾರಕ ಉದ್ಘಾಟನೆಯಾಗಿ 2 ವರ್ಷ ಕಳೆದರೂ ಈ ಕೆಲಸವಾಗಿಲ್ಲ.

'ಇಲ್ಲಿ ಸ್ಮಾರಕವಿದೆ ಎಂಬುದೇ ಗೊತ್ತಾಗುವುದಿಲ್ಲ. ಸ್ವಾಗತ ಕಮಾನು, ನಾಮ ಫಲಕವೂ ಇಲ್ಲ. ಸರ್ಕಾರವು ಎಲ್ಲ ಮೂಲಸೌಲಭ್ಯ ಒದಗಿಸಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಬೇಕು' ಎಂದು ಆಗ್ರಹಿಸುತ್ತಾರೆ ವಿಷ್ಣು ಅಭಿಮಾನಿಗಳ ಒಕ್ಕೂಟದ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ.

ಮುಗಿಯದ ತೊಡಕು: ಸ್ಮಾರಕ ಇರುವ 5 ಎಕರೆ ಜಮೀನೂ ಕಾನೂನು ತೊಡಕಿನಲ್ಲಿದೆ. ಈ ಜಾಗ ಗೋಮಾಳವಾಗಿದೆ. ಅದನ್ನು ಲೇ.ಮಹದೇವಮ್ಮ ಮತ್ತು ಇತರರು ಸಾಗುವಳಿ ಮಾಡುತ್ತಿದ್ದರು. ಅವರು ಜಮೀನಿನ ಹಕ್ಕಿಗಾಗಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.

'ಪ್ರಕರಣ ಕೋರ್ಟ್‌ನಲ್ಲಿದೆ. ಆ ಸ್ಮಾರಕ ಪ್ರತಿಷ್ಠಾನದ ಪರವಾಗಿಯೇ ಆದೇಶ ಬರುವ ವಿಶ್ವಾಸವಿದೆ' ಎಂದು ವಾರ್ತಾ ಇಲಾಖೆಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

> ಸ್ಮಾರಕದ ದಾರಿ ಸಮಸ್ಯೆ ಇತ್ಯರ್ಥಕ್ಕೆ ಶೀಘ್ರ ಕ್ರಮವಹಿಸುವಂತೆ ತಾಲ್ಲೂಕು ಆಡಳಿತಕ್ಕೆ ಸೂಚಿಸುವೆ
>
> **ಪಿ.ಶಿವರಾಜು,** ಹೆಚ್ಚುವರಿ ಜಿಲ್ಲಾಧಿಕಾರಿ

ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ

ಸಿ.ಟಿ.ಎಸ್.ನಂ.4125/1ಬಿ, ಗಣೇಶಪೂರ ರಸ್ತೆ, ಲಕ್ಷ್ಮೀಟೆಕ, ಬೆಳಗಾವಿ–590009 (ಕರ್ನಾಟಕ)
ಕಚೇರಿ: 0831–2472482, ಫ್ಯಾಕ್ಸ: 0831-2472464
ಇಮೇಲ್ ವಿಳಾಸ: snsibgm@yahoo.com

ಟೆಂಡರ್ ಪ್ರಕಟಣೆ

ವಿಷಯ: ಸಂಸ್ಥೆಯಲ್ಲಿ ವಿವಿಧ ಉಪಕರಣಗಳ ಖರೀದಿಗೆ ಟೆಂಡರ ಸಂಖ್ಯೆ **SNSI/2025-26/IND0003** ದಿನಾಂಕ **13.08.2025** ರಂದು ಪ್ರಕಟಿಸಲಾಗಿದೆ.

1. ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿಯಲ್ಲಿ ವಿವಿಧ ಉಪಕರಣಗಳಾದ **Atomic Absorption Spectophotometer, Flame Photometer, Conductivity meter** ಮತ್ತು **pH Meter** ಖರೀದಿಗೆ ಇ–ಟೆಂಡರ್ ಮುಖಾಂತರ ದರಪಟ್ಟಿಗಳನ್ನು ಕರೆಯಲಾಗಿದೆ
2. ವಿವಿಧ ಉಪಕರಣಗಳ ಖರೀದಿಗೆ ಮಾಹಿತಿಯನ್ನು ಇ– ಪ್ರೊಕ್ಯೂರ್ಮೆಂಟ್ ಪೋರ್ಟಲಿನ ಅಂತರ್ಜಾಲ **https://kppp.karnataka.gov.in** ದ ಟೆಂಡರ ಸಂಖ್ಯೆ **SNSI/2025-26/IND0003** ರಲ್ಲಿ ವೀಕ್ಷಿಸಬಹುದಾಗಿದೆ
3. ಇ–ಟೆಂಡರ ದಾಖಲಾತಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ **01.09.2025** ರಂದು **17.30** ಗಂಟೆಯವರೆಗೆ ಇರುತ್ತದೆ.

Date:13.08.2025

ಸಹಿ/–
ನಿರ್ದೇಶಕರು

ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in

ಸಂಖ್ಯೆ: FPI-PROC0TNDR/1/2025-ADMN-FPI ದಿನಾಂಕ: 13.08.2025

ಇ–ಟೆಂಡರ್ ಪ್ರಕಟಣೆ

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಸಂಬಂಧಿತ ಏಜೆನ್ಸಿಗಳಿಂದ ಕೆಳಕಂಡ ಸೇವೆಯನ್ನು ಪಡೆಯಲು ಟೆಂಡರ್ ಕರೆಯಲಾಗಿದೆ.

"Tender from Agencies to Provide Security Services to Fiscal Policy Institute".

Last date: **28.08.2025 till 11.00 AM.**

ಸದರಿ ಟೆಂಡರ್‌ನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ನಿರ್ದೇಶಕರ ಪರವಾಗಿ
ವಿತ್ತೀಯ ಕಾರ್ಯನೀತಿ ಸಂಸ್ಥೆ

DIPR/CP/YC/2319/2025-26

ಕರ್ನಾಟಕ ಲೋಕಸೇವಾ ಆಯೋಗ

ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ: ಸಿಎನ್ಎಫ್(1)751/2025–26/ಪಿಎಸ್‌ಸಿ ದಿನಾಂಕ: 13–08–2025.

ಪತ್ರಿಕಾ ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 506/ಆರ್‌ಟಿಬಿ (2)/2023–24/3497, ದಿನಾಂಕ: 15–03–2024ರನ್ವಯ ಅಧಿಸೂಚಿಸಲಾದ ವಿವಿಧ ಇಲಾಖೆಯಲ್ಲಿನ ವಿವಿಧ ಗ್ರೂಪ್–ಸಿ (ಉ.ಮೂ.ವೃಂದ) (ಪದವಿ ಮಟ್ಟದ) ಹುದ್ದೆಗೆ ಸಂಬಂಧಿಸಿದಂತೆ ದಿನಾಂಕ: 13–07–2025ರಂದು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯ **ಸಾಮಾನ್ಯ ಜ್ಞಾನ ಪತ್ರಿಕೆ–1 (ವಿಷಯ ಸಂಕೇತ–656) ಮತ್ತು ಪತ್ರಿಕೆ–2 (ವಿಷಯ ಸಂಕೇತ–657)ರ ಕೀ–ಉತ್ತರಗಳನ್ನು** ಆಯೋಗದ ಜಾಲತಾಣ http://kpsc.kar.nic.in/Key Answer ನಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ಕೀ–ಉತ್ತರಗಳಿಗೆ ಆಕ್ಷೇಪಣೆಗಳಿದ್ದಲ್ಲಿ, ನಿಗದಿತ ಆಕ್ಷೇಪಣಾ ನಮೂನೆಯಲ್ಲಿ ದಿನಾಂಕ: 20–08–2025ರ ಸಂಜೆ 5.30 ಗಂಟೆಯೊಳಗಾಗಿ ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು–560001, ಇವರಿಗೆ ಸಲ್ಲಿಸಬಹುದಾಗಿದೆ. ಈ ಅವಧಿಯು ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಸಹಿ/–
ಪರೀಕ್ಷಾ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

ವಾ.ಸಾ.ಸಂ.ಇ/ವಾಪ್ರ/2315 /ಆಕಾರ್/2025–26

ಉನ್ನತ ಶಿಕ್ಷಣ ಇಲಾಖೆ

6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560001

ಸಂ.: ಇಡಿ 232 ಯುಎನ್‌ಇ 2024 ದಿನಾಂಕ: 13.08.2025

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇಲ್ಲಿನ ಕುಲಪತಿಗಳ ಹುದ್ದೆಯ ನೇಮಕಾತಿಗೆ ಅರ್ಜಿಯ ಆಹ್ವಾನ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇಲ್ಲಿನ **ಕುಲಪತಿ ಹುದ್ದೆಗೆ** ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಅಧಿನಿಯಮ 2009ರ ಪ್ರಕರಣ 12(2) ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಈ ಅಧಿಸೂಚನೆಯ ದಿನಾಂಕದಿಂದ **30 ದಿನಗಳ ಒಳಗಾಗಿ** ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ **https://hed.karnataka.gov.in** ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು)

DIPR/CP/2313/SA//2025-26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ)
7ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಸಂ. ಬೆಂಜಮಂ/ಸಿ.ಹೆಚ್/ಪ್ರಮುಅ/ಮುಅ(ದ)/2730/2025–26 ದಿನಾಂಕ: 13.08.2025

ಟೆಂಡರ್ ಪ್ರಕಟಣೆ – 4ನೇ ಕರೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಬೆಂಗಳೂರು ಜಲಮಂಡಳಿಯ ನಿರ್ವಹಣಾ ವಲಯದ ಅಡಿಯಲ್ಲಿನ 16 ವಿಭಾಗಗಳಲ್ಲಿ (ಬ್ಲೂ ಫೋರ್ಸ್) ಅನಧಿಕೃತ ಸಂಪರ್ಕಗಳನ್ನು ಅಧಿಕೃತಗೊಳಿಸುವುದು / ಅನಧಿಕೃತ ಸಂಪರ್ಕಗಳನ್ನು ಕಡಿತಗೊಳಿಸುವ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದೆ.

ಟೆಂಡರ್‌ಗಿಟ್ಟ ಮೊತ್ತ: ರೂ. 298.45 ಲಕ್ಷಗಳು. ಇ.ಎಂ.ಡಿ ಮೊತ್ತ : ರೂ. 4.47 ಲಕ್ಷಗಳು.

ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **29.08.2025** ರಂದು ಮಧ್ಯಾಹ್ನ **03.00** ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ : **30.08.2025ರ** ಸಂಜೆ **05.00** ಗಂಟೆಯನಂತರ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ದಕ್ಷಿಣ)

DIPR/CP/2297/Zen/2025-26

ಧಾರವಾಡ, ಗದಗ ಮತ್ತು ಉತ್ತರ ಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,ಧಾರವಾಡ

KMF
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ಧಾರವಾಡ – 580 004
ದೂ: 0836–2467603/2468380 e-mail: dharwarnin@gmail.com

ಐಎಫ್‌ಟಿ ಸಂಖ್ಯೆ:-KMF/2025-26/IND1577 ದಿನಾಂಕ: 13–08–2025

ಇ–ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ., (ಧಾಮುಲ್) ಧಾರವಾಡವು "Supply, Installation, Testing and Commissioning of 1 Job, (ATLAS COPCO/Equivalent make) Oil Injected, Air Cooled, 25hp Variable Speed Drive Rotary Screw Air compressor with Integrated Refrigerant type Compressed Air Dryer, Downstream Filter, Vertical Air Receiver & its associated accessories along with necessary Mechanical, Civil & Electrical Works at 30MT Powder Plant on Turnkey basis" ಕೆಲಸಕ್ಕಾಗಿ ಮೂಲ ಉತ್ಪಾದಕರಿಂದ/ ಅಧಿಕೃತ ಡೀಲರ್ / ಅರ್ಹ ಪೂರೈಕೆದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ಸಲ್ಲಿಸುವ ಪೂರ್ವದಲ್ಲಿ ತಮ್ಮ ಸ್ವಂತ ವೆಚ್ಚದಲ್ಲಿ ಸ್ಥಳ ಪರಿವೀಕ್ಷಿಸಿ ಟೆಂಡರ್ ಸಲ್ಲಿಸುವುದಾಗಿದೆ.

ಇ–ಟೆಂಡರ್ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಮತ್ತು ಇಎಂಡಿ (ಗಳಿಕೆ ಠೇವಣಿ) ಮೊತ್ತ **ರೂ. 46,000/–** ವನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ್ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ಲಾಗ್‌ಇನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ ಸಹಾಯವಾಣಿ **ಸಂಖ್ಯೆ: 080–46010000/ 68948777/ 09240214000/ 09240214001,** ಇ–ಮೇಲ್: support@eprochelpdsk.com ರ ಮೂಲಕ ಸಂಪರ್ಕಿಸಬಹುದು ಮತ್ತು ಉಳಿದ ಮಾಹಿತಿಯನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ್ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ–ಪೋರ್ಟಲ್ ಜಾಲತಾಣದಿಂದ ಟೆಂಡರ್ ದಾಖಲಾತಿ ಲಭ್ಯವಾಗುವ ದಿನಾಂಕ	ದಿ: 14–08–2025 ರಿಂದ 15–09–2025ರ ಸಂಜೆ 4:00 ಗಂಟೆಗಿಂತ ಮೊದಲು
2	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿ: 15–09–2025 ರಂದು ಸಂಜೆ 4:00 ರವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ: 16–09–2025 ರಂದು ಸಂಜೆ 4:30 ರ ನಂತರ
4	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ: 19–09–2025ರ ರಂದು ಬೆಳಿಗ್ಗೆ 11:00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ವಿಜಯಪುರ ಉಪ ವಿಭಾಗ, ವಿಜಯಪುರ

ಕರ್ನಾಟಕ ಸರ್ಕಾರ

ಸಂಖ್ಯೆ: ಬಿ1/ಬಜೆಟ್/ವಿಜೆಪಿ/ಟೆಂಡರ್/2025–26 ದಿನಾಂಕ:08.08.2025

ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ವಿಜಯಪುರ ಪ್ರಾದೇಶಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಇಂಡೆಂಟ್ ಸಂಖ್ಯೆ: KFD/2025-26/OW/WORK_INDENT27092, 27093, 27094, 27095, 27096, 27097, 27098, 27099, 27100, 27101, 27102, 27103, 27104, & 27105 ರಂತೆ ಟೆಂಡರ್‌ನ್ನು ಕರೆಯಲಾಗಿದೆ. ದಿನಾಂಕ: 22.08.2025 ರ ವರೆಗೆ ಟೆಂಡರ್ ಹಾಕುವ ಮತ್ತು ದಿನಾಂಕ: 25.08.2025 ರಂದು ಬೆಳಿಗ್ಗೆ 11.00 ಗಂಟೆಗೆ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯಲಾಗುವುದು. ಟೆಂಡರ್‌ದಲ್ಲಿ ಭಾಗವಹಿಸಲಿಚ್ಚಿಸುವವರು kppp.karnataka.gov.in ಮೂಲಕ ಟೆಂಡರ್ ನಿಬಂಧನೆ ಇತ್ಯಾದಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವಿಜಯಪುರ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/251/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್, ಶಿವಮೊಗ್ಗ ಆಯುಷ್ ಇಲಾಖೆ, ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಶಿವಮೊಗ್ಗ.

#08 ಜಿ.ಆರ್ ಕಾಂಪ್ಲೆಕ್ಸ್, 1ನೇ ಮಹಡಿ, 1ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ದೇವರಾಜಅರಸುನಗರ ಸೋಮಿನಕೊಪ್ಪ ರಸ್ತೆ
ಶಿವಮೊಗ್ಗ–577204 e.mail: dao.shimoga09@gmail.com
ph: 08182-255230

ಸಂಖ್ಯೆ: ಜಿಆಕಶಿ/12/ಲೆಕ್ಕ(1)/2025–26 ದಿನಾಂಕ: 12.08.2025

ಇ–ಟೆಂಡರ್ ಪ್ರಕಟಣೆ
(ಹೊರಗುತ್ತಿಗೆ ಸೇವೆಯನ್ನು ಪಡೆಯುವ ಬಗ್ಗೆ ಟೆಂಡರ್)

ಜಿಲ್ಲಾ ಆಯುಷ್ ಕಛೇರಿ, ಶಿವಮೊಗ್ಗ ಮತ್ತು ಇದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳಿಗೆ ಒಟ್ಟು 25 ಸಂಖ್ಯೆಯ ಗ್ರೂಪ್–ಡಿ ಹುದ್ದೆಗಳ ಎದುರು ಅರ್ಹ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ಸೇವೆಯನ್ನು ಪಡೆಯಲು 01 ವರ್ಷದ ಅವಧಿಗೆ ಇ–ಟೆಂಡರ್ ಕರೆಯಲಾಗಿದ್ದು (ಟೆಂಡರ್ ಅಂದಾಜು ಮೊತ್ತ ರೂ. 53.98 ಲಕ್ಷ) ಟೆಂಡರ್ ವೇಳಾಪಟ್ಟಿ ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ www.kppp. karnataka.gov.in kppp Tender no: AYD/2024-25/SE0135 ರಲ್ಲಿ ನೋಡಬಹುದಾಗಿದೆ.

(ಹೆಚ್ಚಿನ ಮಾಹಿತಿಗಾಗಿ ಕಛೇರಿಯಲ್ಲಿ ಸಂಪರ್ಕಿಸಬಹುದು)

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆಯುಷ್ ಕಛೇರಿ ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/25–26/65/08/754

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಕೋಲಾರ

ನಂದಿನಿ
ಡೇರಿ ಆವರಣ, ಪಿ.ಬಿ.ನಂ 63, ಎನ್ ಹೆಚ್–4, ಹುತ್ತೂರು ಅಂಚೆ, ಕೋಲಾರ – 563102
[Ph.No 08152-282310,7760964517, E-mail: komulpurchase@yahoo.com]

ಕ್ರ.ಸಂ: ಕೋಹಾಒ: ಖರೀದಿ: ಇ–ಟೆಂಡರ್:2381 : 2025–26 ದಿನಾಂಕ: 12.08.2025

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಖರೀದಿಗೆ ಟೆಂಡರ್ ಪ್ರಕಟಣೆ

ಒಕ್ಕೂಟವು ಈ ಕೆಳಕಂಡ ಸೇವೆಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು https://Kppp.karnataka.gov.in/.ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಸೇವೆ ವಿವರ	ಪರಿಮಾಣ
01	ಒಕ್ಕೂಟದ ವ್ಯಾಪ್ತಿಯ ಬಿ.ಎಂ.ಸಿ ಕೇಂದ್ರಗಳಲ್ಲಿರುವ ಫ್ಯಾನ್/ ಮಿಲ್ಕ್ ಪಂಪ್ ಮೋಟಾರ್‌ಗಳು, ಡಿ.ಜಿ. ಆಲ್ಟರ್ನೇಟರ್ ಹಾಗೂ ಅಜಿಟೇಟರ್ ಮೋಟಾರ್‌ಗಳನ್ನು ಎರಡು ವರ್ಷದ ಅವಧಿಗೆ ರಿವೈಂಡಿಂಗ್ ಕೆಲಸ ನಿರ್ವಹಣೆ ಮಾಡಲು	230 ಸಂಖ್ಯೆ
02	ಒಕ್ಕೂಟದ ಕೋಲಾರ ಡೇರಿಯಲ್ಲಿನ ಸ್ಥಾವರ ಮತ್ತು ಯಂತ್ರೋಪಕರಣಗಳಿಗೆ 2025–26 ನೇ ಸಾಲಿಗೆ ವಿಮೆ ಮಾಡಿಸಲು	Lumpsum

ಟೆಂಡರ್ ಶುರುವಾಗುವ ದಿನಾಂಕ: 13.08.2025 ರಿಂದ 26.08.2025 5.30 ಗಂಟೆಯವರಿಗೆ
ಟೆಂಡರ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 26.08.2025 ರ ಸಂಜೆ 5.30 ಗಂಟೆಯವರೆಗೆ
ಟೆಂಡರ್ ತಾಂತ್ರಿಕ ಭಾಗ–1ನ್ನು ತೆರೆಯುವ ದಿನಾಂಕ: 28.08.2025 ರಂದು ಬೆಳಿಗ್ಗೆ 11.00 ಗಂಟೆ ನಂತರ

ಸಹಿ/– ವ್ಯ.ನಿ, ಕೋಮುಲ್

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ

KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಖ್ಯೆ 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020

ನಂ : KSEDCL/ITS/GOODS-003/2025-26 ದಿನಾಂಕ: 14.08.2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **"Tender for Supply, Installation, Testing, Commissioning and Warranty of Audio and MIC Solution for VC System at Center for E-Governance (Call-2)".** ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 10 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in**ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2024-25/ IND0291/ Call-2	Tender for Supply, Installation, Testing, Commissioning and Warranty of Audio and MIC Solution for VC System at Center for E-Governance	**21.08.2025**

DIPR/CP/2312/SA/2025-26

ಸಹಿ/– ನಿರ್ದೇಶಕರು (ಹಣಕಾಸು)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬೊಮ್ಮನಹಳ್ಳಿ ಯೋಜನಾ ವಿಭಾಗ, ಹೆಚ್‌ಎಸ್‌ಆರ್ ಬಡಾವಣೆ, ಬಿಡಿಎ ಸಂಕೀರ್ಣ, ಬೆಂಗಳೂರು–560 102.

ಸಂಖ್ಯೆ:ಬೃಬೆಂಮಪಾ/ಕಾಪಾಅ/ಬೊಯೋವಿ/ಟೆಂಡರ್-14/2025-26 ದಿನಾಂಕ: 12-08-2025

ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್ **https://kppp.karnataka.gov.in** ಮೂಲಕ ಮಾತ್ರ. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನಾ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಬಿಡಬ್ಲ್ಯೂಎಸ್‌ಎಸ್‌ಬಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1.	ವಾರ್ಡ್ ಸಂಖ್ಯೆ 175ರ ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರದ ನ್ಯಾನಪನಹಳ್ಳಿ ಬಂಡೆಯಲ್ಲಿ ಆಟದ ಮೈದಾನದ ಸುಧಾರಣಾ ಕಾಮಗಾರಿ. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ): ರೂ.325.00. ಇಎಂಡಿ: (ಲಕ್ಷ ರೂ.ಗಳಲ್ಲಿ) ರೂ.3,25,000/–.

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **https://kppp.karnataka.gov.in** ಮೂಲಕ 18.08.2025 ರಿಂದ ಡೌನ್‌ಲೋಡ್ ಮಾಡಬಹುದು. 2. ಪೂರ್ವ ಬಿಡ್ ಸಭೆಯ ದಿನಾಂಕ: 22.08.2025ರ ಬೆಳಗ್ಗೆ 11:00 ಗಂಟೆಗೆ. 3. ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 28.08.2025 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ. 4. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 29.08.2025ರ ಸಂಜೆ 4:30 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬೊಮ್ಮನಹಳ್ಳಿ ಯೋಜನಾ ವಿಭಾಗ, ಬೃಬೆಂಮಪಾ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ+ ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065
ದೂರವಾಣಿ : GKVK: 2330153-250, Direct : 23332765
Email : eo@uasbangalore.edu.in, Website: www.uasbangalore.edu.in

ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/6/2025–26 ದಿನಾಂಕ:11–08–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, **ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು** ಕೆ.ಜಿ–1, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **25–08–2025 ಸಂಜೆ 4.00 ಗಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28–08–2025 ಸಮಯ ಬೆಳಗ್ಗೆ 10.30 ಕ್ಕೆ,** ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: **30–08–2025 ಸಮಯ ಬೆಳಗ್ಗೆ 10.30 ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ.

ಸೂಚನೆ: ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **https://kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ. **91–8046010000, +91–8068948777 09240214000/09240214001,** support@eprochelpdesk.com ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಅನ್ನು ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜಿಎ/2303/2025–26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ: ಶಿಮನಪಾಶಿ:ಕಾವಿ:ಟೆಂಡರ್:17/2025–26 ದಿನಾಂಕ : 12.08.2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಪೂರೈಕೆಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

1) ಇಂಡೆಂಟ್ ಸಂಖ್ಯೆ : **DMA/2025-26/IND5094/CALL-2** ಮತ್ತು **DMA/2025-26/IND5174** ರ ಕೆಪಿಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **20.08.2025** (ಸಂಜೆ: **4.00** ಗಂಟೆಗೆ). 2) ಇಂಡೆಂಟ್ ಸಂಖ್ಯೆ : **DMA/2025-26/IND5094/CALL-2** ಮತ್ತು **DMA/2025-26/IND5174** ರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **21.08.2025** (ಸಂಜೆ: 4.30 ಗಂಟೆಗೆ). 3) ಇಂಡೆಂಟ್ ಸಂಖ್ಯೆ : **DMA/2025-26/IND5094/CALL-2** ಮತ್ತು **DMA/2025-26/IND5174** ರ ಆರ್ಥಿಕ ಬಿಡ್ ತೆರೆಯುವ ದಿನಾಂಕ : **22.08.2025** (ಸಂಜೆ: 4.30 ಗಂಟೆಗೆ). 4) ಇಂಡೆಂಟ್ ಸಂಖ್ಯೆ : **DMA/2025-26/IND5094/CALL-2** ಅನುದಾನ: **2025–26** ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ನಿಧಿ ಮತ್ತು ಇಂಡೆಂಟ್ ಸಂಖ್ಯೆ: **DMA/2025-26/IND5174,** ಅನುದಾನ: **2024–25** ಮತ್ತು **2025–26** ನೇ ಸಾಲಿನ **SFC** ಕುಡಿಯುವ ನೀರಿನ ಅನುದಾನ

ಸೂಚನೆ: ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ ಹಾಗೂ ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ವಾ.ಸಾ.ಸಂ.ಇ./ಶಿ/ನಂ.52–08/ಝೇಂಕಾರ್/2025–26

ಸಹಿ/–
ಕಾರ್ಯಪಾಲಕ ಅಭಿಯಂತರರು
ಮಹಾನಗರ ಪಾಲಿಕೆ, ಶಿವಮೊಗ್ಗ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ–1,2&3/ಟೆಂಡರ್/2025–26/1414 ದಿನಾಂಕ: **12.08.2025**

ಕೆಪಿಪಿ–ಪ್ರೋಕ್ಯೂರಮೆಂಟ್ಸ ಟೆಂಡರ್ ಪ್ರಕಟಣೆ ಕರೆ–2

1) ಕಾಮಗಾರಿಗಳ ವಿವರ. KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. : KPP -Portal ನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portal ನಲ್ಲಿ ನಮೂದಿಸಿದಂತೆ 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portal ನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ.KPP -Portal ನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ –4 ಮಾತ್ರ :**10–09–2025ರಂದು 17.00 ಗಂಟೆವರೆಗೆ,** 7) ಪ್ರೀಬಿಡ್ಡ್ ಮಿಟಿಂಗ ಸ್ಥಳ ದಿನಾಂಕ ಮತ್ತು ಸಮಯ. ಕೆ.ಡಬ್ಲೂ –4 ಮಾತ್ರ ಕಾರ್ಯನಿರ್ವಾಹಕ ಇಂಜಿನೀಯರರು,, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ, ಪ್ರತಾಪನಗರ ನೌಬಾದ, ಬೀದರ.**04–09–2025 ರಂದು 11.00 ಗಂಟೆಗೆ.** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ –4 ಮಾತ್ರ : **15–09–2025 ರಂದು 16.00 ಗಂಟೆ ವರೆಗೆ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –4 ಮಾತ್ರ :**18–09–2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –4 ಮಾತ್ರ **20–09–2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ. KPP portal https://kppp.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/138/ಕೆ.ಎಸ್.ಎಂ.ಸಿ.&ಎ/2025–26

OFFICE OF THE CHIEF ELECTORAL OFFICER, KARNATAKA

Nirvachana Nilaya, Sheshadri Road, Bengaluru - 560 001.

No. DPAR/10 RUPPs (Chuvebha) 2025 P1 Date: 12-08-2025

SHOW CAUSE NOTICE

Whereas, the registration of an Association/Body of individual citizens of India as a political party is governed by the provisions of Section 29A of the Representation of the People Act, 1951; and

Whereas, the purpose of registration of an association as a political party with the Election Commission under the aforesaid Section 29A is stated in that Section itself, i.e. to avail of the provisions of that part for the purposes of the Representation of the People Act, 1951, which means participation in elections conducted by the Commission under the said Act; and

Whereas, the below mentioned **Registered Unrecognized Political Parties** were registered as a political party under the said Section 29A, on an application made by the party under the said Section; and

Whereas, the current address of the said Political Party is not known; and Whereas, as per the records of the Commission, the said party did not set up any candidate at any of the elections held, either to the House of the People or to any State Legislative Assembly or bye-elections for the last 06 years since 2019; and

Whereas, in view of the above, it is self-evident that the said party has ceased to function as a political party for the purposes of the aforesaid Section 29A; and Whereas, in the above circumstances, the Commission, in exercise of its powers under Article 324 of the Constitution of India and Section 29A of the Representation of the People Act, 1951, proposes to delist the below mentioned **Registered Unrecognized Political Parties** from the list of registered parties and

Whereas, before taking action as proposed above, the Commission has decided to provide to the said party an opportunity of making a representation/showing cause, if any, as to why the proposed action may not be taken;

Now, therefore, the below mentioned Registered Unrecognized Political Parties are called upon to make a written representation to the undersigned in this behalf if it so desires. The representation, if any, should be duly accompanied by an affidavit from the President or General Secretary of the party, and all supporting documents on which the party proposes to rely, and should reach the undersigned latest by **01.09.2025**

It is also stated that the date of hearing for the party has been scheduled on **01.09.2025**. Such hearing should mandatorily be attended by the President/General Secretary/ Head of the Party. If no reply is received from the party by the aforesaid date, it will be presumed that the party has nothing to say in the matter and the Commission will pass appropriate orders without any further reference to the party.

By Order
Sd/-
V. Anbukkumar, IAS
Chief Electoral Officer, Karnataka

To
The President/ General Secretary,

1. Akhila Bharatiya Rytha Party, No. 127, Shravanabelagula Town, Bengaluru Main Road, Channarayapatna Taluk, Hassan District, Karnataka-573135.
2. Badavara Shramikara Raitara Congress Party, 1/A, Parvathi Nagar Main Road, Bellary-583103, Karnataka
3. Bhaarteeya Janashakthi Congress, D.No. 4-148/A, Paniyoor Road, Udupi District, Uchila, Karnataka-574117
4. Bharatiya Rashtriya Mahila Sarvodaya Congress, No.02, 1st Floor, Vayuputra Arcade, Ward no 15, Near NTTF PB Road, Dharwad-580001, Karnataka
5. Dr.Ambedkar Samajvadi Democratic Party, Venkataiahna Chatra, Haradanahalli Hobli, Chamarajanagara Taluk & District, Karnataka
6. Jana Samanyara Party (Karnataka), Sri. Veerabhadra Swamy Nilaya, 1st Main, 5th Cross, Vijaya Nagar, Tumkur, Karnataka-572102
7. Manava Party,-23, Eureka Towers, Kittur Chennamma Circle, Hubli-580029, Karnataka
8. Praja Parivartan Party, No. 9/228, 1st Main 3rd Cross, (Behind Jaibheem Petrol Bunk) Nanjappa layout, Anekal Town, Bangalore urban District- 562106, Karnataka
9. Shubha Karnataka, House No.1262, Kustagi Road, 1st Cross, Gajendragad, Dist, Gadag-512114, Karnataka
10. Young India Tangress Party, Yelam Galli, Tugav(H), Taluk Bhalki, District Bidar, Karnataka.

DIPR/CP/2294/KAVITA/2025-26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560 023,
ದೂ: 080–29557023 ಇ–ಮೇಲ್: cekhsdrp@gmail.com & cekhsdrp.hfws@karnataka.gov.in

ಸಂ: ಆಕುಕ/ಇಂಘ/ಮುಇಂ/ತಾಸ–2/ಸಇಂ–1&8/ಟಿಎನ್‌ಡಿ/15th Finance/2025–26/1638
ದಿನಾಂಕ: 12.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ **15th Finance** ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ **ರೂ. 3416.00** ಲಕ್ಷಗಳಿಗೆ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ **(KPP Protal)** ಮೂಲಕ ದ್ವಿಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕೆಪಿಪಿ–ಪೋರ್ಟಲ್ ಅನ್ನು ಪರಿಶೀಲಿಸುವುದು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **29.08.2025** ರಂದು **16.00** ಗಂಟೆಯವರೆಗೆ (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **30.08.2025** ರಂದು **16.01** ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(Through Karnataka Public Procurement Portal) www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

ಕರ್ನಾಟಕ ಸರಕಾರ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್: directorgimsgulbarga@gmail.com ದೂ.08472–260252

ಸಂಖ್ಯೆ: GIMS/KLB/Tender/Stationary/CR/13/2025-26/1271 ದಿನಾಂಕ:–11/08/2025

:: ಟೆಂಡರ ಪ್ರಕಟಣೆ ::

2025–26ನೇ ಸಾಲಿಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ ಮಹಾವಿದ್ಯಾಲಯ, ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಹಾಗೂ ಟ್ರಾಮಾಕೇರ್ ಆಸ್ಪತ್ರೆಯಲ್ಲಿ ಉಪಯೋಗಿಸಲು ಬೇಕಾಗಿರುವ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/Tender/Stationary/CR/13/2025-26, Date:11.08.2025. IND. No: DME/2025-26/IND1641, 2) ಆನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ–Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : **25–08–2025 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **18–08–2025 ಸಾಯಂಕಾಲ 5.00 ಗಂಟೆಯ ವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: ದಿನಾಂಕ: **22–08–2025 ಬೆಳಿಗ್ಗೆ 11:00ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **26–08–2025 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : **28–08–2025 11:30ಕ್ಕೆ,** 7) ಟೆಂಡರನ ಮೊತ್ತ: ರೂ. **98,48,909/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 1,48,000/–, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472–260252 Office Email: directorgimsgulbarga@gmail.com Cell:+91 9482093568 Tender Section Email: gimstenderklb22@gmail.com Cell:+91 9972688602

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/387/ಕೆ.ಎಸ್.ಎಂ.ಸಿ.&ಎ/2025–26

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಾನೇನು ಮಾಡಿದ್ದೇನೆ ಎಂಬುದನ್ನು ನಾನು ನೋಡುವುದಿಲ್ಲ. ನಾನಿನ್ನೂ ಮಾಡಬೇಕಾದುದೇನಿದೆ ಎಂಬುದನ್ನು ಮಾತ್ರ ಗಮನಿಸುತ್ತೇನೆ.

–ಗೌತಮ ಬುದ್ಧ

ಸಂಪಾದಕೀಯ

ಬೀದಿನಾಯಿಗಳಿಗೆ ಆಶ್ರಯ ಕೇಂದ್ರ ತೀರ್ಪು ಪರಿಶೀಲನೆಗೆ ಒಳಪಡಲಿ

ದೆಹಲಿ ಮತ್ತು ರಾಷ್ಟ್ರ ರಾಜಧಾನಿಯ ಸುತ್ತಮುತ್ತಲಿನ ಪ್ರದೇಶಗಳ ಬೀದಿನಾಯಿಗಳನ್ನು ಹಿಡಿದು, ಅವುಗಳನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸುವಂತೆ 'ದೆಹಲಿ–ರಾಷ್ಟ್ರ ರಾಜಧಾನಿ ಪ್ರದೇಶ'ದ (ಎನ್‌ಸಿಆರ್) ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನ, ಈ ಹಿಂದಿನ ನ್ಯಾಯಾಲಯದ ತೀರ್ಪುಗಳಿಗೆ ಹಾಗೂ ಜಾರಿಯಲ್ಲಿರುವ ಕಾನೂನುಗಳಿಗೆ ವಿರುದ್ಧವಾದುದಾಗಿದೆ. ವಿಭಾಗೀಯ ಪೀಠದ ನಿರ್ದೇಶನದ ಹಿಂದೆ, ಭೂಮಿಯ ಮೇಲೆ ವಾಸಿಸಲು ಮನುಷ್ಯರಿಗಷ್ಟೇ ಹಕ್ಕಿದೆ ಎನ್ನುವ ಮನಸ್ಥಿತಿ ಇರುವಂತಿದೆ. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ– 1960 ಹಾಗೂ ಪ್ರಾಣಿಗಳ ಜನನ ನಿಯಂತ್ರಣ ನಿಯಮಗಳು– 2023 (ಎಬಿಸಿ) ರೀತಿಯ ಕಾನೂನುಗಳು, ಪ್ರಾಣಿಗಳು ಮತ್ತು ಸಾಕುಪ್ರಾಣಿಗಳನ್ನು ನಾವು ಹೇಗೆ ನಡೆಸಿಕೊಳ್ಳಬೇಕು ಎನ್ನುವುದನ್ನು ಸ್ಪಷ್ಟಪಡಿಸುತ್ತವೆ. ಈ ಕಾನೂನುಗಳು ಮನುಷ್ಯರ ಹಿತರಕ್ಷಣೆ ಹಾಗೂ ಪ್ರಾಣಿಗಳ ಹಕ್ಕುಗಳ ನಡುವೆ ಸಮತೋಲನ ಸಾಧಿಸುವುದು ಹೇಗೆ ಎನ್ನುವುದರ ಬಗ್ಗೆಯೂ ತಿಳಿಸುತ್ತವೆ. ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಹಾಗೂ ಲಸಿಕೆ ನೀಡುವ ವ್ಯವಸ್ಥೆಯನ್ನು ನಿರ್ವಹಿಸುವುದು ಆಡಳಿತ ಸಂಸ್ಥೆಗಳ ಹೊಣೆಗಾರಿಕೆಯಾಗಿದೆ. ಅಧಿಕಾರಿಗಳ ಹೊಣೆಗಾರಿಕೆಯ ವೈಫಲ್ಯದಿಂದಾಗಿಯೇ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗಿದ್ದು, ಆಡಳಿತದಲ್ಲಿನ ಲೋಪಕ್ಕೆ ಬೀದಿನಾಯಿಗಳು ದಂಡ ತೆರುವಂತೆ ಆಗಬಾರದು.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಆರ್. ಮಹಾದೇವನ್ ಅವರನ್ನೊಳಗೊಂಡ ವಿಭಾಗೀಯ ಪೀಠ ನೀಡಿರುವ ತೀರ್ಪಿನಲ್ಲಿ ಪ್ರಾಣಿಪ್ರಿಯರು ಮತ್ತು ಹೋರಾಟಗಾರರ ಬಗ್ಗೆ ಕಠಿಣ ನುಡಿಗಳನ್ನಾಡಲಾಗಿದೆ. ನಾಯಿ ಕಡಿತದಿಂದ ಸಾವಿಗೀಡಾಗಿರುವ ಮಕ್ಕಳನ್ನು ಜೀವಂತಗೊಳಿಸುವುದು ಸಾಧ್ಯವಿಲ್ಲವಾದ್ದರಿಂದ, ನಾಯಿಗಳನ್ನು ಆಶ್ರಯತಾಣಗಳಿಗೆ ತಳ್ಳುವ ಪ್ರಕರಣದಲ್ಲಿ ಪ್ರಾಣಿಪ್ರಿಯರ ಭಾವನೆಗಳಿಗೆ ಯಾವುದೇ ಬೆಲೆಯಿಲ್ಲ ಎಂದು ನ್ಯಾಯಪೀಠ ಹೇಳಿದೆ. ಆದರೆ, ಸುಪ್ರೀಂ ಕೋರ್ಟ್‌ನ ಈ ತೀರ್ಮಾನದಲ್ಲಿ ಸಮರ್ಪಕ ತರ್ಕ ಅಥವಾ ಕಾನೂನಿನ ನೆಲೆಗಟ್ಟು ಇರುವಂತಿಲ್ಲ. ತೀರ್ಪು ನೀಡುವ ಮುನ್ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಪ್ರಾಣಿ ಸಂರಕ್ಷಣಾ ಸಂಸ್ಥೆಗಳ ಅಭಿಪ್ರಾಯಗಳನ್ನು ನ್ಯಾಯಪೀಠ ಆಲಿಸಿಲ್ಲ. ಸರ್ಕಾರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ಅವರು ಕೂಡ ಕಠಿಣ ನಿಲುವನ್ನು ತಳೆದುದರಿಂದ, ಆರಂಭದಲ್ಲಿ ದೆಹಲಿಗಷ್ಟೇ ಸೀಮಿತವಾಗಿದ್ದ ಬೀದಿನಾಯಿಗಳನ್ನು ಆಶ್ರಯ ತಾಣಗಳಿಗೆ ಅಟ್ಟುವ ಆದೇಶ, ಇಡೀ 'ಎನ್‌ಸಿಆರ್'ಗೆ ವಿಸ್ತರಣೆಗೊಂಡಿತು. ಆದರೆ, ನಾಯಿಗಳ ಜನನ ನಿಯಂತ್ರಣಕ್ಕೆ ಸಂಬಂಧಿಸಿದಂತೆ 'ಎಬಿಸಿ' ಕಾನೂನುಗಳು ಮಾತ್ರವೇ ತರ್ಕಬದ್ಧ, ವೈಜ್ಞಾನಿಕ, ಪಕ್ಕಾ ಪರಿಹಾರವಾಗಿವೆ ಎಂದು ಕೇಂದ್ರ ಸರ್ಕಾರ ಕಳೆದ ಏಪ್ರಿಲ್‌ನಲ್ಲಿ ಲೋಕಸಭೆಗೆ ತಿಳಿಸಿತ್ತು. ಸುಪ್ರೀಂ ಕೋರ್ಟ್ ಕೂಡ ಈ ಮೊದಲು 'ಎಬಿಸಿ' ಕಾನೂನುಗಳನ್ನು ಎತ್ತಿಹಿಡಿದಿದೆ ಹಾಗೂ ನಿರ್ಬಂಧ ಅಥವಾ ಸ್ಥಳಾಂತರದ ಬದಲು ನಾಯಿಗಳಿಗೆ ಲಸಿಕೆ ಹಾಕಿಸುವಂತೆ ಹೇಳಿದೆ. ಈಗ ವ್ಯತಿರಿಕ್ತ ನಿಲುವು ತಳೆದಿರುವ ನ್ಯಾಯಪೀಠ, ತನ್ನ ಆದೇಶದ ಅನುಷ್ಠಾನದಲ್ಲಿ ಎದುರಾಗುವ ಯಾವುದೇ ಪ್ರತಿರೋಧವನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸುವುದಾಗಿ ಎಚ್ಚರಿಸಿದೆ.

ಬೀದಿನಾಯಿಗಳನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಬೇಕು ಎನ್ನುವ ಸುಪ್ರೀಂ ಕೋರ್ಟ್ ನಿರ್ದೇಶನ ಹೊಸ ಸಮಸ್ಯೆಗಳಿಗೆ ಕಾರಣ ಆಗಬಹುದು. ತೀರ್ಪಿನ ತ್ವರಿತ ಪರಿಶೀಲನೆ ಅಗತ್ಯ

ದೆಹಲಿಯ ಬೀದಿಗಳಲ್ಲಿ ಸುಮಾರು 10 ಲಕ್ಷ ನಾಯಿಗಳಿವೆ. ಅವುಗಳಿಗೆ ಆಶ್ರಯ ತಾಣಗಳನ್ನು ಕಲ್ಪಿಸುವುದು ಕೋಟ್ಯಂತರ ರೂಪಾಯಿಗಳ ವೆಚ್ಚಕ್ಕೆ ಕಾರಣವಾಗುತ್ತದೆ. ಆಶ್ರಯ ತಾಣಗಳಿಗಾಗಿ ಜಾಗ, ಕಟ್ಟಡಗಳ ನಿರ್ಮಾಣ, ಸಿಬ್ಬಂದಿ ಸಂಬಳ ಭರಿಸಬೇಕಾಗುತ್ತದೆ. ಸಂತ್ರಸ್ತರ ಶಿಬಿರಗಳಂತೆ ಈ ಕೇಂದ್ರಗಳನ್ನು ನಡೆಸಬೇಕಾಗುತ್ತದೆ. ಆಶ್ರಯ ಕೇಂದ್ರಗಳಿಗೆ ರವಾನೆಯಾಗುವ ನಾಯಿಗಳಿಂದ ತೆರವಾಗುವ ಬೀದಿಗಳಲ್ಲಿ, ಲಸಿಕೆ ಹಾಗೂ ಸಂತಾನ ನಿಯಂತ್ರಣಕ್ಕೆ ಒಳಪಡದ ನಾಯಿಗಳು ಬಂದು ನೆಲೆಗೊಳ್ಳುವ ಸಾಧ್ಯತೆಯಿದೆ. ಹೀಗೆ ಬೇರೆ ರಾಜ್ಯಗಳಿಂದ ಬರುವ ನಾಯಿಗಳನ್ನು ಗಡಿಗಳಲ್ಲಿ ತಡೆದು ಆಶ್ರಯ ಕೇಂದ್ರಗಳಿಗೆ ರವಾನಿಸಲು ಸಾಧ್ಯವಿದೆಯೆ? ಲಭ್ಯ ಅಂಕಿ ಅಂಶಗಳ ಪ್ರಕಾರ, ನಾಯಿ ಕಡಿತಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ನಿಜ. ಆದರೆ, ನಾಯಿಗಳನ್ನು ಊರಿನಿಂದ ಹೊರಗೆ ದೊಡ್ಡಿಗಳಂಥ ಕೇಂದ್ರಗಳಲ್ಲಿ ಕೂಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಅಮಾನವೀಯ ಹಾಗೂ ಪ್ರಾಯೋಗಿಕವಲ್ಲದ ಪರಿಹಾರಗಳಿಂದ ಸಮಸ್ಯೆಗಳೇ ಹೆಚ್ಚು. ಬೀದಿನಾಯಿಗಳನ್ನು ಆಶ್ರಯ ಕೇಂದ್ರಗಳಲ್ಲಿ ಇರಿಸುವ ನ್ಯಾಯಪೀಠದ ತೀರ್ಪಿನ ಪರಿಶೀಲನೆ ನಡೆಸುವುದಾಗಿ ಮುಖ್ಯ ನ್ಯಾಯಮೂರ್ತಿ ಆರ್.ಬಿ. ಗವಾಯಿ ಹೇಳಿದ್ದಾರೆ. ಆ ಪರಿಶೀಲನೆ ತ್ವರಿತಗತಿಯಲ್ಲಿ ನಡೆದು, ಬೀದಿನಾಯಿಗಳಿಂದ ಉಂಟಾಗುತ್ತಿರುವ ಸಮಸ್ಯೆಗೆ ಕಾನೂನಿನ ಚೌಕಟ್ಟಿನಲ್ಲಿ, ಪ್ರಾಯೋಗಿಕ ಹಾಗೂ ಮಾನವೀಯ ಪರಿಹಾರ ಕಂಡುಕೊಳ್ಳುವಂತಾಗಲಿ.

ಚಂದ್ರನಲ್ಲಿ ಪರಮಾಣು ಪೈಪೋಟಿ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ದಿಲ್ಲಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದು ಹೆಚ್ಚಿನ ಓದಿಗೆಂದು ಅಮೆರಿಕಕ್ಕೆ ಹೋದ ಯುವತಿ ಭವ್ಯಾ ಲಾಲ್ ಅಮೆರಿಕದ 'ನಾಸಾ' ಬಾಹ್ಯಾಕಾಶ ಸಂಸ್ಥೆಯಲ್ಲಿ ತುಂಬ ಎತ್ತರದ ಹುದ್ದೆಗೆ ಏರಿದವರು. ಹಿಂದಿನ ಅಧ್ಯಕ್ಷ ಜೋ ಬೈಡನ್ ಅವರಿಗೆ ಬಾಹ್ಯಾಕಾಶ ವಿಷಯದಲ್ಲಿ ಸರ್ವೋನ್ನತ ಸಲಹೆಗಾರ್ತಿ, ಅಂದರೆ 'ಚೀಫ್ ಆಫ್ ಸ್ಟಾಫ್' ಆಗಿದ್ದರು. ಚಂದ್ರನ ನೆಲದ ಮೇಲೆ ನಾವೇನು ಮಹತ್ವದ್ದನ್ನು ಸಾಧಿಸಬಹುದು ಎಂಬ ಬಗ್ಗೆ ಈಕೆ ಸಲ್ಲಿಸಿದ ವರದಿಗೆ ಕಳೆದ ವರ್ಷ ಭಾರೀ ಮಹತ್ವ ಬಂತು. ಆ ವರದಿಯಲ್ಲಿ ಅವರು 'ಗೋ ಬಿಗ್ ಆರ್ ಗೋ ಹೋಮ್' (ಭಾರೀ ಗುರಿ ಹೂಡಿ, ಇಲ್ಲವೇ ಮನೆಯಲ್ಲೇ ಮುದುಡಿ ಕೂತಿರಿ) ಎಂಬ ವಾಕ್ಯವನ್ನೂ ಸೇರಿಸಿದ್ದರು. ಅದು ಚಕಮಕಿಯಂತೆ ಕೆಲಸ ಮಾಡಿದ್ದರಿಂದಲೇ ಅಮೆರಿಕ ಮೈಕೊಡವಿ ಎದ್ದಿದೆ. ಚಂದ್ರನ ನೆಲದಲ್ಲಿ 2030ರ ಹೊತ್ತಿಗೆ ಪರಮಾಣು ಸ್ಥಾವರ ಹೂಡುವುದಾಗಿ ಇದೀಗ ಘೋಷಿಸಿದೆ.

ಮನುಷ್ಯ ಜೀವಿ ಈ ಹಿಂದೆ ಚಂದ್ರನ ಮೇಲೆ ಇಳಿದು ಮೂರು ದಿನದ ವಾಸ್ತವ್ಯ ಹೂಡಿ ಮರಳಿ ಬಂದಿದ್ದು 53 ವರ್ಷಗಳ ಹಿಂದೆ. ಅಮೆರಿಕದ 12 ಗಗನಯಾತ್ರಿಗಳು 1969ರಿಂದ 72ರವರೆಗೆ ಅಲ್ಲಿಗೆ ಹೋಗಿ ಬಂದಿದ್ದು ಬಿಟ್ಟರೆ ನಂತರ ಯಾರೂ ಹೋಗಿಲ್ಲ. ಈಗ ಚೀನಾ, ರಷ್ಯಾ, ಜಪಾನ್ ಅಷ್ಟೇಕೆ, ಭಾರತ ಕೂಡ ಅಲ್ಲಿ ತಂತಮ್ಮ ಪ್ರಜೆಗಳನ್ನು ಇಳಿಸಲು ಯೋಜನೆ ಹಾಕಿಕೊಂಡಿದ್ದರಿಂದ ಅಮೆರಿಕಕ್ಕೆ ತಾನು ಹಿಂದೆ ಬಿದ್ದೇನೆಂಬ ಭಾವನೆ ಬಂದಿದೆ. ಈ ಮೊದಲು ಸೋವಿಯತ್ ರಷ್ಯಾಕ್ಕೆ ಪೈಪೋಟಿ ಕೊಡಲೆಂದು ಅದು 'ಅಪೊಲೊ ಮಿಷನ್' ಹೂಡಿದ ಹಾಗೆ ಈಗ ಹೊಸದಾಗಿ 'ಆರ್ಟೆಮಿಸ್ ಮಿಷನ್' ಹೆಸರಿನಲ್ಲಿ ಮತ್ತೆ ಚಂದ್ರನತ್ತ ಹೊರಡಲು ತೋಳೇರಿಸಿದೆ. (ಆರ್ಟೆಮಿಸ್ ಎಂಬುದು ಗ್ರೀಕ್ ಪುರಾಣದಲ್ಲಿ ಬರುವ ಚಂದ್ರದೇವಿಯ ಹೆಸರು). ಈ ಯೋಜನೆಯ ಪ್ರಕಾರ ಚಂದ್ರನ ಮೇಲೆ ಒಬ್ಬ ಮಹಿಳೆಯನ್ನೂ ಮತ್ತೊಬ್ಬ ಶ್ವೇತೇತರ ವ್ಯಕ್ತಿಯನ್ನೂ ಇಳಿಸಬೇಕು; ಅಲ್ಲೊಂದು ನೆಲೆಯನ್ನು ಸ್ಥಾಪಿಸಿ, ಅಲ್ಲಿಂದ ಮಂಗಳ ಮತ್ತು ಅದರಾಚಿನ ಲೋಕಕ್ಕೆ ಮಾನವರನ್ನು ಕಳಿಸುವ ಸಿದ್ಧತೆ ನಡೆಸಬೇಕು ಎಂಬೆಲ್ಲ ದೂರಗಾಮೀ ನೀಲನಕ್ಷೆಗಳನ್ನು ರೂಪಿಸಲಾಗಿದೆ.

ಚಂದ್ರನ ಮೇಲೆ ನೆಲೆಯೂರುವುದು ಇಡೀ ಮಾನವ ಸಂಕುಲದ ಯೋಜನೆ ಆಗಬೇಕಿತ್ತು. ಆದರೆ, ಹಿಂದೆ ಅಂಟಾರ್ಕ್ಟಿಕಾ ಖಂಡವನ್ನು ಆಕ್ರಮಿಸಿಕೊಳ್ಳಲೆಂದು ನಾನಾ ದೇಶಗಳು ಪೈಪೋಟಿ ನಡೆಸಿದ ಹಾಗೆ ಈಗ ಚಂದ್ರನ ನೆಲವೂ ಪ್ರತಿಷ್ಠೆಯ ಕಣವಾಗುತ್ತಿದೆ. ಆಗಲೇ ಚೀನಾ ಮತ್ತು ರಷ್ಯಾ ದೇಶಗಳು ಅಲ್ಲಿ ಮನೆ ಕಟ್ಟುವ ಸಿದ್ಧತೆ ಮಾಡಿಕೊಳ್ಳುತ್ತಿವೆ. ತಿಂಗಳುಗಟ್ಟಲೆ ವಾಸ್ತವ್ಯ ಹೂಡಬೇಕೆಂದರೆ ಅಲ್ಲಿ ಮೊದಲು ಶಕ್ತಿ ಸ್ಥಾವರವೊಂದನ್ನು ಹೂಡಲೇಬೇಕು. ಶಕ್ತಿ ಇದ್ದರೆ ತಾನೆ ಗಾಳಿ, ನೀರು, ಇಟ್ಟಿಗೆ, ಪೆಟ್ಟಿಗೆಗಳನ್ನು ಉತ್ಪಾದಿಸಲು ಸಾಧ್ಯ? ಅಲ್ಲಿ ಕಲ್ಲಿದ್ದಲು ಇಲ್ಲ, ಪೆಟ್ರೋಲು ಇಲ್ಲ, ನೈಸರ್ಗಿಕ ಅನಿಲವಿಲ್ಲ; ನದಿ–ಕೆರೆಗಳಿಲ್ಲ, ಗಾಳಿ ಇಲ್ಲ. ಚಂದ್ರಗರ್ಭದಲ್ಲಿ ಶಾಖವಿಲ್ಲ, ಸೂರ್ಯನ ಬೆಳಕೂ ಸಾಕಷ್ಟಿಲ್ಲ. ಹಾಗಾಗಿ, ವಿದ್ಯುತ್ ಶಕ್ತಿಯ ಉತ್ಪಾದನೆಗೆ ಪರಮಾಣು ಸ್ಥಾವರವೇ ಆಗಬೇಕು. ಅದರಲ್ಲಿ ಒಂದೆರಡು ಕಿಲೊ ಯುರೇನಿಯಂ ಇಂಧನವನ್ನು ತುಂಬಿಟ್ಟರೆ ಅದು ತನ್ನಷ್ಟಕ್ಕೆ ದಶಕಗಳ ಕಾಲ ಉರಿಯುತ್ತಿರುತ್ತದೆ. ಅದಕ್ಕೇ ರಷ್ಯಾ ಮತ್ತು ಚೀನಾ 2035ರ ವೇಳೆಗೆ ತಾವು ಜಂಟಿಯಾಗಿ ಅಲ್ಲೊಂದು ಪರಮಾಣು ಸ್ಥಾವರವನ್ನು ಕಟ್ಟಿ ನಿಲ್ಲಿಸುತ್ತೇವೆಂದು ಘೋಷಣೆ ಮಾಡಿವೆ. ಆ ಸಾಧನೆಯನ್ನು ಹಿಮ್ಮೆಟ್ಟಿಸಬೇಕೆಂದೇ ಅಮೆರಿಕ ತಾನು 2030ರೊಳಗೇ ಅಂಥ ಶಕ್ತಿ ಸ್ಥಾವರವನ್ನು ಹೂಡುವುದಾಗಿ ಘೋಷಿಸಿದೆ.

ಅಮೆರಿಕ ಟೊಂಕ ಕಟ್ಟಿತೆಂದರೆ ಅದು ಇಡೀ ಮನುಕುಲಕ್ಕೆ ಕಟ್ಟೆಚ್ಚರದ ವಿದ್ಯಮಾನವೂ ಆದೀತು; ದಿಟ್ಟಹೆಜ್ಜೆಯೂ ಆದೀತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಜರ್ಮನಿ ಪರಮಾಣು ಬಾಂಬ್ ತಯಾರಿಸಲು ಹೊರಟಿದೆ ಎಂಬುದು ಗೊತ್ತಾದಾಗ ಅಮೆರಿಕ 'ಮ್ಯಾನಹಟ್ಟನ್ ಯೋಜನೆ'ಯ ಹೆಸರಿನಲ್ಲಿ ತನ್ನ ವ್ಯಾಪ್ತಿಯಲ್ಲಿರುವ ಎಲ್ಲ ಪ್ರತಿಭಾವಂತ ವಿಜ್ಞಾನಿಗಳನ್ನೂ ಮಿಲಿಟರಿ ತಜ್ಞರನ್ನೂ ಒಂದೆಡೆ ಸೇರಿಸಿ ಮೂರೇ ವರ್ಷಗಳಲ್ಲಿ ಅಸಾಧ್ಯವನ್ನೂ ಸಾಧಿಸಿತು. ಹಿರೋಶಿಮಾ, ನಾಗಾಸಾಕಿ ನಗರಗಳ ಮುಗ್ಧರ ಮೇಲೆ ಬಾಂಬ್ ಹಾಕಿ ಜಪಾನ್, ಜರ್ಮನಿ ದೇಶಗಳನ್ನು ಶಾಶ್ವತವಾಗಿ ಹಿಮ್ಮೆಟ್ಟಿಸಿತು. ಅದೇ ನೆಪದಲ್ಲಿ ನಂತರ ಹತ್ತಾರು ದೇಶಗಳು ತಮ್ಮ ಉಡಿಯಲ್ಲಿ ಈ ಪ್ರಳಯಾಂತಕ ಅಸ್ತ್ರವನ್ನು ಇಟ್ಟುಕೊಳ್ಳುವಂತಾಯಿತು. 1957ರಲ್ಲಿ ರಷ್ಯನ್ನರು ಭೂಮಿಯ ಸುತ್ತ ಪ್ರದಕ್ಷಿಣೆ ಹಾಕುವಂತೆ 'ಸ್ಪುತ್ನಿಕ್' ಹೆಸರಿನ ಬಾಹ್ಯಾಕಾಶ ಡಬ್ಬಿಯನ್ನು ಉಡಾಯಿಸಿದಾಗ ಅಮೆರಿಕ ಮತ್ತೆ ಧಿಗ್ಗನೆದ್ದು ಬಾಹ್ಯಾಕಾಶ ಸಂಚಾರಕ್ಕೆಂದೇ 'ನಾಸಾ' ಸಂಸ್ಥೆಯನ್ನು ಆರಂಭಿಸಿ ಚಂದ್ರನ ಮೇಲೂ ಕಾಲೂರಿತು. ಸೋವಿಯೆತ್ ರಷ್ಯಾವನ್ನು ಹಿಂದಿಕ್ಕಿ ಮುನ್ನುಗ್ಗಿತು. ಅಮೆರಿಕ ಆಗಿಟ್ಟ ಆ ದಿಟ್ಟ ಹೆಜ್ಜೆಯಲ್ಲಿ ಆರೇಳು ದೇಶಗಳು ಸಾಗುವಂತಾಯಿತು.

ಈಗಿನ ಈ ಚಂದ್ರನ ಮೇಲಿನ ಪರಮಾಣು ಸ್ಥಾವರ ಪೈಪೋಟಿ ದಿಟ್ಟವೊ ದುಷ್ಟವೊ? ಉತ್ತರ ಹುಡುಕಲು ಹೊರಟರೆ ಅನೇಕ ಸ್ವಾರಸ್ಯಗಳು ಹೊರಬರುತ್ತವೆ. ಇದುವರೆಗೆ ಪರಮಾಣು ವಿದ್ಯುತ್ ಕ್ಷೇತ್ರದಲ್ಲಿ ದೊಡ್ಡ, ಇನ್ನೂ ದೊಡ್ಡ ಸ್ಥಾವರಗಳನ್ನು ನಿರ್ಮಿಸುವ ಪೈಪೋಟಿ ಇತ್ತು. ಈಗ ಅದಕ್ಕೆ ವಿರುದ್ಧವಾಗಿ, ಚಿಕ್ಕ, ಇನ್ನೂ ಚಿಕ್ಕ ಸ್ಥಾವರದ ನಿರ್ಮಾಣವಾಗಬೇಕು. ಕಳಚಿ ಅದನ್ನು ಎಲ್ಲೆಂದರಲ್ಲಿ ಹೊತ್ತೊಯ್ಯುವಂತಿರಬೇಕು. ಚೀನಾ, ರಷ್ಯಾ ದೇಶಗಳು ಇಂಥ 'ಸ್ಮಾಲ್ ಮಾಡ್ಯೂಲರ್ ರಿಯಾಕ್ಟರ್'ಗಳ (ಎಸ್‌ಎಂಆರ್) ನಿರ್ಮಾಣದಲ್ಲಿ ಮುಂದಿವೆ. ರಷ್ಯಾ ಐದು ವರ್ಷಗಳ ಹಿಂದೆ ಉತ್ತರ ಧ್ರುವ ಸಮೀಪದ ಘೋರ ಚಳಿಯ ಪಟ್ಟಣದ ಬಳಿಯ ಹಿಮನದಿಯ ಮೇಲೆ 'ಜಗತ್ತಿನ ಏಕೈಕ ತೇಲುಸ್ಥಾವರ' ಎಂಬ ಹೆಗ್ಗಳಿಕೆಯೊಂದಿಗೆ ಒಂದು ಪರಮಾಣು ವಿದ್ಯುತ್ ಘಟಕವನ್ನು ಸ್ಥಾಪಿಸಿ, ವಿದ್ಯುತ್ ಉತ್ಪಾದನೆ ಮಾಡುತ್ತಿದೆ. ಇತ್ತ ಚೀನಾ ಕೂಡ ನಾಲ್ಕು ವರ್ಷಗಳ ಹಿಂದೆಯೇ ಎಸ್ಸೆಮ್ಮಾರ್ ನಿರ್ಮಾಣದಲ್ಲಿ ಪರಿಣತಿ ಸಾಧಿಸಿದೆ. ದೇಶ– ವಿದೇಶಗಳಲ್ಲಿ ಮಾರಲೆಂದೇ ಅದು ಲಿಂಗ್ಲಾಂಗ್ ಯೋಜನೆಯಲ್ಲಿ ಹೊಸ ಮಾದರಿಗಳನ್ನು ನಿರ್ಮಿಸುತ್ತಿದೆ.

> ಇನ್ನು ಐದೇ ವರ್ಷಗಳಲ್ಲಿ ಚಂದ್ರನ ಮೇಲೆ ಪುಟ್ಟ ಪರಮಾಣು ಸ್ಥಾವರವನ್ನು ಹೂಡಲಿದ್ದೇವೆಂದು 'ನಾಸಾ' ಘೋಷಿಸಿದೆ. ರಷ್ಯಾ–ಚೀನಾ ಜಂಟಿಯಾಗಿ 2035ರ ವೇಳೆಗೆ ಅದೇ ಗುರಿ ಇಟ್ಟದ್ದರಿಂದಲೇ ಅಮೆರಿಕ ಅವಸರದ ಸಾಹಸಕ್ಕೆ ಹೊರಡುತ್ತಿದೆ. ಪರಮಾಣು ಬಾಂಬ್‌ಗಳನ್ನು ತಮ್ಮದಾಗಿಸಿಕೊಳ್ಳಲು ಹಿಂದೆಲ್ಲ ಶಕ್ತ ರಾಷ್ಟ್ರಗಳು ಪೈಪೋಟಿ ನಡೆಸಿದ್ದರಿಂದ ಈಗ ಭೂಮಿಯ ಮೇಲೆ 12 ಸಾವಿರಕ್ಕೂ ಹೆಚ್ಚು ಬಾಂಬ್‌ಗಳು ಅವಿತು ಕೂತಿವೆ.

ಅಮೆರಿಕದ ಸಾಧನೆ ಇದುವರೆಗೆ ಸೊನ್ನೆ. ಒಂದು ಎಸ್ಸೆಮ್ಮಾರ್ ನಿರ್ಮಿಸಲು ಹೋಗಿ ವೆಚ್ಚ ತೀರಾ ಜಾಸ್ತಿ ಆಯಿತೆಂದು ಎರಡು ವರ್ಷಗಳ ಹಿಂದೆ ಕೈಬಿಡಲಾಗಿದೆ. ಈಗ ಅಮೆಜಾನ್ ಮತ್ತು ಮೈಕ್ರೊಸಾಫ್ಟ್ ಕಂಪನಿಗಳು ಪುಟ್ಟ ಘಟಕಗಳನ್ನು ನಿರ್ಮಿಸುತ್ತಿರುವುದಾಗಿ ಹೇಳಿವೆ. ಇನ್ನೇನು ಧಿಗ್ಗನೆದ್ದು ದೊಡ್ಡಣ್ಣ ತೋಳೇರಿಸಿತೆಂದರೆ ಅದೇ ಮಾದರಿಯ ಪುಟ್ಟ ಸ್ಥಾವರಗಳ ನಿರ್ಮಾಣಕ್ಕೆ ವಿವಿಧ ದೇಶಗಳಲ್ಲಿ ದೊಡ್ಡ ಪೈಪೋಟಿ ನಡೆಯಲಿದೆ. ಅವುಗಳ ನಿರ್ಮಾಣಕ್ಕೆ ಎರಡೇ ವರ್ಷ ಸಾಕು. ಕಾರ್ಬನ್ ಹೊಗೆ ಇಲ್ಲ; ಸಣ್ಣ ಪಟ್ಟಣಗಳಿಗೆ, ಕಾರ್ಖಾನೆಗಳ ಸಂಕೀರ್ಣಕ್ಕೆ ವಿದ್ಯುತ್ ಬೇಕಿದ್ದರೂ ಎಲ್ಲೆಂದರಲ್ಲಿ ಇದನ್ನು ಸ್ಥಾಪಿಸಬಹುದು ಎಂದೆಲ್ಲ ಹೊಗಳುತ್ತ ಖಾಸಗಿ ಕಂಪನಿಗಳು ನಮ್ಮಲ್ಲೂ ಅಂಥವನ್ನು ಸ್ಥಾಪಿಸುತ್ತ ಹೋದರೆ ಮುಂದಿನದನ್ನು ನಾವು ಊಹಿಸಿಕೊಳ್ಳಬಹುದು. ಈಗೇನೋ ಕೈಗಾ, ಕಕ್ರಪಾರಾ, ಕಲ್ಪಾಕ್ಕಮ್, ಕೂಡಂಕುಲಂನ ದೊಡ್ಡ ಸ್ಥಾವರಗಳಲ್ಲಿ ಬಿಗಿ ಭದ್ರತೆ ಇದೆ. ಅಲ್ಲಿ ಹೊಮ್ಮುವ ಅಪಾಯಕಾರಿ ವಿಕಿರಣ ತ್ಯಾಜ್ಯಗಳನ್ನು ಮತ್ತು ಶಿಥಿಲ ಬಿಡಿಭಾಗಗಳನ್ನು ಅಲ್ಲಲ್ಲೇ ಇಟ್ಟಿರುತ್ತಾರೆ. ಅಲ್ಲಿ ಭಯೋತ್ಪಾದಕರು ಅಥವಾ ವೈರಿ ದೇಶಗಳು ಶೆಲ್ ದಾಳಿ ನಡೆಸದಂತೆ ರಡಾರ್ ಕಣ್ಗಾವಲು ಇದೆ. ಹೂಳಿಟ್ಟ ತ್ಯಾಜ್ಯಗಳ ಮೇಲೆ ಸಮಾಧಿ ಕಟ್ಟಿದರೂ ಅದನ್ನು ಲಕ್ಷಗಟ್ಟಲೆ ವರ್ಷ ಕಾಯಬೇಕಾಗುತ್ತದೆ. ಯಾವ ಬಗೆಯ ಕಾಂಕ್ರೀಟಿನಲ್ಲಿ ಸಮಾಧಿ ಮಾಡುತ್ತಾರೊ, ಯಾವ ಭಾಷೆಯಲ್ಲಿ ಎಚ್ಚರಿಕೆ ಫಲಕ ಹಾಕುತ್ತಾರೊ ಯಾರಿಗೂ ಗೊತ್ತಿಲ್ಲ. ಯಾವುದೂ ಹತ್ತು ಸಾವಿರ ವರ್ಷಗಳವರೆಗೆ ಸ್ಥಿರವಾಗಿ ನಿಂತಿದ್ದು ನಮಗಂತೂ ಗೊತ್ತಿಲ್ಲ.

ಪರಮಾಣು ತ್ಯಾಜ್ಯಗಳ ಪ್ರಶ್ನೆ ಬಂದಾಗ ಅಲ್ಲಿ ದೊಡ್ಡದು ಚಿಕ್ಕದು ಎಂಬ ವ್ಯತ್ಯಾಸ ಇರುವುದಿಲ್ಲ. ಭೂಮಿಯ ಮೇಲೆ ಈಗ 2500 ಮೆಗಾವಾಟ್ ವಿದ್ಯುತ್ ಹೊಮ್ಮಿಸಬಲ್ಲ ಬೃಹತ್ ಸ್ಥಾವರಗಳಿವೆ. ಚಂದ್ರನ ಮೇಲೆ, ಅದರ ದಕ್ಷಿಣ ಧ್ರುವದ ಅರೆಗತ್ತಲಲ್ಲಿ ಸ್ಥಾಪಿಸಲೆಂದು ಅಮೆರಿಕ ಬರೀ 100 ಕಿಲೊವಾಟ್ (ಸಾವಿರ ಕಿಲೊವಾಟ್ ಅಂದರೆ ಒಂದು ಮೆಗಾವಾಟ್) ಸಾಮರ್ಥ್ಯದ ಚಿಕ್ಕ ಘಟಕವನ್ನು ಒಯ್ಯಲಿದೆಯಂತೆ. ನಮ್ಮೂರಲ್ಲಾದರೆ ಅದು ನೂರು ಮನೆಗಳ ಪುಟ್ಟ ಹಳ್ಳಿಗೆ ಸಾಲುವಷ್ಟು ವಿದ್ಯುತ್ ಶಕ್ತಿಯನ್ನು ನೀಡುತ್ತದೆ.

ಪುಟ್ಟ ಪರಮಾಣು ಸ್ಥಾವರಗಳು ಎಲ್ಲೆಂದರಲ್ಲಿ ಕೂತರೆ ಮುಂದಿನ ಪೀಳಿಗೆಗೆ ದೊಡ್ಡ ಪ್ರಶ್ನೆಗಳೇ ಎದುರಾಗಬಹುದು. ಪರಮಾಣು ಎಂದರೆ ಪ್ಲಾಸ್ಟಿಕ್ ಅಲ್ಲ. ಅತೀವ ಜಾಗೃತಿ, ಕಟ್ಟುನಿಟ್ಟಿನ ಶಿಸ್ತು, ಅಸ್ಖಲಿತ ಸಾಮಾಜಿಕ ಬದ್ಧತೆ ಎಲ್ಲವೂ ಇರಬೇಕಾಗುತ್ತದೆ. ನಮ್ಮಲ್ಲಿ ಅವೆಲ್ಲಿ? 1982ರಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಎಕ್ಸ್‌ರೇ ಯಂತ್ರದಲ್ಲಿದ್ದ ಮುಷ್ಟಿಗಾತ್ರದ ಸೀಸಿಯಂ ಡಬ್ಬಿ ಕಳೆದು ಹೋಗಿದ್ದರಿಂದ ಭಾರೀ ರಂಪಾಟವಾಗಿತ್ತು. 1993ರಲ್ಲಿ ಮದ್ರಾಸಿನ ಕೂವಂ ನದಿಗೆ ಅಂಥದ್ದೇ ಕಿರು ಡಬ್ಬಿಯನ್ನು ಬಿಸಾಕಲಾಗಿತ್ತು. ಹಾಹಾಕಾರ ಎದ್ದು ಪರಮಾಣು ತಜ್ಞರು ದೇಶದ ವಿವಿಧ ಭಾಗಗಳಿಂದ ಧಾವಿಸಿ ಬಂದು ಕೆಸರಿನ ಕೂಪದಲ್ಲಿ ಮೂರು ದಿನ ತಡಕಾಡಿ ತೆಗೆಯಬೇಕಾಯಿತು.

ಚಂದ್ರನ ನೆಲದಲ್ಲಿ ಹಾಗಾಗುವುದಿಲ್ಲ ಬಿಡಿ. ಅಲ್ಲಿ ನೀರೂ ಇಲ್ಲ, ಗಾಳಿಯೂ ಇಲ್ಲ, ಜನರೂ ದೀರ್ಘಕಾಲ ಇರುವಂತಿಲ್ಲ. ಹೋದ ಕೆಲವರೂ ಪರಮಾಣು ಸಾಧನಗಳನ್ನು ಕಂಡಲ್ಲಿ ಬಿಸಾಕುವಷ್ಟು ಅಶಿಸ್ತಿನ ಜನ ಆಗಿರುವುದಿಲ್ಲ. ಆದರೆ, ಚಂದ್ರನಿಗೆಂದು ರೂಪಿಸಿದ ಮಾದರಿಗಳು ನಾಳೆ ಚಂದ್ರಾ ಲೇಔಟಿಗೂ ಬಂದರೆ?

ವಾಚಕರ ವಾಣಿ

ಪ್ರಿಯಾಂಕ್ ಪರಿಣತಿ ಅನುಕರಣೀಯ

'ಕೃತಕ ಬುದ್ಧಿಮತ್ತೆ: ಪ್ರಭಾವಿಗಳ ಪಟ್ಟಿಯಲ್ಲಿ ಸಚಿವ ಪ್ರಿಯಾಂಕ್' (ಪ್ರ.ವಾ., ಆಗಸ್ಟ್ 13) ಸುದ್ದಿ ಓದಿ ಸಂತೋಷವಾಯಿತು. ಅವರವರ ರಾಜಕೀಯ ಏನೇ ಇರಲಿ, ನಮ್ಮ ವಿದ್ಯಾರ್ಥಿಗಳು ಮತ್ತು ಯುವಜನ ಇಂಥ ವಿಷಯಗಳಿಂದ ಸ್ಫೂರ್ತಿ ಪಡೆಯಬೇಕು. ಪ್ರಿಯಾಂಕ್ ಖರ್ಗೆ ಒಂದು ವರ್ಷ ಎಂಬಿಬಿಎಸ್ ಪದವಿ ವ್ಯಾಸಂಗ ಮಾಡಿ, ಅದನ್ನು ಅರ್ಧಕ್ಕೆ ನಿಲ್ಲಿಸಿದರು. ಈಗ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಪರಿಣತಿ ಸಾಧಿಸಿದ್ದಾರೆ. ಇದು ಪ್ರಶಂಸನೀಯ ಮತ್ತು ಅನುಕರಣೀಯ. ನಮ್ಮ ಮಕ್ಕಳು, ಸಿನಿ ತಾರೆಯರ ಹಿಂದೆ ಬಿದ್ದು ಜೀವನ ಹಾಳು ಮಾಡಿಕೊಳ್ಳುವುದಕ್ಕಿಂತ ಇದು ಎಷ್ಟೋ ಒಳ್ಳೆಯದು, ಅಲ್ಲವೇ?

ಡಾ. ಎಸ್.ಕೆ. ಕುಮಾರ್, ಬೇಲೂರು

ಸುಯೋಧನನ ಸಿಡುಕು ಯಾರ ಬಳುವಳಿ?

'ವಿದ್ಯೆ' ವ್ಯಂಗ್ಯವಾದ ವರ್ತಮಾನ ಲೇಖನ (ಲೇ: ಸಬಿತಾ ಬನ್ನಾಡಿ, ಪ್ರ.ವಾ., ಆಗಸ್ಟ್ 13) ಓದಿ ನಾಲ್ಕು ದಶಕಗಳ ಕಾಲ ಶಿಕ್ಷಕನಾಗಿ ಕೆಲಸ ಮಾಡಿದ ನನ್ನ ಅಂತರಾಳದಲ್ಲಿ ಅಪರಾಧಿ ಭಾವದ ತಾಕಲಾಟ ಶುರುವಾಯಿತು. ದುರ್ಯೋಧನನ ಸಿಡುಕು ಅಪ್ಪನಾದ ಧೃತರಾಷ್ಟ್ರನ ಬಳುವಳಿಯೇ? ಗುರುವಾದ ದ್ರೋಣರು ತನ್ನನ್ನು ಅವಮಾನಿಸಿದ ಗೆಳೆಯ ದ್ರುಪದನ ಮೇಲೆ ಸೇಡು ತೀರಿಸಿಕೊಳ್ಳಲು ಶಿಷ್ಯರನ್ನು ಅಣಿಗೊಳಿಸಿದರೇ?

ಶಿಕ್ಷಣ, ಪದವಿ, ಅಧಿಕಾರ, ಸಿದ್ಧಿ–ಪ್ರಸಿದ್ಧಿ ಎಲ್ಲವೂ ವಿವೇಕವಿಲ್ಲದ ಮೇಲೆ ಪ್ರಯೋಜನವಿಲ್ಲ. ನಮಗೆ ಶಾಲೆಯಲ್ಲಿ ಮಕ್ಕಳಿಗೆ ನೈತಿಕ ಶಿಕ್ಷಣ ಕೊಡಿ ಎಂದು ಯಾರು ಕೇಳಿಕೊಳ್ಳುತ್ತಾರೆ. ಒಳ್ಳೆಯ 'ಅಂಕಗಳು' ಸಿಗಬೇಕು ಅಷ್ಟೇ. ಎಲ್ಲೇ ಹೋಗಿ, ರ್‍ಯಾಂಕ್ ಬೇಕು; ಅಗ್ರಾಂಕಕ್ಕಾಗಿ ಉಗ್ರ ಪ್ರಯತ್ನ. ಮಕ್ಕಳಿಗೆ ನೈತಿಕ ಶಿಕ್ಷಣವನ್ನು ಅವಶ್ಯವಾಗಿ ಕೊಡಿ ಎಂದು ಸರ್ಕಾರಗಳು ಶಾಲೆಗಳಿಗೆ ಒಂದಾದರೂ ಆದೇಶ ಕೊಟ್ಟಿದ್ದರೆ ತಿಳಿಸಿ. ಇಲ್ಲ! 'ವಿದ್ಯಾದದಾತಿ ವಿನಯಂ'; ಈಗದು ವಿದ್ಯಾದದಾತಿ ಅಂಕಂ! ಲೇಖನದ ಕಳಕಳಿ ಸರ್ಕಾರದ ಹೃದಯ ತಟ್ಟಿ, ಮಕ್ಕಳ ಮನ ಮುಟ್ಟಬೇಕಿದೆ.

ತಿರುಪತಿ ನಾಯಕ್, ಕಲಬುರಗಿ

ಜನತಂತ್ರದ ಕೊಲೆಯಲ್ಲದೆ ಮತ್ತೇನು?

ಕಳೆದ ವಿಧಾನಸಭಾ ಚುನಾವಣೆ ವೇಳೆ ನನ್ನ ಬಳ್ಳಾರಿಯ ಮಾವ ಮನೆಗೆ ಒಯ್ಯುತ್ತಿದ್ದ ವಿಸ್ಕಿ ಬಾಟಲಿಯೊಂದನ್ನು ಚುನಾವಣಾ ಸಿಬ್ಬಂದಿ ಹಿಡಿದುಬಿಟ್ಟಿದ್ದರು. ಸ್ವಂತ ಉಪಯೋಗಕ್ಕೆ ತರುತ್ತಿದ್ದ ಅವರ ಮೇಲೆ ಮೊಕದ್ದಮೆ ಹೂಡಿ, ಸ್ಕೂಟರ್ ಜಪ್ತಿ ಮಾಡಿದರು. ಐದು ವರ್ಷ ಕೋರ್ಟ್‌ಗೆ ಅಲೆದು, ಖುಲಾಸೆಗೊಂಡು, ಕೊನೆಗೆ ಸಿಕ್ಕಿದ ಸ್ಕೂಟರ್ ಗುಜರಿ ಸೇರಿತು. ಇದೇ ನಮೂನೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡಿರುವ ಚುನಾವಣಾ ಅಕ್ರಮ ನಿಜವಾದರೆ ತಪ್ಪಿತಸ್ಥರಿಗೆ ಎಂಥ ಕಠಿಣ ಶಿಕ್ಷೆಯಾಗಬೇಕು? ಅಕ್ರಮ ಎಸಗಿದವರು, ಲಾಭ ಪಡೆದುಕೊಂಡವರೆಲ್ಲರೂ ಜೈಲು ಸೇರಬೇಕಲ್ಲವೇ?

ಚುನಾವಣಾ ಆಯೋಗ ಸಿದ್ಧಪಡಿಸಿದ ದಾಖಲೆಗಳೇ ಅದರ ತಪ್ಪನ್ನು ಜಗತ್ತಿಗೆ ಸಾರುತ್ತಿದ್ದರೂ, ಆಯೋಗ ಇದುವರೆಗೂ ಓರ್ವ ಸಿಬ್ಬಂದಿಯನ್ನೂ ಅಮಾನತು ಮಾಡಿಲ್ಲ. ಕನಿಷ್ಠ ಶಿಷ್ಟಾಚಾರಕ್ಕಾದರೂ ತನಿಖೆ ಮಾಡುತ್ತೇವೆ ಎಂದಿಲ್ಲ. ಹೀಗಿದ್ದಾಗ ಶತಮಾನಗಳ ಹೋರಾಟದ ಫಲದಿಂದ ಪಡೆದಿರುವ ಮತದಾನದ ಹಕ್ಕಿನ ಮಹತ್ವ ಉಳಿಯುವ ಬಗೆಯಾದರೂ ಯಾವುದು?

ಸಿದ್ದೇಗೌಡ ಶಾಂತರಾಜು, ಬೆಂಗಳೂರು

ಖಾದಿ ತಿರಂಗಾ ಪ್ರೋತ್ಸಾಹಿಸಿ

ಖಾದಿ ಉತ್ಪನ್ನಗಳು ನಿಜವಾದ ಆತ್ಮನಿರ್ಭರದ ಆಶಯಕ್ಕೆ ನಿದರ್ಶನವಾಗಿವೆ. ಇವು ಪರಿಸರ ಸ್ನೇಹಿಯಾಗಿದ್ದು, ಸ್ಥಳೀಯ ಆರ್ಥಿಕತೆಯನ್ನು ಪ್ರೋತ್ಸಾಹಿಸುತ್ತವೆ. 75ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರವು 'ಧ್ವಜ ನೀತಿ ಸಂಹಿತೆ'ಗೆ ತಿದ್ದುಪಡಿ ತರುವ ಮೂಲಕ ಯಂತ್ರದಿಂದ ನಿರ್ಮಿತ ಪಾಲಿಸ್ಟರ್ ಬಟ್ಟೆಯ ರಾಷ್ಟ್ರೀಯ ಧ್ವಜಗಳ ತಯಾರಿಕೆಗೆ ಅನುಮತಿ ನೀಡಿತ್ತು. ಪರಿಣಾಮವಾಗಿ ಪಾಲಿಸ್ಟರ್ ಬಟ್ಟೆಯಿಂದ ತಯಾರಿಸಿದ, ಕಡಿಮೆ ದರದಲ್ಲಿ ದೊರೆಯುವ ತ್ರಿವರ್ಣ ಧ್ವಜಗಳ ಮಾರಾಟ ಹೆಚ್ಚಾಗಿ, ಖಾದಿ ಬಟ್ಟೆಗಳಿಂದ ತಯಾರಿಸಿದ ರಾಷ್ಟ್ರಧ್ವಜ ಮಾರಾಟ ಕಡಿಮೆಯಾಗಿದೆ. ಇದನ್ನೇ ನಂಬಿದ ಖಾದಿ ಗ್ರಾಮೋದ್ಯೋಗದ ಕೆಲಸಗಾರರಿಗೆ ಸಂಕಷ್ಟ ಎದುರಾಗಿದೆ. ಖಾದಿಯಿಂದ ತಯಾರಿಸಿದ ರಾಷ್ಟ್ರಧ್ವಜವನ್ನು ಖರೀದಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕಿದೆ.

ಉದಯ ಮ. ಯಂಡಿಗೇರಿ, ಧಾರವಾಡ

ಮಾಹಿತಿ ಹಕ್ಕು ಮತ್ತು ಹೊಣೆಗಾರಿಕೆ

ರಾಜ್ಯ ವಿಧಾನಸಭಾ ಅಧಿವೇಶನದಲ್ಲಿ ಆಡಳಿತರೂಢ ಹಾಗೂ ವಿರೋಧ ಪಕ್ಷದ ಸದಸ್ಯರು, ಆರ್‌ಟಿಐ ಕಾರ್ಯಕರ್ತರ ಮೇಲೆ ಮುಗಿಬಿದ್ದಿದ್ದು ನಿರೀಕ್ಷಿತವೇ ಆಗಿದೆ. ಆರ್‌ಟಿಐ ಕಾರ್ಯಕರ್ತರು ಐಷಾರಾಮಿ ಜೀವನ ನಡೆಸುತ್ತಿದ್ದಾರೆ ಎಂಬುದು ಕೆಲವು ಶಾಸಕರ ವಾದ. ಆ ರೀತಿಯಲ್ಲಿ ಕೆಲವರು ಇರಬಹುದು. ಆದರೆ, ಈ ಐಷಾರಾಮಿ ಜೀವನಕ್ಕೆ ಎಡೆಮಾಡಿಕೊಟ್ಟಿದ್ದು ಯಾರು? ಈ ಮೂಲ ಪ್ರಶ್ನೆಯೂ ಸದನದಲ್ಲಿ ಚರ್ಚೆ ಆಗಬೇಕಲ್ಲವೇ?

ಮಾಹಿತಿ ಹಕ್ಕು ಅಧಿನಿಯಮ ಅರ್ಜಿದಾರರಿಗೆ ಮೂವತ್ತು ದಿನಗಳಲ್ಲಿ ಮಾಹಿತಿ ಒದಗಿಸಲು ಸಮಯಾವಕಾಶ ನೀಡುತ್ತದೆ. ಆ ಸಮಯದಲ್ಲಿ ಸಂಬಂಧಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿ ಒದಗಿಸಿದರೆ ಸಮಸ್ಯೆ ಇರುವುದಿಲ್ಲ. ಆದರೆ, ನಿಗದಿತ ಅವಧಿಯಲ್ಲಿ ಮಾಹಿತಿ ಏಕೆ ಒದಗಿಸುವುದಿಲ್ಲ. ಈ ವಿಷಯವೂ ಚರ್ಚಾರ್ಹವಲ್ಲವೇ? ಮಾಹಿತಿ ಹಕ್ಕು ಅಧಿನಿಯಮ ಜಾರಿಯಾಗಿ ಇಪ್ಪತ್ತು ವರ್ಷಗಳಾಗಿವೆ. ಅದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಶಾಸಕರ ಹೊಣೆಗಾರಿಕೆಯಲ್ಲವೇ?

ಅಬ್ದುಲ ರಝಾಕ ಡಿ. ಟಪಾಲ, ಕೆರೂರ

ಶೋಷಣೆ ಲಾಭ ಆಗಬಾರದು

ಪ್ರತಿ ವರ್ಷ ಬ್ಯಾಂಕ್‌ಗಳು ತಮ್ಮ ಲಾಭದ ಘೋಷಣೆ ಮಾಡುವುದನ್ನು ನೋಡಿ ಆಶ್ಚರ್ಯವಾಗುತ್ತದೆ. ಲಾಭ ಮಾಡಲು ಅವೇನು ಕೈಗಾರಿಕೆಗಳೆ? ಬ್ಯಾಂಕ್‌ಗಳು ಒಂದು ನಿಗದಿತ ಮಿತಿಗಿಂತ ಹೆಚ್ಚಿನ ಲಾಭ ಮಾಡುವಂತಿಲ್ಲ ಎಂದು ಆರ್‌ಬಿಐ ನಿರ್ದೇಶನ ಮಾಡಬೇಕು. ಬ್ಯಾಂಕ್‌ಗಳು ಸಾರ್ವಜನಿಕರ ಹಿತಕ್ಕಾಗಿ ಕಾರ್ಯ ನಿರ್ವಹಿಸಬೇಕೆ ಹೊರತು, ಅವರನ್ನು ಶೋಷಣೆ ಮಾಡಿ ಲಾಭ ಮಾಡಿಕೊಳ್ಳಬಾರದು.

ಎನ್.ಎಂ. ಕುಲಕರ್ಣಿ, ಸ್ವಯಂ ಉದ್ಯೋಗಿ, ಫೇಸ್‌ಬುಕ್‌ನಿಂದ

ಕಿಡಿನುಡಿ

ಆರ್‌ಟಿಐ ಕಾರ್ಯಕರ್ತರಿಗೆ ಕಡಿವಾಣ ಹಾಕಬೇಕೆಂದು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಜನಪ್ರತಿನಿಧಿಗಳು ಪಕ್ಷಭೇದ ಮರೆತು ಆಗ್ರಹಿಸಿದ್ದಾರೆ. ಆದರೆ, ಭ್ರಷ್ಟಾಚಾರ ಎಸಗುತ್ತಿರುವ ಅಧಿಕಾರಿಗಳಿಗೆ ಮತ್ತು ಭ್ರಷ್ಟ ರಾಜಕೀಯ ನಾಯಕರಿಗೆ ಕಡಿವಾಣ ಹಾಕಬೇಕೆಂದು ಪಕ್ಷಭೇದ ಮರೆತು ಹೋರಾಟ ಮಾಡಬೇಕಲ್ಲವೇ?

ನರಸಿಂಹರಾಜು ಸಿ.ಎನ್., ಕೆಆರ್‌ಎಸ್ ಮುಖಂಡ

ಚುರುಮುರಿ

ಹೀಗಾಗಬಾರದಿತ್ತು ಸಾರ್!

• ಗುರು ಪಿ.ಎಸ್.

'ಹೀಗಾಗಬಾರದಿತ್ತು, ಹೀಗಾಗಬಾರದಿತ್ತು' ಅತ್ತಲಿಂದ ಗಂಡು ದನಿಯೊಂದು ಬೇಸರದಲ್ಲಿ ಮಾತನಾಡತೊಡಗಿತು.

'ಏನಾಗಬಾರದಿತ್ತು, ಅಷ್ಟಕ್ಕೂ ನೀವ್ಯಾರು ಮಾತನಾಡ್ತಿರೋದು' ಗೊಂದಲದಲ್ಲಿ ಕೇಳಿದೆ.

'ಛೇ ಪಾಪ, ಮಂತ್ರಿ ಪದವಿ ಹೋಗಿದ್ದಕ್ಕೆ ಡಿಪ್ರೆಶನ್‌ಗೆ ಹೋಗಿದೀರಿ ಅನಿಸುತ್ತೆ'.

'ಮಂತ್ರೀನಾ! ಯಾವ ಮಂತ್ರಿ ಪದವಿ ರೀ, ನಾನ್ಯಾಕ್ ಡಿಪ್ರೆಶನ್‌ಗೆ ಹೋಗಲಿ'.

'ಒಂದೆರಡು ದಿನ ಬೇಸರ ಇದ್ದಿದ್ದೇ, ಆಮೇಲೆ ಎಲ್ಲ ಸರಿಹೋಗುತ್ತೆ'.

'ಇದ್ರೀ ಫೋನ್, ರಾಂಗ್ ನಂಬರ್' ಎಂದು ಹೇಳಿ ಕಾಲ್ ಕಟ್ ಮಾಡಿದೆ. ಎರಡೇ ನಿಮಿಷಕ್ಕೆ ಮತ್ತೊಂದು ಕಾಲ್ ಬಂತು.

'ಏನ್ ಸಾರ್ ಹೇಗಿದೀರಿ, ಬಿಜೆಪಿಯ ಹಿರಿಯ ನಾಯಕರ ಕರೆಯನ್ನೇ ಕರುಣೆ ಇಲ್ಲದೆ ಕಟ್ ಮಾಡಿದ್ರಂತೆ! ಮಿನಿಸ್ಟರ್ ಪದವಿ ಹೋಗಿದ್ದಕ್ಕೆ ಅಷ್ಟೊಂದ್ ಬೇಸರವಾಗಿದೆಯಾ?'

'ಯಾರ್ರೀ ನೀವೆಲ್ಲ, ಯಾವ ಬಿಜೆಪಿ ಲೀಡರ್, ಅವರೆಲ್ಲ ನಂಗ್ಯಾಕ್ ಫೋನ್ ಮಾಡ್ತಾರೆ' ಸಿಟ್ಟಿನಲ್ಲಿ ಹೇಳಿದೆ.

'ಓಹ್, ಅವರು ಹೇಳಿದ್ದು ಸರಿ ಬಿಡಿ. ನೀವು ನೋವಿನಲ್ಲಿ ನರಳ್ತಿದೀರಿ, ಈಗಲಾದರೂ ತಿಳ್ಕೊಳ್ಳಿ. ನಿಮ್ ಪಕ್ಷದಲ್ಲಿ ನಿಮಗೇ ವಾಕ್ ಸ್ವಾತಂತ್ರ್ಯ ಇಲ್ಲದಂತಾಯ್ತು' ಎನ್ನುತ್ತಾ ಫೋನಿಟ್ಟರು.

ಅರೆಕ್ಷಣದಲ್ಲೇ ಮತ್ತೊಂದು ಕಾಲ್, 'ನೋಡಿದ್ರಾ ಸರ್, ಬಿಜೆಪಿಯವರು ಈಗ ನಿಮ್ಮ ಪರ ಹೇಗ್ ಮಾತಾಡ್ತಿದ್ದಾರೆ, ನೀವು ಸಹಕಾರ ಸಚಿವರಾಗಿದ್ದಾಗ ಎಲ್ಲರೂ ಅಸಹಕಾರವನ್ನೇ ತೋರಿಸ್ತಿದ್ರು'.

'ಸರ್, ನಿನ್ನೆಯಷ್ಟೇ ಈ ಸಿಮ್ ಖರೀದಿಸಿದ್ದೀನಿ. ಇದು ಯಾರ ನಂಬರ್ ಆಗಿತ್ತು ದಯವಿಟ್ಟು ಹೇಳಿ'.

'ಅಯ್ಯೋ ಹೌದಾ, ಇದು ಮಿನಿಸ್ಟರ್ ಆಗಿದ್ದ ರಾಜಣ್ಣನವರ ಹಳೆಯ ನಂಬರ್ ಸರ್. ಈಗ ಅಧಿಕಾರ ಹೋಯ್ತಲ್ಲ, ಅದಕ್ಕೆ ಹಳೆಯ ನಂಬರ್‌ಗೆ ಕಾಲ್ ಮಾಡಿದ್ದೆ'.

'ಅಯ್ಯಯ್ಯೋ ಸಾರ್, ನಾನು ಮಿನಿಸ್ಟರ್ ಅಲ್ಲ. ಪಾಪರ್ ಪಾಪಣ್ಣ' ಎನ್ನುತ್ತಿದ್ದಂತೆ ಅವರು ಕಾಲ್ ಕಟ್ ಮಾಡಿದರು. 'ಸಿಗೋದು ಸಿಕ್ತು, ಅಧಿಕಾರದಲ್ಲಿ ಇರೋರ ಹಳೆಯ ನಂಬರ್‌ನ ಸಿಮ್ ಸಿಗಬಾರದಿತ್ತಾ' ಎನ್ನುತ್ತಾ ಮನಸಲ್ಲೇ ಮಂಡಿಗೆ ತಿನ್ನಲಾರಂಭಿಸಿದೆ.

25 ವರ್ಷಗಳ ಹಿಂದೆ

ಸೋಮವಾರ, 14-8-2000

• ಶೀಘ್ರವೇ 500ರ ಹೊಸ ನೋಟು

ನವದೆಹಲಿ, ಆಗಸ್ಟ್ 13 (ಪಿಟಿಐ)– ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶೀಘ್ರವೇ ಹೊಸ ಮಾದರಿಯ 500 ರೂಪಾಯಿಗಳ ನೋಟುಗಳನ್ನು ಬಿಡುಗಡೆ ಮಾಡಲಿದೆ. ಖೋಟಾ ನೋಟು ಚಲಾವಣೆಯನ್ನು ತಪ್ಪಿಸಿ, ಇನ್ನೂ ಹೆಚ್ಚುವರಿ ಭದ್ರತೆ ಒದಗಿಸುವ ಸಲುವಾಗಿ ಈ ನೋಟುಗಳನ್ನು ಹೊರತರಲು ನಿರ್ಧರಿಸಿದೆ.

ಆರಂಭದಲ್ಲಿ ಈ ನೋಟುಗಳನ್ನು 1987ರಲ್ಲಿ ಬಿಡುಗಡೆ ಮಾಡಲಾದ 500 ರೂಪಾಯಿ ನೋಟುಗಳಿಗೆ ಬದಲಾಯಿಸಿ ಸಾರ್ವಜನಿಕರಿಗೆ ನೀಡಲಾಗುವುದು ಎಂದು ಹಣಕಾಸು ಸಚಿವಾಲಯದ ಮೂಲಗಳು ತಿಳಿಸಿವೆ.

75 ವರ್ಷಗಳ ಹಿಂದೆ

ಸೋಮವಾರ, 14-8-1950

• ವಿಷದ ವೀಳ್ಯವಿತ್ತು ಧನಾಪಹಾರ!

ಮಾಂಘೀರ್, ಆಗಸ್ಟ್ 13– ರೈಲಿನಲ್ಲಿ ಪ್ರಯಾಣಿಸುತ್ತಿದ್ದ ತರುಣ ವಿದ್ಯಾರ್ಥಿಯೋರ್ವನ ಗಮನವನ್ನು ರಾಜಕೀಯದತ್ತ ಸೆಳೆದು ನಂತರ ಅವನಿಗೆ ವಿಷಪೂರಿತ ಎಲೆ ಅಡಿಕೆ ಇತ್ತು, ಆತನ 500 ರೂ.ಗಳಿದ್ದ ಪರ್ಸ್ ಮತ್ತು ರೇಡಿಯೊವನ್ನು ಅಪಹರಿಸಿದ ಸಂಗತಿ ವರದಿಯಾಗಿದೆ.

ಪೂರ್ಣಿಯಾದಿಂದ ಆ ತರುಣ ಗಯಾಕ್ಕೆ ಪ್ರಯಾಣ ಮಾಡುತ್ತಿದ್ದ. ಸ್ವಲ್ಪ ಹೊತ್ತಿನಲ್ಲಿಯೇ ಮೂವರು ಪ್ರಯಾಣಿಕರು ಆತನಿದ್ದ ಗಾಡಿ ಹತ್ತಿ ಭಾರತ ರಿಪಬ್ಲಿಕ್ ಕುರಿತು ಚರ್ಚೆ ಆರಂಭಿಸಿದರು. ಸ್ವಲ್ಪ ಹೊತ್ತಿನ ನಂತರ ತಮ್ಮಲ್ಲಿದ್ದ ವೀಳ್ಯವನ್ನು ತಿನ್ನಲು ಆತನಿಗೆ ಕೊಟ್ಟರು. ಪೊಲೀಸರು ಆತನನ್ನು ನೋಡಿದಾಗ ಆತ ವಿಷವುಂಡು ಪ್ರಜ್ಞೆ ಕಳೆದುಕೊಂಡಿದ್ದು, ಕಂಡು ಬಂತು.

• ಭೀಕರ ರೈಲ್ವೆ ಅಪಘಾತ

ಬನಾರಸ್, ಆಗಸ್ಟ್ 13– ಪೂರ್ವ ಬಂಗಾಳ ರೈಲ್ವೆಯ ಕೂಡಾನ್ ಎಕ್ಸ್‌ಪ್ರೆಸ್ ಈ ದಿನ ಮಧ್ಯಾಹ್ನ 12.25 ಗಂಟೆಗೆ ಭೀಕರ ಅಪಘಾತಕ್ಕೆ ಈಡಾಗಿದ್ದು, 23 ಮಂದಿ ಮೃತಪಟ್ಟು, 200 ಮಂದಿಗೆ ಗಾಯಗಳಾಗಿವೆ.

ಸಂಗತ

ಪಿತೃತ್ವದ ಹಕ್ಕು: ಹೊಸ ಭರವಸೆ

ಕಾನೂನಿನ ಮೂಲಕ ದೊರೆಯುವ 'ಪಿತೃತ್ವದ ಹಕ್ಕು' ದೇವದಾಸಿಯರ ಮಕ್ಕಳ ಭವಿಷ್ಯಕ್ಕೆ ಪೂರಕವಾಗಿದೆ. ಆದರೆ, ಈ ಹಕ್ಕು ಸವಾಲುಗಳಿಗೆ ಕಾರಣ ಆಗಲೂಬಹುದು.

• ಮಂಜುಶ್ರೀ ಎಂ. ಕಡಕೋಳ

ಕಣ್ಣೆದುರಿಗೆ ಇದ್ದರೂ ಇವರೇ 'ಅಪ್ಪ' ಎಂದು ಕರೆಯಲಾಗದ ಸ್ಥಿತಿ ಮಕ್ಕಳದು. ಇವನೇ ನನ್ನ ಸಂಗಾತಿ, ಗಂಡ ಎಂದು ಎಲ್ಲರೆದುರೂ ಧೈರ್ಯವಾಗಿ ಹೇಳಲಾಗದ ಸಂಕಟ ಅಮ್ಮನದು. ಕತ್ತಲಿನಲ್ಲಿ ಜೊತೆಗಿರುವ ಆತ, ಬೆಳಗ್ಗೆ ಅವಳು ಅಪರಿಚಿತಳೇನೋ ಎಂಬಂತೆ ವರ್ತಿಸುತ್ತಾನೆ. ಇದು ದೇವದಾಸಿಯರ ಕುಟುಂಬದಲ್ಲಿ ಸಾಮಾನ್ಯ ಎನ್ನುವಂತಿರುವ ಸಂಕಟ, ಒಳಗುದಿ.

'ಅಪ್ಪ ಎಂದರೆ ಆಕಾಶ; ಅಪ್ಪನ ಪ್ರೀತಿ ಜಗದಗಲ' ಎನ್ನುವ ಮಾತುಗಳು ದೇವದಾಸಿಯರ ಮಕ್ಕಳಿಗೆ ಅಕ್ಷರಶಃ ಕೈಗೆಟುಕದ ಪದಪುಂಜಗಳು.

ಸ್ನೇಹಿತರು, ಸಂಬಂಧಿಕರು, ಶಾಲಾ ಮಾಸ್ತರು– ಅಷ್ಟು ಮಾತ್ರವಲ್ಲ, ಯಾವುದೇ ದಾಖಲಾತಿಯಲ್ಲಿ ಧುತ್ತೆಂದು ಎದುರಾಗಿ ಬೆಚ್ಚಿಬೀಳಿಸುವ 'ಅಪ್ಪನ ಕಾಲಂ' ಅನ್ನು ದಾಟಿ ಹೋಗಲಾರದ ಅಸಹಾಯಕತೆ ಆ ಮಕ್ಕಳದು. ಓರಗೆಯವರಿಗೆ ದೊರೆಯುವ ಅಪ್ಪಂದಿರ ಪ್ರೀತಿಯನ್ನು ಕಂಡು, 'ನಂಗೆ ಅಪ್ಪ ಇಲ್ಲವೇನಮ್ಮಾ' ಎಂದು ಕೇಳುವ ಮಕ್ಕಳ ಆರ್ದ್ರ ಪ್ರಶ್ನೆ, ರಾಜ್ಯದ ಸಮಸ್ತ ದೇವದಾಸಿಯರ ಕುಟುಂಬಗಳಲ್ಲಿ ಅನುರಣಿಸುತ್ತಿರುತ್ತದೆ.

ಬಡತನ, ಅನಕ್ಷರತೆ, ಜಾತಿ ವ್ಯವಸ್ಥೆ, ಮೂಢನಂಬಿಕೆಯ ಫಲವಾಗಿ ತಮ್ಮದಲ್ಲದ ತಪ್ಪಿಗೆ ದೇವದಾಸಿಯರಾಗಿ ರೂಪುಗೊಂಡ ಮಹಿಳೆಯರದ್ದು ಒಂದು ಪಾಡಾದರೆ, ಅವರ ಮಕ್ಕಳು ತಂದೆಯಿದ್ದೂ ಇಲ್ಲದಂತಾಗಿ ಅನಾಥರಾಗಿ ಬಾಳುತ್ತಿರುವ, ಅನುಭವಿಸುತ್ತಿರುವ ನೋವಿನದು ಬೇರೆಯದ್ದೇ ತೂಕ; ಅದು ಅಕ್ಷರಗಳ ಭಾಷೆಗೆ ನಿಲುಕದ ವೇದನೆ.

ಇತ್ತೀಚೆಗೆ ರಾಜ್ಯ ಸರ್ಕಾರ, 'ಕರ್ನಾಟಕ ದೇವದಾಸಿ ಪದ್ಧತಿ ತಡೆ ಮಸೂದೆ–2025' ರೂಪಿಸುವ ಮೂಲಕ ದೇವದಾಸಿಯರ ಮಕ್ಕಳ ನೋವಿಗೆ ಮುಲಾಮು ಹಚ್ಚುವ ಪ್ರಯತ್ನಕ್ಕೆ ಮುಂದಾಗಿದೆ. ನೂತನ ಮಸೂದೆಯು ದೇವದಾಸಿಯರನ್ನು ಲೈಂಗಿಕವಾಗಿ ಬಳಸಿಕೊಂಡು ಅವರ ಮಕ್ಕಳಿಗೆ ಪಿತೃತ್ವದ ಹಕ್ಕು, ಮಮತೆ ನೀಡಲು ಹಿಂದೇಟು ಹಾಕುತ್ತಿದ್ದ ಪುರುಷರಿಗೆ ಚಾಟಿ ಬೀಸುವಂತಿದೆ. ಅಷ್ಟೇ ಅಲ್ಲ, ದೇವದಾಸಿ ಪದ್ಧತಿಯನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರವನ್ನೂ ವಹಿಸಲಿದೆ. ಈ ಹಿಂದೆ ಧಾರ್ಮಿಕ ಕಟ್ಟುಪಾಡೋ, ಸಾಮಾಜಿಕ ನೆಲೆಯೋ, ಜಾತಿ ವ್ಯವಸ್ಥೆಯ ಭಾಗವಾಗಿಯೋ ದೇವದಾಸಿ ಎನ್ನುವ ಅನಿಷ್ಟ ಪದ್ಧತಿಗೆ ಪ್ರೋತ್ಸಾಹ ಕೊಡುತ್ತಿದ್ದವರಿಗೆ ಮಸೂದೆ ನೇರವಾಗಿಯೇ ಕಡಿವಾಣ ಹಾಕಲಿದೆ.

ಶೇ 99ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳೇ ಇಂಥ ಅನಿಷ್ಟ ಪದ್ಧತಿಗೆ ಬಲಿಯಾಗಿ, ಘನತೆ ಮತ್ತು ಗೌರವದಿಂದ ಬಾಳಲಾಗದ ಸ್ಥಿತಿಯಲ್ಲಿದ್ದಾರೆ. ಅಂಥ ನತದೃಷ್ಟ ಮಹಿಳೆಯರ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ಮಸೂದೆ ಪರಿಣಾಮ ಬೀರಬಲ್ಲದು.

ಹೊಸ ಮಸೂದೆಯು 'ಡಿಎನ್‌ಎ ಪರೀಕ್ಷೆ' ಮೂಲಕ ಪಿತೃತ್ವದ ಹಕ್ಕನ್ನು ಪ್ರತಿಪಾದಿಸಲು ನೆರವಾಗಬಲ್ಲದು ಎಂಬುದೇನೋ ನಿಜ. ಆದರೆ, ಬಲವಂತವಾಗಿ ಇಂಥ ಪರೀಕ್ಷೆ ಮಾಡಿಸಿ, ಆ ಮಕ್ಕಳು ಕೌಟುಂಬಿಕ ಚೌಕಟ್ಟಿನ ನೆಲೆಯಲ್ಲಿ ದೊರಕಬಹುದಾದ ಅಪ್ಪನ ಪ್ರೀತಿಯನ್ನು ಪಡೆಯಲು ಸಾಧ್ಯವೇ ಎಂಬ ಪ್ರಶ್ನೆಯನ್ನೂ ನಾವು ಗಮನಿಸಬೇಕು. ಅಷ್ಟಕ್ಕೂ ಗಂಡಸೊಬ್ಬ ತನಗೆ ಹುಟ್ಟಿದ ಮಕ್ಕಳನ್ನು ತನ್ನವು ಎಂದು ಹೇಳಿಕೊಳ್ಳಲು ಇಂಥ ಪರೀಕ್ಷೆಗಳ ಅವಶ್ಯಕತೆ ಇಲ್ಲ. ಕಣ್ಣರಿಯದಿದ್ದರೂ, ಕರುಳರಿಯಲಾರದೇ?

ಶಾಲಾ– ಕಾಲೇಜು ದಾಖಲಾತಿ, ಪಾಸ್‌ಪೋರ್ಟಿನ ಅರ್ಜಿಗಳಲ್ಲಿ, ಉದ್ಯೋಗ ಮತ್ತಿತರ ದಾಖಲಾತಿಗಳಲ್ಲಿ ಅಪ್ಪನ ಹೆಸರು ನಮೂದಿಸಿದ ಮಾತ್ರಕ್ಕೆ ದೇವದಾಸಿಯರ ಮಕ್ಕಳಿಗೆ ಹೆತ್ತಪ್ಪನ ನಿಜದ ನೆಲೆಯ ಪ್ರೀತಿ, ಮಮತೆ ದೊರೆಯಲು ಸಾಧ್ಯವೇ? ಒಬ್ಬರಿಗಿಂತ ಹೆಚ್ಚು ಸಂಗಾತಿಗಳ ಒಡನಾಟ ಹೊಂದಿದ ದೇವದಾಸಿ, ದೇಹಕ್ಕಿಂತಲೂ ಮಾನಸಿಕವಾಗಿ ಹತ್ತಿರವಾದ ಸಂಗಾತಿಯನ್ನೇ ತನ್ನ ಮಕ್ಕಳಿಗೆ ತಂದೆ ಎಂದು ಪರಿಚಯಿಸಿರುವ ಸಾಧ್ಯತೆ ಇರುವಾಗ, ಜೈವಿಕ ಕಾರಣಕ್ಕಾಗಿ ನೀಡಲಾಗುವ ಪಿತೃತ್ವದ ಹಕ್ಕು ತಾಕಲಾಟಕ್ಕೆ ಕಾರಣವಾಗಲಾರದೇ? ಒಬ್ಬ ದೇವದಾಸಿಗೆ ಇಬ್ಬರು ಸಂಗಾತಿಗಳೊಂದಿಗೆ ಸಾಂಗತ್ಯವಿದ್ದು, ಆ ಇಬ್ಬರಿಗೂ ಬೇರೆ ಬೇರೆ ಮಕ್ಕಳು ಹುಟ್ಟಿದಲ್ಲಿ, ಆ ಮಕ್ಕಳು ಪಿತೃತ್ವದ ಹಕ್ಕು ಪಡೆಯುವಾಗ ಎದುರಿಸುವ ಮಾನಸಿಕ ತಳಮಳಗಳಿಗೆ ಸಮಾಧಾನ ತಂದುಕೊಳ್ಳುವುದು ಹೇಗೆ? ಅಷ್ಟಕ್ಕೂ ತಂದೆಯ ಹೆಸರನ್ನು ಪ್ರತಿಪಾದಿಸುವುದು ಪಿತೃಪ್ರಧಾನ ವ್ಯವಸ್ಥೆಯ ಭಾಗವಾಗಿ, ಲಿಂಗ ತಾರತಮ್ಯದ ಮುಂದುವರಿಕೆ ಅನಿಸುವುದಿಲ್ಲವೇ ಎಂಬ ಪ್ರಶ್ನೆಯೂ ಮೂಡುತ್ತದೆ.

ಪ್ರಶ್ನೆಗಳ ನಡುವೆಯೂ, ನೂತನ ಮಸೂದೆಯಿಂದಾಗಿ, ಕನಿಷ್ಠ ತಂದೆಯ ಹೆಸರು ಮತ್ತು ಮಕ್ಕಳಿಗೆ ಕಾನೂನು ರೀತ್ಯ ಒದಗಿಬರುವ ಜೀವನಾಂಶ ಹಾಗೂ ಆಸ್ತಿ ಹಕ್ಕಿಗಾದರೂ ಪಿತೃತ್ವದ ಹಕ್ಕು ನೆರವಾಗಬಲ್ಲದೆಂಬ ನಿರೀಕ್ಷೆ ಇದೆ.

ಪಿತೃತ್ವದ ಹಕ್ಕಿನ ಜತೆಗೇ ಮಸೂದೆಯು ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸುವವರಿಗೆ ಜಾಮೀನುರಹಿತ ಅಪರಾಧ ಎಂಬ ಶಿಕ್ಷೆಯನ್ನು ವಿಧಿಸುವ ಅವಕಾಶ ಮಾಡಿಕೊಡುವಂತೆ ಇದ್ದಿದ್ದರೆ ಮಸೂದೆ ಮತ್ತಷ್ಟು ಪರಿಣಾಮಕಾರಿ ಹಾಗೂ ಪ್ರಬಲವಾಗುವ ಸಾಧ್ಯತೆ ಇತ್ತು. ದೇವದಾಸಿಯರ ಮಕ್ಕಳನ್ನು ಶೈಕ್ಷಣಿಕ, ಔದ್ಯೋಗಿಕ ಮತ್ತು ಸಾಮಾಜಿಕತೆಯ ಮೂಲಕ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವಂಥ ಸಾಧ್ಯತೆಗಳನ್ನೂ ಮಸೂದೆ ಒಳಗೊಂಡಿದ್ದರೆ ಹೆಚ್ಚು ಅರ್ಥಪೂರ್ಣ ಆಗುತ್ತಿತ್ತು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯಾಯಮೂರ್ತಿಗಳ ವಜಾ
ಹಲವು ಹಂತಗಳ ಸಂಕೀರ್ಣ ಪ್ರಕ್ರಿಯೆ

ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮನೆಯಲ್ಲಿ ನಗದು ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಪದಚ್ಯುತಿಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ವಜಾ ಪ್ರಕ್ರಿಯೆ ಬಹು ಹಂತಗಳಿಂದ ಕೂಡಿದ್ದು, ಸಂಕೀರ್ಣವಾಗಿದೆ. ಸಂಸತ್ತಿನ ಉಭಯ ಸದನಗಳಲ್ಲಿ ವಿಶೇಷ ಬಹುಮತದೊಂದಿಗೆ ಗೊತ್ತುವಳಿ ಅಂಗೀಕಾರವಾದರೆ ಮಾತ್ರ ನ್ಯಾಯಮೂರ್ತಿಗಳನ್ನು ವಜಾ ಮಾಡಲು ಅವಕಾಶವಿದೆ. ಇದುವರೆಗೆ ನ್ಯಾಯಮೂರ್ತಿಗಳನ್ನು ಪದಚ್ಯುತಗೊಳಿಸುವ ಏಳು ಪ್ರಯತ್ನಗಳು ನಡೆದಿವೆ. ಆದರೆ, ಒಮ್ಮೆಯೂ ಯಶಸ್ವಿಯಾಗಿಲ್ಲ

ಮತ್ತೊಬ್ಬ ನ್ಯಾಯಮೂರ್ತಿ ವಿರುದ್ಧ ನೋಟಿಸ್

ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಪದಚ್ಯುತಿಗೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ಪ್ರಕ್ರಿಯೆ ಆರಂಭವಾಗಿರುವಂತೆಯೇ ಕೋಮು ಪ್ರಚೋದಿತ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಅಲಹಾಬಾದ್ ಹೈಕೋರ್ಟ್‌ನ ಮತ್ತೊಬ್ಬ ನ್ಯಾಯಮೂರ್ತಿ ಶೇಖರ್ ಯಾದವ್ ಅವರ ಪದಚ್ಯುತಿಗೆ ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲಿ ಗೊತ್ತುವಳಿ ನೋಟಿಸ್ ನೀಡಿದ್ದಾರೆ. ಈ ಬಗ್ಗೆ ಸಭಾಪತಿಯವರು ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕಾಗಿದೆ.

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯನ್ನು ಹುದ್ದೆಯಿಂದ ಪದಚ್ಯುತಗೊಳಿಸಲು, ಅವರ ದುರ್ನಡತೆ ಅಥವಾ ಅಸಮರ್ಥತೆ ಸಾಬೀತಾಗಬೇಕು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯನ್ನು ವಜಾಗೊಳಿಸುವ ಸಂಬಂಧದ ನಿಯಮಗಳು ಸಂವಿಧಾನದ 124(4)ನೇ ವಿಧಿಯಲ್ಲಿ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಯನ್ನು ಪದಚ್ಯುತಗೊಳಿಸುವ ಬಗೆಗಿನ ನಿಯಮಗಳು ಸಂವಿಧಾನದ 218ನೇ ವಿಧಿಯಲ್ಲಿ ಅಡಕವಾಗಿವೆ.

ನಿಯಮಗಳ ಪ್ರಕಾರ, ಸಂಸತ್‌ನ ಎರಡೂ ಸದನಗಳಲ್ಲಿ ಅಂಗೀಕರಿಸಿರುವ ನಿರ್ಣಯವನ್ನು ಆಧರಿಸಿ ರಾಷ್ಟ್ರಪತಿಯವರು ನ್ಯಾಯಮೂರ್ತಿಯನ್ನು ಹುದ್ದೆಯಿಂದ ವಜಾ ಮಾಡುವ ಅಧಿಕಾರ ಹೊಂದಿರುತ್ತಾರೆ. ಈ ಪ್ರಕ್ರಿಯೆಯನ್ನು 'ನ್ಯಾಯಮೂರ್ತಿಗಳ (ತನಿಖಾ) ಕಾಯ್ದೆ–1968'ರಲ್ಲಿ ವಿವರಿಸಲಾಗಿದೆ. ನ್ಯಾಯಮೂರ್ತಿಯ ಪದಚ್ಯುತಿಯು ಹಲವು ಹಂತಗಳಲ್ಲಿ ನಡೆಯುವ ಸಂಕೀರ್ಣ ಪ್ರಕ್ರಿಯೆಯಾಗಿದೆ.

ಆಂತರಿಕ ತನಿಖೆ: ಅತ್ಯುನ್ನತ ನ್ಯಾಯಾಲಯಗಳ ನ್ಯಾಯಮೂರ್ತಿ ವಿರುದ್ಧ ಆರೋಪ ಕೇಳಿಬಂದರೆ, ಮೊದಲು ಆಂತರಿಕ ತನಿಖೆ ಮಾಡಲಾಗುತ್ತದೆ. 1999ರಲ್ಲಿ ಸುಪ್ರೀಂ ಕೋರ್ಟ್ ಆಂತರಿಕ ತನಿಖೆಗೆ ಮಾರ್ಗಸೂಚಿಗಳನ್ನು ಪ್ರಕಟಿಸಿತ್ತು.

ಒಂದು ವೇಳೆ ನ್ಯಾಯಮೂರ್ತಿ ವಿರುದ್ಧದ ಆರೋಪಗಳು ಸತ್ಯ ಎಂದು ಆಂತರಿಕ ಸಮಿತಿಯ ತನಿಖೆಯಲ್ಲಿ ಕಂಡುಬಂದು, ಅವು ಗಂಭೀರ ಸ್ವರೂಪದವಲ್ಲದಿದ್ದರೆ, ಮುಖ್ಯ ನ್ಯಾಯಮೂರ್ತಿಯು ಆರೋಪಿ ನ್ಯಾಯಮೂರ್ತಿಯೊಂದಿಗೆ ಚರ್ಚೆ ಮಾಡಲು ಅವಕಾಶವಿದೆ. ಆರೋಪಗಳು ಸುಳ್ಳು ಎನ್ನುವುದು ಕಂಡುಬಂದರೆ, ಆ ವಿಷಯ ಅಲ್ಲಿಗೆ ಮುಕ್ತಾಯವಾಗುತ್ತದೆ.

ಆಂತರಿಕ ಸಮಿತಿಯ ತನಿಖೆಯಲ್ಲಿ ಆರೋಪಗಳು ಸತ್ಯ ಎನ್ನುವುದು ಕಂಡುಬಂದರೆ, ಮುಖ್ಯ ನ್ಯಾಯಮೂರ್ತಿಯು ತಪ್ಪಿತಸ್ಥ ನ್ಯಾಯಮೂರ್ತಿಯ ರಾಜೀನಾಮೆ ಕೇಳಬಹುದು. ಆ ನ್ಯಾಯಮೂರ್ತಿ ರಾಜೀನಾಮೆ ನೀಡಲು ನಿರಾಕರಿಸಿದರೆ, ಅವರನ್ನು ಸಂಸದೀಯ ಪ್ರಕ್ರಿಯೆ ಮೂಲಕ ವಜಾ ಮಾಡಲು ಪ್ರಧಾನಿ ಮತ್ತು ರಾಷ್ಟ್ರಪತಿಗೆ ಮುಖ್ಯ ನ್ಯಾಯಮೂರ್ತಿಯು ಮನವಿ ಸಲ್ಲಿಸಬಹುದು.

ಸಂಸದೀಯ ಪ್ರಕ್ರಿಯೆ: ಸಂಸತ್ತಿನ ಯಾವುದಾದರೂ ಸದನದಲ್ಲಿ ಪದಚ್ಯುತಿ ಪ್ರಕ್ರಿಯೆ ಆರಂಭಿಸಬಹುದು. ಈ ಸಂಬಂಧದ ಗೊತ್ತುವಳಿಯನ್ನು ಲೋಕಸಭೆಯಲ್ಲಿ ಮಂಡಿಸಿದರೆ, ಕನಿಷ್ಠ 100 ಮಂದಿ ಸದಸ್ಯರು, ರಾಜ್ಯಸಭೆಯಲ್ಲಿ ಮಂಡಿಸಿದರೆ ಕನಿಷ್ಠ 50 ಸದಸ್ಯರ ಸಹಿಯ ಅಗತ್ಯವಿರುತ್ತದೆ. ಲೋಕಸಭೆಯ ಸ್ಪೀಕರ್/ರಾಜ್ಯಸಭೆಯ ಸಭಾಪತಿ ಗೊತ್ತುವಳಿಯನ್ನು ಅಂಗೀರಿಸಬಹುದು ಇಲ್ಲವೇ ತಿರಸ್ಕರಿಸಬಹುದು. ಗೊತ್ತುವಳಿಯನ್ನು ಅಂಗೀಕರಿಸಿದರೆ, ನ್ಯಾಯಮೂರ್ತಿ ವಿರುದ್ಧದ ಆರೋಪಗಳನ್ನು ತನಿಖೆ ಮಾಡಲು ಮೂವರು ಸದಸ್ಯರ ಸಮಿತಿಯನ್ನು ನೇಮಿಸಲಾಗುತ್ತದೆ. ಅದರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಒಬ್ಬ ಕಾನೂನು ತಜ್ಞ ಇರುತ್ತಾರೆ.

ನ್ಯಾಯಮೂರ್ತಿ ತಪ್ಪಿತಸ್ಥರಲ್ಲ ಎಂದು ಸಮಿತಿ ವರದಿ ನೀಡಿದರೆ, ಪ್ರಕ್ರಿಯೆಯು ಅಲ್ಲಿಗೇ ಅಂತ್ಯವಾಗುತ್ತದೆ. ನ್ಯಾಯಮೂರ್ತಿಯು ಅಪರಾಧಿ ಎಂದು ಸಮಿತಿ ಹೇಳಿದರೆ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅದರ ಬಗ್ಗೆ ಚರ್ಚೆ ಮತ್ತು ಮತ ಚಲಾವಣೆ ನಡೆಯುತ್ತದೆ. ಆ ಸಂದರ್ಭದಲ್ಲಿ ಸದನದಲ್ಲಿ ವಾದ ಮಂಡಿಸಲು ಆರೋಪಿ ಅಥವಾ ಅವರ ವಕೀಲರಿಗೆ ಅವಕಾಶ ನೀಡಲಾಗುತ್ತದೆ. ಮತದಾನದ ವೇಳೆ ಸದನದ ಒಟ್ಟು ಬಲಾಬಲದಲ್ಲಿ ಶೇ 50ರಷ್ಟು ಹಾಜರಿರಬೇಕು ಮತ್ತು ಹಾಜರಿರುವವರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಗೊತ್ತುವಳಿಯ ಪರವಾಗಿ ಮತ ಚಲಾವಣೆ ಮಾಡಬೇಕು.

ಮತ್ತೊಂದು ಸದನದಲ್ಲಿಯೂ ಇದೇ ಪುನರಾವರ್ತನೆ ಆಗುತ್ತದೆ. ಎರಡೂ ಸದನಗಳಲ್ಲಿ ಗೊತ್ತುವಳಿಯು ಅಂಗೀಕಾರವಾದರೆ, ನ್ಯಾಯಮೂರ್ತಿಯನ್ನು ವಜಾಗೊಳಿಸುವ ಸಂಸತ್ತಿನ ನಿರ್ಣಯವನ್ನು ರಾಷ್ಟ್ರಪತಿಗೆ ತಿಳಿಸಲಾಗುತ್ತದೆ. ರಾಷ್ಟ್ರಪತಿ ವಜಾ ಆದೇಶ ಹೊರಡಿಸುತ್ತಾರೆ.

ಏಳು ಯತ್ನಗಳೂ ವಿಫಲ

ದೇಶದ ಸಂಸತ್ತಿನ ಇತಿಹಾಸದಲ್ಲಿ ಇದುವರೆಗೆ ಏಳು ಮಂದಿ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳನ್ನು ಪದಚ್ಯುತಿಗೊಳಿಸುವ ಯತ್ನ ನಡೆದಿತ್ತು. ಆದರೆ, ಎಲ್ಲವೂ ಒಂದಿಲ್ಲೊಂದು ಕಾರಣಕ್ಕೆ ವಿಫಲವಾಗಿದ್ದವು

1. **ನ್ಯಾ. ವಿ.ರಾಮಸ್ವಾಮಿ:** ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಯಾಗಿದ್ದ ವಿ.ರಾಮಸ್ವಾಮಿ ಅವರನ್ನು 1993ರಲ್ಲಿ ವಜಾ ಮಾಡಲು ಯತ್ನಿಸಿದ್ದು ದೇಶದ ಮೊದಲ ಪ್ರಕರಣ. ಅವರು 1990ರಲ್ಲಿ ಮುಖ್ಯನ್ಯಾಯಮೂರ್ತಿಯಾಗಿದ್ದಾಗ ಅಧಿಕೃತ ನಿವಾಸಕ್ಕಾಗಿ ಅನಗತ್ಯ ವೆಚ್ಚ ಮಾಡಿ ಹಣ ದುರ್ಬಳಕೆ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಬಗ್ಗೆ ತನಿಖೆ ನಡೆಸುವುದಕ್ಕಾಗಿ ರಚಿಸಿದ್ದ ಸಮಿತಿಯು ರಾಮಸ್ವಾಮಿ ಅವರು ತಪ್ಪಿತಸ್ಥ ಎಂದು ಹೇಳಿತ್ತು. ಆದರೆ, ಗೊತ್ತುವಳಿಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ ಆಗಿನ ಆಡಳಿತಾರೂಢ ಕಾಂಗ್ರೆಸ್ ಸಂಸದರು ಮತದಾನದಿಂದ ಹಿಂದೆ ಸರಿದಿದ್ದರು. ಇದರಿಂದಾಗಿ ಮೂರನೇ ಎರಡರಷ್ಟು ಬಹುಮತ ಇಲ್ಲದೆ ಗೊತ್ತುವಳಿ ಸೂಚನೆ ಅಂಗೀಕಾರವಾಗಿರಲಿಲ್ಲ. ಹಾಗಾಗಿ, ರಾಮಸ್ವಾಮಿಯವರ ಪದಚ್ಯುತಿ ಸಾಧ್ಯವಾಗಿರಲಿಲ್ಲ.
2. **ನ್ಯಾ. ಸೌಮಿತ್ರ ಸೇನ್:** 2011ರಲ್ಲಿ ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಸೌಮಿತ್ರ ಸೇನ್ ಅವರ ವಿರುದ್ಧ ರಾಜ್ಯಸಭೆಯಲ್ಲಿ ಪದಚ್ಯುತಿ ಗೊತ್ತುವಳಿ ಸೂಚನೆಯನ್ನು ಅಂಗೀಕರಿಸಲಾಗಿತ್ತು. ಸೇನ್ ಅವರು ವಕೀಲರಾಗಿದ್ದಾಗ ಪ್ರಕರಣವೊಂದರಲ್ಲಿ ನ್ಯಾಯಾಲಯವು ಅವರನ್ನು ರಿಸೀವರ್ ಆಗಿ ನೇಮಿಸಿತ್ತು. ಆಗ ಅವರ ವಿರುದ್ಧ ₹33.23 ಲಕ್ಷ ಹಣವನ್ನು ದುರ್ಬಳಕೆ ಮಾಡಿದ ಆರೋಪ ಕೇಳಿಬಂದಿತ್ತು. ತನಿಖಾ ಸಮಿತಿಯು ಅವರನ್ನು ತಪ್ಪಿತಸ್ಥ ಎಂದು ಹೇಳಿತ್ತು. ಮೇಲ್ಮನೆಯಲ್ಲಿ ಗೊತ್ತುವಳಿ ಅಂಗೀಕಾರಗೊಂಡು, ಅದನ್ನು ಚರ್ಚೆಗೆ ಕೈಗೆತ್ತಿಕೊಳ್ಳುವುದಕ್ಕೂ ಮುನ್ನ ಸೇನ್ ಅವರು ನ್ಯಾಯಮೂರ್ತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗೆ ಪದಚ್ಯುತಿಯಿಂದ ಅವರು ತಪ್ಪಿಸಿಕೊಂಡಿದ್ದರು.
3. **ನ್ಯಾ. ಪಿ.ಡಿ.ದಿನಕರನ್:** ಭೂಕಬಳಿಕೆ, ಭ್ರಷ್ಟಾಚಾರ ನಡೆಸಿರುವ ಆರೋಪ ಹೊತ್ತಿದ್ದ ಸಿಕ್ಕಿಂ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಯಾಗಿದ್ದ ಪಿ.ಡಿ.ದಿನಕರನ್ ವಿರುದ್ಧ ರಾಜ್ಯಸಭೆಯಲ್ಲಿ 2011ರಲ್ಲಿ ಪದಚ್ಯುತಿ ನೋಟಿಸ್ ನೀಡಲಾಗಿತ್ತು. ಅಂದಿನ ಸಭಾಪತಿ ಅವರು ತನಿಖೆಗೆ ಸಮಿತಿಯನ್ನೂ ರಚಿಸಿದ್ದರು. ಆದರೆ, ಪದಚ್ಯುತಿ ಪ್ರಕ್ರಿಯೆ ಆರಂಭವಾಗುವುದಕ್ಕೂ ಮೊದಲೇ, ಆ ವರ್ಷದ ಜುಲೈನಲ್ಲಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.
4. **ನ್ಯಾ. ಜೆ.ಬಿ.ಪಾರ್ದೀವಾಲಾ:** ಹಾಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ಅವರು 2015ರಲ್ಲಿ ಗುಜರಾತ್‌ನ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಯಾಗಿದ್ದಾಗ, ಪ್ರಕರಣವೊಂದರ ತೀರ್ಪಿನಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ವ್ಯಕ್ತಪಡಿಸಿದ ಅಭಿಪ್ರಾಯ (ಭಾರತ ಅಭಿವೃದ್ಧಿ ಹೊಂದದೇ ಇರಲು ಮೀಸಲಾತಿ ವ್ಯವಸ್ಥೆ ಕಾರಣ ಎಂಬರ್ಥದಲ್ಲಿ ಹೇಳಿದ್ದರು) ವಿವಾದ ಸೃಷ್ಟಿಸಿತ್ತು. ಈ ಹೇಳಿಕೆಯನ್ನು ಖಂಡಿಸಿ ರಾಜ್ಯಸಭೆಯಲ್ಲಿ ಅವರ ವಿರುದ್ಧ ಪದಚ್ಯುತಿ ನೋಟಿಸ್ ನೀಡಲಾಗಿತ್ತು. ನಂತರ ಪಾರ್ದೀವಾಲಾ ಅವರು ತೀರ್ಪಿನಿಂದ ಆ ಅಭಿಪ್ರಾಯವನ್ನು ತೆಗೆದುಹಾಕಿದ್ದರಿಂದ ಅವರ ವಿರುದ್ಧದ ಪದಚ್ಯುತಿ ಗೊತ್ತುವಳಿ ನೋಟಿಸ್ ಕೈಬಿಡಲಾಗಿತ್ತು.
5. **ನ್ಯಾ. ಎಸ್.ಕೆ.ಗಂಗೆಲೆ:** 2015ರಲ್ಲಿ ಮಧ್ಯಪ್ರದೇಶ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಎಸ್.ಕೆ.ಗಂಗೆಲೆ ಅವರ ಪದಚ್ಯುತಿಗಾಗಿ ರಾಜ್ಯಸಭೆಯಲ್ಲಿ ಗೊತ್ತುವಳಿ ಸೂಚನೆ ನೀಡಲಾಗಿತ್ತು. ಗಂಗೆಲೆ ಅವರು ತಮ್ಮೊಂದಿಗೆ ಲೈಂಗಿಕ ದುರ್ನಡತೆ ತೋರಿದ್ದಾರೆ ಎಂದು ಜಿಲ್ಲಾ ಮಟ್ಟದ ಮಹಿಳಾ ನ್ಯಾಯಾಧೀಶರೊಬ್ಬರು ಆರೋಪಿಸಿದ್ದರು. 58 ಸಂಸದರ ಸಹಿ ಇದ್ದ ಸೂಚನೆಯನ್ನು ಆಗಿನ ಸಭಾಪತಿ ಹಮೀದ್ ಅನ್ಸಾರಿ ಅಂಗೀಕರಿಸಿದ್ದರು. ಪ್ರಕರಣದ ತನಿಖೆಗಾಗಿ ಸಮಿತಿಯನ್ನೂ ರಚಿಸಲಾಗಿತ್ತು. ಆದರೆ, ಸಮಿತಿಯು ಅವರು ತಪ್ಪು ಮಾಡಿಲ್ಲ ಎಂದು ಹೇಳಿದ್ದರಿಂದ ಸಂಸತ್ತಿನಲ್ಲಿ (2017ರಲ್ಲಿ) ಗೊತ್ತುವಳಿ ಸೂಚನೆ ಬಿದ್ದು ಹೋಗಿತ್ತು.
6. **ನ್ಯಾ. ಸಿ.ವಿ.ನಾಗಾರ್ಜುನ ರೆಡ್ಡಿ:** ದಲಿತ ನ್ಯಾಯಾಧೀಶರೊಬ್ಬರ ವಿಚಾರದಲ್ಲಿ ತಾರತಮ್ಯ ಎಸಗಿದ ಆರೋಪದಲ್ಲಿ ಆಂಧ್ರ ಪ್ರದೇಶ ಮತ್ತು ತೆಲಂಗಾಣ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಸಿ.ವಿ.ನಾಗಾರ್ಜುನ ರೆಡ್ಡಿ ಅವರ ಪದಚ್ಯುತಿಗಾಗಿ 2016 ಮತ್ತು 2017ರಲ್ಲಿ ರಾಜ್ಯಸಭೆಯಲ್ಲಿ ಗೊತ್ತುವಳಿ ನೋಟಿಸ್ ನೀಡಲಾಗಿತ್ತು. ಆದರೆ, ನೋಟಿಸ್‌ಗೆ ಸಹಿಹಾಕಿದ್ದ ಕೆಲವು ಸಂಸದರು ಎರಡೂ ಬಾರಿಯೂ ತಮ್ಮ ಒಪ್ಪಿಗೆಯನ್ನು ವಾಪಸ್ ಪಡೆದಿದ್ದರಿಂದ ಪದಚ್ಯುತಿ ಪ್ರಕ್ರಿಯೆ ಮುಂದುವರಿಯಲಿಲ್ಲ.
7. **ನ್ಯಾ. ದೀಪಕ್ ಮಿಶ್ರಾ:** ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ದೀಪಕ್ ಮಿಶ್ರಾ ಅವರ ಕಾರ್ಯವೈಖರಿ ಮತ್ತು ಅವರು ಪ್ರಕರಣಗಳನ್ನು ಹಂಚುವ ರೀತಿಯನ್ನು ಟೀಕಿಸಿ 2018ರಲ್ಲಿ ಐವರು ನ್ಯಾಯಮೂರ್ತಿಗಳು ಬಹಿರಂಗವಾಗಿ ಸುದ್ದಿಗೋಷ್ಠಿ ನಡೆಸಿದ ಬಳಿಕ ಕೆಲವು ಸಂಸದರು ಮಿಶ್ರಾ ಪದಚ್ಯುತಿಗೆ ಒತ್ತಾಯಿಸಿ ಗೊತ್ತುವಳಿ ನೋಟಿಸ್ ನೀಡಿದ್ದರು. ಆದರೆ, ಅಂದಿನ ಸಭಾಪತಿ ವೆಂಕಯ್ಯನಾಯ್ಡು ಅವರು, ಇದು ಸುಪ್ರೀಂ ಕೋರ್ಟ್‌ನ ಆಂತರಿಕ ವಿಚಾರ ಎಂದು ಹೇಳಿ ನೋಟಿಸ್ ತಿರಸ್ಕರಿಸಿದ್ದರು.

ರಾಷ್ಟ್ರೀಯ

'ಜಾತಿ: ಸ್ವಾತಂತ್ರ್ಯಪೂರ್ವದ ದಾಖಲೆಗಳೂ ಪುರಾವೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಯಾವುದೇ ಒಂದು ಸಮುದಾಯವು ಪರಿಶಿಷ್ಟ ಪಂಗಡ ಸ್ಥಾನಮಾನಕ್ಕೆ ಬೇಡಿಕೆ ಇಟ್ಟಾಗ, ಆ ಬೇಡಿಕೆಗೆ ಸಂಬಂಧಿಸಿ ಸ್ವಾತಂತ್ರ್ಯ-ಪೂರ್ವ ಅವಧಿಯ ದಾಖಲೆಗಳನ್ನು ಸಾಕ್ಷ್ಯಗಳೆಂದು ಪರಿಗಣಿಸಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜಾತಿ ಅಥವಾ ಪಂಗಡವೊಂದಕ್ಕೆ ಸೇರಿಸಬೇಕು ಎಂಬ ಬೇಡಿಕೆ ಮುಂದಿಟ್ಟ ಸಂದರ್ಭಗಳಲ್ಲಿ, ಪ್ರತಿ ಪ್ರಕರಣದಲ್ಲಿ ಜಾತಿ/ಪಂಗಡದ ನಿಖರತೆ ನಿರ್ಧರಿಸುವಾಗ ಅವುಗಳ ಸಂಬಂಧವನ್ನು ಪರೀಕ್ಷೆಗೆ ಒಳಪಡಿಸುವುದು ಇಡೀ ಪ್ರಕ್ರಿಯೆಯ ಅಗತ್ಯ ಭಾಗವೆಂದು ಪರಿಗಣಿಸಬೇಕಿಲ್ಲ ಎಂದೂ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಸತೀಶ್‌ಚಂದ್ರ ಶರ್ಮಾ ಹಾಗೂ ಕೆ.ವಿನೋದ್ ಚಂದ್ರನ್ ಅವರು ಇದ್ದ ಪೀಠ ಈ ಮಾತು ಹೇಳಿದೆ.

ಅರ್ಜಿದಾರರು ಕೋಲಿ ಮಹಾದೇವ ಪಂಗಡಕ್ಕೆ ಸೇರಿದವರು ಎಂಬ ಪ್ರಮಾಣಪತ್ರವನ್ನು ಅನೂರ್ಜಿತಗೊಳಿಸಿ ಪರಿಶೀಲನಾ ಸಮಿತಿ ಆದೇಶಿಸಿತ್ತು. ಅದನ್ನು ಎತ್ತಿ ಹಿಡಿದು ಬಾಂಬೆ ಹೈಕೋರ್ಟ್ 2019ರ ಜೂನ್ 24ರಂದು ಆದೇಶಿಸಿತ್ತು. ಹೈಕೋರ್ಟ್‌ನ ಈ ಆದೇಶ ಪ್ರಶ್ನಿಸಿ, ಯೋಗೇಶ್ ಮಾಧವ ಮಕಲ್ವಾಡ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಪೀಠ ನಡೆಸಿತು.

'ಅರ್ಜಿದಾರರ ಕೋಲಿ ಮಹಾದೇವ ಪಂಗಡಕ್ಕೆ ಸೇರಿದವರು' ಎಂದು ಘೋಷಿಸಿರುವ ಪೀಠ, 'ಪರಿಶೀಲನಾ ಸಮಿತಿ ಆರು ವಾರಗಳ ಒಳಗಾಗಿ ಯೋಗೇಶ್ ಅವರಿಗೆ ಜಾತಿ ಪ್ರಮಾಣಪತ್ರ ನೀಡಬೇಕು' ಎಂದು ಆಗಸ್ಟ್ 12ರಂದು ನೀಡಿರುವ ತೀರ್ಪಿನಲ್ಲಿ ನಿರ್ದೇಶಿಸಿದೆ.

'ಅರ್ಜಿದಾರನ ಅಜ್ಜ ಜಲ್ಬಾ ಮಲ್ಬಾ ಮಕಲ್ವಾಡ್ ಅವರು ಕೋಲಿ ಮಹಾದೇವ ಪಂಗಡಕ್ಕೆ ಸೇರಿದವರು ಎಂಬುದಾಗಿ ಸ್ವಾತಂತ್ರ್ಯಪೂರ್ವದ ದಾಖಲೆಯಲ್ಲಿ ಉಲ್ಲೇಖಿಸಿರುವುದನ್ನು ಪೀಠ ಒಪ್ಪುತ್ತದೆ. ಅರ್ಜಿದಾರ ಕೋಲಿ ಮಹಾದೇವ ಪಂಗಡಕ್ಕೆ ಸೇರಿದ್ದಾರೆ ಎಂಬುದನ್ನು ರುಜುವಾತು ಪಡಿಸುವ ವಿಚಾರವಾಗಿ ಈ ದಾಖಲೆಗೆ ಹೆಚ್ಚು ಮೌಲ್ಯ ನೀಡಬಹುದು' ಎಂದು ಪೀಠ ಹೇಳಿದೆ.

40 ಠಾಕೂರ್ ಶಾಸಕರಿಂದ 'ಕುಟುಂಬ ಪರಿವಾರ' ರಚನೆ

ಪ್ರಜಾವಾಣಿ ವಾರ್ತೆ

ಲಖನೌ: ಠಾಕೂರ್ ಸಮುದಾಯಕ್ಕೆ ಸೇರಿದ ಬಿಜೆಪಿಯ ಶಾಸಕರು ಸಭೆ ಸೇರಿ, 'ಕುಟುಂಬ ಪರಿವಾರ' ಎಂಬ ವಾಟ್ಸ್‌ಆ್ಯಪ್ ಗುಂಪು ರಚಿಸಿರುವುದು ಉತ್ತರ ಪ್ರದೇಶದ ರಾಜಕೀಯ ವಲಯದಲ್ಲಿ ಸಂಚಲನಕ್ಕೆ ಕಾರಣವಾಗಿದೆ.

ಕೆಲ ದಿನಗಳ ಹಿಂದೆ ನಡೆದ ಸಭೆಯಲ್ಲಿ ಸಮಾಜವಾದಿ ಪಕ್ಷದ ಬಂಡಾಯ ಶಾಸಕರಾದ ರಾಕೇಶ್ ಪ್ರತಾಪ್ ಸಿಂಗ್ ಮತ್ತು ಅಭಯ್ ಸಿಂಗ್ ಹಾಗೂ ಬಿಎಸ್‌ಪಿಯ ಉಮಾ ಶಂಕರ್ ಸಿಂಗ್ ಅವರು ಪಾಲ್ಗೊಂಡಿದ್ದು ಮತ್ತಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಬಿಜೆಪಿ ಶಾಸಕರಾದ ಠಾಕೂರ್ ರಾಮವೀರ್ ಸಿಂಗ್ ಮತ್ತು ಜೈಪಾಲ್ ಸಿಂಗ್ ಅವರು ಸಭೆ ಆಯೋಜಿಸಿದ್ದರು. ಉತ್ತರ ಪ್ರದೇಶ ವಿಧಾಸಭೆಯಲ್ಲಿ ಠಾಕೂರ್ ಸಮುದಾಯದ 40 ಶಾಸಕರಿದ್ದು, ಅಷ್ಟೂ ಜನರೂ ಸಭೆಯಲ್ಲಿ ಭಾಗಿಯಾಗಿದ್ದರು ಎಂದು ಮೂಲಗಳು ತಿಳಿಸಿವೆ.

2024ರ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯು ಠಾಕೂರ್ ಸಮುದಾಯದ ಹಲವು ನಾಯಕರಿಗೆ ಟಿಕೆಟ್ ನಿರಾಕರಿಸಿ ಇತರೆ ಜಾತಿಯ ನಾಯಕರಿಗೆ ಟಿಕೆಟ್ ನೀಡಿತ್ತು. ಠಾಕೂರ್ ಸಮುದಾಯದ ಸದಸ್ಯರು ಈ ಬಗ್ಗೆ ಹಲವು ಬಾರಿ ಸಭೆ ಕರೆದು ಅಸಮಾಧಾನ ಹೊರಹಾಕಿದ್ದರು. ಈ ಸಭೆಯು ರಾಜಕೀಯ ಮಹತ್ವ ಪಡೆದಿದೆ.

ರಾಜಸ್ಥಾನದಲ್ಲಿ ಅಪಘಾತ: 11 ಸಾವು

ಜೈಪುರ (ಪಿಟಿಐ): ನಿಲ್ಲಿಸಿದ್ದ ಟ್ರಕ್‌ಗೆ ಪಿಕಪ್ ವ್ಯಾನ್ ಗುದ್ದಿದ ಪರಿಣಾಮ ಏಳು ಮಕ್ಕಳು ಸೇರಿ 11 ಮಂದಿ ಮೃತಪಟ್ಟ ಘಟನೆ ರಾಜಸ್ಥಾನದ ದೌಸಾ ಜಿಲ್ಲೆಯಲ್ಲಿ ನಡೆದಿದೆ. ಅಪಘಾತದಲ್ಲಿ ಎಂಟು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಪಿಕಪ್‌ನಲ್ಲಿದ್ದ ಪ್ರಯಾಣಿಕರು ಖಾಟು ಶ್ಯಾಮ್ ಮತ್ತು ಸಾಲಾಸರ್ ಬಾಲಾಜಿ ದೇಗುಲಕ್ಕೆ ಭೇಟಿ ನೀಡಿ ಉತ್ತರ ಪ್ರದೇಶದ ತಮ್ಮ ಊರಿಗೆ ಹಿಂದಿರುಗುತ್ತಿದ್ದರು. ಬುಧವಾರ ಮುಂಜಾನೆ 4ರಿಂದ 5 ಗಂಟೆ ಸುಮಾರಿಗೆ ಮನೋಹರಪುರ ಹೆದ್ದಾರಿಯಲ್ಲಿ ದುರಂತ ಸಂಭವಿಸಿದೆ ಎಂದು ದೌಸಾದ ಪೊಲೀಸ್ ವರಿಷ್ಠಾಧಿಕಾರಿ ಸಾಗರ್ ಅವರು ತಿಳಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತದ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವರ್ಷದ ಮೇನಲ್ಲಿ ಪಾಕಿಸ್ತಾನದೊಂದಿಗೆ ನಡೆದ ಸಂಘರ್ಷದಲ್ಲಿ ಭಾರತವು 6 ಜೆಟ್‌ಗಳು ಮತ್ತು 250 ಸೈನಿಕರನ್ನು ಕಳೆದುಕೊಂಡಿರುವುದಾಗಿ ಜನರಲ್ ಉಪೇಂದ್ರ ದ್ವಿವೇದಿ ಅವರು ಒಪ್ಪಿಕೊಂಡಿದ್ದಾರೆ ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

40 ಸೆಕೆಂಡ್‌ನ ವಿಡಿಯೊ ಅನ್ನು ಹಿಯಾ ಡೀಪ್‌ಫೇಕ್ ವಾಯ್ಸ್ ಡಿಟೆಕ್ಟರ್ ಮತ್ತು ಯುಬಿ ಮೀಡಿಯಾ ಫೊರೆನ್ಸಿಕ್ ಲ್ಯಾಬ್‌ನ ಡೀಪ್‌ಫೇಕ್–ಒ–ಮೀಟರ್ ಮೂಲಕ ಪರೀಕ್ಷೆಗೊಳಪಡಿಸಿದಾಗ, ವಿಡಿಯೊದಲ್ಲಿರುವ ಜನರಲ್ ದ್ವಿವೇದಿ ಅವರ ಧ್ವನಿಯು ನಿಜವಾದುದಲ್ಲ, ತಿರುಚಿರುವಂಥದ್ದು ಎನ್ನುವುದು ಖಚಿತವಾಯಿತು. ತಮಿಳುನಾಡಿನ ಚೆನ್ನೈನಲ್ಲಿರುವ ಮದ್ರಾಸ್ ಐಐಟಿಯಲ್ಲಿ ಆಗಸ್ಟ್ 4ರಂದು ಮಾತನಾಡಿದ ವಿಡಿಯೊ ಅದು. ಅದರಲ್ಲಿರುವ ನಿಜವಾದ ಧ್ವನಿಯನ್ನು ತಿರುಚಿ ಎಐ ತಂತ್ರಜ್ಞಾನದ ಮೂಲಕ ಹೊಸ ಧ್ವನಿಯನ್ನು ಅಳವಡಿಸಲಾಗಿದೆ. ಆ ವಿಡಿಯೊ ಅನ್ನು ಹಂಚಿಕೊಳ್ಳುತ್ತಿರುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನಮ್ಮ ಕೋಳಿಯ ತೋಳ ಹಿಡಿದರೆ

ನುಡಿ ಬೆಳಗು

ಪಿ.ಚಂದ್ರಿಕಾ

ನರಹಳ್ಳಿ ಬಾಲಸುಬ್ರಹ್ಮಣ್ಯ ಕನ್ನಡದ ಬಹುದೊಡ್ಡ ವಿದ್ವಾಂಸ, ಶ್ರೇಷ್ಠ ವಿಮರ್ಶಕರು. ಅವರ ಹತ್ತಿರ ಮಧ್ಯವಯಸ್ಕ ಗಂಡ- ಹೆಂಡತಿ ತಮ್ಮ ಸಮಸ್ಯೆಯನ್ನು ತೆಗೆದುಕೊಂಡು ಬಂದಿದ್ದರು. ಮಗ ತಪ್ಪು ಮಾಡಿದಾಗಲೆಲ್ಲಾ ಅಪ್ಪ ಅಗತ್ಯಕ್ಕಿಂತ ಹೆಚ್ಚು ಬಯ್ಯುತ್ತಲೇ ಇರುತ್ತಾರೆ. ಅಪ್ಪ ಮಗ ಇಬ್ಬರೂ ಶತ್ರುಗಳ ರೀತಿ ಆಗಿದ್ದಾರೆ ಎಂದು ತಾಯಿಯ ಆರೋಪವಿತ್ತು. ತಂದೆಯದ್ದು, ಮಗ ಸ್ನೇಹಿತರ ಜೊತೆ ಸೇರಿ ಕೆಟ್ಟ ಅಭ್ಯಾಸ ಮಾಡಿಕೊಳ್ಳುತ್ತಿದ್ದಾನೆ ಎನ್ನುವ ಪ್ರತ್ಯಾರೋಪವಿತ್ತು. ಅದಕ್ಕೆ ನರಹಳ್ಳಿಯವರು ಅವರಿಬ್ಬರಿಗೂ ಬುದ್ಧಿ ಹೇಳುವ ಮೊದಲು ಒಂದು ವಾಕ್ಯವನ್ನು ಹೇಳಿದರು... 'ಆಫ್ರಿಕಾದ ಬರಹಗಾರ ಚಿನು ಅಚಿಬೆ ಒಂದು ಕಡೆ, 'ನಮ್ಮ ಕೋಳಿಯನ್ನು ತೋಳ ಹಿಡಿದರೆ ಮೊದಲು ತೋಳವನ್ನು ಓಡಿಸು, ಆಮೇಲೆ ಕೋಳಿಗೆ ಬುದ್ಧಿವಾದ ಹೇಳು' ಎನ್ನುತ್ತಾನೆ. ಎಂಥಾ ಸುಂದರ ಸಾಲು ಅಲ್ವಾ' ಎಂದು. ನಂತರ ಅವರು ಶೇಷಾದ್ರಿಪುರಂ ಕಾಲೇಜಿನಲ್ಲಿ ತಾವು ಪ್ರಾಂಶುಪಾಲರಾಗಿದ್ದಾಗ ನಡೆದ ಘಟನೆಯನ್ನು ವಿವರಿಸಿದರು.

'ಒಮ್ಮೆ ನಮ್ಮ ಕಾಲೇಜಿನ ಮಕ್ಕಳು ಅಂತರ ಕಾಲೇಜು ಕ್ರಿಕೆಟ್ ಪಂದ್ಯಕ್ಕೆಂದು ಹೋದಾಗ ಅಲ್ಲಿ ದೊಡ್ಡ ಗಲಾಟೆ ನಡೆಯಿತು. ಈ ಮಕ್ಕಳು ದಾದಾಗಳ ಹಾಗೆ ಎದುರು ತಂಡದವರಿಗೆ ಹಿಗ್ಗಾ ಮುಗ್ಗಾ ಹೊಡೆದು ಬಂದಿದ್ದರು. ಆ ದೂರನ್ನು ತೆಗೆದುಕೊಂಡು ಪಂದ್ಯದ ಆಯೋಜಕರು ನನ್ನ ಬಳಿಗೆ ಬಂದರು. ಅಲ್ಲಿ ಏನು ನಡೆದಿರಬಹುದು ಎಂಬುದು ಮಕ್ಕಳ ಮುಖ ನೋಡಿದರೆ ಗೊತ್ತಾಗುತ್ತಿತ್ತು. ವಯಸ್ಸು ಹುಮ್ಮಸ್ಸು ಇಂಥಾ ಗಲಾಟೆ... ಯಾವುದನ್ನು ಬೇಕಾದರೂ ಮಾಡಿಸಿರುತ್ತದೆ. ಆದರೆ, ಬಂದವರ ಎದುರು ನಮ್ಮ ಕಾಲೇಜಿನ ಮಕ್ಕಳನ್ನು ಬಿಟ್ಟುಕೊಡುವಂತಿಲ್ಲ. ಬಿಟ್ಟುಕೊಟ್ಟರೆ, 'ನಮ್ಮ ಮೇಷ್ಟ್ರು ನಮ್ಮನ್ನು ಅವಮಾನಿಸಿದರು' ಅಂತ ನಾಳೆ ನನ್ನ ಮಾತನ್ನು ಕೇಳದೆ ಹೋಗುತ್ತಾರೆ. ಒಬ್ಬ ಒಳ್ಳೆಯ ಮೇಷ್ಟ್ರು ಒಳ್ಳೆಯ ತಂದೆಯೂ ಆಗಿರಬೇಕು ಎನ್ನುವುದು ನನ್ನ ನಂಬಿಕೆ. ನಾನು ಏನು ಹೇಳಬಹುದು ಎನ್ನುವ ಕುತೂಹಲದಿಂದ ಆತಂಕದಿಂದ ನೋಡುತ್ತಾ ನಿಂತಿದ್ದವರನ್ನು ನೋಡಿ, ಅವರನ್ನು ಕಾಪಾಡಿಕೊಳ್ಳುವುದೂ ನನ್ನ ಧರ್ಮ ಎಂದು ನನಗೆ ಅನ್ನಿಸುತ್ತಿತ್ತು. ಹಾಗಾಗಿ ನಾನು ಅವರಿಗೆ, 'ನಮ್ಮ ಕಾಲೇಜು ಶಿಸ್ತಿಗೆ ಹೆಸರುವಾಸಿಯಾಗಿದೆ. ನಮ್ಮ ಮಕ್ಕಳು ಯಾವ ಪ್ರಚೋದನೆಯೂ ಇಲ್ಲದೆ ಹೀಗೆ ಮಾಡಿರಲಿಕ್ಕೆ ಸಾಧ್ಯವೇ ಇಲ್ಲ. ಆ ಕಡೆಯಿಂದ ಪ್ರಚೋದನೆ ಬಂದರೆ ಅದು ಇವರ ತಪ್ಪು ಹೇಗಾದೀತು' ಎಂದೆಲ್ಲ ವಾದ ಮಾಡಿ ಅವರನ್ನು ಕಳುಹಿಸಿದೆ. ನಮ್ಮ ಮಕ್ಕಳು ಸಮಾಧಾನದಿಂದ ನಿಟ್ಟುಸಿರು ಬಿಟ್ಟರು. ಅವರಿಗೆ ಆ ಕ್ಷಣಕ್ಕೆ ನನ್ನ ಮೇಲೆ ಅಭಿಮಾನವೂ ಬಂದಿತ್ತು. ನನಗೂ ಹುಡುಗರು ಹೀಗೆ ಕಾಲೇಜಿನ ಹೆಸರು ಹಾಳು ಮಾಡುತ್ತಿದ್ದುದಕ್ಕೆ ಕೋಪ ಬಂದಿತ್ತು. ಪಂದ್ಯದ ಆಯೋಜಕರನ್ನು ಕಳಿಸಿದ ಮೇಲೆ ಗಲಾಟೆ ಮಾಡಿದ ಹುಡುಗರನ್ನು ಕಟುವಾಗಿ ಬೈದೆ. ಒಬ್ಬರೂ ಮಾತಾಡಲಿಲ್ಲ. ನಾನು ಬಂದವರ ಎದುರೇ ಅವರನ್ನು ಬೈದಿದ್ದರೆ ಹುಡುಗರು ಕೋಪಗೊಳ್ಳುತ್ತಿದ್ದರು. 'ನಮ್ಮ ಹುಡುಗರು ಹಾಗಲ್ಲ' ಎಂದು ವಾದ ಮಾಡಿದ್ದರಿಂದ ಹುಡುಗರಿಗೆ ಮೇಷ್ಟ್ರು ನಮ್ಮವರು ಅನ್ನಿಸಿತ್ತು. ಹಾಗಾಗಿ ಅವರ ಎದುರು ಮಾತನಾಡದೆ ಇನ್ನೊಮ್ಮೆ ಹೀಗೆಲ್ಲಾ ಮಾಡಲ್ಲ ಎಂದು ಪ್ರಮಾಣ ಮಾಡಿ ಹೊರನಡೆದರು' ಎಂದರು.

'ನಿಮ್ಮನ್ನು ನಿಮ್ಮ ವಿದ್ಯಾರ್ಥಿಗಳು ನಂಬಿದ ಹಾಗೆ ನಮ್ಮ ಮಗ ನಮ್ಮನ್ನು ನಂಬಬೇಕಲ್ಲಾ?' ಎಂದರು ಆ ತಂದೆ. ಅದಕ್ಕೆ ನರಹಳ್ಳಿಯವರು, 'ನಂಬಿಕೆ ಎನ್ನುವುದು ಹೇಳಿದರೆ ಬರುವುದಲ್ಲ; ಅದು ನಮ್ಮ ನಡವಳಿಕೆಗಳಿಂದ ವ್ಯಕ್ತವಾಗಬೇಕು. ನಿಮ್ಮದೇ ರಕ್ತ ಹಂಚಿಕೊಂಡ ಮಗನಿಗೆ ನಂಬಿಕೆ ಬರಿಸಲು ಸಾಧ್ಯವಾಗುವುದಿಲ್ಲವೇ? ಸಾಧ್ಯವಿಲ್ಲ ಎಂದರೆ ಅವನನ್ನು ನೀವು ಗಮನಿಸಿಯೇ ಇಲ್ಲ ಎಂದರ್ಥ. ದಯವಿಟ್ಟು ನಿಮ್ಮ ಮಗನನ್ನು ಇವತ್ತಿನಿಂದ ಗಮನಿಸಿ. ಅವನ ಬೇಕು ಬೇಡಗಳಿಗೆ ಸ್ಪಂದಿಸಿ. ಆಗ ನೀವು ಸ್ವಲ್ಪ ಅಧಿಕಾರದಿಂದ ಹೇಳಿದರೂ, ಅವನ ಮೇಲಿನ ನಿಮ್ಮ ಪ್ರೀತಿ ಅದನ್ನು ಸಹಿಸುವಂತೆ ಮಾಡುತ್ತದೆ' ಎಂದರು.

ನಿಜ. ಇವತ್ತು ನಮ್ಮ ಮಕ್ಕಳನ್ನು ಆಮಿಷ ಎನ್ನುವ ತೋಳ ಹೊತ್ತೊಯ್ಯದ ಹಾಗೆ ಕಾಪಾಡಿಕೊಳ್ಳುವುದು ನಮ್ಮದೇ ಜವಾಬ್ದಾರಿ. ಹೇಗಾದರೂ ಸರಿ ಅದನ್ನು ನಿಭಾಯಿಸಲೇ ಬೇಕು.

ತಿದ್ದುಪಡಿ: ಬುಧವಾರದ ಸಂಚಿಕೆಯಲ್ಲಿ ಪ್ರಕಟವಾದ 'ನುಡಿ ಬೆಳಗು' ಅಂಕಣದ ಲೇಖಕರ ಹೆಸರು ಬಿಟ್ಟುಹೋಗಿದೆ. ಈ ಅಂಕಣ ವಾಸುದೇವ ನಾಡಿಗ್ ಅವರದ್ದು.

ಪದಬಂಧ 6134

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆರ್ಥಿಕ ನೆರವು (5)
3.ಕಾಸಿದ್ರೆ ಮಾತ್ರವೇ ಶಿವನ ನೆಲೆ! (3)
5.ಯಾವುದೇ ಅಪರಾಧವನ್ನು ಮಾಡದಿರುವವನು (5)
8.ಲಿಂಗ ವಚನ ವಿಭಕ್ತಿಗಳಿಗಾಗಿ ರೂಪ ಭೇದ ಹೊಂದದ ಶಬ್ದ (3)
9.ವನದ ಕೊನೆಗೆ ನಡೆಸಿದ ನವಬಾಳು (5)
12.ಅಳುತ್ತಲೇ ಹಿಸುಕಿದ್ದು ಬೆಂದಕ್ಕಿ ಕಾಳು (3)
13.ಈತ ಮಂದಿಗೆಲ್ಲಾ ಒಡೆಯ (5)
16.ಹುದುಗಿಟ್ಟ ಧನ (3)
17.ಒಂದುಗೂಡಿಸುವುದು (5)

ಮೇಲಿಂದ ಕೆಳಕ್ಕೆ
1.ರಕ್ತ ಹರಿಯುವ ನಾಳ (3)
2.ಸರಸದ ಮಾತುಕತೆ (3)
4.ಮಯನ ಹತ್ತಿರ ಕಳೆದ ಕಾಲ (3)
6.ಈಕೆ ಮನ್ಮಥನ ಪತ್ನಿ (2)
7.ಸಾಕ್ಷರನ ಹತ್ತಿರ ಅಸುರ ಕಾಣುತ್ತಿದ್ದನಲ್ಲಾ! (3)
8.ಆಹಾರವನ್ನು ಹೀಗೂ ಹೇಳುವರು (3)
9.ನಾಭಿ ಇಲ್ಲಿ ಕಾಣುತ್ತಿದೆ (3)
10.ದನದ ಹತ್ತಿರ ಕಾಣುತ್ತಿರುವ ಮುಖ (3)
11.ಹೆದರಿಕೆ ಹೀಗೆ ಬಂದಿದೆ (2)
12.ಅವನಿರುವ ಭೂಮಿಯಿದು (3)
14.ನಾಕದಲ್ಲಿ ತೂರಿಸಿರುವ ಮೂಗು (3)
15.ಕಣದಲ್ಲಿ ಆಗಿರುವ ಮದುವೆ (3)



6133ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅದಿರು 4.ಹಕೀಮ
5.ಸಹಪಾಠಿ 6.ಠಾಯಭಾರ
8.3ಲ 10.ರವಿ
13.ಜಮಖಾನ 14.ಸತ್ಯಭಾಮೆ
15.ಯಾಚಕ 16.ಯೌವ್ವನ

ಮೇಲಿಂದ ಕೆಳಕ್ಕೆ:
1.ಅಹಮಹಮಿಕೆ 2.ಅಮರಾವತಿ
3.ಉಪಾಯ 5.ಸರದಾರ
7.ಐತಿಹಾಸಿಕತೆ 9.ಲವಾಜಮೆ
11.ವಿಮಾನಯಾನ 12.ಪ್ರತ್ಯಯ

ಸುಡೊಕು 6518

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3			6				2
6	7	2	4		9		1	
						6		9
3		7	2			4		
		8		4			3	7
4					3	2		8
		9	8					4
8					4		2	
		3		2		7		6

6517 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

14 ಆಗಸ್ಟ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಷಷ್ಠಿ ಗಂ.26-08 **ನಕ್ಷತ್ರ:** ರೇವತಿ ಗಂ. 9-06 **ಯೋಗ:** ಶೂಲ ಗಂ. 13-12 **ಕರಣ:** ಗರ ಗಂ. 15-16 ಕರ್ಕಾಟಕ ಮಾಸದ 29 ನೇ ದಿನ. **ಮಳೆ ನಕ್ಷತ್ರ:** ಆಶ್ಲೇಷ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 03-00, **ಸೂರ್ಯೋದಯ:** 06-21, **ಸೂರ್ಯಾಸ್ತ:** 06-49, **ಮುಸ್ಲಿಂ ದಿನಾಂಕ:** 19 ಸಫರ್. **ದಿನ ವಿಶೇಷ:** ಪಾರ್ಸಿ ಹೊಸ ವರ್ಷದ ಹಿಂದಿನ ದಿನ, ಚೆಲ್ಲಮ್ (ಮುಸ್ಲಿಂ), **ಅದೃಷ್ಟ ಸಂಖ್ಯೆ:** 1, 8.

ಮೇಷ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ ಧನ್ಯತಾ ಭಾವ ಉಂಟಾಗಲಿದೆ. ಬಂಧು–ಮಿತ್ರರ ಒಡನಾಟ ಸಂತೋಷ ತರುವುದು. ಅಜೀರ್ಣ ಹಾಗೂ ಪಿತ್ತದ ಸಮಸ್ಯೆಗಳು ಇಂದು ನಿಮ್ಮನ್ನು ಕಾಡುವ ಸಾಧ್ಯತೆಯಿದೆ.

ವೃಷಭ: ಆರ್ಥಿಕ ಸಂಕಷ್ಟದಲ್ಲಿರುವ ನಿಮಗೆ ಸ್ನೇಹಿತನಿಂದ ಸಹಾಯ ಸಿಗಲಿದೆ. ನಿಮ್ಮ ಪ್ರಾಮಾಣಿಕತೆಯನ್ನು ನೋಡಿ ಸಹಾಯ ಮಾಡಿದ್ದಾರೆ ಎಂಬುವುದು ಮರೆಯದಿರಿ. ರಂಗಭೂಮಿ ಕಲಾವಿದರಿಗೆ ಒಳ್ಳೆಯ ಅವಕಾಶಗಳು ಸಿಗಲಿವೆ.

ಮಿಥುನ: ಭಾವನೆಗಳಿಗೆ ಸ್ಪಂದಿಸುವ ಬಾಳಸಂಗಾತಿ ಸಿಕ್ಕಿರುವ ಬಗ್ಗೆ ಸಂತೋಷವಾಗುವುದು. ಉನ್ನತಾಧಿಕಾರಿಗಳಿಂದ ಪ್ರಶಂಸೆ ಪಡೆಯದಿದ್ದರೂ, ಕೋಪಕ್ಕೆ ಕಾರಣವಾಗಬೇಡಿ. ಸೂರ್ಯ ನಮಸ್ಕಾರದಿಂದ ಆರೋಗ್ಯ ವೃದ್ಧಿ.

ಕರ್ಕಾಟಕ: ಕೆಲವೊಂದು ದುರಭ್ಯಾಸಗಳು ನಿಮ್ಮ ಮಕ್ಕಳ ಮೇಲೆ ಪರಿಣಾಮ ಬೀರುತ್ತಿರುವುದು ಪ್ರತ್ಯಕ್ಷವಾಗಿ ಗೋಚರವಾಗುತ್ತದೆ. ಹಲವು ದಿನಗಳ ನಿರೀಕ್ಷೆಯ ವಾಹನ ಖರೀದಿ ವಿಚಾರಕ್ಕೆ ಇಂದು ಶುಭಾಂತ್ಯ ದೊರೆಯಲಿದೆ.

ಸಿಂಹ: ಆರಕ್ಷಕ ವರ್ಗದವರು ಜಾಗರೂಕತೆಯಿಂದ ವರ್ತಿಸಿ, ಸ್ವತಃ ನೀವೇ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದಂತಹ ಸನ್ನಿವೇಶ ಎದುರಾಗಬಹುದು. ಖರ್ಚು ವೆಚ್ಚಗಳಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸುವುದು ಉತ್ತಮ.

ಕನ್ಯಾ: ಸಾಹಿತಿಗಳು ಹೊಸ ಪುಸ್ತಕ ಬಿಡುಗಡೆಯ ಬಗ್ಗೆ ಗಮನಹರಿಸಿ. ನಿಮ್ಮ ನೈಪುಣ್ಯವು ವೃದ್ಧಿಸುವ ರೀತಿಯಲ್ಲಿ ನಿಮ್ಮ ವ್ಯಕ್ತಿತ್ವವಿರಲಿ. ನೀವು ನಿರೀಕ್ಷಿಸಿದ ರೀತಿಯಲ್ಲಿ ಹೊಸ ಹೊಸ ವ್ಯಾವಹಾರಿಕ ಸಂಬಂಧಗಳು ಸಿಗಲಿವೆ.

ತುಲಾ: ನಿಮ್ಮ ಸಾಧು ಸ್ವಭಾವ ಮತ್ತು ಪರೋಪಕಾರ ಶತ್ರುಗಳು ಮಿತ್ರರಾಗಿ ಬದಲಾಗುತ್ತಾರೆ. ಮನೆಗೆ ಹೊಸ ರೂಪ ನೀಡುವ ಕುರಿತು ಆಲೋಚನೆ ಬರಲಿದೆ. ಕಷ್ಟಪಟ್ಟು ಕೆಲಸ ಮಾಡಿದರೆ ಮೇಲಧಿಕಾರಿಗಳಿಂದ ಪ್ರಶಂಸೆ ಸಿಗಲಿದೆ.

ವೃಶ್ಚಿಕ: ಪಾಲುದಾರಿಕೆ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳುವುದು ಸರಿ ಎನಿಸಲಿದೆ. ಮನೆಯ ವಿಷಯಗಳತ್ತ ಹೆಚ್ಚಿನ ಗಮನ ಕೊಡಿ. ಸಂದಿಗ್ಧ ಪರಿಸ್ಥಿತಿಯನ್ನು ಜಾಣ್ಮೆಯಿಂದ ನಿಭಾಯಿಸುವುದು ಒಳ್ಳೆಯದು.

ಧನು: ಕುಟುಂಬದ ಗೌರವವನ್ನು ಉಳಿಸುವುದಕ್ಕಾಗಿ ನೀವು ಮಾಡುತ್ತಿರುವ ತ್ಯಾಗವು ಪ್ರಶಂಸನೀಯ. ಗೃಹ ನಿರ್ಮಾಣ ಕಾರ್ಯದ ಆಲೋಚನೆಯು ಕಾರ್ಯರೂಪಕ್ಕೆ ಬರುವುದು. ಎಷ್ಟೇ ತಾಳ್ಮೆ ಹೊಂದಿದ್ದರೂ ಕಡಿಮೆ ಆಗಬಹುದು.

ಮಕರ: ಸಹೋದರರ ಅಥವಾ ದಾಯಾದಿಗಳ ನಡುವಿನ ಭಿನ್ನಾಭಿಪ್ರಾಯ ನ್ಯಾಯಾಲಯದ ಮೆಟ್ಟಿಲು ಹತ್ತುವಂತೆ ಮಾಡಲಿದೆ. ಮಗಳ ಅನಾರೋಗ್ಯವು ಹಂತ ಹಂತವಾಗಿ ಸರಿಯಾಗಿ ಸಮಾಧಾನಕರವೆನ್ನಿಸುವುದು.

ಕುಂಭ: ವೃತ್ತಿರಂಗದಲ್ಲಿ ಹಿತೈಷಿಗಳ ಅಥವಾ ಅಕ್ಕಪಕ್ಕದವರ ಮಾತುಗಳನ್ನು ಲೆಕ್ಕಿಸದೇ ಮುನ್ನುಗ್ಗುವುದು ಈ ದಿನ ಸರಿ ಎನಿಸುವುದು. ಪತ್ರಿಕೋದ್ಯಮಿಗಳು ನಿಮ್ಮ ವಿಷಯಾನ್ವೇಷಣೆಯ ಕೌಶಲವನ್ನು ಮೆಚ್ಚಿ ಗೌರವಕ್ಕೆ ಭಾಗಿಯಾಗುವಿರಿ.

ಮೀನ: ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿರುವವರಿಗೆ ಈ ದಿನ ಅನಿರೀಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯಲಿದೆ. ತೊರೆದು ಬಂದ ನಿಮ್ಮ ಮೂಲಮನೆಯಲ್ಲಿದ್ದ ಸುವ್ಯವಸ್ಥೆಗಳನ್ನು ನೆನಪಿಸಿಕೊಂಡು ಈಗ ಮರುಗುವಂತಾಗುತ್ತದೆ.

ಗುಂಡಣ್ಣ

ಸದನ: ಮಾತು-ಗಮ್ಮತ್ತು

ವಿಧಾನಸೌಧ, ಶಾಸಕರ ಭವನಕ್ಕೂ ನಾಯಿ ಕಾಟ

'ಶಾಸಕರ ಭವನದಿಂದ ಹೊರಗೆ ಬರಲು ಆಗುತ್ತಿಲ್ಲ ಸ್ವಾಮಿ. ಮ್ಯಾಟ್ ಮೇಲೆ ನಾಯಿಗಳು ಮಲಗಿರುತ್ತವೆ. ಅಲ್ಲೇ ಮಲ ವಿಸರ್ಜನೆ ಮಾಡುತ್ತವೆ. ಶಾಸಕರ ಭವನ ನಿಮ್ಮ ವ್ಯಾಪ್ತಿಗೆ ಬರುತ್ತದೆ. ಅಲ್ಲಿರುವ ಬೀದಿ ನಾಯಿಗಳನ್ನು ಓಡಿಸಿ'.

ಹೀಗೆಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರಲ್ಲಿ ಅಳಲು ತೋಡಿಕೊಂಡವರು ಬಿಜೆಪಿಯ ಉಮಾನಾಥ ಕೋಟ್ಯಾನ್ ಅವರು.

ವಿಧಾನಸಭೆಯಲ್ಲಿ ಶೂನ್ಯವೇಳೆಗೂ ಮೊದಲು ಜೆಡಿಎಸ್ ಗುಂಪಿನ ನಾಯಕ ಸುರೇಶ್‌ಬಾಬು ಅವರು ಬೀದಿ ನಾಯಿಗಳ ಹಾವಳಿಯ ವಿಷಯ ಪ್ರಸ್ತಾಪಿಸಿದರು. ಆಗ ಶಾಸಕರು ಪಕ್ಷಭೇದ ಮರೆತು, 'ವಿಧಾನಸೌಧ ಮತ್ತು ಶಾಸಕರ ಭವನದ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳ ಕಾಟದಿಂದ ಮುಕ್ತಿ ಕೊಡಿಸಿ' ಎಂದು ಸಭಾಧ್ಯಕ್ಷರಲ್ಲಿ ಮೊರೆ ಇಟ್ಟರು.

'ಬೀದಿ ನಾಯಿಗಳ ಕಾಟ ತಡೆಗಟ್ಟುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಆದೇಶ ಮಾಡಿದೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಪಾಲಿಕೆಗಳಿಗೆ ಆದೇಶ ಮಾಡಿ ಬೀದಿ ನಾಯಿಗಳಿಗೆ ಕಡಿವಾಣ ಹಾಕಲು ಕ್ರಮ ತೆಗೆದುಕೊಳ್ಳಬೇಕು' ಎಂದು ಸುರೇಶ್ ಬಾಬು ಮನವಿ ಮಾಡಿದರು.

ಇದನ್ನು ಸಮರ್ಥಿಸಿದ ಬಿಜೆಪಿಯ ಎಸ್.ಸುರೇಶ್‌ಕುಮಾರ್, 'ಸುಪ್ರೀಂ ಕೋರ್ಟ್ ಆದೇಶ ದೇಶವ್ಯಾಪಿ ಅನ್ವಯವಾಗುತ್ತದೆ. ಆರು ತಿಂಗಳಲ್ಲಿ ನಗರದಲ್ಲಿ ನಾಯಿ ಕಚ್ಚಿದ 18 ಸಾವಿರ ಪ್ರಕರಣಗಳು ವರದಿಯಾಗಿವೆ. 18 ಮಂದಿಗೆ ರೇಬಿಸ್ ಸೋಂಕು ಕಾಣಿಸಿಕೊಂಡಿದೆ' ಎಂದು ಹೇಳಿದರು. ಆಗ ಉಮಾನಾಥ್ ಕೋಟ್ಯಾನ್ ಅವರು, 'ವಿಧಾನಸೌಧದ ಪಕ್ಕದಲ್ಲೇ ಇರುವ ಶಾಸಕರ ಭವನಕ್ಕೂ ನಾಯಿ ಕಾಟ ಇದೆ. ನಾವ್ಯಾರೂ ಶಾಸಕರ ಭವನದಿಂದ ಹೊರಗೆ ಬರಲು ಆಗುತ್ತಿಲ್ಲ' ಎಂದರು.

ಸಚಿವ, ಶಾಸಕರೇ ಸೀಟ್‌ಬೆಲ್ಟ್ ಧರಿಸಲ್ಲ

ರಾಜ್ಯದಲ್ಲಿನ ರಸ್ತೆ ಅಪಘಾತಗಳಲ್ಲಿ ಪ್ರತಿ ವರ್ಷವೂ ಸುಮಾರು 10 ಸಾವಿರ ಮಂದಿ ಮೃತರಾಗುತ್ತಿರುವ ವಿಷಯ ಕುರಿತು ವಿಧಾನಪರಿಷತ್‌ನಲ್ಲಿ ಗಂಭೀರ ಚರ್ಚೆ ನಡೆಯಿತು.

ಬಿಜೆಪಿಯ ಕೆ.ಎಸ್. ನವೀನ್ ಅವರ ಪ್ರಶ್ನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೀಡಿದ್ದ ಉತ್ತರಲ್ಲಿನ ಅಂಕಿಅಂಶಗಳನ್ನು ನೋಡಿ ಸದನದ ಸದಸ್ಯರು ಗಾಬರಿಯಾದರು. ರಸ್ತೆ ಗುಂಡಿಗಳನ್ನು ಸಮಯಕ್ಕೆ ಸರಿಯಾಗಿ ಮುಚ್ಚಬೇಕು. ವಾಹನ ದಟ್ಟಣೆ ಇರುವ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಬೇಕು. ಅಗತ್ಯ ಇರುವ ಕಡೆ ರಸ್ತೆ ವಿಸ್ತರಣೆ ಮಾಡಬೇಕು. ಅತಿ ವೇಗಕ್ಕೆ ಕಡಿವಾಣ ಹಾಕಬೇಕು. ಹೆದ್ದಾರಿಗಳಲ್ಲೂ ವೇಗಮಿತಿ ಕಡ್ಡಾಯಗೊಳಿಸಬೇಕು. ಟೋಲ್‌ಗಳ ಮಧ್ಯೆ ಸಂಚರಿಸುವ ಸಮಯ ನಿಗದಿ ಮಾಡಿ, ನಿಗದಿತ ಸಮಯಕ್ಕಿಂತ ಮುಂಚೆ ತಲುಪುವ ವಾಹನಗಳಿಗೆ ದಂಡ ವಿಧಿಸಬೇಕು.. ಹೀಗೆ ಒಬ್ಬೊಬ್ಬರು ಒಂದೊಂದು ಸಲಹೆ ನೀಡಿದರು.

ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯಿಸಿ, ಬೈಕ್ ಮತ್ತು ಕಾರು ಅಪಘಾತಗಳಲ್ಲೇ ಅಧಿಕ ಸಂಖ್ಯೆಯಲ್ಲಿ ಮೃತರಾಗುತ್ತಿದ್ದಾರೆ. ಹೆಲ್ಮೆಟ್, ಸೀಟ್‌ಬೆಲ್ಟ್ ಕಡ್ಡಾಯಗೊಳಿಸಿದರೂ ಪಾಲನೆ ಆಗುತ್ತಿಲ್ಲ ಎಂದರು. ಆಗ ಮಧ್ಯ ಪ್ರವೇಶಿಸಿದ ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ, 'ನಮ್ಮ ಸಚಿವರು, ಶಾಸಕರು ಐಷಾರಾಮಿ ಕಾರುಗಳಲ್ಲಿ ಮುಂದೆ ಕಳಿತು ಪ್ರಯಾಣ ಮಾಡುತ್ತಾರೆ. ಯಾರೂ ಸೀಟ್‌ಬೆಲ್ಟ್ ಹಾಕುವುದೇ ಇಲ್ಲ. ಮೊದಲು ಇಲ್ಲಿಂದಲೇ ನಿಯಮ ಪಾಲನೆ ಆಗಬೇಕು' ಎಂದು ಚರ್ಚೆಗೆ ತೆರೆ ಎಳೆದರು.

'ಲೋಕಸಭೆಯಲ್ಲಿ ಮಾತನಾಡಬೇಕು ಅಂದಿದ್ರಿ'

ರಸಗೊಬ್ಬರ ಕೊರತೆ ಕುರಿತು ಆಡಳಿತ– ವಿರೋಧ ಪಕ್ಷಗಳ ಸದಸ್ಯರ ನಡುವೆ ವಿಧಾನಸಭೆಯಲ್ಲಿ ಕಾವೇರಿದ ಚರ್ಚೆ ನಡೆಯುತ್ತಿದ್ದ ವೇಳೆ ಮಾತನಾಡಿದ ಸಿದ್ದರಾಮಯ್ಯ, ತಮ್ಮ ಚುನಾವಣಾ ರಾಜಕೀಯದ ಬಗ್ಗೆ ಪ್ರಸ್ತಾಪಿಸಿದ್ದು ಕೆಲಹೊತ್ತು ಸ್ವಾರಸ್ಯಕರ ಚರ್ಚೆಗೆ ವಸ್ತುವಾಯಿತು.

'ನಾನು ಒಂಬತ್ತು ವಿಧಾನಸಭೆ ಚುನಾವಣೆ ಎದುರಿಸಿದ್ದೇನೆ. ಡಿ.ಕೆ. ಶಿವಕುಮಾರ್ ಎಂಟು ಚುನಾವಣೆ ಎದುರಿಸಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದಾಗ, ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಇಲ್ಲ ಸರ್. ಡಿ.ಕೆ. ಶಿವಕುಮಾರ್ ಒಂಬತ್ತು ಚುನಾವಣೆ' ಎಂದರು.

'ಚುನಾವಣೆ ಎದುರಿಸಿದ ಲೆಕ್ಕ ಹಾಕಿದರೆ ನಾನು 13 ಬಾರಿ ಎದುರಿಸಿದ್ದೇನೆ. ಎರಡು ಬಾರಿ ಲೋಕಸಭೆ, ಎರಡು ಬಾರಿ ವಿಧಾನಸಭೆ ಚುನಾವಣೆ ಸೋತಿದ್ದೇನೆ' ಎಂದು ಮುಖ್ಯಮಂತ್ರಿ ಸಮಜಾಯಿಶಿ ನೀಡಿದರು.

ಆಗ ಅಶೋಕ, 'ನೀವು ಲೋಕಸಭೆಗೆ ಹೋಗಿ' ಎಂದರು. 'ಯಾಕಪ್ಪ... ನನ್ನನ್ನು ಕಳುಹಿಸುವ ಯೋಚನೆ ಇದೆಯಾ' ಎಂದು ಸಿದ್ದರಾಮಯ್ಯ ಮರುಪ್ರಶ್ನೆ ಕೇಳಿದರು. ಆಗ ಇಡೀ ಸದನದಲ್ಲಿ ನಗೆ ಉಕ್ಕಿತು.

'ನೀವೇ ಹಿಂದೊಮ್ಮೆ ಹೇಳಿದ್ರಿ. ಲೋಕಸಭೆಯಲ್ಲಿ ಮಾತನಾಡಬೇಕು ಅಂತ ಅಂದಿದ್ರಿ' ಎಂದು ಅಶೋಕ ನೆನಪಿಸಿದರು. 'ಈ ಹಿಂದೆ ಸಂಸತ್‌ಗೆ ಹೋಗಬೇಕು ಅನ್ನೋ ಆಸೆ ಇತ್ತು. ಈಗ ಅದು ಇಲ್ಲ. ಎರಡು ಸಲ ನನ್ನನ್ನು ಜನ ರಿಜೆಕ್ಟ್ ಮಾಡಿದ್ದಾರೆ. ಎಲ್ಲರಿಗೂ ಸಂಸತ್ ಪ್ರವೇಶ ಮಾಡುವ ಆಸೆ ಇರುತ್ತದೆ. ಆಸೆ ತಪ್ಪೇನಲ್ಲ. ಆಸೆ ಇರಬೇಕು. ದುರಾಸೆ ಇರಬಾರದು. ಆಸೆಯೇ ದುಃಖಕ್ಕೆ ಮೂಲ' ಎಂದು ಸೂಚ್ಯವಾಗಿ ಹೇಳಿದರು.

ಪಕ್ಕದ ಆಸನದಲ್ಲಿದ್ದ ಡಿ.ಕೆ. ಶಿವಕುಮಾರ್ ನಸು ನಕ್ಕರು.

ಡಿಕೆಶಿ – ಅಶ್ವತ್ಥನಾರಾಯಣ ಜಟಾಪಟಿ

ತೋಳೇರಿಸಿದ ಡಿಸಿಎಂ ಎದೆಯುಬ್ಬಿಸಿದ ಮಾಜಿ ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀನು ಭ್ರಷ್ಟಾಚಾರದ ಪಿತಾಮಹ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತೋಳೇರಿಸಿದಾಗ, 'ನೀನು ಭ್ರಷ್ಟಾಚಾರಿ ಅಂತ ಇಡೀ ಲೋಕಕ್ಕೇ ಗೊತ್ತು' ಎಂದು ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ ಎದೆಯುಬ್ಬಿಸಿ ತಿರುಗೇಟು ನೀಡಿದರು. ಇದು ಆಡಳಿತ–ವಿರೋಧ ಪಕ್ಷದ ಸದಸ್ಯರ ನಡುವೆ ಏಕವಚನದ ಆರೋಪ–ಪ್ರತ್ಯಾರೋಪಗಳಿಗೆ ಕಾರಣವಾಯಿತು.

ವಿಧಾನಸಭೆಯಲ್ಲಿ ಬುಧವಾರ ಭೋಜನ ವಿರಾಮದ ಬಳಿಕ ರಸಗೊಬ್ಬರ ಕೊರತೆ ಕುರಿತು ಚರ್ಚೆ ನಡೆಯುತ್ತಿದ್ದಾಗ, ವಿಷಯಾಂತರವಾಗಿ ಸ್ಮಾರ್ಟ್ ಮೀಟರ್, ರಾಮನಗರ ರಾಜಕೀಯ, ಜೈಲು, ಮತ ಕಳ್ಳತನ ಪ್ರಸ್ತಾಪಗೊಂಡು ಕಾಂಗ್ರೆಸ್-ಬಿಜೆಪಿ ಸದಸ್ಯರು ಅಕ್ಷರಶಃ ಸಮರಕ್ಕೆ ಮುಂದಾದರು.

ಈ ವೇಳೆ ಡಿ.ಕೆ. ಶಿವಕುಮಾರ್ ಅವರ ಆವೇಶಭರಿತ ಮಾತುಗಳು ವಿರೋಧ ಪಕ್ಷದ ಸದಸ್ಯರ ಮೇಲೆ ಆಡಳಿತ ಪಕ್ಷದ ಸದಸ್ಯರು ಮುಗಿಬೀಳುವಂತೆ ಮಾಡಿತು. ಕೋಲಾಹಲ, ಗದ್ದಲ ಹೆಚ್ಚಿದಾಗ ಸಭಾಧ್ಯಕ್ಷ ಪೀಠದಲ್ಲಿದ್ದ ಸಿ.ಎಸ್. ನಾಡಗೌಡ ಅವರು ಕಲಾಪವನ್ನು ಐದು ನಿಮಿಷ ಮುಂದೂಡಿದರು.

ರಸಗೊಬ್ಬರ ಕೊರತೆ ಬಗ್ಗೆ ಬಿಜೆಪಿಯ ಅರವಿಂದ ಬೆಲ್ಲದ ಮಾತಿಗೆ ಪ್ರತಿಕ್ರಿಯಿಸಿದ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, 'ಸದನಕ್ಕೆ ಸುಳ್ಳು ಹೇಳಬೇಡಿ. ನೀವು ಸುಳ್ಳು ಹೇಳಿದರೂ ಕೇಳಿಸಿಕೊಂಡು ಕುಳಿತುಕೊಳ್ಳಬೇಕೇ' ಎಂದು ಏರಿದ ದನಿಯಲ್ಲಿ ಪ್ರಶ್ನಿಸಿದರು. ಅದಕ್ಕೆ ಅಶ್ವತ್ಥನಾರಾಯಣ, 'ಹಾಗಾದರೇ ನೀವು ಸತ್ಯವಂತರಾ' ಎಂದು ಕೆಣಕಿದರು.

ಮಧ್ಯಪ್ರವೇಶಿಸಿದ ಇಂಧನ ಸಚಿವ ಕೆ.ಜೆ. ಜಾರ್ಜ್, 'ನೀವು ಸತ್ಯ ಹರಿಶ್ಚಂದ್ರರಾ' ಎಂದು ಪ್ರಶ್ನಿಸಿದರು. ರೊಚ್ಚಿಗೆದ್ದ ಅಶ್ವತ್ಥನಾರಾಯಣ, 'ನಿಮ್ಮ ಇಲಾಖೆ ಬಗ್ಗೆ ಮಾತನಾಡಲು ನಿಮಗೆ ಧಮ್ ಇಲ್ಲ. ಸ್ಮಾರ್ಟ್ ಮೀಟರ್ ಬಗ್ಗೆ ಉತ್ತರ ನೀಡಲಾಗದೇ ಓಡಿ ಹೋದವರು ನೀವು' ಎಂದು ಮುಗಿಬಿದ್ದರು. ಆಗ ಜಾರ್ಜ್, 'ಸ್ಮಾರ್ಟ್ ಮೀಟರ್ ವಿಚಾರ ನ್ಯಾಯಾಲಯದಲ್ಲಿದೆ. ಕಾನೂನು ಇದೆ. ನೀವು ಸುಳ್ಳು ಹೇಳಬೇಡಿ. ಇಡೀ ಇಲಾಖೆ ಲೂಟಿ ಹೊಡೆದವರು ನೀವು' ಎಂದು ಆರೋಪಿಸಿದರು. ಮತ್ತಷ್ಟು ಆಕ್ರೋಶಗೊಂಡ ಅಶ್ವತ್ಥನಾರಾಯಣ, 'ನೀವು ಅಸಮರ್ಥ ಸಚಿವ' ಎಂದು ವಾಗ್ದಾಳಿ ನಡೆಸಿದರು.

ಜಾರ್ಜ್ ಬೆನ್ನಿಗೆ ನಿಂತ ಡಿ.ಕೆ. ಶಿವಕುಮಾರ್, 'ನೀನು ಅಸಮರ್ಥ. ಜನ ವೋಟ್ ಹಾಕಿ ಜಾರ್ಜ್ ಅವರನ್ನು ಇಲ್ಲಿ ಕೂರಿಸಿದ್ದಾರೆ. ನೀನು ಭ್ರಷ್ಟಾಚಾರದ ಪಿತಾಮಹ' ಎಂದು ಅಶ್ವತ್ಥನಾರಾಯಣ ವಿರುದ್ಧ ವಾಗ್ದಾಳಿ ನಡೆಸಿದರು.

ಸದಸ್ಯರ ಮಾತು ಹಳಿ ತಪ್ಪುತ್ತಿದ್ದಂತೆ ಸಭಾಧ್ಯಕ್ಷರು ಕಲಾಪವನ್ನು ಮುಂದೂಡಿದರು. ಪೀಠದಿಂದ ಸಭಾಧ್ಯಕ್ಷರು ತೆರಳಿದ ನಂತರವೂ ಎರಡೂ ಕಡೆಯ ಸದಸ್ಯರು ಏರಿದ ದನಿಯಲ್ಲಿ ಪರಸ್ಪರ ಕೆಲಹೊತ್ತು ಘೋಷಣೆ ಕೂಗಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಮಾತಿನ ಸಮರಕ್ಕೆ ಮೂಕಪ್ರೇಕ್ಷಕರಾದರು.

ತಮ್ಮ ಕೊಠಡಿಗೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಆಡಳಿತ ಮತ್ತು ವಿರೋಧ ಪಕ್ಷದ ನಾಯಕರನ್ನು ಕರೆಸಿಕೊಂಡು ಸಮಾಧಾನಪಡಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತೋಳೇರಿಸಿ ಮಾತನಾಡಿದ ಕ್ಷಣ. ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ವದನರಾಗಿದ್ದರು

ಏಟು–ಎದಿರೇಟು

ಅಶ್ವತ್ಥನಾರಾಯಣ: 'ಕೊಲೆಗಡುಕ, ಅಸಮರ್ಥ, ಭ್ರಷ್ಟಾಚಾರದ ಸರ್ಕಾರ'
ಡಿಕೆಶಿ: 'ನೀನು ಅಸಮರ್ಥ'
ಅಶ್ವತ್ಥನಾರಾಯಣ: 'ನಿಮ್ಮ ಸರ್ಕಾರ ಜನ ವಿರೋಧಿ. ಅಸಮರ್ಥ, ಭ್ರಷ್ಟಾಚಾರದ ಸರ್ಕಾರ, ನೈತಿಕತೆ ಇಲ್ಲ'
ಡಿಕೆಶಿ: 'ನೀನು ಭ್ರಷ್ಟಾಚಾರದ ಪಿತಾಮಹ'
ಅಶ್ವತ್ಥನಾರಾಯಣ: 'ಇಡೀ ಲೋಕಕ್ಕೆ ಗೊತ್ತು. ಹೇಳುವುದೇ ಬೇಡ... ಯಾರು ಭ್ರಷ್ಟಾಚಾರದ ಪಿತಾಮಹ ಎಂದು'
ಡಿಕೆಶಿ: 'ರಾಮನಗರಕ್ಕೆ ಬಂದಿದ್ದಲ್ಲಪ್ಪ ಒಂದು ಸೀಟೂ ಬರಲಿಲ್ಲ.. ನಿನಗೆ. ಠೇವಣಿಯೂ ಸಿಗಲಿಲ್ಲ'
ಅಶ್ವತ್ಥನಾರಾಯಣ: 'ಅಸಮರ್ಥರು, ಭ್ರಷ್ಟಾಚಾರದ ಸರ್ಕಾರ'
(ಮತ್ತೆ.... ಮತ್ತೆ)
ಡಿಕೆಶಿ: (ಕೆರಳಿ ತೋಳೇರಿಸುತ್ತಾ...) 'ಒಬ್ಬ ಮೈನಾರಿಟಿ ಸಚಿವರಿಗೆ ಅಸಮರ್ಥರು ಎಂದು ನೀನು ಹೇಳುತ್ತಿದ್ದಿಯಾ'
(ಹಲವು ಬಾರಿ ಇಬ್ಬರೂ ಪರಸ್ಪರ ಏಕವಚನದಿಂದ ಬೈದಾಡಿಕೊಂಡರು)

ಯಾರೇನೆಂದರು?

ಪ್ರತಿಯೊಬ್ಬ ಸದಸ್ಯರೂ ತಮ್ಮ ಜವಾಬ್ದಾರಿ ಅರ್ಥ ಮಾಡಿಕೊಂಡು ಮಾತನಾಡಬೇಕು. ಶಿಸ್ತಿಗೆ ಆದ್ಯತೆ ನೀಡಬೇಕು. ವಿಷಯಕ್ಕೆ ಸೀಮಿತವಾಗಿ ಚರ್ಚೆ ಮಾಡಬೇಕು. ಮಾತನಾಡುವ ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು
ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ನಮ್ಮ ಮಾತು, ನಡೆ ಬಹಳ ಮುಖ್ಯ. ವಿರೋಧ ಪಕ್ಷಗಳ ಸದಸ್ಯರು ರಚನಾತ್ಮಕ ಟೀಕೆ ಮಾಡಬೇಕು. ತಪ್ಪು ಪದ ಬಳಕೆ ಬೇಡ. ಇಲ್ಲಿ ಯಾರೂ ಬೃಹಸ್ಪತಿಗಳಲ್ಲ. ಮಾತನಾಡುವಾಗ ಇನ್ನೊಬ್ಬರಿಗೆ ನೋವು ಆಗದಂತೆ ಮಾತನಾಡಬೇಕು
ಸಿದ್ದರಾಮಯ್ಯ, ಮುಖ್ಯಮಂತ್ರಿ

ನನಗೂ ಬಿಸಿ ರಕ್ತ ಇದೆ. ಆ ಬಿಸಿ ರಕ್ತ ಎಲ್ಲಿ ಬಳಸಬೇಕೊ ಅಲ್ಲಿ ಬಳಸುತ್ತೇನೆ. ಸ್ವಾಭಿಮಾನ, ಆತ್ಮಗೌರವಕ್ಕೆ ಧಕ್ಕೆಯಾದಾಗ ನೋವಾಗುತ್ತದೆ. ಜಾರ್ಜ್ ಹಿರಿಯರು, ಅವರಿಗೆ ಅಸಮರ್ಥ ಅಂದಿದ್ದು ಸರಿಯಲ್ಲ. ಜಾರ್ಜ್‌ಗೆ ಅವಮಾನವಾದರೆ ನಾನು ಸಹಿಸಲ್ಲ
ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಸದಸ್ಯರು ವೈಯಕ್ತಿಕವಾಗಿ ಟೀಕೆ ಮಾಡದಿದ್ದರೆ ಒಳ್ಳೆಯದು. ಟೀಕೆ ಮಾಡಲೆಂದೇ ಇರುವವರು ನಾವು. ಆದರೆ, ಆಡಳಿತ ಪಕ್ಷದವರು ಸಂಯಮದಿಂದ ಇರಬೇಕು. ಶಿವಕುಮಾರ್ ಅವರು ಸಂಯಮ ಕಳೆದುಕೊಂಡು ಮಾತನಾಡಿದ್ದಾರೆ
ಆರ್. ಅಶೋಕ, ವಿರೋಧಪಕ್ಷದನಾಯಕ

'ಬಾಲ ಗರ್ಭಿಣಿಯರು ಹೆಚ್ಚಲು ಜಾಲತಾಣ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಲು ಸಾಮಾಜಿಕ ಜಾಲತಾಣಗಳಲ್ಲಿ ಲಂಗೂ ಲಗಾಮು ಇಲ್ಲದೇ ಪ್ರಸಾರವಾಗುವ ಅಶ್ಲೀಲ, ಲೈಂಗಿಕ ಕಾರ್ಯಕ್ರಮಗಳೇ ಕಾರಣ. ಇವುಗಳಿಗೆ ಕಡಿವಾಣ ಹಾಕಬೇಕು' ಎಂದು ಜೆಡಿಎಸ್‌ನ ಸುರೇಶ್ ಬಾಬು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಕಳೆದ 20 ತಿಂಗಳಲ್ಲಿ 26,463 ಬಾಲಕಿಯರು ಗರ್ಭ ಧರಿಸಿದ್ದಾರೆ. ಇದು ಆತಂಕದ ವಿಚಾರ' ಎಂದು ಕಳವಳ ವ್ಯಕ್ತಪಡಿಸಿದರು.

'ಇನ್ನೂ ಪ್ರಪಂಚದ ಅರಿವೇ ಇಲ್ಲದ ಸಮಯದಲ್ಲಿ ಪ್ರೀತಿ–ಪ್ರೇಮ ಎಂದು ಬಾಲಕಿಯರು ಮೋಸ ಹೋಗುತ್ತಿದ್ದಾರೆ. ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಲೈಂಗಿಕತೆಗೆ ಉತ್ತೇಜನ ನೀಡುವ ಜಾಹೀರಾತುಗಳು ಪ್ರಭಾವ ಬೀರುತ್ತಿವೆ. ಇವುಗಳ ಮೇಲೆ ನಿಗಾ ಇಡುವುದರ ಜತೆಗೆ ಕಡಿವಾಣ ಹಾಕಬೇಕು' ಎಂದು ಆಗ್ರಹಿಸಿದರು.

'ಹೀಗೆ ಮೋಸ ಹೋಗುವ ಬಾಲಕಿಯರನ್ನು ಅವರ ಕುಟುಂಬಗಳೂ ದೂರ ಮಾಡುತ್ತಿವೆ. ಇದನ್ನು ತಡೆಯಲು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು' ಎಂದು ಒತ್ತಾಯಿಸಿದರು.

ಅಪಘಾತ: 5 ವರ್ಷಗಳಲ್ಲಿ 60 ಸಾವಿರ ಮಂದಿ ಸಾವು

ಬೆಂಗಳೂರು: ಐದು ವರ್ಷಗಳಲ್ಲಿ ರಾಜ್ಯದ ರಸ್ತೆಗಳಲ್ಲಿ ನಡೆದ ಅಪಘಾತಗಳ ಸಂಖ್ಯೆ 2.13 ಲಕ್ಷ. ಈ ಅಪಘಾತಗಳಲ್ಲಿ ಮೃತಪಟ್ಟವರು 60,115 ಮಂದಿ. ವಿಧಾನಪರಿಷತ್‌ನಲ್ಲಿ ಬಿಜೆಪಿಯ ಕೆ.ಎಸ್. ನವೀನ್ ಪ್ರಶ್ನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೀಡಿದ ಅಂಕಿಅಂಶ.



ಪ್ರಶ್ನೋತ್ತರ

ಮೀನುಗಾರಿಕೆಗಾಗಿ ಆಳ ಸಮುದ್ರಕ್ಕೆ ತೆರಳುವ ದೋಣಿಗಳು ಅಪಘಾತಕ್ಕೆ ಒಳಗಾಗಿ, ಮೀನುಗಾರರು ಮೃತರಾಗುತ್ತಿರುವ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಸರ್ಕಾರದಿಂದಲೇ ಮೀನುಗಾರರಿಗೆ ಜೀವರಕ್ಷಕ ಜಾಕೆಟ್ ವಿತರಣೆ ಮಾಡಲು ನಿರ್ಧರಿಸಲಾಗಿದೆ. ಮೀನುಗಾರಿಕೆ ನಡೆಸುವ ಖಾಸಗಿ ಕಂಪನಿಗಳು ಎಲ್ಲ ಮೀನುಗಾರರಿಗೂ ಕಡ್ಡಾಯವಾಗಿ ಜೀವರಕ್ಷಕ ಜಾಕೆಟ್ ನೀಡಲು ಸೂಚಿಸಲಾಗಿದೆ
ಮಂಕಾಳ ವೈದ್ಯ, ಮೀನುಗಾರಿಕೆ ಸಚಿವ (ಪ್ರಶ್ನೆ: ತಿಪ್ಪಣ್ಣಪ್ಪ ಕಮಕನೂರ, ಕಾಂಗ್ರೆಸ್ ಸದಸ್ಯ)

ರಾಜ್ಯದಲ್ಲಿನ ಮುಜರಾಯಿ ದೇವಾಲಯಗಳ ಪೂಜಾ ಕಾರ್ಯಗಳಲ್ಲಿ ಕನ್ನಡಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲು ಸಲಹೆ ನೀಡಲಾಗುವುದು. ದೇವಾಲಯಗಳ ಸಂಪ್ರದಾಯ, ಆಚರಣೆ, ಪದ್ಧತಿಗಳಲ್ಲಿ ಹಸ್ತಕ್ಷೇಪ ಮಾಡಲು ಸರ್ಕಾರ ಬಯಸುವುದಿಲ್ಲ. ಆಗಮ ಶಿಕ್ಷಣದಲ್ಲಿ ಸಂಸ್ಕೃತ ಭಾಷೆಯಲ್ಲೇ ಹೆಚ್ಚಿನ ಗ್ರಂಥಗಳು ಇವೆ. ಹಾಗಾಗಿ, ಸಂಸ್ಕೃತ ಮತ್ತು ಕನ್ನಡದಲ್ಲಿ ಪ್ರವಚನಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಎರಡೂ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ
ರಾಮಲಿಂಗಾರೆಡ್ಡಿ, ಮುಜರಾಯಿ ಸಚಿವ (ಪ್ರಶ್ನೆ: ಭಾರತಿ ಶೆಟ್ಟಿ, ಬಿಜೆಪಿ ಸದಸ್ಯೆ)

ಇನ್ನು ಒಂದೂವರೆ ತಿಂಗಳಲ್ಲಿ ಇ–ಸ್ವತ್ತು ತಂತ್ರಾಂಶದ ಮೂಲಕ ನಮೂನೆ 11 ಬಿ ಖಾತೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ 29 ಆಕ್ಷೇಪಣೆ ಬಂದಿದ್ದವು, ಅವುಗಳನ್ನು ಪರಿಶೀಲಿಸಿ ಇನ್ನು 15 ದಿನಗಳಲ್ಲಿ ನಿಯಮಗಳನ್ನು ರೂಪಿಸಲಾಗುವುದು. ಸದ್ಯಕ್ಕೆ ನಮೂನೆ 11 ಬಿ ಖಾತೆ ನೀಡುತ್ತಿಲ್ಲ.
ಪ್ರಿಯಾಂಕ್ ಖರ್ಗೆ, ಪಂಚಾಯತ್ ರಾಜ್ ಸಚಿವ (ಪ್ರಶ್ನೆ: ಬಸನಗೌಡ ಪಾಟೀಲ ಯತ್ನಾಳ)

ಕಡಿಮೆ ಮೊತ್ತದಲ್ಲಿ ತ್ವರಿತ ಸೇವೆಗೆ ಅವಕಾಶ ಮಾಡಿಕೊಡಲು ಬ್ಯಾಟರಿ ಚಾಲಿತ ದ್ವಿಚಕ್ರ ವಾಹನಗಳಿಗೆ 'ಬೈಕ್ ಟ್ಯಾಕ್ಸಿ' ಸೇವೆಗೆ ಅವಕಾಶ ನೀಡಲಾಗಿತ್ತು. ಕಾನೂನಿನಲ್ಲಿ ಅವಕಾಶ ಇಲ್ಲದ ಕಾರಣ ರದ್ದು ಮಾಡಲಾಗಿದೆ. ಇದನ್ನು ಪ್ರಶ್ನಿಸಿ, ಕೆಲ ಕಂಪನಿಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿದ್ದವು. ಪ್ರಕರಣವನ್ನು ಕೋರ್ಟ್ ವಜಾಗೊಳಿಸಿದೆ. ಹೈಕೋರ್ಟ್ ತೀರ್ಪು ನೋಡಿಕೊಂಡು 'ಬೈಕ್ ಟ್ಯಾಕ್ಸಿ' ಸೇವೆಗೆ ಅನುಮತಿ ನೀಡುವ ಕುರಿತು ತೀರ್ಮಾನ ಮಾಡಲಾಗುವುದು
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ (ಪ್ರಶ್ನೆ: ಡಿ.ಎಸ್. ಅರುಣ್, ಬಿಜೆಪಿ)

ರಸಗೊಬ್ಬರ ಕೊರತೆಗೆ ಕೇಂದ್ರವೇ ಕಾರಣ: ಕೃಷಿ ಸಚಿವ ಆರೋಪ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಆಗಸ್ಟ್‌ವರೆಗೆ ಪೂರೈಕೆ ಆಗಬೇಕಾದ ಯೂರಿಯಾ ರಸಗೊಬ್ಬರ ಪ್ರಮಾಣದಲ್ಲಿ 2.74 ಲಕ್ಷ ಟನ್ ಬಾಕಿಯಿದ್ದು, ಕೇಂದ್ರದಿಂದ ಪೂರೈಕೆಯಲ್ಲಿ ಆಗಿರುವ ಕೊರತೆಯಿಂದ ಸಮಸ್ಯೆಯಾಗಿದೆ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ರಸಗೊಬ್ಬರ ಕೊರತೆ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಸಚಿವರು, 'ರೈತರನ್ನು ಬಿಜೆಪಿಯವರು ಪ್ರಚೋದಿಸಿ ರಾಜಕಾರಣ ಮಾಡಿದ್ದರಿಂದ ಸಮಸ್ಯೆ ಉಲ್ಬಣಿಸಿದೆ' ಎಂದು ಆರೋಪಿಸಿದರು.

ಆಗ ಬಿಜೆಪಿ, ಜೆಡಿಎಸ್ ಸದಸ್ಯರು, 'ಕೃಷಿ ಇಲಾಖೆಯ ಪೂರ್ವ ಸಿದ್ಧತೆ ಕೊರತೆ, ಜೊತೆಗೆ ನಿರ್ವಹಣೆಯಲ್ಲಿನ ವೈಫಲ್ಯದಿಂದ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ದೂರಿ ಸಭಾತ್ಯಾಗ ಮಾಡಿದರು.

ರಸಗೊಬ್ಬರ ಕೊರತೆ ಆಗದಂತೆ ಕೃಷಿ ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದ ಚಲುವರಾಯಸ್ವಾಮಿ, 'ಕೇಂದ್ರ ಸರ್ಕಾರದಿಂದ ಸಕಾಲದಲ್ಲಿ ರಸಗೊಬ್ಬರ ಪೂರೈಕೆಗೆ ಒತ್ತಡ ಹೇರಿ, ನೆರವಾಗಬೇಕು' ಎಂದೂ ಮನವಿ ಮಾಡಿದರು.

'ಕೇಂದ್ರದಿಂದ ಹಂಚಿಕೆ ಆಗಿರುವಷ್ಟು ಯೂರಿಯಾ ಪೂರೈಕೆ ಆಗದಿದ್ದರೂ ಪರಿಸ್ಥಿತಿ ನಿಭಾಯಿಸಿದ್ದು, ರೈತರ ವಿಚಾರದಲ್ಲಿ ಸರ್ಕಾರ ಮೈಮರೆತಿಲ್ಲ' ಎಂದು ಸಮರ್ಥನೆ ನೀಡಿದ ಚಲುವರಾಯಸ್ವಾಮಿ, 'ಹಿಂದಿನ ಸರ್ಕಾರದ ಅವಧಿಯಲ್ಲೂ ಅಂತರರಾಜ್ಯ ರಸಗೊಬ್ಬರ ಕಳ್ಳಸಾಗಣೆ ಸಂಬಂಧ ಒಂಬತ್ತು ಪ್ರಕರಣ ದಾಖಲಾಗಿದ್ದವು. ನಮ್ಮ ಸರ್ಕಾರ ದಿನದ 24 ಗಂಟೆ ಗಡಿಗಳಲ್ಲಿ ನಿಗಾ ವಹಿಸಿದ್ದು, ಅನ್ಯ ರಾಜ್ಯಗಳಿಗೆ, ಉದ್ಯಮಗಳಿಗೆ ರಸಗೊಬ್ಬರ ಪೂರೈಕೆ ಆಗದಂತೆ ಮೇಲ್ವಿಚಾರಣೆ ನಡೆಸುತ್ತಿದೆ. ಅಕ್ರಮ ಸಾಗಣೆ ಆಗುತ್ತಿದ್ದ 450 ಟನ್ ರಸಗೊಬ್ಬರ ವಶಪಡಿಸಿಕೊಳ್ಳಲಾಗಿದೆ' ಎಂದರು.

ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಬಿಜೆಪಿಯ ಆರಗ ಜ್ಞಾನೇಂದ್ರ, 'ಪೂರ್ವಸಿದ್ಧತೆ ಕೊರತೆಯಿಂದ ರಸಗೊಬ್ಬರ ಅಭಾವ ಸೃಷ್ಟಿಯಾಗಿದೆ. ಜತೆಗೆ, ಕೃತಕ ಅಭಾವ ಸೃಷ್ಟಿಸಿ ಕಾಳಸಂತೆಯಲ್ಲಿ ಮಾರಾಟದಿಂದಾಗಿ ಸಮಸ್ಯೆಯಾಗಿದೆ. ಅಂಥವರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸಬೇಕು. ಕಳಪೆ ಬೀಜ, ಔಷಧ ವಿತರಣೆಯಿಂದಲೂ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಗಮನಸೆಳೆದರು.

ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, 'ಕೇಂದ್ರ ಸರ್ಕಾರ ರಾಜ್ಯಕ್ಕೆ ಆಗಸ್ಟ್ 11ರವರೆಗೆ 7.60 ಲಕ್ಷ ಟನ್ ರಸಗೊಬ್ಬರ ಪೂರೈಕೆಗೆ ಪ್ರತಿಯಾಗಿ 9.70 ಲಕ್ಷ ಟನ್ ಪೂರೈಸಿದೆ. ಉತ್ತರ ಕರ್ನಾಟಕ ಹಾಗೂ ಬಯಲು ಸೀಮೆ ಪ್ರದೇಶದಲ್ಲಿ ರಸಗೊಬ್ಬರ ಕೊರತೆ ತೀವ್ರವಾಗಿದ್ದು, ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ' ಎಂದು ದೂರಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕರಾದ ಬಿ.ವೈ. ವಿಜಯೇಂದ್ರ, ಸಿಮೆಂಟ್ ಮಂಜು, ಎಚ್.ಕೆ. ಸುರೇಶ್, ಎನ್.ಎಚ್. ಕೋನರಡ್ಡಿ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದರು.

ಕಲಾಪಕ್ಕೆ ಕಿವಿಯಾದವರು....

ವಿಧಾನಸಭೆ ಕಾರ್ಯಕಲಾಪ ವೀಕ್ಷಿಸಿದ ಗ್ರಾಮೀಣ ಮಹಿಳೆಯರು

ದಾರಿ ಸರಳ

ಒಂದನೇ ಪುಟದಿಂದ...

- ನಮೂನೆ 53 ಹಾಗೂ 57ರ ಅಡಿ ಸಾಗುವಳಿ ಹಕ್ಕು ಪಡೆದ ಮಂಜೂರುದಾರ ಬಗರ್‌ಹುಕುಂ ರೈತರಿಗೆ, ಭೂಮಿ ನೋಂದಣಿ ಮಾಡಿಕೊಡಲು ಇನ್ನು ಮುಂದೆ ಉಪನೋಂದಣಾಧಿಕಾರಿಯ ಅಗತ್ಯವಿಲ್ಲ. ಮಂಜೂರಾತಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ತಹಶೀಲ್ದಾರ್ ಅವರು ಡಿಜಿಟಲ್ ಆಗಿ ಅಪ್‌ಲೋಡ್ ಮಾಡಿದರೆ ಸ್ವಯಂಚಾಲಿತವಾಗಿ ನೋಂದಣಿ ಆಗುತ್ತದೆ
- ರೈತರು ತಾವು ಪಡೆದ ಸಾಲ ತೀರಿಸಿದ್ದನ್ನು ಪಹಣಿ ಕಾಲಂನಿಂದ ತೆಗೆಸಲು ಕಚೇರಿಗೆ ಅಲೆಯುವುದು ತಪ್ಪಲಿದ್ದು, ಸ್ವಯಂ ಚಾಲಿತವಾಗಿ ಋಣಮುಕ್ತ ಪ್ರಮಾಣಪತ್ರ ನೀಡಲಾತ್ತದೆ. ಮಧ್ಯವರ್ತಿ ಹಾವಳಿ ತಪ್ಪುತ್ತದೆ
- ಖಾತೆಯನ್ನು ಕಾಗದದ ಮೂಲಕ ತಂದು ಕೊಟ್ಟರೆ ಅದೂ ನಕಲಿ ಆಗಿರುವ ಸಾಧ್ಯತೆ ಇದೆ. ಈ ಎಲ್ಲ ದಾಖಲೆಗಳೂ ಡಿಜಿಟಲ್ ಆಗಿಯೇ ಬರಬೇಕು. ಸೆಕ್ಷನ್ 32ಕ್ಕೆ ಈ ತಿದ್ದುಪಡಿ ಮಾಡಲಾಗಿದೆ. ದಾಖಲೆಗಳ ಡಿಜಿಟಲ್ ಪರಿಶೀಲನೆ ವೇಳೆ ರೈತರು ಸರ್ಕಾರಿ ಕಚೇರಿಗಳಿಗೆ ಬರುವ ಅಗತ್ಯವಿಲ್ಲ
- ಇಬ್ಬರು ವ್ಯಕ್ತಿಗಳ ನಡುವಿನ ವೈಯಕ್ತಿಕ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಆಧಾರದಲ್ಲಿ ನಡೆಯುವ ವ್ಯವಹಾರಗಳಿಗೆ ಮಾತ್ರ ಇಬ್ಬರೂ ಹಾಜರಿರಬೇಕು ಮತ್ತು ಜಿಪಿಎ ಕಡ್ಡಾಯವಾಗಿ ನೋಂದಣಿ ಆಗಬೇಕು
- 11 ಇ ಸ್ಕೆಚ್ ಅನ್ನು (ಆಸ್ತಿಯ ಗಡಿಗಳು ಮತ್ತು ಇತರ ವಿವರಗಳನ್ನು ಒಳಗೊಂಡಿರುವ ನಕ್ಷೆ) 2011ರಲ್ಲೇ ಕಡ್ಡಾಯ ಮಾಡಿ ಕಾನೂನು ಪರಿಧಿಯೊಳಗೆ ತರಲಾಗಿದೆ

ಅಕ್ರಮ ನೋಂದಣಿ ತಡೆ; ಶೀಘ್ರ ನಿಯಮ

ಒಂದನೇ ಪುಟದಿಂದ...

ಅಲ್ಲದೇ ಒಂದು ತಿಂಗಳ ಒಳಗೆ ಕರ್ನಾಟಕ ನೋಂದಣಿ ನಿಯಮ–1965ಕ್ಕೆ ತಿದ್ದುಪಡಿ ತಂದು ಹೊಸ ಕರಡು ನಿಯಮಗಳನ್ನು ಸಿದ್ಧಪಡಿಸಲಾಗುವುದು. ನಂತರ ಕಾಯ್ದೆ ಜಾರಿಗೊಳ್ಳುವ ದಿನಾಂಕ ಘೋಷಿಸಲಾಗುವುದು ಎಂದರು. ಅಧಿಕಾರಿಗಳೇ ಶಾಮೀಲಾಗಿ ಅಕ್ರಮ ನೋಂದಣಿ ಮಾಡಿಕೊಟ್ಟ ಉದಾಹರಣೆಗಳಿವೆ. ಕಾಯ್ದೆ ಜಾರಿಯ ನಂತರ ಅಂತಹ ಲೋಪ ಕಂಡುಬಂದರೆ ಅವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು. ಆಸ್ತಿಗಳನ್ನು ನಿಯಮಬಾಹಿರವಾಗಿ ಮಾಡಿದ್ದ ನೋಂದಣಿ ರದ್ದು ಮಾಡಲು ಇದುವರೆಗೂ ಕೋರ್ಟ್ ಮೊರೆ ಹೋಗಬೇಕಿತ್ತು. ಜನರಿಗೆ ಇನ್ನು ಅಂತಹ ಅಲೆದಾಟ ತಪ್ಪಲಿದೆ ಎಂದು ಹೇಳಿದರು.

ರಾಜೀನಾಮೆ ಸವಾಲು

'ಬಡವರ ಮಕ್ಕಳಿಗೆ ಉಚಿತವಾಗಿ ವಸತಿ ಶಾಲೆಗಳಿಗೆ ಪ್ರವೇಶ ನೀಡುವುದರಿಂದ, ಕುಟುಂಬದ ನಿಗಾದಿಂದ ದೂರಾಗುತ್ತಾರೆ. ಅದು ಒಳ್ಳೆಯದಲ್ಲ' ಎಂದು ನೀವು ಹೇಳಿಲ್ಲ ಎಂಬುದನ್ನು ಸಾಬೀತುಪಡಿಸಿದರೆ, ನಾನು ರಾಜೀನಾಮೆ ನೀಡುತ್ತೇನೆ. ಹೇಳಿದ್ದರೆ ನೀವು ರಾಜೀನಾಮೆ ನೀಡುತ್ತೀರಾ' ಎಂದು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಅವರು ಬಿಜೆಪಿ ಸದಸ್ಯರಿಗೆ ಸವಾಲು ಹಾಕಿದರು.

ವಿಧಾನ ಪರಿಷತ್‌ನಲ್ಲಿ ಶ್ರಮಿಕ ವಸತಿಶಾಲೆಗಳ ನಿರ್ಮಾಣದ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ, 'ಏನೇನೋ ಮಾತನಾಡಿ ಹಾದಿ ತಪ್ಪಿಸಬೇಡಿ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು. ಆಗ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದ ನಡೆಯಿತು.

ಆಗ ಮಧ್ಯಪ್ರವೇಶಿಸಿದ ಹರಿಪ್ರಸಾದ್, 'ಬಡಮಕ್ಕಳಿಗೆ ಉಚಿತ ಶಾಲೆ ನೀಡಬೇಡಿ ಎನ್ನುತ್ತಿರುವುದು ಸರಿಯಲ್ಲ. ವಿರೋಧ ಪಕ್ಷದ ನಾಯಕರು ಕಟ್ಟಡ ಕಾರ್ಮಿಕರನ್ನು ಅನಿಷ್ಟ– ಕನಿಷ್ಠ ಎಂದಿದ್ದು ಸರಿಯಲ್ಲ. ಬೆವರು, ರಕ್ತ ಸುರಿಸಿ ಕಟ್ಟಡ ಕಾರ್ಮಿಕರು ಶ್ರಮಿಸುತ್ತಾರೆ' ಎಂದರು.

'ಬಡವರ ಮಕ್ಕಳಿಗೆ ಉಚಿತವಾಗಿ ಶಾಲೆ ಬೇಡ ಎಂದು ನಾವ್ಯಾರೂ ಹೇಳಿಲ್ಲ' ಎಂದು ಬಿಜೆಪಿಯ ಎನ್. ರವಿಕುಮಾರ್, ಭಾರತಿ ಶೆಟ್ಟಿ, ಡಿ.ಎಸ್. ಅರುಣ್, ಕೆ.ಎಸ್. ನವೀನ್ ಅವರು ಹೇಳಿದರು. 'ಪ್ರತಾಪ್ ಸಿಂಹ ನಾಯಕ್ ಅವರು ಉಚಿತವಾಗಿ ಶಾಲೆಗೆ ಪ್ರವೇಶ ನೀಡಿದರೆ ಕುಟುಂಬದಿಂದ ದೂರಾಗುತ್ತಾರೆ ಎಂದು ಹೇಳಿದರು' ಎಂದು ಸಚಿವ ಸಂತೋಷ್ ಲಾಡ್ ದೂರಿದರು.

'ಕಡತ ನೋಡಿ ಪರಿಶೀಲಿಸುತ್ತೇನೆ, ಸುಮ್ಮನಿರಿ' ಎಂದು ಹೇಳಿದ ಸಭಾಪತಿ ಬಸವರಾಜ ಹೊರಟ್ಟಿ, ವಾಗ್ವಾದಕ್ಕೆ ತೆರೆ ಎಳೆದರು.

'ಮತ ಕಳವು: ಕಾನೂನು ಹೋರಾಟ'

'ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಮಹದೇವಪುರದಲ್ಲಿ ಮತ ಕಳವು ನಡೆದಿರುವುದನ್ನು ನಮ್ಮ ನಾಯಕ ರಾಹುಲ್ ಗಾಂಧಿ ಅವರು ಪುರಾವೆಗಳ ಸಮೇತ ಸಾಬೀತುಪಡಿಸಿದ್ದಾರೆ. ಪಕ್ಷದ ನಾಯಕರು ಮಾಡಿರುವ ಆರೋಪಗಳಿಗೆ ಚುನಾವಣಾ ಆಯೋಗ ಉತ್ತರ ನೀಡಬೇಕು' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಮಹದೇವಪುರದಲ್ಲಿ ಮತ ಕಳವು ನಡೆದಿರುವ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರಾತ್ಯಕ್ಷಿಕೆ ಸಹಿತ ವಿವರಿಸಿದ ಪ್ರಿಯಾಂಕ್, 'ಈ ಪ್ರಕರಣದಲ್ಲಿ ಕಾನೂನು ಹೋರಾಟಕ್ಕೆ ತೀರ್ಮಾನಿಸಿದ್ದೇವೆ' ಎಂದರು.

'ಚುನಾವಣಾ ಆಯೋಗದ ನಿಯಮ ಮೀರಿ ಮತದಾರರ ಸಂಖ್ಯೆ ಹೆಚ್ಚಳವಾಗಿದೆ. ಶೇಕಡಾ 4ರಷ್ಟು ಮತದಾರರ ಸಂಖ್ಯೆ ಹೆಚ್ಚಾಗಿದೆ. ಹಾಗಾದರೆ, ಚುನಾವಣಾ ಆಯೋಗ ನಿಯಮ ಮೀರಿ ಕೆಲಸ ಮಾಡುತ್ತಿದೆಯೇ' ಎಂದೂ ಅವರು ಪ್ರಶ್ನಿಸಿದರು.

ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಮಾತನಾಡಿ, 'ಚುನಾವಣಾ ಆಯೋಗದವರು ಈ ಅಕ್ರಮವನ್ನು ತನಿಖೆ ಮಾಡಲು ಏಕೆ ಹಿಂದೇಟು ಹಾಕುತ್ತಿದ್ದಾರೆ. ಅಕ್ರಮಗಳನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಲಾಗುತ್ತಿದೆ. ಯಾವುದೇ ಪ್ರಕ್ರಿಯೆಗಳನ್ನು ಚುನಾವಣಾ ಆಯೋಗ ಪೂರ್ಣಗೊಳಿಸಿಲ್ಲ. ಆಯೋಗವು ಸಂವಿಧಾನಿಕವಾಗಿ ನಡೆದುಕೊಳ್ಳುತ್ತಿಲ್ಲ' ಎಂದರು.

'ಮತದಾರನನ್ನು ಹೇಗೆ ಪಟ್ಟಿಗೆ ಸೇರಿಸಬೇಕು, ಪಟ್ಟಿಯಿಂದ ಕೈ ಬಿಡಬೇಕು ಎನ್ನುವ ನಿಯಮಗಳನ್ನೇ ಪಾಲನೆ ಮಾಡಿಲ್ಲ. ದಾರಿ ತಪ್ಪಿಸಲು ಆಯೋಗವು ಕೆಲಸ ಮಾಡುತ್ತಿದೆ. ಇದರಿಂದ ಆಯೋಗದ ಮೇಲೆ ಸಂಶಯ ಉಂಟಾಗುತ್ತಿದೆ' ಎಂದೂ ಹೇಳಿದರು.

'ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆ'

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು, ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಕುರಿತು ಸಮಗ್ರ ಅಧ್ಯಯನ ನಡೆಸಲು ತಜ್ಞರ ಸಮಿತಿ ರಚಿಸಲಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ವಿಧಾನಪರಿಷತ್‌ನಲ್ಲಿ ಗಮನ ಸೆಳೆಯುವ ಸೂಚನೆಯಡಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಹಾಗೂ ಬಿಜೆಪಿಯ ಡಿ.ಎಸ್. ಅರುಣ್ ಅವರ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಶೀಘ್ರ ಚುನಾವಣೆ ನಡೆಸುವ ವಿಷಯದ ಬಗ್ಗೆ ಅವರು ಉತ್ತರ ನೀಡಿದರು.

'ಸ್ಥಳೀಯ ಸಂಸ್ಥೆಗಳಿಗೆ ಬೇಗ ಚುನಾವಣೆ ನಡೆಯಬೇಕು ಎಂಬುದನ್ನು ನಾನೂ ಒಪ್ಪುತ್ತೇನೆ. ಕಾನೂನಾತ್ಮಕವಾಗಿ ಪರಿಹಾರ ಕಂಡುಕೊಂಡು, ಕಗ್ಗಂಟು ಸರಿಪಡಿಸಿಕೊಂಡು ಮೀಸಲಾತಿಯನ್ನು ಪ್ರಕಟಿಸುವ ಪ್ರಕ್ರಿಯೆ ನಡೆಯುತ್ತಿದೆ. ಶೀಘ್ರ ಚುನಾವಣೆ ನಡೆಸಲಾಗುತ್ತದೆ' ಎಂದರು.

'ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಚುನಾವಣೆ ನಡೆಸುವುದರಿಂದ ಐದು ವರ್ಷದಲ್ಲಿ ಒಂದೂವರೆ ವರ್ಷ ಚುನಾವಣೆ ಪ್ರಕ್ರಿಯೆಯಲ್ಲೇ ಮುಗಿದುಹೋಗುತ್ತದೆ. ಕೆಲಸಗಳು ಆಗುವುದಿಲ್ಲ. ಒಂದೇ ಬಾರಿಗೆ ಮೂರು ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕು' ಎಂದು ಮಂಜುನಾಥ ಭಂಡಾರಿ ಒತ್ತಾಯಿಸಿದರು.

'ಒಂದೇ ಬಾರಿ ಚುನಾವಣೆ ನಡೆಯುವುದಕ್ಕೆ ಕಾಯ್ದೆಗೆ ತಿದ್ದುಪಡಿ ತರಬೇಕೇ? ಸಂವಿಧಾನಕ್ಕೆ ತಿದ್ದುಪಡಿಯಾಗಬೇಕೇ? ಚಿಹ್ನೆಯಡಿ ಸ್ಪರ್ಧೆ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಅಧ್ಯಯನದ ಅಗತ್ಯವಿದೆ. ಕೇರಳದಲ್ಲಿ ಏಕ ಕಾಲದಲ್ಲಿ, ಐದು ವರ್ಷಕ್ಕೆ ಸರಿಯಾಗಿ ಚುನಾವಣೆ ನಡೆಯುತ್ತಿದೆ ಎಂದು ಹೇಳಿದ್ದೀರಿ. ಎಲ್ಲವನ್ನೂ ಪರಿಶೀಲಿಸಿ, ವರದಿ ಸಲ್ಲಿಸಲು ಸಮಿತಿ ರಚಿಸಲಾಗುತ್ತದೆ' ಎಂದು ಪ್ರಿಯಾಂಕ್ ಹೇಳಿದರು.

'ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ಮಾಡಿದರಷ್ಟೇ ಸಾಲದು, ಆಡಳಿತಾತ್ಮಕ ಅಧಿಕಾರ ಕೊಡಬೇಕು. ತಾಲ್ಲೂಕು ಪಂಚಾಯಿತಿಗಳನ್ನೇ ಕೈಬಿಡಬೇಕೆಂದು ಕೆಲವರು ಸಲಹೆ ನೀಡುತ್ತಿದ್ದಾರೆ. ಪಂಚಾಯಿತಿಗಳ ಸಬಲೀಕರಣವಾಗಬೇಕು. ಎಲ್ಲದ್ದಕ್ಕೂ ಸರ್ಕಾರವನ್ನೇ ಕೇಳಬೇಕು ಎಂಬ ಪರಿಸ್ಥಿತಿ ಇದೆ. ಬರೀ ಚುನಾವಣೆ ಮಾಡಿ, ಕೈಕಟ್ಟಬೇಡಿ' ಎಂದು ಕಾಂಗ್ರೆಸ್‌ನ ಬಲ್ಕೀಸ್ ಬಾನು ಹೇಳಿದರು.

ಪ್ರಮಾಣಪತ್ರ: ಕೂಲಿ ಇಲ್ಲದೆ ಪರದಾಟ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ: ಅಲ್ಪಸಂಖ್ಯಾತ ಸಮುದಾಯದಲ್ಲಿ ಮುಂದುವರಿದ ಗೊಂದಲ – ಹತಾಶೆ

• ಸತೀಶ್ ಝಾ

ಮುಖ್ಯಾಂಶಗಳು

- ಪಟ್ಟಿಯಿಂದ ಕೈಬಿಟ್ಟ ಹಲವರು ಅಲ್ಪಸಂಖ್ಯಾತ ಸಮುದಾಯದವರು
- ವಾಸಸ್ಥಳ ದೃಢೀಕರಣ ಪತ್ರ ನೀಡಲು ಹಿಂದೇಟು

‘ಆಯೋಗ ಇನ್ನೂ 6 ತಿಂಗಳು ಸಮಯ ನೀಡಿದರೆ ಈ ಗೊಂದಲಗಳನ್ನು ನಿವಾರಿಸಬಹುದು. ಸದ್ಯ ಮತದಾರರು, ಬಿಎಲ್‌ಒಗಳು, ಕಾರ್ಮಿಕರಿಗೂ ದುಡಿಮೆ ಇಲ್ಲದಂತಾಗಿದೆ

ಫರ್ವೇಜ್ ಆಲಂ ಗುಡ್ಡು, ಕಿಶನ್‌ಗಂಜ್‌ನ ಜೆಡಿಯುನ ಯುವ ಘಟಕದ ಮಾಜಿ ಅಧ್ಯಕ್ಷ

ಅಹಮದಾಬಾದ್: ವರ್ಷದ ಹಿಂದಷ್ಟೇ ಸಾರ್ವತ್ರಿಕ ಚುನಾವಣೆಯಲ್ಲಿ ಮತ ಚಲಾಯಿಸಿದ್ದೇವೆ. ಆದರೆ, ಇತ್ತೀಚೆಗೆ ಚುನಾವಣಾ ಆಯೋಗ ಬಿಡುಗಡೆ ಮಾಡಿರುವ ಕರಡು ಮತದಾರರ ಪಟ್ಟಿಯಲ್ಲಿ ನನ್ನ ಮತ್ತು ಪತ್ನಿಯ ಹೆಸರಿಲ್ಲ. ಮತಗಟ್ಟೆ ಅಧಿಕಾರಿಯನ್ನು ವಿಚಾರಿಸಿದರೆ, ವಾಸಸ್ಥಳದ ದೃಢೀಕರಣ ಪತ್ರ, ಪೂರಕ ಪ್ರಮಾಣಪತ್ರಗಳನ್ನು ತಂದುಕೊಡಿ ಎನ್ನುತ್ತಿದ್ದಾರೆ. ಕೂಲಿ ಕಾರ್ಮಿಕರಾದ ನಾವು ನಿತ್ಯದ ₹300 ದುಡಿಮೆಯನ್ನು ಬಿಟ್ಟು ಒಂದು ವಾರದಿಂದ ‘ಬಿಎಲ್‌ಒ’ ಕಚೇರಿಗೆ ಅಲೆಯುತ್ತಿದ್ದೇವೆ. ಹೀಗಾದರೆ ನಮ್ಮ ಹೊಟ್ಟೆಪಾಡಿಗೆ ಏನು ಮಾಡುವುದು?

ಇದು ಬಿಹಾರದ ಕಿಶನ್‌ಗಂಜ್ ಬ್ಲಾಕ್ ಚೌಕ್‌ನ ನಿವಾಸಿ, ಕೂಲಿ ಕಾರ್ಮಿಕ ಮಹಮ್ಮದ್ ಹಾಸೀಮ್ ಅವರ ಪ್ರಶ್ನೆ.

‘ಪಟ್ಟಿಯಲ್ಲಿ ಹೆಸರು ಸೇರಿಸಬೇಕಿದ್ದರೆ 2003ರ ಮತದಾರರ ಪಟ್ಟಿ ತಂದುಕೊಡಿ ಎನ್ನುತ್ತಿದ್ದಾರೆ ಅಧಿಕಾರಿಗಳು. ನಾನು ನಿತ್ಯದ ಕೂಲಿಯನ್ನು ಬಿಟ್ಟು ಇದರ ಹಿಂದೆ ಹೋದರೆ ನನ್ನ ಕುಟುಂಬವನ್ನು ನೋಡಿಕೊಳ್ಳುವರು ಯಾರು’ ಎನ್ನುವುದು ಅವರ ನೋವಿನ ನುಡಿ.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಮುಖ್ಯವಾಗಿ ಅಲ್ಪಸಂಖ್ಯಾತ ಸಮುದಾಯದಲ್ಲಿ ಹೆಚ್ಚಿನ ಗೊಂದಲ– ಹತಾಶೆ ಮೂಡಿಸಿದೆ. ಕರಡು ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾದವರಲ್ಲಿ ಹೆಚ್ಚಿನವರು ಅಲ್ಪಸಂಖ್ಯಾತ ಸಮುದಾಯದವರೇ ಆಗಿದ್ದಾರೆ. ಇವರಲ್ಲಿ ಕೃಷಿ ಕಾರ್ಮಿಕರು, ದಿನಗೂಲಿ ನೌಕರರು, ಬೀದಿ ಬದಿ ವ್ಯಾಪಾರಿಗಳು ಹೀಗೆ ನಿತ್ಯದ ಕೂಲಿಯನ್ನೇ ನೆಚ್ಚಿಕೊಂಡವರು ಗರಿಷ್ಠ ಸಂಖ್ಯೆಯಲ್ಲಿದ್ದಾರೆ. ‘ಎಸ್‌ಐಆರ್’ ಇವರೆಲ್ಲರ ನಿತ್ಯದ ದುಡಿಮೆಗೆ ಕುತ್ತು ತಂದಿರುವುದು ಮಾತ್ರವಲ್ಲ, ವಾಸ ಸ್ಥಳದ ದೃಢೀಕರಣ ಪತ್ರಕ್ಕಾಗಿ ಅಲೆಯುವಂತೆಯೂ ಮಾಡಿದೆ.

ಕಿಶನ್‌ಗಂಜ್ ಜಿಲ್ಲೆಯು ಪಶ್ಚಿಮ ಬಂಗಾಳ ಮತ್ತು ನೇಪಾಳದೊಂದಿಗೆ ಗಡಿ ಹಂಚಿಕೊಂಡಿದೆ. ಬಾಂಗ್ಲಾದೇಶ ಇಲ್ಲಿಂದ 21 ಕಿ.ಮೀ ದೂರದಲ್ಲಿದೆ. ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸುವಂತೆ ಚುನಾವಣಾ ಆಯೋಗ ಸೂಚಿಸಿದ ಬೆನ್ನಲ್ಲೇ ಇಲ್ಲಿನ ಅಲ್ಪಸಂಖ್ಯಾತ ಸಮುದಾಯದಲ್ಲಿ ಆತಂಕ ಮೂಡಿದೆ. ಪಾಟ್ನಾ, ಬೇಗುಸರಾಯ್, ಪೂರ್ಣಿಯಾ, ಖಗಾರಿಯಾ, ಕಿಶನ್‌ಗಂಜ್ ಜಿಲ್ಲೆಗಳಲ್ಲಿ ‘ಪ್ರಜಾವಾಣಿ’ ಪ್ರತಿನಿಧಿ ಪರಿಶೀಲಿಸಿದಾಗ ಅಲ್ಪಸಂಖ್ಯಾತ ಸಮುದಾಯದಲ್ಲಿ ಗೊಂದಲ–ಹತಾಶೆ ಹೆಚ್ಚಿರುವುದು ಕಂಡುಬಂತು.

ಮುಸ್ಲಿಮರ ಸಂಖ್ಯೆ ಹೆಚ್ಚಿರುವ ಜಿಲ್ಲೆಗಳಲ್ಲಿ ಮತದಾರರ ಪಟ್ಟಿಯಿಂದ ಹೆಚ್ಚಿನ ಸಂಖ್ಯೆಯ ಜನರ ಹೆಸರುಗಳು ಕಣ್ಮರೆಯಾಗಿವೆ. ಕೆಲವೆಡೆ ವಾಸಸ್ಥಳದ ದೃಢೀಕರಣ ಪತ್ರ ನೀಡಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ ಎನ್ನುವುದು ಮತದಾರರ ದೂರು.

‘ನಾವು ಅನಕ್ಷರಸ್ಥರು. ಆಧಾರ್ ಕಾರ್ಡ್ ಮತ್ತಿತರ ದಾಖಲೆಗಳನ್ನು ತೆಗೆದುಕೊಂಡು ಬರಲು ಹೇಳಿದರು. ಈಗ ವಾಸಸ್ಥಳದ ದೃಢೀಕರಣ ಪತ್ರ ಬೇಕೆಂದು ಹೇಳುತ್ತಿದ್ದಾರೆ. ತಂದಿರುವ ದಾಖಲೆಗಳನ್ನು ‘ಬಿಡಿಒ’ಗೆ ಸಲ್ಲಿಸಿ ಎಂದು ಶಾಲೆಯ ಶಿಕ್ಷಕರು (ಬಿಎಲ್‌ಒ) ಹೇಳಿದ್ದಾರೆ. ಆದರೆ, ಅವರು ನಮ್ಮ ಅರ್ಜಿ ಸ್ವೀಕರಿಸುತ್ತಿಲ್ಲ. ನಮಗೆ ಏನು ಮಾಡಬೇಕೆಂದು ತಿಳಿದಿಲ್ಲ. ಯಾರೂ ನಮಗೆ ಸರಿಯಾಗಿ ಮಾಹಿತಿಯನ್ನು ನೀಡುತ್ತಿಲ್ಲ’ ಎಂದು ಕಿಶನ್‌ಗಂಜ್‌ನ ಅಸೀಂ ಅಲಿ ಪ್ರಶ್ನಿಸಿದರು.

‘ಮತದಾರರಲ್ಲಿರುವ ಗೊಂದಲ ನಿವಾರಿಸುವಂತೆ ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟರಿಗೆ ಮನವಿ ಮಾಡಲಾಗಿದೆ ಎಂದು ಕಿಶನ್‌ಗಂಜ್‌ನ ಮತಗಟ್ಟೆ ಅಧಿಕಾರಿಯೊಬ್ಬರು ಹೇಳಿದರು. ಮತದಾರರ ಪಟ್ಟಿಯಲ್ಲಿ ಹೆಚ್ಚಿನ ಸಂಖ್ಯೆಯ ಜನರ ಹೆಸರು ಕೈಬಿಡಲಾಗಿ ರುವ ಬಗ್ಗೆ ಮಾಧ್ಯಮಕ್ಕೆ ಪ್ರತಿಕ್ರಿಯಿಸಲು ಅವರು ನಿರಾಕರಿಸಿದರು. ‘ಸಮಸ್ಯೆ ಶೀಘ್ರದಲ್ಲೇ ಬಗೆಹರಿಯಲಿದೆ’ ಎಂದು ಬಿಡಿಒ ಸಾಹಿಬ್ ವಿಶ್ವಾಸ ವ್ಯಕ್ತಪಡಿಸಿದರು.

‘ವಲಸಿಗ ಮುದ್ರೆಯೊತ್ತುವ ಆತಂಕ’

ಬಿಹಾರದಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ಜಾರಿಗೊಳಿಸುವುದರ ಭಾಗವಾಗಿಯೇ ‘ಎಸ್‌ಐಆರ್’ ನಡೆಯುತ್ತಿದೆ ಎಂಬ ಭಾವನೆ ಅಲ್ಪಸಂಖ್ಯಾತರಲ್ಲಿ ಬಲವಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದವರನ್ನು ಅಧಿಕಾರಿಗಳು ಅಕ್ರಮ ಬಾಂಗ್ಲಾ ವಲಸಿಗರು ಎಂದು ಮುದ್ರೆಯೊತ್ತುವ ಆತಂಕವೂ ಅವರಲ್ಲಿದೆ ಎಂದು ಪೂರ್ಣಿಯಾ ಜಿಲ್ಲೆಯ ಸಂಯುಕ್ತ ಜನತಾ ದಳದ ಮುಖಂಡರೊಬ್ಬರು ಹೇಳಿದರು.

‘ಭಾರತ ಪೌರತ್ವಕ್ಕೂ ಮುನ್ನವೇ ಮತದಾರರ ಪಟ್ಟಿಯಲ್ಲಿ ಸೋನಿಯಾ’

ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): ಮತ ಕಳವು ಆರೋಪ ಮಾಡುತ್ತಿರುವ ಕಾಂಗ್ರೆಸ್ ವಿರುದ್ಧ ಬುಧವಾರ ಮುಗಿಬಿದ್ದಿರುವ ಬಿಜೆಪಿ, ‘ಎಐಸಿಸಿ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಭಾರತದ ಪ್ರಜೆಯಾಗುವುದಕ್ಕೂ ಮುನ್ನವೇ ಮತದಾರರಾಗಿ ನೋಂದಾಯಿಸಿಕೊಂಡಿದ್ದರು’ ಎಂದು ಆರೋಪ ಮಾಡಿದೆ.

‘ದೇಶದ ಪೌರತ್ವ ಪಡೆಯುವುದಕ್ಕೂ ಮುನ್ನ, ಅಂದರೆ ಇಟಲಿ ಪೌರತ್ವ ಹೊಂದಿದ್ದಾಗಲೇ ಭಾರತದ ಮತದಾರರ ಪಟ್ಟಿಯಲ್ಲಿ ಸೇರುವುದು ಎಂದರೆ ಅದು ಚುನಾವಣಾ ಕಾನೂನಿನ ಸ್ಪಷ್ಟ ಉಲ್ಲಂಘನೆ’ ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಸೋನಿಯಾ ಗಾಂಧಿ ಅವರು ಭಾರತದ ಪೌರತ್ವ ಪಡೆಯುವುದಕ್ಕೂ ಮುನ್ನವೇ, ಅಂದರೆ 1980ರ ಜನವರಿ 1ರಂದು ಅವರ ಹೆಸರು ಮತದಾರರ ಪಟ್ಟಿಯಲ್ಲಿ ಸೇರಿತ್ತು. ಇದಕ್ಕೆ ತೀವ್ರ ಆಕ್ರೋಶ ವ್ಯಕ್ತವಾದಾಗ 1982ರಲ್ಲಿ ಹೆಸರನ್ನು ತೆಗೆಯಲಾಗಿತ್ತು. ನಂತರ ಅವರ ಹೆಸರು 1983ರಲ್ಲಿ ಮತ್ತೆ ನೋಂದಣಿಯಾಯಿತು. ಅದೂ ಕೂಡ ಹಲವು ಗಂಭೀರ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಏಕೆಂದರೆ ನೋಂದಣಿಗೆ ಅರ್ಹತಾ ದಿನಾಂಕ 1983ರ ಜನವರಿ 1 ಆಗಿತ್ತು. ಆದರೆ ಸೋನಿಯಾ ಗಾಂಧಿ ಅವರಿಗೆ ಭಾರತದ ಪೌರತ್ವ ದೊರೆತದ್ದು 1983ರ ಏಪ್ರಿಲ್ 30ರಂದು. ಅಲ್ಲಿಯವರೆಗೂ ಅವರು ಇಟಲಿಯ ಪೌರತ್ವವನ್ನೇ ಹೊಂದಿದ್ದರು’ ಎಂದು ಅವರು ವಿವರಿಸಿದ್ದಾರೆ.

‘ಮೂಲಭೂತವಾಗಿ ಪೌರತ್ವದ ಅವಶ್ಯಕತೆಗಳನ್ನೇ ಪೂರೈಸದೇ ಸೋನಿಯಾ ಅವರ ಹೆಸರು ಎರಡು ಬಾರಿ ಮತದಾರರ ಪಟ್ಟಿ ಪ್ರವೇಶಿಸಿದ್ದು ಹೇಗೆ? ಇದು ಚುನಾವಣಾ ಅಕ್ರಮವಲ್ಲವೇ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಸೋನಿಯಾ ಅವರು ರಾಜೀವ್ ಗಾಂಧಿ ಅವರನ್ನು ವಿವಾಹವಾದ 15 ವರ್ಷಗಳ ಬಳಿಕ ಭಾರತದ ಪೌರತ್ವವನ್ನು ಏಕೆ ಪಡೆದರು ಎಂಬುದನ್ನು ನಾವು ಕೇಳುವುದಿಲ್ಲ’ ಎಂದೂ ಅವರು ಹೇಳಿದ್ದಾರೆ.

ಆಯೋಗದ ವಿರುದ್ಧ ವಾಗ್ದಾಳಿ

ಪಟ್ನಾ (ಪಿಟಿಐ): ‘ಸಿಬಿಐ, ಇ.ಡಿ ಮತ್ತು ಆದಾಯ ತೆರಿಗೆ ಇಲಾಖೆಗಳು ಪರಿಣಾಮಕಾರಿ ಆಗದ ಕಾರಣ ಕೇಂದ್ರದಲ್ಲಿ ಆಡಳಿತಾರೂಢ ಬಿಜೆಪಿಯು ಬಿಹಾರದಲ್ಲಿ ಚುನಾವಣಾ ಆಯೋಗವನ್ನು ಬಳಸಿಕೊಳ್ಳುತ್ತಿದೆ. ಈ ಮೂಲಕ ಅದು ಬಿಹಾರದ ವಿಧಾನಸಭಾ ಚುನಾವಣೆಯನ್ನು ‘ಫಿಕ್ಸ್’ ಮಾಡಲು ಪ್ರಯತ್ನಿಸುತ್ತಿದೆ’ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ವಾಗ್ದಾಳಿ ನಡೆಸಿದರು.

ಬಿಜೆಪಿಯ ಅನೇಕ ಬೆಂಬಲಿಗರಿಗೆ ಚುನಾವಣಾ ಆಯೋಗವು ಒಂದಕ್ಕಿಂತ ಹೆಚ್ಚು ಮತದಾರರ ಗುರುತಿನ ಚೀಟಿಗಳನ್ನು ಒದಗಿಸುತ್ತಿದೆ ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಬಿಜೆಪಿ ನಾಯಕರೂ ಆದ ಮುಜಾಫರ್‌ಪುರದ ಮೇಯರ್ ನಿರ್ಮಲಾ ದೇವಿ ಅವರು ಎರಡು ಮತದಾರರ ಗುರುತಿನ ಚೀಟಿಗಳನ್ನು ಹೊಂದಿದ್ದಾರೆ ಎಂದು ಅವರು ಇದೇ ವೇಳೆ ಆರೋಪಿಸಿದರು. ‘ಚುನಾವಣಾ ಆಯೋಗವು ವಿಶ್ವಾಸದ್ರೋಹ ಎಸಗುತ್ತಿದೆ’ ಎಂದು ಆರೋಪಿಸಿದ ಅವರು, ‘ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವ ಆಯ್ಕೆ ಮುಕ್ತವಾಗಿದೆ’ ಎಂದು ಹೇಳಿದರು.

ವಿಡಿಯೊ ಮೂಲಕ ಕಾಂಗ್ರೆಸ್ ಜಾಗೃತಿ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಮತಕಳವು ಕುರಿತು ಜಾಗೃತಿ ಮೂಡಿಸುವ ವಿಡಿಯೊವನ್ನು ಕಾಂಗ್ರೆಸ್ ಬುಧವಾರ ಬಿಡುಗಡೆ ಮಾಡಿದ್ದು, ‘ಮತ ಕಳವಿನ ವಿರುದ್ಧ ಜನರು ಧ್ವನಿಯೆತ್ತಬೇಕು ಮತ್ತು ಆ ಮೂಲಕ ಸಾಂವಿಧಾನಿಕ ಸಂಸ್ಥೆಗಳನ್ನು ಬಿಜೆಪಿಯ ಹಿಡಿತದಿಂದ ರಕ್ಷಿಸಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜನರಲ್ಲಿ ಮನವಿ ಮಾಡಿದ್ದಾರೆ.

‘ಬೂತ್ ಪರ್ ವೋಟ್ ಚೋರಿ’ ಎಂಬ ಶೀರ್ಷಿಕೆಯ ವಿಡಿಯೊವನ್ನು ಖರ್ಗೆ ಅವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದು, ‘ಈ ಬಾರಿ ಪ್ರಶ್ನೆಗಳನ್ನು ಕೇಳಿ, ಉತ್ತರಕ್ಕಾಗಿ ಒತ್ತಾಯಿಸಿ, ಮತಕಳವಿನ ವಿರುದ್ಧ ಧ್ವನಿ ಎತ್ತಿ’ ಎಂದು ಹೇಳಿದ್ದಾರೆ.

ಮತದಾರರ ಪಟ್ಟಿಗಳಲ್ಲಿನ ಅಕ್ರಮಗಳ ಬಗ್ಗೆ ಚುನಾವಣಾ ಆಯೋಗ ಸ್ವತಂತ್ರವಾಗಿ ಪ್ರತಿಕ್ರಿಯಿಸಬೇಕು. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡಬಾರದು

ಸಚಿನ್ ಪೈಲಟ್, ಕಾಂಗ್ರೆಸ್ ನಾಯಕ

ಒಂದು ನಿಮಿಷದ ಈ ವಿಡಿಯೊವನ್ನು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೂ ಹಂಚಿಕೊಂಡಿದ್ದು, ‘ನಿಮ್ಮ ಮತದ ಕಳವು, ನಿಮ್ಮ ಅಧಿಕಾರದ ಕಳವು, ನಿಮ್ಮ ಗುರುತಿನ ಕಳವು’ ಎಂದು ಪೋಸ್ಟ್ ಮಾಡಿದ್ದಾರೆ.

ಈ ಜಾಗೃತಿ ವಿಡಿಯೊವನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸಹ ಹಂಚಿಕೊಂಡಿದ್ದು, ‘ಮತದಾನ ನಿಮ್ಮ ಹಕ್ಕು. ಅದನ್ನು ಉಳಿಸಿಕೊಳ್ಳಿ, ಮತ ಕಳ್ಳತನದ ವಿರುದ್ಧ ಮಾತನಾಡಿ’ ಎಂದು ಹೇಳಿದ್ದಾರೆ.

ಮತ ಕಳವು

ವಿಡಿಯೊದಲ್ಲಿ ಏನಿದೆ?: ಕಾಂಗ್ರೆಸ್ ರೂಪಿಸಿರುವ ಈ ಜಾಗೃತಿ ವಿಡಿಯೊದಲ್ಲಿ, ಮತಗಟ್ಟೆಗೆ ಸರದಿಯಲ್ಲಿ ಒಂದು ಕುಟುಂಬದ ಇಬ್ಬರು ಸದಸ್ಯರು ಬರುತ್ತಾರೆ. ಕೇಸರಿ ಬಣ್ಣದ ಟವಲ್ ಧರಿಸಿರುವ ಇಬ್ಬರು ಯುವಕರು, ‘ಈಗಾಗಲೇ ನಿಮ್ಮ ಮತಗಳು ಚಲಾವಣೆಯಾಗಿವೆ’ ಎಂದು ಹೇಳುತ್ತಾರೆ. ಇದರಿಂದ ಬೇಸತ್ತ ಇಬ್ಬರು ಮತದಾರರು ಸರದಿಯಿಂದ ಕದಲುತ್ತಾರೆ. ಆಗ ಈ ಇಬ್ಬರು ಯುವಕರು ಮತಗಟ್ಟೆಯ ಅಧಿಕಾರಿಯತ್ತ ತಿರುಗಿ ಹೆಬ್ಬೆರಳನ್ನು ತೋರಿಸಿ ತಲೆಯಾಡಿಸುತ್ತಾರೆ. ಅದಕ್ಕೆ ಅಧಿಕಾರಿಯೂ ಸ್ಪಂದಿಸುತ್ತಾರೆ. ಈ ಅಧಿಕಾರಿ ಕುಳಿತಿದ್ದ ಮೇಜಿನ ಮೇಲೆ ‘ಚುನಾವಣಾ ಚೋರಿ ಆಯೋಗ’ ಎಂಬ ಫಲಕವನ್ನು ಪ್ರದರ್ಶಿಸಲಾಗಿದೆ.

ಮೂರು ಕಾರ್ಯಕ್ರಮ: ಮತ ಕಳವು ಕುರಿತು ದೇಶದಾದ್ಯಂತ ಜನರಲ್ಲಿ ಜಾಗೃತಿ ಮೂಡಿಲು ಮೂರು ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ಅಧ್ಯಕ್ಷ ಕನ್ಹಯ್ಯ ಕುಮಾರ್ ತಿಳಿಸಿದರು.

ಇದೇ 14ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ‘ಲೋಕತಂತ್ರ ಉಳಿಸಿ’ ಮೆರವಣಿಗೆ ನಡೆಯಲಿದೆ. ಇದೇ 22ರಿಂದ ಸೆಪ್ಟೆಂಬರ್ 7ರವರೆಗೆ ‘ಮತ ಕಳವು, ಅಧಿಕಾರ ಕಳವು’ ರ‍್ಯಾಲಿ ನಡೆಯಲಿದೆ. ಅಲ್ಲದೆ ಸೆಪ್ಟೆಂಬರ್ 15ರಿಂದ ಅಕ್ಟೋಬರ್ 15ರವರೆಗೆ ಸಹಿ ಸಂಗ್ರಹ ಅಭಿಯಾನ ನಡೆಯಲಿದೆ ಎಂದು ಅವರು ವಿವರಿಸಿದರು.

‘ಕಳ್ಳರೇ ಬೊಬ್ಬೆ ಹಾಕುತ್ತಿದ್ದಾರೆ’

ಉತ್ತರ ಪ್ರದೇಶದ ರಾಯಬರೇಲಿ, ಕೇರಳದ ವಯನಾಡ್, ಡೈಮಂಡ್ ಹಾರ್ಬರ್, ಕನೌಜ್ ಲೋಕಸಭಾ ಕ್ಷೇತ್ರಗಳಲ್ಲಿ ಮತದಾರರ ನೋಂದಣಿಯಲ್ಲಿ ಅಕ್ರಮ ನಡೆದಿದ್ದು, 'ಈಗ ಕಳ್ಳರೇ ತಿರುಗಿ ಬೊಬ್ಬೆ ಹೊಡೆಯುತ್ತಿದ್ದಾರೆ’ ಎಂದು ಬಿಜೆಪಿ ಆರೋಪಿಸಿದೆ. ‘ಮತ ಕಳ್ಳತನ‘ದ ಮೂಲಕ ಜಯಗಳಿಸಿರುವ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಅಭಿಷೇಕ್ ಬ್ಯಾನರ್ಜಿ ಹಾಗೂ ಅಖಿಲೇಶ್ ಯಾದವ್ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ಒತ್ತಾಯಿಸಿದೆ.

50 ವರ್ಷದ ತಂದೆಗೆ 50 ಮಕ್ಕಳು

ಪ್ರಜಾವಾಣಿ ವಾರ್ತೆ

ಲಖನೌ: ರಾಮ್‌ಜಾನಕಿ ದೇವಸ್ಥಾನದ ಸ್ಥಾಪಕ, ಸನ್ಯಾಸಿ ಜೀವನ ನಡೆಸುತ್ತಿರುವ ಸ್ವಾಮಿ ರಾಮ್‌ಕಮಲ್ ದಾಸ್ ಅವರಿಗೆ 50 ಗಂಡು ಮಕ್ಕಳಿದ್ದಾರೆ. ಇವರಿಗೆ 50 ವರ್ಷ ವಯಸ್ಸು. ಮೊದಲ ಮಗ ಬನ್ವಾರಿ ದಾಸ್ ಅವರ ವಯಸ್ಸು 72. ಕೊನೆಯ ಮಗ ರಾಘವೇಂದ್ರ ಅವರಿಗೆ 28!

– ಈ ವಿವರಗಳಿರುವ ವಾರಾಣಸಿ ಲೋಕಸಭಾ ಕ್ಷೇತ್ರದ ಮತದಾರರ ಪಟ್ಟಿಯು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹರಿದಾಡುತ್ತಿದೆ. ಈ ಮತದಾರರ ಪಟ್ಟಿಯನ್ನು ಕಾಂಗ್ರೆಸ್ ಹಂಚಿಕೊಂಡಿದೆ.

‘ನೋಡಿ, ಚುನಾವಣಾ ಆಯೋಗದ ಮತ್ತೊಂದು ಚಮತ್ಕಾರ. ಇದೊಂದು ತಪ್ಪು ಉಳಿದಿದೆ ಎಂದು ಆಯೋಗವು ಈ ಪ್ರಕರಣವನ್ನೂ ಮುಚ್ಚಿಹಾಕಿ-ಬಿಡುತ್ತದೆಯೋ ಅಥವಾ ವಂಚನೆ ಮಾಡಲಾಗಿದೆ ಎಂದು ಒಪ್ಪಿಕೊಳ್ಳುತ್ತ-ದೆಯೋ’ ಎಂದು ಕಾಂಗ್ರೆಸ್ ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿದೆ.

ಚುನಾವಣಾ ಆಯೋಗವು ಬಿಹಾರದಲ್ಲಿ ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ‘ಮತ ಕಳ್ಳತನ’ದ ಕುರಿತು ನಡೆಸಿದ ಸುದ್ದಿಗೋಷ್ಠಿ ಬಳಿಕ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಯೋಗದ ಕಾರ್ಯವಿಧಾನದ ಕುರಿತು ದೊಡ್ಡ ಪ್ರಮಾಣದ ವಿವಾದ ಮತ್ತು ಚರ್ಚೆ ಏರ್ಪಟ್ಟಿದೆ.

ಡ್ರಗ್ಸ್ ನಂಟು: ಐದು ಮನೆಗಳು ನೆಲಸಮ

ಹೋಶಿಯಾರ್‌ಪುರ (ಪಿಟಿಐ): ಮಾದಕ ವಸ್ತು ಕಳ್ಳಸಾಗಣೆ ಜಾಲದೊಂದಿಗೆ ನಂಟು ಹೊಂದಿರುವ ಆರೋಪದಲ್ಲಿ ಇಲ್ಲಿನ ದಿನೋವಾಲ್ ಖುರ್ದ್ ಗ್ರಾಮದಲ್ಲಿ 9 ಕುಟುಂಬಗಳಿಗೆ ಸೇರಿದ 5 ಮನೆಗಳನ್ನು ನೆಲಸಮಗೊಳಿಸಲಾಗಿದೆ.

ಹೋಶಿಯಾರ್‌ಪುರ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಸಂದೀಪ್ ಕುಮಾರ್ ಮಲ್ಲಿಕ್ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

ಪಂಜಾಬ್ ಸರ್ಕಾರವು ಮಾದಕ ವಸ್ತು ನಿಯಂತ್ರಣ ಅಭಿಯಾನ ಆರಂಭಿಸಿದೆ. ಕಾರ್ಯಾಚರಣೆ ವೇಳೆ ದಿನೋವಾಲ್ ಖುರ್ದ್ ಗ್ರಾಮವನ್ನು ಮಾದಕ ವಸ್ತುಗಳ ಕಳ್ಳಸಾಗಣೆ ನಡೆಯುತ್ತಿರುವ ಕೇಂದ್ರ ಬಿಂದು ಎಂದು ಗುರುತಿಸಲಾಗಿದೆ.

ಇದೇ ಗ್ರಾಮದಲ್ಲಿ ಕ್ರಿಮಿನಲ್ ಹಿನ್ನೆಲೆ ಹೊಂದಿರುವ 13 ಕುಟುಂಬಗಳಿದ್ದು, ಕುಟುಂಬದ ಸದಸ್ಯರ ವಿರುದ್ಧ ಸರಿ ಸುಮಾರು 100ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ಬಹುತೇಕ ಪ್ರಕರಣಗಳು ಮಾದಕ ವಸ್ತು ಕಳ್ಳಸಾಗಣೆಗೆ ಸಂಬಂಧಿಸಿದ್ದಾಗಿವೆ ಎಂದು ಸಂದೀಪ್ ತಿಳಿಸಿದ್ದಾರೆ.

ಅಲ್ಲದೇ, ಈ ಕುಟುಂಬಗಳು ಪಂಚಾಯತಿಗೆ ಸೇರಿದ 13 ಮರಲಾ (3539.26 ಚದರ ಅಡಿ) ಜಮೀನನ್ನು ಅತಿಕ್ರಮಿಸಿ, ಮನೆಗಳನ್ನು ನಿರ್ಮಿಸಿಕೊಂಡಿರುವುದು ಬೆಳಕಿಗೆ ಬಂದಿತ್ತು. ಈ ಕಾರಣ ಆಡಳಿತಾಧಿಕಾರಿಗಳು ಮನೆಗಳನ್ನು ನೆಲಸಮಗೊಳಿಸಿದ್ದಾರೆ ಎಂದೂ ಸಂದೀಪ್ ಹೇಳಿದ್ದಾರೆ.

ಡಿಆರ್‌ಡಿಒ ಅತಿಥಿ ಗೃಹದ ವ್ಯವಸ್ಥಾಪಕನ ಬಂಧನ

ಜೈಪುರ (ಪಿಟಿಐ): ಜೈಸಲ್ಮೇರ್‌ನಲ್ಲಿ-ರುವ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ(ಡಿಆರ್‌ಡಿಒ) ಅತಿಥಿ ಗೃಹದ ವ್ಯವಸ್ಥಾಪಕನನ್ನು ಪಾಕಿಸ್ತಾನದ ಪರ ಗೂಢಚಾರಿಕೆ ನಡೆಸುತ್ತಿದ್ದ ಆರೋಪದಡಿ ಬಂಧಿಸಲಾಗಿದೆ.

ಉತ್ತರಾಖಂಡದ ಅಲ್ಮೋರಾ ನಿವಾಸಿ ಮಹೇಂದ್ರ ಪ್ರಸಾದ್ ಅವರನ್ನು ಗುಪ್ತಚರ ಮಾಹಿತಿಯ ಆಧಾರದಲ್ಲಿ ರಾಜಸ್ಥಾನದ ಪೊಲೀಸರು ಆಗಸ್ಟ್ 4ರಂದು ವಶಕ್ಕೆ ಪಡೆದಿದ್ದರು.

ಮಹೇಂದ್ರ ಅವರ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ಮಂಗಳವಾರ ರಾತ್ರಿ ಅವರನ್ನು ಬಂಧಿಸಿ, ಬುಧವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ಅವರನ್ನು ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

‘ಕ್ಷಿಪಣಿ ಪರೀಕ್ಷೆ ಮತ್ತು ವಿಜ್ಞಾನಿಗಳ ಚಲನವಲನಗಳ ಕುರಿತ ಮಾಹಿತಿಯನ್ನು ಆರೋಪಿಯು ಸಾಮಾಜಿಕ ಜಾಲತಾಣದ ಮೂಲಕ ಪಾಕಿಸ್ತಾನದ ಗೂಢಚಾರರಿಗೆ ನೀಡುತ್ತಿದ್ದರು’ ಎಂದು ತನಿಖಾಧಿಕಾರಿ ವಿನೋದ್ ಮೀನಾ ಅವರು ತಿಳಿಸಿದ್ದಾರೆ.

ಸಾವರ್ಕರ್ ಪ್ರಕರಣ: ಹೇಳಿಕೆ ಹಿಂದಕ್ಕೆ

ಪ್ರಜಾವಾಣಿ ವಾರ್ತೆ

ಮುಂಬೈ/ ನವದೆಹಲಿ: ‘ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸಮ್ಮತಿ ಪಡೆಯದೇ ನ್ಯಾಯಾಲಯದಲ್ಲಿ ದಾಖಲಿಸಿದ್ದ ಹೇಳಿಕೆಯನ್ನು ಹಿಂಪಡೆಯುವುದಾಗಿ’ ರಾಹುಲ್ ಪರ ವಕೀಲ ಮಿಲಿಂದ ಪವಾರ್ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ವಿ.ಡಿ.ಸಾವರ್ಕರ್ ವಿರುದ್ಧ ಹೇಳಿಕೆ ನೀಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾನನಷ್ಟ ಮೊಕದ್ದಮೆ ಎದುರಿಸುತ್ತಿದ್ದಾರೆ. ಸಾವರ್ಕರ್ ಅವರ ಮೊಮ್ಮಗ ಸಾತ್ಯಕಿ ಸಾವರ್ಕರ್ ಈ ಮೊಕದ್ದಮೆ ಹೂಡಿದ್ದಾರೆ.

‘ವಿ.ಡಿ. ಸಾವರ್ಕರ್ ಮತ್ತು ನಾಥೂರಾಂ ಗೋಡ್ಸೆ ಅನುಯಾಯಿಗಳಿಂದ ರಾಹುಲ್ ಅವರ ಜೀವಕ್ಕೆ ಅಪಾಯವಿದೆ ಎಂದು ಅವರ ಪರ ವಕೀಲರು ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದಾರೆ. ಅದಕ್ಕೆ ತಮ್ಮ ಸಮ್ಮತಿ ಇಲ್ಲದ ಕಾರಣ ರಾಹುಲ್ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಹೀಗಾಗಿ ವಕೀಲರು ಈ ಹೇಳಿಕೆಯನ್ನು ಹಿಂಪಡೆಯುವುದಾಗಿ’ ತಿಳಿಸಿದ್ದಾರೆ ಎಂದು ಕಾಂಗ್ರೆಸ್ ಮಾಧ್ಯಮ ವಕ್ತಾರ ಪವನ್ ಖೇರಾ ತಿಳಿಸಿದರು.

‘ಹೇಳಿಕೆಯನ್ನು ಹಿಂಪಡೆಯಲು ಗುರುವಾರ ಅರ್ಜಿ ಸಲ್ಲಿಸುತ್ತೇನೆ’ ಎಂದು ವಕೀಲ ಮಿಲಿಂದ ಹೇಳಿದರು.

ಸ್ವಾತಿ ಮಾಲೀವಾಲ್ ಖುಲಾಸೆ

ನವದೆಹಲಿ (ಪಿಟಿಐ): ಅತ್ಯಾಚಾರಕ್ಕೆ ಒಳಗಾಗಿ ಮೃತಪಟ್ಟ ಬಾಲಕಿಯೊಬ್ಬಳ ಗುರುತು ಬಹಿರಂಗ ಪಡಿಸಿದ ಆರೋಪದ ಮೇಲೆ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಆಮ್ ಆದ್ಮಿ ಪಕ್ಷದ ಸಂಸದೆ ಸ್ವಾತಿ ಮಾಲೀವಾಲ್ ಅವರನ್ನು ದೆಹಲಿ ನ್ಯಾಯಾಲಯವೊಂದು ಬುಧವಾರ ಖುಲಾಸೆಗೊಳಿಸಿದೆ.

ಹೆಚ್ಚುವರಿ ಮುಖ್ಯ ನ್ಯಾಯಾಧೀಶೆ ನೇಹಾ ಮಿತ್ತಲ್ ಅವರು ಆದೇಶ ನೀಡಿದರು. ಆದೇಶದ ಪ್ರತಿ ಇನ್ನಷ್ಟೇ ಬಹಿರಂಗಗೊಳ್ಳಬೇಕಿದೆ. ಸ್ವಾತಿ ಅವರು ದೆಹಲಿ ಮಹಿಳಾ ಆಯೋಗದ ಮುಖ್ಯಸ್ಥೆ ಆಗಿದ್ದಾಗಿನ 2016ರ ಪ್ರಕರಣ ಇದಾಗಿದೆ. ಬಾಲನ್ಯಾಯ ಕಾಯ್ದೆಯನ್ನು ಉಲ್ಲಂಘಿಸಿದ್ದಾರೆ ಎಂಬ ಆರೋಪ ಸ್ವಾತಿ ಅವರ ಮೇಲಿತ್ತು. ಉಪ ಆಯುಕ್ತರಿಗೆ ಪತ್ರ ಬರೆದಿದ್ದ ಸ್ವಾತಿ ಅವರು ಪ್ರಕರಣದ ತನಿಖೆ ಕುರಿತು ಮಾಹಿತಿ ನೀಡುವಂತೆ ನೋಟಿಸ್ ನೀಡಿದ್ದರು. ಈ ನೋಟಿಸ್‌ನಲ್ಲಿ ಬಾಲಕಿಯ ಹೆಸರಿತ್ತು. ಇದೇ ನೋಟಿಸ್ ಪ್ರತಿಯನ್ನು ಸ್ವಾತಿ ಅವರು ಎಲ್ಲ ಮಾಧ್ಯಮಗಳಿಗೂ ಕಳುಹಿಸಿಕೊಟ್ಟಿದ್ದರು. ‘ಹಲವು ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಈ ನೋಟಿಸ್ ಹರಿದಾಡಿತ್ತು ಮತ್ತು ಸುದ್ದಿ ವಾಹಿನಿಗಳೂ ಈ ನೋಟಿಸ್ ಅನ್ನು ಬಿತ್ತರಿಸಿದ್ದವು’ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿತ್ತು.

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ:ಬಿ2:ಸಿಆರ್:2025–26 **ಟೆಂಡರ್ ಪ್ರಕಟಣೆ** ದಿನಾಂಕ: 12.08.2025

2025–26ನೇ ಸಾಲಿನ ನಗರಸಭಾ ನಿಧಿಯಡಿ ಮತ್ತು 2025–26ನೇ ಸಾಲಿನ ನಗರಸಭಾ ನಿಧಿಯಡಿ (ಶೇ 7.25) ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W -1 & K.W -2 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 28.08.2025 ಸಂಜೆ 5.00 ಗಂಟೆಗೆ

2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 29.08.2025 ಸಂಜೆ 5.01 ಗಂಟೆಗೆ

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ)
	2025–26ನೇ ಸಾಲಿನ ನಗರಸಭಾ ನಿಧಿ			
1.	DMA/2025-26/OW/WORK_INDENT47481	4900000.00	98000.00	3 ತಿಂಗಳು
	2025–26ನೇ ಸಾಲಿನ ನಗರಸಭಾ ನಿಧಿ (ಶೇ. 7.25)			
2.	DMA/2025-26/RD/WORK_INDENT47482	2595117.00	51902.00	3 ತಿಂಗಳು

ಸಹಿ/– ಅಧ್ಯಕ್ಷರು, ಉಡುಪಿ ನಗರಸಭೆ ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001.

ಫೋನ್: 080–22223906, ಇ–ಮೇಲ್: dce.tenders2017@gmail.com

No.: DCE/ITS/PUR/10/2024-INFO (Computer No. 1336473) Date: 13.08.2025

ಇ–ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಟೆಂಡರ್‌ಗಾಗಿ ಅರ್ಹ ಬಿಡ್‌ದಾರರಿಂದ ಇ–ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ವಿವರಗಳಿಗಾಗಿ https://kppp.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀ–ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	ಟೆಂಡರ್ ಸಂಖ್ಯೆ: ಡಿಸಿಇ/2024–25/SE0006/Call-2 “ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ಹೊರ ಗುತ್ತಿಗೆ ಆಧಾರದ ಮೇರೆಗೆ ಡೇಟಾ ಎಂಟ್ರಿ ಆಪರೇಟರ್‌ಗಳು ಮತ್ತು ಗ್ರೂಪ್–ಡಿ ಉದ್ಯೋಗಿಗಳ ಸೇವೆಗಳನ್ನು ಒದಗಿಸುವುದು ಬಗ್ಗೆ”	13/08/2025	18/08/2025 ಬೆಳಿಗ್ಗೆ 11.30 ಗಂಟೆಗೆ	12/09/2025 ಸಂಜೆ 5.30 ಗಂಟೆಗೆ

ಸಹಿ/–

DIPR/CP/2316/Zen/2025-26 ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು

ಕರ್ನಾಟಕ ಸರ್ಕಾರ

(ಆರ್ಥಿಕ ಇಲಾಖೆ)

ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)

ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060

ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in

ಸಂಖ್ಯೆ: FPI-PROC0TNDR(MP)/1/2025-ADMN-FPI ದಿನಾಂಕ: 13.08.2025

ಇ–ಟೆಂಡರ್ ಪ್ರಕಟಣೆ

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಸಂಬಂಧಿತ ಏಜೆನ್ಸಿಗಳಿಂದ ಕೆಳಕಂಡ ಸೇವೆಯನ್ನು ಪಡೆಯಲು ಟೆಂಡರ್ ಕರೆಯಲಾಗಿದೆ.

“Tender from Agencies to Provide Support Staff Services (Manpower Services) to Fiscal Policy Institute”.

Last date: **28.08.2025 till 11.00 AM.**

ಸದರಿ ಟೆಂಡರ್‌ನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ನಿರ್ದೇಶಕರ ಪರವಾಗಿ

DIPR/CP/YC/2320/2025-26 ವಿತ್ತೀಯ ಕಾರ್ಯನೀತಿ ಸಂಸ್ಥೆ

ಕರ್ನಾಟಕ ಸರ್ಕಾರ

(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಸರ್ಕಾರಿ ಶಿಶುಮಂದಿರ

ಡಾ। ಎಂ.ಹೆಚ್. ಮರೀಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಬೆಂಗಳೂರು–560029

ಇಮೇಲ್ : shishu.mandira@yahoo.in ದೂರವಾಣಿ ಸಂಖ್ಯೆ : 080–26569344

ಕ್ರ.ಸಂ : ಸ.ಶಿ.ಮಂ.ಬೆಂ(ನ),ಪ್ರಚಾರ,ನಿವಾಸಿ,2025–26 ದಿನಾಂಕ : 12/08/2025

ಪಾಲಕರ ಪತ್ತೆಗಾಗಿ ನೆರವು ಕೋರಿಕೆ

ಕ್ರ. ಸಂ	ಮಕ್ಕಳ ವಿವರ		
1.	ಮಗುವಿನ ಹೆಸರು	ದಿಯಾ	ಶೌರ್ಯ
2.	ಮಗುವಿನ ವಯಸ್ಸು	02 ವರ್ಷ	01 ತಿಂಗಳು
3.	ತಂದೆ ಅಥವಾ ತಾಯಿಯ ಹೆಸರು	ಗೊತ್ತಿಲ್ಲ	ಗೊತ್ತಿಲ್ಲ
4.	ಹುಟ್ಟಿದ ದಿನಾಂಕ	ಗೊತ್ತಿಲ್ಲ	ಗೊತ್ತಿಲ್ಲ
5.	ಎತ್ತರ	113.ಸೆ.ಮೀ	45.ಸೆ.ಮೀ
6.	ದೇಹದ ಬಣ್ಣ ಮತ್ತು ಗುರುತಿಸುವ ಚಹರೆ	ಗೋಧಿ ಬಣ್ಣ	ಗೋಧಿ ಬಣ್ಣ
7.	ಮಾನಸಿಕ ಮತ್ತು ದೈಹಿಕ ಸ್ಥಿತಿ	ಸಾಧಾರಣ	ಸಾಧಾರಣ
8.	ಯಾರನ್ನು ಸಂಪರ್ಕಿಸಬೇಕಾದವರ ವಿವರ: ಅಧೀಕ್ಷಕರು, ಸರ್ಕಾರದ ಶಿಶುಮಂದಿರ, ಡಾ.ಎಂ.ಹೆಚ್. ಮರಿಗೌಡ ರಸ್ತೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ಹತ್ತಿರ ಬೆಂಗಳೂರು–560029. ದೂರವಾಣಿ ಸಂಖ್ಯೆ–6364656354		

ಸಹಿ/–

ಅಧೀಕ್ಷಕರು, ಸರ್ಕಾರಿ ಶಿಶುಮಂದಿರ,

DIPR/CP/2304/Zen/2025-26 ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ಜಿಲ್ಲೆ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಛೇರಿ,

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿಸ್ಥಿರೀಕರಿಸಿದಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ.(ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis’)

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

SHORT DESCRIPTION OF THE IMMOVABLE PROPERTY

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 1109/2023)	MINIMUM BID PRICE (Rs)	EMD (Rs)	Bid Increase Value (Rs)
1	All the piece and parcel of the property bearing Sy.No.101/1 measuring 8 Acre 4 guntas, situated at Achakanahalli Village, Jath Taluk, Sangli District, Maharastra bounded on: East By: Windmill Road, West By: Land belonging to Sri. Babasahed Vithoba Bhosale, North By: Land belonging to Sri. Ramachandra Laxman Patil, South By: Windmill Road. Google Map: https://maps.app.goo.gl/eWh5ZTBGVHkXu67V9 Latitude and Longitude: 17°05'47.6"N 75°14'26.2"E	30,78,000/-	3,08,000/-	31,000/-

ಪ್ರಿ–ಬಿಡ್ ಮೀಟಿಂಗ್ ದಿನಾಂಕ ಸಮಯ ಮತ್ತು ಸ್ಥಳ	ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
15ನೇ ಸೆಪ್ಟಂಬರ್ 2025, ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಸ್ಥಳ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಛೇರಿ,3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01,	16ನೇ ಸೆಪ್ಟಂಬರ್ 2025, ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ	18ನೇ ಸೆಪ್ಟಂಬರ್ 2025, ಸಂಜೆ 5.00 ಗಂಟೆಯೊಳಗೆ	19ನೇ ಸೆಪ್ಟಂಬರ್ 2025 ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 6364403715 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು ಸಹಿ/–

ದಿನಾಂಕ: 07.08.2025 DIPR/CP/ 2311/ZEN/2025-26 ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,487
ಇಂದಿನ ಅಂತ್ಯ:	24,619
ದಿನದ ಗರಿಷ್ಠ:	24,664
▲	131

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹530
	12 ಕ್ಕೆ	₹70
ಮೈಸೂರು:	100 ಕ್ಕೆ	₹538

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹341-635
ದ್ವಿತಳಿ (ಬಿ.ವಿ)	₹333-748

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹197
ಆರ್‌ಎಸ್‌ಎಸ್-5	₹191
ಗುಡ್ ಲಾಟ್	₹175

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹24000-24000
ಬೆಳ್ತಂಗಡಿ	₹17000-26500
ಬೆಂಗಳೂರು	₹28000-30000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1280 (1265)
ಸೂರ್ಯಕಾಂತಿ (ರಿಫೈನ್ಡ್)	₹1390 (1380)
ಪಾಮೋಲಿನ್	₹1250 (1225)

ಸುಂಕ: ಭಾರತದ ಬೆಳವಣಿಗೆಗೆ ಧಕ್ಕೆ ಇಲ್ಲ

ಎಸ್ ಆ್ಯಂಡ್ ಪಿ ರೇಟಿಂಗ್ಸ್ ಸಂಸ್ಥೆಯ ಅಭಿಮತ

ಮುಖ್ಯಾಂಶಗಳು

- ಭಾರತದ ರೇಟಿಂಗ್ ಮುನ್ನೋಟ 'ಧನಾತ್ಮಕ' ಎಂದು ಪರಿಷ್ಕರಣೆ
- ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ 6.5ರಷ್ಟು
- ಭಾರತವು ಬಾಹ್ಯ ವ್ಯಾಪಾರ ಆಧರಿಸಿರುವ ಅರ್ಥ ವ್ಯವಸ್ಥೆ ಹೊಂದಿಲ್ಲ

ನವದೆಹಲಿ (ಪಿಟಿಐ): ಭಾರತದ ಸರಕುಗಳ ಮೇಲೆ ಅಮೆರಿಕವು ವಿಧಿಸಿರುವ ಸುಂಕವು ಭಾರತದ ಆರ್ಥಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುವುದಿಲ್ಲ ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಎಸ್ ಆ್ಯಂಡ್ ಪಿ ಹೇಳಿದೆ.

'ಭಾರತವು ಬಾಹ್ಯ ವ್ಯಾಪಾರವನ್ನು ಆಧರಿಸಿರುವ ಅರ್ಥ ವ್ಯವಸ್ಥೆಯನ್ನು ಹೊಂದಿಲ್ಲ. ಭಾರತದ ರೇಟಿಂಗ್ ಮುನ್ನೋಟ ಕೂಡ ಸಕಾರಾತ್ಮಕವಾಗಿಯೇ ಇರಲಿದೆ' ಎಂದು ಎಸ್ ಆ್ಯಂಡ್ ಪಿ ಸಂಸ್ಥೆಯ ಜಾಗತಿಕ ರೇಟಿಂಗ್ಸ್ ವಿಭಾಗದ ನಿರ್ದೇಶಕ ಯೀಫಾರ್ನ್ ಪೂಅ ಹೇಳಿದ್ದಾರೆ.

ಕಳೆದ ವರ್ಷದ ಮೇ ತಿಂಗಳಲ್ಲಿ ಎಸ್

ಆ್ಯಂಡ್ ಪಿ ಸಂಸ್ಥೆಯು ಭಾರತದ ರೇಟಿಂಗ್ ಮುನ್ನೋಟ 'ಬಿಬಿಬಿ–' ಇದ್ದಿದ್ದನ್ನು 'ಧನಾತ್ಮಕ' ಎಂದು ಪರಿಷ್ಕರಿಸಿದೆ. ದೇಶದ ಆರ್ಥಿಕ ಬೆಳವಣಿಗೆಯು ಚೆನ್ನಾಗಿ ಇರುವುದನ್ನು ಗಮನಿಸಿ ಅದು ಈ ರೇಟಿಂಗ್ ಪರಿಷ್ಕರಣೆ ಮಾಡಿದೆ.

ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶೇ 25ರಷ್ಟು ಸುಂಕ ವಿಧಿಸಿರುವುದಲ್ಲದೆ, ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ಹೇರಿದ್ದಾರೆ. ಹೆಚ್ಚುವರಿ ಸುಂಕವು ಆಗಸ್ಟ್ 27ರಿಂದ ಅನ್ವಯ ಆಗಲಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ ಎಂದು ಎಸ್ ಆ್ಯಂಡ್ ಪಿ ಅಂದಾಜು ಮಾಡಿದೆ. ಔಷಧ ಹಾಗೂ ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ಅಮೆರಿಕವು ಹೆಚ್ಚಿನ ಸುಂಕದ ವ್ಯಾಪ್ತಿಯಿಂದ ಹೊರಗೆ ಇರಿಸಿದೆ ಎಂದು ಯೀಫಾರ್ನ್ ಹೇಳಿದ್ದಾರೆ.

'ಹೆಚ್ಚಿನ ಸುಂಕವು ದೀರ್ಘಾವಧಿಯಲ್ಲಿ ಭಾರತದ ಅರ್ಥ ವ್ಯವಸ್ಥೆಗೆ ಏಟು ನೀಡುತ್ತದೆ ಎಂದು ನಾವು ಭಾವಿಸಿಲ್ಲ. ಹೀಗಾಗಿ, ಭಾರತದ ಕುರಿತ ಧನಾತ್ಮಕ ಮುನ್ನೋಟವು ಮುಂದುವರಿಯಲಿದೆ' ಎಂದು ಅವರು ಏಷ್ಯಾ–ಪೆಸಿಫಿಕ್ ದೇಶಗಳ ರೇಟಿಂಗ್ ಕುರಿತ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಹೆಚ್ಚಿನ ಪ್ರಮಾಣದ ಸುಂಕವು ಭಾರತಕ್ಕೆ ವಿದೇಶಿ ಬಂಡವಾಳದ ಹರಿವಿನ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಲಿದೆಯೇ ಎಂಬ ಪ್ರಶ್ನೆಗೆ ಅವರು, 'ಚೀನಾ ಜೊತೆ ಇನ್ನೂ ಒಂದು ದೇಶದಲ್ಲಿ ತಯಾರಿಕಾ ಘಟಕ ಆರಂಭಿಸುವ ಕಾರ್ಯತಂತ್ರವು ಕೆಲವು ವರ್ಷಗಳಿಂದ ಚಾಲ್ತಿಯಲ್ಲಿ ಇದೆ. ಕಂಪನಿಗಳು ಭಾರತದ ಆಂತರಿಕ ಬೇಡಿಕೆಗಳನ್ನು ಪೂರೈಸಲು ಭಾರತದಲ್ಲೇ ಘಟಕಗಳನ್ನು ತೆರೆಯುತ್ತಿವೆ' ಎಂದು ವಿವರಣೆ ನೀಡಿದ್ದಾರೆ.

'ಹಲವು ಉದ್ದಿಮೆಗಳು ಭಾರತದಲ್ಲಿ ಘಟಕ ಆರಂಭಿಸುತ್ತಿರುವುದು ಅಮೆರಿಕಕ್ಕೆ ಉತ್ಪನ್ನ ರಫ್ತು ಮಾಡುವ ಒಂದೇ ಉದ್ದೇಶದಿಂದ ಅಲ್ಲ. ಭಾರತದಲ್ಲಿನ ದೊಡ್ಡ ಮಾರುಕಟ್ಟೆಯನ್ನೂ ಗಮನಿಸಿ ಅವು ಘಟಕ ಆರಂಭಿಸುತ್ತಿವೆ. ಭಾರತದಲ್ಲಿನ ಮಧ್ಯಮ ವರ್ಗವು ಬೆಳೆಯುತ್ತಿದೆ. ಹೀಗಾಗಿ, ಭಾರತದಲ್ಲಿ ಹೂಡಿಕೆ ಮಾಡಲು, ರಫ್ತು ಮಾಡಲು ಅವಕಾಶ ಅರಸುತ್ತಿರುವವರಿಗೆ ಅಮೆರಿಕವೊಂದೇ ಗಮ್ಯವಾಗಿರಬೇಕು ಎಂದೇನೂ ಇಲ್ಲ' ಎಂದು ಉತ್ತರ ನೀಡಿದ್ದಾರೆ.

ಚಿಟಿಕೆ ಸುದ್ದಿ

ಬ್ರಿಟನ್‌ಗೆ ಇ.ವಿ ರಫ್ತು: ಮಹೀಂದ್ರ ಚಿಂತನೆ

ನವದೆಹಲಿ (ಪಿಟಿಐ): ಬ್ರಿಟನ್‌ಗೆ ವಿದ್ಯುತ್‌ಚಾಲಿತ ವಾಹನಗಳನ್ನು (ಇ.ವಿ) ರಫ್ತು ಮಾಡಲು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಯೋಜಿಸಿದೆ.

ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದದಿಂದ (ಎಫ್‌ಟಿಎ) ವ್ಯಾಪಾರದ ಅವಕಾಶಗಳು ಹೆಚ್ಚಲಿವೆ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಅನೀಶ್ ಶಾ ಹೇಳಿದ್ದಾರೆ.

2030ರ ವೇಳೆಗೆ ತನ್ನ ಒಟ್ಟು ವಾಹನಗಳ ಮಾರಾಟದಲ್ಲಿ ವಿದ್ಯುತ್‌ಚಾಲಿತ ವಾಹನಗಳ ಪಾಲು ಶೇ 30ರಷ್ಟು ಆಗಬೇಕು ಎಂದು ಕಂಪನಿಯು ಬಯಸಿದೆ. ಇ.ವಿ ರಫ್ತಿನಿಂದ ಬ್ರಿಟನ್ ಮಾರುಕಟ್ಟೆಯಲ್ಲಿ ಹೆಚ್ಚಿನ ಪಾಲನ್ನು ಪಡೆಯಲು ಉದ್ದೇಶಿಸಲಾಗಿದೆ. ಈ ಒಪ್ಪಂದವು ದೇಶದಲ್ಲಿ ನಾವೀನ್ಯತೆಗೆ ಮತ್ತು ತಯಾರಿಕೆಗೆ ಉತ್ತೇಜನ ನೀಡಲಿದೆ ಎಂದು ತಿಳಿಸಿದ್ದಾರೆ.

ಈ ಒಪ್ಪಂದವು ಬ್ರಿಟನ್ ಸರಕುಗಳಿಗೆ ಭಾರತದ ಮಾರುಕಟ್ಟೆಯನ್ನು ತೆರೆಯಲಿದೆ ಮತ್ತು ದೇಶದ ರಫ್ತಿನ ಅವಕಾಶಗಳ ಹೆಚ್ಚಳಕ್ಕೆ ಸಹಾಯಕವಾಗಲಿದೆ ಎಂದು ಹೇಳಿದ್ದಾರೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-1900
ಮಧ್ಯಮ	₹1000-1500
ಸಣ್ಣ	₹500-1000

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಡಿಕೆ ಧಾರಣೆ

ಕುಮಟಾ					
ಚಾಲಿ	38899-43009	ಗೊರಬಲು	16009-37009	ರಾಶಿ	44099-50299
ಚಿಪ್ಪು	25099-31599	ರಾಶಿ	48258-60000	ತಟ್ಟಿಬೆಟ್ಟೆ	32099-47899
ಕೋಕ	7089-23569	ಸರಕು	65900-97740	**ಶಿರಸಿ**	
ಫ್ಯಾಕ್ಟರಿ	6019-30699	**ಸಿದ್ದಾಪುರ**		ಬೆಟ್ಟೆ	28909-46839
ಹೊಸಚಾಲಿ	36029-43109	ಬಿಳಿಗೋಟು	24299-31500	ಬಿಳಿಗೋಟು	25299-34712
ಶಿವಮೊಗ್ಗ		ಚಾಲಿ	35000-42809	ಚಾಲಿ	38239-43588
ಬೆಟ್ಟೆ	52810-63199	ಕೋಕ	18319-24899	ಕೆಂಪುಗೋಟು	20199-27809
		ಕೆಂಪುಗೋಟು	20819-23600	ರಾಶಿ	43599-49899

ಪುರವಂಕರ ಕಂಪನಿಯು ತನ್ನ ಸುವರ್ಣ ಮಹೋತ್ಸವದ ಪ್ರಯುಕ್ತ ವಿಶೇಷ ಅಂಚೆ ಚೀಟಿಯನ್ನು ಅಂಚೆ ಇಲಾಖೆ ಜೊತೆಗೂಡಿ ಬುಧವಾರ ಬಿಡುಗಡೆ ಮಾಡಿದೆ. ಕಂಪನಿಯ ದಕ್ಷಿಣ ವಲಯದ ಸಿಇಒ ಮಲ್ಲಣ್ಣ ಸಾಸಲು, ಕರ್ನಾಟಕ ಅಂಚೆ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್, ಕಂಪನಿಯ ನಿರ್ದೇಶಕಿ ಅಮಂಡಾ ಪುರವಂಕರ ಮತ್ತು ಕಂಪನಿಯ ಪಶ್ಚಿಮ ಹಾಗೂ ವಾಣಿಜ್ಯ ಆಸ್ತಿಗಳ ಸಿಇಒ ರಜತ್ ರಸ್ತೋಗಿ ಇದ್ದರು —ಪ್ರಜಾವಾಣಿ ಚಿತ್ರ

ಸುವರ್ಣ ಮಹೋತ್ಸವ: ಪುರವಂಕರದಿಂದ ವಿಶೇಷ ಅಂಚೆ ಚೀಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಕಂಪನಿ ಪುರವಂಕರ ತನ್ನ ಸುವರ್ಣ ಮಹೋತ್ಸವದ ಪ್ರಯುಕ್ತ ವಿಶೇಷ ಅಂಚೆ ಚೀಟಿಯನ್ನು, ಭಾರತೀಯ ಅಂಚೆ ಇಲಾಖೆ ಜೊತೆಗೂಡಿ ಬುಧವಾರ ಬಿಡುಗಡೆ ಮಾಡಿದೆ.

ಅಂಚೆ ಇಲಾಖೆಯು ವಿಶೇಷ ಸಂದರ್ಭಗಳಲ್ಲಿ ಕಂಪನಿಗಳಿಗೆ, ಸಂಸ್ಥೆಗಳಿಗೆ ವಿಶೇಷ ಅಂಚೆ ಚೀಟಿಯನ್ನು ರೂಪಿಸಿಕೊಡುತ್ತದೆ. ಇದಕ್ಕೆ 'ಮೈ ಸ್ಟ್ಯಾಂಪ್' ಎಂದು ಹೆಸರು.

'1975ರಲ್ಲಿ ಸ್ಥಾಪನೆಯಾದ ಕಂಪನಿಯು ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಈ ಸಂದರ್ಭದಲ್ಲಿ ಅಂಚೆ ಇಲಾಖೆ ಜೊತೆ ಸೇರಿ ಬಿಡುಗಡೆ ಮಾಡಿರುವ ಅಂಚೆ ಚೀಟಿಯು ಪುರವಂಕರ ಕಂಪನಿಯ ಪಯಣವನ್ನು ಹೇಳುತ್ತದೆ. ಸ್ಟ್ಯಾಂಪ್‌ನಲ್ಲಿರುವ ನೀಲಿ ಬಣ್ಣವು ಕಠಿಣ ಶ್ರಮದ ಸಂಕೇತ, ದ ಆರ್ಟ್ ಆಫ್ ಡೆವಲಪ್‌ಮೆಂಟ್ ಶೀರ್ಷಿಕೆ ಸೃಜನಾತ್ಮಕತೆ ಆಗಿದೆ' ಎಂದು ಕಂಪನಿಯ ದಕ್ಷಿಣ ವಲಯದ ಸಿಇಒ ಮಲ್ಲಣ್ಣ ಸಾಸಲು ಹೇಳಿದರು.

ಕರ್ನಾಟಕ ಅಂಚೆ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ ಮಾತನಾಡಿ, 'ಅಂಚೆ ಚೀಟಿಗಳು ಸೂಕ್ಷ್ಮ ಕಲಾಕೃತಿಗಳಷ್ಟೇ ಅಲ್ಲ. ಅವು ಇತಿಹಾಸ, ಸಾಧನೆ, ಸಂಸ್ಕೃತಿಯ ಪ್ರತೀಕ. ಮೈ ಸ್ಟ್ಯಾಂಪ್‌ನಂತಹ ಕ್ರಮಗಳು ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಕಂಪನಿಗಳ ಕೊಡುಗೆಯನ್ನು ಸ್ಮರಿಸುತ್ತವೆ' ಎಂದರು.

ಹಸೀನಾ ವಿರುದ್ಧ ವಿಚಾರಣೆ ಆರಂಭ

ಢಾಕಾ (ಪಿಟಿಐ): ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಮತ್ತು ಇತರ 17 ಜನರ ವಿರುದ್ಧ ವಸತಿ ಹಗರಣ ಕುರಿತ ಪ್ರಕರಣದ ವಿಚಾರಣೆ ಬುಧವಾರ ಆರಂಭವಾಗಿದೆ.

ಹಸೀನಾ ಅವರ ಸೋದರ ಸೊಸೆಯಂದಿರಾದ ಅಜ್ಮಿನಾ ಸಿದ್ದಿಕ್, ಬ್ರಿಟನ್ ಸಂಸದೆಯೂ ಆದ ತುಲಿಪ್ ಸಿದ್ದಿಕ್ ಅವರ ವಿರುದ್ಧವೂ ವಿಚಾರಣೆ ಪ್ರಾರಂಭವಾಗಿದೆ.

ಭ್ರಷ್ಟಾಚಾರ ನಿಗ್ರಹ ಆಯೋಗದ ಸಹಾಯಕ ನಿರ್ದೇಶಕರೂ ಆಗಿರುವ ದೂರುದಾರ ಅಫ್ನಾನ್ ಜನ್ನತ್ ಕೆಯಾ ಅವರು ಢಾಕಾದ ವಿಶೇಷ ನ್ಯಾಯಾಧೀಶರ ಮುಂದೆ ಸಾಕ್ಷ್ಯ ನುಡಿದರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಮುಂಬೈ ಧಾರಣೆ (ಶೇಂಗಾ)

13-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1248 (1223)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1310)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,700 (99,400)
ಬೆಳ್ಳಿ ಕೆ.ಜಿಗೆ	1,15,100 (1,13,250)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಹಿಂದೂ ದೇಗುಲಕ್ಕೆ ಹಾನಿ: ಭಾರತ ಖಂಡನೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಇಂಡಿಯಾನದಲ್ಲಿರುವ ಹಿಂದೂ ದೇವಾಲಯವೊಂದರ ಸೂಚನಾ ಫಲಕವನ್ನು ವಿರೂಪಗೊಳಿಸಿರುವ ಘಟನೆ ನಡೆದಿದ್ದು, ಶಿಕಾಗೊದಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಇದನ್ನು ಖಂಡಿಸಿದೆ.

ಘಟನೆಯ ಕುರಿತು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ ಎಂದು ಅದು ತಿಳಿಸಿದೆ.

ಗ್ರೀನ್‌ವುಡ್ ಸಿಟಿಯ ಬೊಚಾಸನ್ವಾಸಿ ಅಕ್ಷರ ಪುರುಷೋತ್ತಮ್ ಸಂಸ್ಥೆಯ (ಬಿಎಪಿಎಸ್) ಸ್ವಾಮಿನಾರಾಯಣ ದೇವಾಲಯದಲ್ಲಿ ನಡೆದ ಘಟನೆ 'ದ್ವೇಷಪೂರಿತ'ವಾಗಿದೆ. ಒಂದೇ ವರ್ಷದಲ್ಲಿ ನಾಲ್ಕನೇ ಬಾರಿಗೆ ಬಿಎಪಿಎಸ್ ದೇವಾಲಯವನ್ನು ಗುರಿಯಾಗಿಸಲಾಗಿದೆ ಎಂದು ದೇವಾಲಯದ ಸಾರ್ವಜನಿಕ ಸಂಪರ್ಕ ವಿಭಾಗವು ತನ್ನ 'ಎಕ್ಸ್' ಖಾತೆಯಲ್ಲಿ ಮಂಗಳವಾರ ತಿಳಿಸಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 304 ಅಂಶ ಏರಿಕೆ

ಮುಂಬೈ (ಪಿಟಿಐ): ಲೋಹ, ವಾಹನ ಕಂಪನಿಗಳು ಮತ್ತು ಔಷಧ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 304 ಅಂಶ ಏರಿಕೆಯಾಗಿ, 80,539ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 131 ಅಂಶ ಹೆಚ್ಚಳವಾಗಿ, 24,619ಕ್ಕೆ ಕೊನೆಗೊಂಡಿದೆ.

ಚಿಲ್ಲರೆ ಹಣದುಬ್ಬರವು ಜುಲೈನಲ್ಲಿ ಎಂಟು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಚೀನಾ ಮೇಲೆ ಸುಂಕ ವಿಧಿಸುವುದಕ್ಕೆ ಗಡುವನ್ನು ಅಮೆರಿಕವು ವಿಸ್ತರಿಸಿರುವುದು ಮತ್ತು ತೈಲ ದರ ಇಳಿಕೆಯು ಸೂಚ್ಯಂಕಗಳ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಆಗಸ್ಟ್ 15ರಂದು ಭೇಟಿ ಆಗಲಿದ್ದಾರೆ. ದೇಶದ ಹೂಡಿಕೆದಾರರು ಇದರತ್ತ ಚಿತ್ತ ನೆಟ್ಟಿದ್ದಾರೆ. ಅಲ್ಲದೆ, ಅಮೆರಿಕ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಇರುವುದು ಸಹ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ನೆರವಾಗಿದೆ ಎಂದು ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.36ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರಲ್ ತೈಲದ ಬೆಲೆಯು 65.88 ಡಾಲರ್ ಆಗಿದೆ. ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,398 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ನಾಗ್ಪುರದಲ್ಲಿ ಮಣಿಪಾಲ್ ಹಾಸ್ಪಿಟಲ್ಸ್‌ನಿಂದ ಆಸ್ಪತ್ರೆ

ಬೆಂಗಳೂರು: ದೇಶದ ಮುಂಚೂಣಿ ಆರೋಗ್ಯಸೇವಾ ಕಂಪನಿಗಳ ಪೈಕಿ ಒಂದಾಗಿರುವ ಮಣಿಪಾಲ್ ಹಾಸ್ಪಿಟಲ್ಸ್, ನಾಗ್ಪುರದಲ್ಲಿ 350 ಹಾಸಿಗೆಗಳ ಅತ್ಯಾಧುನಿಕ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಮಹಾರಾಷ್ಟ್ರ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿದೆ.

ಪ್ರಸ್ತಾವಿತ ಈ ಆಸ್ಪತ್ರೆಗಾಗಿ ₹700 ಕೋಟಿ ಹೂಡಿಕೆ ಮಾಡಲಾಗುತ್ತದೆ. ಇದು ಹೊಸದಾಗಿ ಮೂರು ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಈ ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲ ಪರವಾನಗಿಗಳನ್ನು, ಅನುಮೋದನೆಗಳನ್ನು ಹಾಗೂ ಹಣಕಾಸಿನ ನೆರವನ್ನು ಒದಗಿಸುವುದಾಗಿ ಮಹಾರಾಷ್ಟ್ರ ಸರ್ಕಾರವು ಭರವಸೆ ಇತ್ತಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ. ಆಸ್ಪತ್ರೆಯು 2029ರಲ್ಲಿ ಕಾರ್ಯಾಚರಣೆ ಆರಂಭಿಸಲಿದೆ.

'ನಾಗ್ಪುರದಲ್ಲಿನ ಹೊಸ ಆಸ್ಪತ್ರೆಯು ಅತ್ಯುತ್ತಮ ಗುಣಮಟ್ಟದ ಆರೋಗ್ಯಸೇವೆಯನ್ನು ಅದರ ಅಗತ್ಯ ಇರುವ ಸಮುದಾಯಗಳಿಗೆ ಹತ್ತಿರ ತರಲಿದೆ' ಎಂದು ಮಣಿಪಾಲ್ ಹಾಸ್ಪಿಟಲ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ದಿಲೀಪ್ ಜೋಸ್ ಹೇಳಿದ್ದಾರೆ.

ಸಾಮಾನ್ಯ ಸಭೆ ಉದ್ದೇಶಿಸಿ ಮೋದಿ ಭಾಷಣ ಸಾಧ್ಯತೆ

ವಿಶ್ವಸಂಸ್ಥೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಉನ್ನತ ಮಟ್ಟದ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವ ಸಾಧ್ಯತೆಯಿದೆ ಎಂದು ವಿಶ್ವಸಂಸ್ಥೆ ಹೊರಡಿಸಿದ ತಾತ್ಕಾಲಿಕ ಪಟ್ಟಿಯಲ್ಲಿ ತಿಳಿಸಲಾಗಿದೆ.

ಯುಎನ್‌ಜಿಎಯ 80ನೇ ಅಧಿವೇಶನವು ಸೆಪ್ಟೆಂಬರ್ 9ರಿಂದ ಆರಂಭವಾಗಲಿದೆ. ಸಾಮಾನ್ಯ ಸಭೆಯ ಚರ್ಚೆಯು ಸೆಪ್ಟೆಂಬರ್ 23ರಿಂದ 29ರವರೆಗೆ ನಡೆಯಲಿದೆ.

ವಿಶ್ವ ನಾಯಕರನ್ನು ಉದ್ದೇಶಿಸಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೆಪ್ಟೆಂಬರ್ 23ರಂದು ಮಾತನಾಡಲಿದ್ದಾರೆ. ಸೆಪ್ಟೆಂಬರ್ 26ರಂದು ನಡೆಯಲಿರುವ ಅಧಿವೇಶನದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಇಸ್ರೇಲ್, ಚೀನಾ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಸರ್ಕಾರಗಳ ಮುಖ್ಯಸ್ಥರು ಸಾಮಾನ್ಯ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ತಾತ್ಕಾಲಿಕ ಪಟ್ಟಿಯಲ್ಲಿ ತಿಳಿಸಲಾಗಿದೆ.

ಕನಿಷ್ಠ ಮೊತ್ತ: ಹಿಂದೆ ಸರಿದ ಐಸಿಐಸಿಐ ಬ್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾನಗರ ಹಾಗೂ ನಗರ ಪ್ರದೇಶಗಳ ಗ್ರಾಹಕರು ಉಳಿತಾಯ ಖಾತೆಯಲ್ಲಿ ಇರಿಸಬೇಕಿರುವ ಮಾಸಿಕ ಕನಿಷ್ಠ ಸರಾಸರಿ ಮೊತ್ತವನ್ನು ₹50 ಸಾವಿರಕ್ಕೆ ಹೆಚ್ಚಿಸಿದ್ದ ಐಸಿಐಸಿಐ ಬ್ಯಾಂಕ್ ಈಗ ಆ ತೀರ್ಮಾನದಿಂದ ಹಿಂದೆ ಸರಿದಿದೆ.

ಮಹಾನಗರ ಹಾಗೂ ನಗರ ಪ್ರದೇಶಗಳ ಗ್ರಾಹಕರು ತಮ್ಮ ಉಳಿತಾಯ ಖಾತೆಯಲ್ಲಿ ಮಾಸಿಕ ಕನಿಷ್ಠ ಸರಾಸರಿ ಮೊತ್ತವಾಗಿ ₹15 ಸಾವಿರ ಇರಿಸಿದರೆ ಸಾಕು ಎಂದು

ಹೊಸ ನಿಯಮದಲ್ಲಿ ಹೇಳಿದೆ. ಆಗಸ್ಟ್ 1ರ ನಂತರ ಖಾತೆ ತೆರೆದವರಿಗೆ ಈ ನಿಯಮ ಅನ್ವಯವಾಗುತ್ತದೆ.

ಉಳಿತಾಯ ಖಾತೆಯಲ್ಲಿ ಇರಿಸಬೇಕಾದ ಮಾಸಿಕ ಕನಿಷ್ಠ ಸರಾಸರಿ ಮೊತ್ತವನ್ನು ₹50 ಸಾವಿರಕ್ಕೆ ಹೆಚ್ಚಿಸಿದ ಬ್ಯಾಂಕ್‌ನ ನಡೆಯನ್ನು ಹಲವರು ಟೀಕಿಸಿದ್ದರು.

ಮಂಗಳವಾರ ಪ್ರಕಟಿಸಿರುವ ಹೊಸ ನಿಯಮಗಳ ಪ್ರಕಾರ, ಅರೆ ನಗರ ಪ್ರದೇಶಗಳ ಗ್ರಾಹಕರು ಮಾಸಿಕ ಕನಿಷ್ಠ ಸರಾಸರಿ ಮೊತ್ತವಾಗಿ ₹7,500, ಗ್ರಾಮೀಣ ಪ್ರದೇಶಗಳ ಗ್ರಾಹಕರು ₹2,500 ಇರಿಸಿದರೆ ಸಾಕು.

'ಮಾಸಿಕ ಸರಾಸರಿ ಮೊತ್ತದ ವಿಚಾರವಾಗಿ ಹೊಸ ನಿಯಮವೊಂದನ್ನು ನಾವು ಜಾರಿಗೆ ತಂದಿದ್ದೆವು. ಆದರೆ ಗ್ರಾಹಕರಿಂದ ಪಡೆದ ಮೌಲ್ಯಯುತ ಸಲಹೆಗಳನ್ನು ಗಮನಿಸಿ ಈಗ ಈ ನಿಯಮವನ್ನು ಪರಿಷ್ಕರಿಸುತ್ತಿದ್ದೇವೆ. ಇವು ಗ್ರಾಹಕರ ನಿರೀಕ್ಷೆ ಹಾಗೂ ಆದ್ಯತೆಗಳನ್ನು ಹೆಚ್ಚು ಸೂಕ್ತವಾಗಿ ಪ್ರತಿಬಿಂಬಿಸುತ್ತಿವೆ' ಎಂದು ಬ್ಯಾಂಕ್ ಹೇಳಿದೆ.

ಬೀದಿ ನಾಯಿ: ಇಂದು ತ್ರಿಸದಸ್ಯ ಪೀಠದಿಂದ ವಿಚಾರಣೆ

ಒಂದನೇ ಪುಟದಿಂದ...

ಬೀದಿನಾಯಿಗಳನ್ನು ಶಾಶ್ವತವಾಗಿ ಸ್ಥಳಾಂತರ ಮಾಡುವಂತೆ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಆರ್.ಮಹಾದೇವನ್ ಅವರು ಇದ್ದ ಪೀಠ ಆಗಸ್ಟ್ 11ರಂದು ನಿರ್ದೇಶನ ನೀಡಿತ್ತು. ಬೀದಿನಾಯಿಗಳ ಸಮಸ್ಯೆ ಕುರಿತ ಬೇರೊಂದು ಪ್ರಕರಣದ ವಿಚಾರಣೆಯನ್ನು ಸಿಜೆಐ ಬಿ.ಆರ್. ಗವಾಯಿ ನಡೆಸುತ್ತಿದ್ದರು. ದ್ವಿಸದಸ್ಯ ಪೀಠವು ಆಗಸ್ಟ್ 11ರಂದು ನೀಡಿರುವ ತೀರ್ಪು ಕುರಿತು ಅರ್ಜಿದಾರರು ಸಿಜೆಐ ಗಮನ ಸೆಳೆದಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಸಿಜೆಐ ಅವರು, ಈ ಕುರಿತು ಪರಿಶೀಲಿಸುವುದಾಗಿ ಹೇಳಿದ್ದರು.

ಬಿಜೆಪಿ ಮಾಜಿ ವಕ್ತಾರೆ ಹೆಚ್ಚುವರಿ ನ್ಯಾಯಮೂರ್ತಿ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಬಿಜೆಪಿಯ ಮಾಜಿ ವಕ್ತಾರರಾದ ಆರತಿ ಅರುಣ್ ಸಾಠೆ ಸೇರಿದಂತೆ ಮೂವರು ವಕೀಲರನ್ನು ಬಾಂಬೆ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ಬುಧವಾರ ನೇಮಕ ಮಾಡಲಾಗಿದೆ.

ಸಾಠೆ ಅವರು ಈ ಹಿಂದೆ ಬಿಜೆಪಿ ಮಹಾರಾಷ್ಟ್ರ ರಾಜ್ಯ ಘಟಕದ ವಕ್ತಾರರಾಗಿದ್ದರು. ಕಾನೂನು ಇಲಾಖೆ ಮಾಹಿತಿ ಪ್ರಕಾರ ಆರತಿ ಅರುಣ್ ಸಾಠೆ, ಸುಶಿಲ್ ಮನೋಹರ್ ಘೋಡೇಶ್ವರ್ ಮತ್ತು ಅಜಿತ್ ಭಗವಾನ್ ರಾವ್ ಕಡೆತನಕರ್ ಅವರನ್ನು ನ್ಯಾಯಮೂರ್ತಿಗಳಾಗಿ ನೇಮಿಸಲಾಗಿದೆ.

ಕುಟುಂಬಸ್ಥರ ಜತೆ ರಾಣಾ ಮಾತುಕತೆಗೆ ಕೋರ್ಟ್ ಒಪ್ಪಿಗೆ

ನವದೆಹಲಿ (ಪಿಟಿಐ): ಮುಂಬೈ ಮೇಲಿನ ಭಯೋತ್ಪಾದಕ ದಾಳಿ ಪ್ರಕರಣದ ಆರೋಪಿ ತಹಾವ್ವುರ್ ಹುಸೇನ್ ರಾಣಾಗೆ ಸಹೋದರನ ಜೊತೆ ದೂರವಾಣಿ ಮೂಲಕ ಈ ತಿಂಗಳಲ್ಲಿ ಮೂರು ಬಾರಿ ಮಾತನಾಡಲು ಅವಕಾಶ ನೀಡಿ ದೆಹಲಿಯ ವಿಶೇಷ ನ್ಯಾಯಾಲಯ ಬುಧವಾರ ಆದೇಶ ನೀಡಿದೆ ಎಂದು ಮೂಲಗಳು ತಿಳಿಸಿವೆ. ಇದೇ ವೇಳೆ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಚಂದರ್‌ಜಿತ್ ಸಿಂಗ್, ರಾಣಾ ನ್ಯಾಯಾಂಗ ಬಂಧನದ ಅವಧಿಯನ್ನು ಸೆ. 8ರವರೆಗೆ ವಿಸ್ತರಿಸಿದರು.

ಸಂಕ್ಷಿಪ್ತ ಸುದ್ದಿ

ಟ್ರಂಪ್ – ಪುಟಿನ್ ಶೃಂಗಸಭೆಗೂ ಮುನ್ನ ಬರ್ಲಿನ್‌ಗೆ ಭೇಟಿ ನೀಡಲಿರುವ ಝೆಲೆನ್‌ಸ್ಕಿ

ಬರ್ಲಿನ್ (ಎಪಿ): ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಬುಧವಾರ ಬರ್ಲಿನ್‌ಗೆ ಭೇಟಿ ನೀಡಲಿದ್ದು, ಈ ವೇಳೆ ಅವರು ಜರ್ಮನಿಯ ಚಾನ್ಸಲರ್ ಫ್ರಿಡ್‌ರಿಚ್ ಮೆರ್ಜ್ ಜೊತೆಗೆ ಹಾಗೂ ಯುರೋಪ್, ಅಮೆರಿಕದ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ ಎಂದು ಎಂದು ಜರ್ಮನಿ ಸರ್ಕಾರ ಹೇಳಿದೆ.

ವೊಲೊಡಿಮಿರ್ ಝೆಲೆನ್‌ಸ್ಕಿ

ಈ ವಾರದ ನಂತರ ನಡೆಯಲಿರುವ ಟ್ರಂಪ್–ಪುಟಿನ್ ಶೃಂಗಸಭೆಗೆ ಮುಂಚಿತವಾಗಿ ಈ ಭೇಟಿ ನಡೆಯಲಿದೆ ಎಂದು ಸರ್ಕಾರ ಹೇಳಿದೆ.

ಟ್ರಂಪ್–ಪುಟಿನ್ ಶೃಂಗಸಭೆಯಿಂದ ತಮ್ಮನ್ನು ದೂರವಿಟ್ಟಿರುವ ಹಿನ್ನೆಲೆಯಲ್ಲಿ, ಯುರೋಪ್ ಮತ್ತು ಉಕ್ರೇನ್ ನಾಯಕರ ಅಭಿಪ್ರಾಯಗಳನ್ನು ಕೇಳಲು ಮೆರ್ಜ್ ಅವರು ಬುಧವಾರ ಸರಣಿ ವರ್ಚುವಲ್ ಸಭೆಗಳನ್ನು ಆಯೋಜಿಸಿದ್ದಾರೆ.

ಝೆಲೆನ್‌ಸ್ಕಿ ಮೊದಲಿಗೆ ಯುರೋಪ್‌ನ ನಾಯಕರನ್ನು ಭೇಟಿಯಾಗಲಿದ್ದು, ಒಂದು ಗಂಟೆಯ ನಂತರ ಅಮೆರಿಕದ ಅಧ್ಯಕ್ಷ ಟ್ರಂಪ್ ಮತ್ತು ಉಪಾಧ್ಯಕ್ಷ ಜೆ.ಡಿ.ವಾನ್ಸ್ ಜೊತೆಗೆ ವರ್ಚುವಲ್ ಮಾತುಕತೆ ನಡೆಸಲಿದ್ದಾರೆ.

ಭಯೋತ್ಪಾದನೆ ನಿಗ್ರಹ: ಅಮೆರಿಕ, ಪಾಕ್ ಮಾತುಕತೆ

ಇಸ್ಲಾಮಾಬಾದ್ (ಪಿಟಿಐ): ಬಲೂಚಿಸ್ತಾನ್ ಲಿಬರೇಷನ್ ಆರ್ಮಿ (ಬಿಎಲ್‌ಎ), ಇಸ್ಲಾಮಿಕ್ ಸ್ಟೇಟ್– ಖೊರಾಸಾನ್, ತಾಲಿಬಾನ್ ಸೇರಿದಂತೆ ಪ್ರಮುಖ ಭಯೋತ್ಪಾದನಾ ಸಂಘಟನೆಗಳನ್ನು ಸಮರ್ಪಕವಾಗಿ ನಿಗ್ರಹಿಸಲು ದ್ವಿಪಕ್ಷೀಯ ಸಹಕಾರವನ್ನು ಇನ್ನಷ್ಟು ವೃದ್ಧಿಸಲು ಪಾಕಿಸ್ತಾನ ಮತ್ತು ಅಮೆರಿಕ ಸಮ್ಮತಿ ನೀಡಿವೆ.

ಪಾಕಿಸ್ತಾನ ಮೂಲದ ಬಿಎಲ್‌ಎ ಅನ್ನು ವಿದೇಶಿ ಭಯೋತ್ಪಾದಕ ಸಂಘಟನೆ ಎಂದು ಅಮೆರಿಕ ಘೋಷಿಸಿದ ಬೆನ್ನಲ್ಲೇ ಉಭಯ ದೇಶಗಳ ನಡುವೆ ಭಯೋತ್ಪಾದನೆ ನಿಗ್ರಹ ಕುರಿತು ದ್ವಿಪಕ್ಷೀಯ ಮಾತುಕತೆಗಳು ನಡೆದಿವೆ.

ವಿಶ್ವಸಂಸ್ಥೆಯಲ್ಲಿನ ಪಾಕಿಸ್ತಾನದ ವಿಶೇಷ ಕಾರ್ಯದರ್ಶಿ ನಬೀಲ್ ಮುನೀರ್ ಅವರ ನೇತೃತ್ವದಲ್ಲಿ ನಡೆದ ಚರ್ಚೆಯಲ್ಲಿ ಅಮೆರಿಕದ ವಿದೇಶಾಂಗ ಸಚಿವಾಲಯದ ಭಯೋತ್ಪಾದನಾ ನಿಗ್ರಹದ ಕಾರ್ಯಕಾರಿ ಸಂಯೋಜಕರಾದ ಗೋರಿ ಡಿ. ಲೋಗೆರ್ಪೊ ಭಾಗವಹಿಸಿದ್ದರು.

ಎರಡೂ ದೇಶಗಳ ನಡುವೆ ದೀರ್ಘಕಾಲದಿಂದ ಸ್ನೇಹ ಮತ್ತು ಪಾಲುದಾರಿಕೆಯಿದ್ದು, ಭಯೋತ್ಪಾದನೆ ನಿಗ್ರಹ ವಿಷಯದಲ್ಲಿ ಬದ್ಧತೆಯನ್ನು ತೋರಿದ್ದೇವೆ. ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಗೂ ಇದು ಸಹಕಾರವಾಗಲಿದೆ ಎಂದು ಜಂಟಿ ಪ್ರಕಟಣೆ ತಿಳಿಸಿದೆ.

ತಿರುಪತಿಗೆ ₹1 ಕೋಟಿ ದೇಣಿಗೆ ನೀಡಿದ ಬೆಂಗಳೂರಿನ ಉದ್ಯಮಿ

ತಿರುಪತಿ (ಪಿಟಿಐ): ಬೆಂಗಳೂರಿನ ಭಕ್ತರೊಬ್ಬರು ತಿರುಪತಿ ವೆಂಕಟೇಶ್ವರ ಅನ್ನ ಪ್ರಸಾದಂ ಟ್ರಸ್ಟ್‌ಗೆ ₹1 ಕೋಟಿ ದೇಣಿಗೆ ನೀಡಿದ್ದಾರೆ. ಇನ್ನೊಬ್ಬರು ಭಕ್ತರು ವೆಂಕಟೇಶ್ವರನಿಗೆ ವಜ್ರಖಚಿತ ಚಿನ್ನದ ಪದಕವನ್ನು ಕೊಡುಗೆಯಾಗಿ ನೀಡಿದ್ದಾರೆ.

ತಿರುಪತಿಯ ಉಚಿತ ಅನ್ನದಾನ ಕಾರ್ಯಕ್ರಮಕ್ಕೆ ಬೆಂಗಳೂರಿನ ಉದ್ಯಮಿ ಕಲ್ಯಾಣ ರಾಮನ್ ಕೃಷ್ಣಮೂರ್ತಿ ₹1 ಕೋಟಿ ಹಾಗೂ ಕೆ.ಎಂ. ಶ್ರೀನಿವಾಸ ಮೂರ್ತಿ 148 ಗ್ರಾಂ ತೂಕದ, ಅಂದಾಜು ₹25 ಲಕ್ಷ ಮೌಲ್ಯದ ಚಿನ್ನದ ಪದಕ ಕೊಡುಗೆಯಾಗಿ ನೀಡಿದ್ದಾರೆ ಎಂದು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಪ್ರಕಟಣೆಯಲ್ಲಿ ತಿಳಿಸಿದೆ.

ತಿರುಮಲದಲ್ಲಿ ಟಿಟಿಡಿಯ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ವೆಂಕಯ್ಯ ಚೌಧರಿ ಅವರ ಮೂಲಕ ದೇಣಿಗೆ ಹಸ್ತಾಂತರಿಸಲಾಯಿತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

10ನೇ ವರ್ಷದ ಸವಿನೆನಪು

ಪೈಲ್ವಾನ್ ಪಿ. ನಂಜುಂಡಪ್ಪ
ಕೊಡಿಗೇಹಳ್ಳಿ
ಸದಾ ನಿಮ್ಮ ನೆನಪಿನಲ್ಲಿ
ಕೆ.ಎನ್. ಚಕ್ರಪಾಣಿ
ಬಿಜೆಪಿ ಮುಖಂಡರು, ನಗರಸಭಾ ಮಾಜಿ ಸದಸ್ಯರು
ಅಧ್ಯಕ್ಷರು, ಚಕ್ರಪಾಣಿ ಫೌಂಡೇಶನ್ [ರಿ.] - 94853 94166
ಧರ್ಮಪತ್ನಿ ಶ್ರೀಮತಿ ಜಯಮ್ಮ, ಮಕ್ಕಳು, ಸೊಸೆಯಂದಿರು ಮೊಮ್ಮಕ್ಕಳು, ಕುಟುಂಬ ವರ್ಗ, ಸ್ನೇಹಿತರು ಮತ್ತು ಅಪಾರ ಬಂಧು-ಬಳಗ.
ನಂ.1298, ಹೊಂದಾವರೆ, ರಾಜರಾಜೇಶ್ವರಿ ಮಾರ್ಗ, ರೈಲ್ವೆ ಸ್ಟೇಷನ್ ಹತ್ತಿರ, ಕೊಡಿಗೇಹಳ್ಳಿ, ವಿರುಪಾಕ್ಷಪುರ, ಬೆಂಗಳೂರು- 560097

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ work from Home ಕೆಲಸಕ್ಕೆ ಯುವಕ & ಯುವತಿಯರು ಬೇಕಾಗಿದ್ದಾರೆ. (17,900-25,000) 7th, 10th, Any Degree. Ph:9019427194/9364595602

ಆರ್.ಆರ್.ನಗರದಲ್ಲಿರುವ ನಮ್ಮ ಕಚೇರಿಗೆ ಭೂ ದಾಖಲೆ ಕಾರ್ಯನಿರ್ವಾಹಕ ಹುದ್ದೆಗೆ ಮಹಿಳಾ ಅಭ್ಯರ್ಥಿ. ತಾಲೂಕು ಕಚೇರಿ, ಎಸಿ ಕಚೇರಿ, ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಭೂ ದಾಖಲೆಗಳು ಮತ್ತು ಕಂದಾಯ ದಾಖಲೆಗಳ ಜ್ಞಾನ ಮತ್ತು ತಿಳುವಳಿಕೆ ಕಡ್ಡಾಯವಾಗಿದೆ. ನಾವು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಸಂಪರ್ಕಿಸಿ: +919535486707

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಭಾರತೀಯ ರೈಲ್ವೆ – ಬೆಂಗಳೂರು ಔಟ್‌ಸೋರ್ಸಿಂಗ್ ಅವಧಿ: 24 ತಿಂಗಳು ಟೆಕ್ನೀಷಿಯನ್ – 4 ಹುದ್ದೆಗಳು: ಡಿಪ್ಲೊಮಾ (ECE / EEE / IT / CSE) ಅಸಿಸ್ಟೆಂಟ್ ಟೆಕ್ನೀಷಿಯನ್ – 4 ಹುದ್ದೆಗಳು: ITI ಅಥವಾ 12ನೇ ತರಗತಿ ಪಾಸ್.ಅರ್ಜಿಸಲು: help@dhanigroups.com ಮೊಬೈಲ್: 9687800444 ವೆಬ್‌ಸೈಟ್: www.dhanigroups.com

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/- ರಿಂದ 86,000/-. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

ಬೆಂಗಳೂರು ದಕ್ಷಿಣ ಮತ್ತು ರಾಮನಗರ ಜಿಲ್ಲೆಯ ತಾಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಎಸಿ ಕಚೇರಿಯಿಂದ ಭೂ ಕಂದಾಯ ದಾಖಲೆಗಳ ಖರೀದಿಗಾಗಿ ನಾವು ಭೂ ದಾಖಲೆ ಸಂಪರ್ಕ ಕಾರ್ಯ ನಿರ್ವಾಹಕರನ್ನು ನೇಮಿಸಿಕೊಳ್ಳುತ್ತಿದ್ದೇವೆ. ಸ್ಥಳ: ಆರ್.ಆರ್. ನಗರ, ಬೆಂಗಳೂರು. ದೂ: 9535486707

ಕರ್ನಾಟಕದಾದ್ಯಂತ IT MNC ಕಂಪನಿಗೆ WFH & Office ಕೆಲಸಕ್ಕೆ ಬೇಕಾಗಿದ್ದಾರೆ. (25,000-42,000) 7th 10th Any Degree. Ph: 8792798168/ 8971776882.

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9008835841.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381.

ಪ್ರವಾಸ

Travel Agencies

ನೇಪಾಳ ಪ್ರವಾಸ 9 ದಿನಗಳು ಚಾರ್ಧಾಮ್ ಯಾತ್ರ 13 ದಿನ ಪೂರಿ ಜಗನ್ನಾಥ ಪ್ರವಾಸ 3ದಿನ ಗುಜರಾತ್ ಪ್ರವಾಸ 8 ದಿನಗಳ ಶಿರಡಿಪ್ರವಾಸ 3 ದಿನ ಸುವರ್ಣಯಾತ್ರ: 6360146483/ 9019462508

Travel

★ಶ್ರೀಶ್ರೇಯಸ್ ಟೂರ್ಸ್★ 03.10.2025 01/21.11.2025 06.12.2025 15ದಿನಗಳು ಅಖಂಡ ಮಧ್ಯಪ್ರದೇಶರಾಜ್ಯ (ಅಮರಕಂಠಕ, ಮಯ್ಯಾರ್ ಸಹಿತ).12.09.2025 03/24.10.2025 01/10.11.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್ 25.10.2025 18.11.2025, 10.12.2025 21ದಿನಗಳು ಈಶಾನ್ಯ ಭಾರತದ(ಸೆವೆನ್ ಸಿಸ್ಟರ್ಸ್)ಅಸ್ಸಾಂ ಅರುಣಾಚಲ,ಮೇಘಾಲಯ ಮಣಿಪುರ,ತ್ರಿಪುರ,ನಾಗಲ್ಯಾಂಡ್ ಮಿಝೋರಾಂ.22.09.2025 03.10.2025,03.11.2025 10ದಿನಗಳು ಮಹಾರಾಷ್ಟ್ರದ 5ಜ್ಯೋತಿರ್ಲಿಂಗ,ಶಿರಡಿ. ಪಂಡರಾಪುರ,ಕೊಲ್ಹಾಪುರ ಅಷ್ಟವಿನಾಯಕ,ಇತರೆ.23.09.25 03.10.2025 7ದಿನಗಳು ಅಖಂಡ ಒರಿಸ್ಸಾ,ಕಲ್ಕತ್ತಾ ದೇವಘರ್(ಜಾರ್ಖಂಡ್) 8073824856 9206979202 9606032154

★8.09.2025 11ದಿನ★ ಗುಜರಾತ್,ಮಧ್ಯಪ್ರದೇಶ. 15.09.2025 8ದಿನ ಮಧ್ಯಪ್ರದೇಶ,ಮಹಾರಾಷ್ಟ್ರ ಜ್ಯೋತಿರ್ಲಿಂಗ,ಶಿರಡಿ ಪ್ರವಾಸ. 24.10.2025 11ದಿನ ರಾಯಲ್ ರಾಜಸ್ಥಾನ ಪ್ರವಾಸ. 04.10.2025 12ದಿನ ಆಯೋಧ್ಯೆ,ನೇಪಾಳ,ಮುಕ್ತಿನಾಥ ಬೈದ್ಯನಾಥ.ಆರ್.ಗಾಂಧಿ ಟೂರ್ಸ್(ರಿ) 8861545809/ 9945445809

★ಶ್ರೀಶ್ರೇಯಸ್ ಟೂರ್ಸ್★ 09.09.2025,03.10.2025 12ದಿನಗಳು ಚಾರ್‌ದಾಮ್ ಯಾತ್ರೆ ವಿಶೇಷ.28.08.2025 04.10.2025.10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ 04.09.2025,04.10.2025 10ದಿನಗಳು ಅಖಂಡ ತೆಲಂಗಾಣ ಆಂಧ್ರರಾಜ್ಯ ವಿಜಯವಾಡ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಸಿಂಹಾಚಲಂ,ಅರಕು,ಶ್ರೀಕೂರ್ಮಂ ಭದ್ರಾಚಲಂ,ವಾರಂಗಲ್ ಯಾದಗಿರಿಗುಟ್ಟ,ಸ್ವರ್ಣಗಿರಿ ಶ್ರೀರಾಮಾನುಜ.23.09.2025 06ದಿನಗಳು ಸಂಪೂರ್ಣ ಅಹೋಬಲಂ,ನವನಂದಿ ಯಾಗಂಟಿ,ಬೇಲಂಗುಹೆ,ಶ್ರೀಶೈಲಂ ಮಂತ್ರಾಲಯಂ.09.09.2025 26.10.2025 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ) 23.09.2025,26.10.2025 07ದಿನಗಳು ನೈಮಿಷರಣ್ಯಾ ಅಯೋಧ್ಯ,ಪ್ರಯೋಗ,ಕಾಶಿ, ಗಯಾ,ದೇವಘರ್.24.10.2025 10ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ.24.10.2025 12ದಿನಗಳು ಅಖಂಡ ರಾಜಸ್ಥಾನ ರಾಜ್ಯ(ರಣಕ್‌ಪುರ ಸಹಿತ) 8073824856 9206979202 9606032154

ಸಾರ್ವಜನಿಕ ಪ್ರಕಟಣೆ

ಬಣ್ಣಾರಿ ಅಮ್ಮನ್ ಶುಗರ್ಸ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ನಂ.1212, ತ್ರಿಚಿ ರಸ್ತೆ, ಕೊಯಮತ್ತೂರು–641018
ಸಾರ್ವಜನಿಕ ತಿಳುವಳಿಕೆ
ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಅಳಗಂಚಿ ಗ್ರಾಮದಲ್ಲಿರುವ ನಮ್ಮ ಸಕ್ಕರೆ ಘಟಕದ ಸಾಮರ್ಥ್ಯವನ್ನು 7500 ಟಿ.ಸಿ.ಡಿ ಇಂದ 10000 ಟಿ.ಸಿ.ಡಿಗೆ ಹಾಗೂ ಡಿಸ್ಟಿಲರಿ ಘಟಕದ ಸಾಮರ್ಥ್ಯವನ್ನು 150 ಕೆ.ಎಲ್.ಪಿ.ಡಿ ಇಂದ 200 ಕೆ.ಎಲ್.ಪಿ.ಡಿಗೆ ವಿಸ್ತರಿಸಲು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಐ.ಎ.ವಿಭಾಗ, ಭಾರತ ಸರ್ಕಾರ, ನವದೆಹಲಿರವರು ಪರಿಸರ ವಿಮೋಚನಾ ಪತ್ರವನ್ನು ನೀಡಿರುತ್ತಾರೆ. ಸದರಿ ಪರಿಸರ ವಿಮೋಚನಾ ಪತ್ರದ ಪ್ರತಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಲ್ಲಿ ಮತ್ತು ಸಚಿವಾಲಯದ ವೆಬ್ ಸೈಟ್ https://parivesh.nic.in ನಲ್ಲಿ ಲಭ್ಯವಿರುತ್ತದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಉಪೇಂದ್ರ ನಿರ್ದೇಶನ ನನಗಿಷ್ಟ ಎಂದ ರಜನಿಕಾಂತ್

ರಜನಿಕಾಂತ್, ಅಮೀರ್ ಖಾನ್, ನಾಗಾರ್ಜುನ, ಉಪೇಂದ್ರ ಸೇರಿದಂತೆ ಬಹುಭಾಷಾ ತಾರೆಗಳಿರುವ 'ಕೂಲಿ' ಚಿತ್ರ ಇಂದು (ಆ.14) ತೆರೆ ಕಾಣುತ್ತಿದೆ. ಇತ್ತೀಚೆಗಷ್ಟೇ ಸಿನಿಮಾ ಬಿಡುಗಡೆ ಪೂರ್ವ ಕಾರ್ಯಕ್ರಮ ನಡೆದಿದ್ದು, ಕನ್ನಡ ನಟ, ನಿರ್ದೇಶಕ ಉಪೇಂದ್ರ ಕುರಿತು ರಜನಿಕಾಂತ್ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

ರಜನಿಕಾಂತ್ ಚಿತ್ರಗಳೆಂದರೆ ಮೊದಲಿನಿಂದಲೂ ಅಭಿಮಾನಿಗಳಿಗೆ ಹಬ್ಬದ ವಾತಾವರಣ. ತಮಿಳುನಾಡು ಮಾತ್ರವಲ್ಲದೇ ಕರ್ನಾಟಕದಲ್ಲಿಯೂ ಅವರ ಅಭಿಮಾನಿಗಳ ಕ್ರೇಜ್ ಹೆಚ್ಚಿದೆ. ಸದ್ಯ ಅವರ 'ಕೂಲಿ' ಚಿತ್ರದ ಅಬ್ಬರ ಜೋರಾಗಿದೆ. ಇದರಲ್ಲಿ ನಟಿಸಿರುವ ಕನ್ನಡದ ನಟ, ನಿರ್ದೇಶಕ ಉಪೇಂದ್ರ ಗಮನ ಸೆಳೆಯುತ್ತಿದ್ದಾರೆ. 'ಎ', 'ಓಂ'ನಂಥ ವಿಭಿನ್ನ ಚಿತ್ರಗಳನ್ನು ನೀಡಿರುವ ಉಪೇಂದ್ರ ಈ ತಲೆಮಾರಿನ ಅದೆಷ್ಟೋ ನಿರ್ದೇಶಕರಿಗೆ ಪ್ರೇರಣೆ, ಸ್ಫೂರ್ತಿ. 'ಕೂಲಿ' ನಿರ್ದೇಶಕ ಲೋಕೇಶ್ ಕನಗರಾಜ್, 'ಕೆಜಿಎಫ್' ನಿರ್ದೇಶಕ ಪ್ರಶಾಂತ್ ನೀಲ್ ಮೊದಲಾದವರು ಉಪೇಂದ್ರ ಕುರಿತು ಈ ಹಿಂದೆ ಮೆಚ್ಚುಗೆ ಮಾತುಗಳನ್ನಾಡಿದ್ದರು. ಇದೀಗ ರಜನಿಕಾಂತ್ ಕೂಡ ಉಪೇಂದ್ರ ಅವರೊಳಗಿನ ನಿರ್ದೇಶಕನನ್ನು ಶ್ಲಾಘಿಸಿದ್ದಾರೆ.

'ಭಾರತದಲ್ಲಿರುವ ಅತ್ಯಂತ ಪ್ರತಿಭಾನ್ವಿತ ನಿರ್ದೇಶಕರುಗಳಿಗೆ ಸ್ಫೂರ್ತಿ ಉಪೇಂದ್ರ. ಕನ್ನಡ ಚಿತ್ರರಂಗದವರಷ್ಟೇ ಅಲ್ಲ ಹಿಂದಿ, ತೆಲುಗು, ಮಲಯಾಳ, ತಮಿಳು ಸಿನಿಮಾ ಮಂದಿಯೂ ಉಪೇಂದ್ರ ಅವರಿಂದ ಸಾಕಷ್ಟು ಕಲಿತಿದ್ದಾರೆ. ಉಪೇಂದ್ರ ನಟರಾಗಿ ಅಲ್ಲ, ನಿರ್ದೇಶಕರಾಗಿ ಚಿತ್ರರಂಗಕ್ಕೆ ಬಂದವರು. ಉಪೇಂದ್ರ ನಟನೆಗಿಂತ ನಿರ್ದೇಶನ ನನಗೆ ಹೆಚ್ಚು ಇಷ್ಟ. ಅವರು ಶಿವರಾಜ್‌ಕುಮಾರ್ ಜತೆ 'ಓಂ' ಸಿನಿಮಾ ಮಾಡಿದ್ದರು. ನಮಗೆ ಇಲ್ಲಿ ಹೇಗೆ 'ಬಾಷಾ' ಚಿತ್ರವೋ, ಅಲ್ಲಿ 'ಓಂ'. ಈ ಸಿನಿಮಾ ನನ್ನ 'ಬಾಷಾ' ಚಿತ್ರಕ್ಕಿಂತ ಹತ್ತು ಪಟ್ಟು ಉತ್ತಮ ಸಿನಿಮಾ. ಈಗ ಲೋಕೇಶ್ ಕನಗರಾಜ್ ಮಾಡುತ್ತಿರುವ ನಾನ್‌ಲೀನಿಯರ್ ಸಿನಿಮಾಗಳನ್ನು ಉಪೇಂದ್ರ ಆಗಲೇ ಮಾಡಿಬಿಟ್ಟಿದ್ದಾರೆ' ಎಂದು ರಜನಿಕಾಂತ್ ಶ್ಲಾಘಿಸಿದ್ದಾರೆ.

ರಜನಿ ಎಂಬ ದ್ರೋಣಾಚಾರ್ಯ:

ಕಾರ್ಯಕ್ರಮದಲ್ಲಿ ಮಾತನಾಡಿದ ಉಪೇಂದ್ರ, 'ಎಲ್ಲರಿಗೂ ನಮಸ್ಕಾರ' ಎಂದು ಕನ್ನಡದಲ್ಲಿಯೇ ಮಾತು ಪ್ರಾರಂಭಿಸಿದರು. '25 ವರ್ಷಗಳ ಹಿಂದೆ ನಾನು ರಜನಿಕಾಂತ್ ಅವರನ್ನು ಭೇಟಿ ಮಾಡಿದ್ದೆ. ಅದು ನನ್ನ ಜೀವನದಲ್ಲಿ ಎಂದೂ ಮರೆಯಲಾಗದ ಕ್ಷಣ. ಏಕಲವ್ಯ ಹೇಗೆ ದ್ರೋಣಾಚಾರ್ಯರನ್ನು ಅನುಸರಿಸಿದನೋ ಹಾಗೆಯೇ ನಾನು ರಜನಿ ಅವರನ್ನು ಅನುಸರಿಸುತ್ತಾ ಬಂದಿದ್ದೀನಿ. ಬಾಲಿವುಡ್, ಹಾಲಿವುಡ್, ಸ್ಯಾಂಡಲ್‌ವುಡ್, ಟಾಲಿವುಡ್ ಎಲ್ಲ ಚಿತ್ರರಂಗದಲ್ಲಿಯೂ ಸ್ಟಾರ್ ನಟರು ಇದ್ದಾರೆ. ಆದರೆ ಆ ಎಲ್ಲ ಸ್ಟಾರ್ ನಟರೂ ಕೂಡ ಮೊದಲ ದಿನ ಮೊದಲ ಶೋ ನೋಡುವುದು ರಜನಿಕಾಂತ್ ಸಿನಿಮಾವನ್ನು. ಆ ದ್ರೋಣಾಚಾರ್ಯ, ಏಕಲವ್ಯನಿಂದ ಬೆರಳು ತೆಗೆದುಕೊಂಡರು. ಆದರೆ ರಜನಿಕಾಂತ್, ಈ ಏಕಲವ್ಯನ ಬೆರಳು ಹಿಡಿದು 'ಕೂಲಿ' ಎಂಬ ಪ್ರಪಂಚಕ್ಕೆ ಕರೆದುಕೊಂಡು ಬಂದರು' ಎಂದಿದ್ದಾರೆ ಉಪೇಂದ್ರ.

'ಅವರ ಪ್ರತಿ ವಿಡಿಯೊವನ್ನು ಹತ್ತಿಪ್ಪತ್ತು ಬಾರಿ ನೋಡುತ್ತಲೇ ಇರುತ್ತೀನಿ. ಅದು ಮನೋರಂಜನೆಗಾಗಿ ಅಲ್ಲ, ಬದಲಿಗೆ ಜ್ಞಾನೋದಯಕ್ಕಾಗಿ. 'ಕೂಲಿ' ಸಿನಿಮಾ ಪ್ರೇಮಿಗಳಿಗೆ ಹಬ್ಬವಿದ್ದಂತೆ' ಎಂದು ಹೇಳಿದರು.



2000 ಪ್ರದರ್ಶನ

ದಕ್ಷಿಣ ಭಾರತದ ಹಲವು ಪ್ರಮುಖ ನಗರಗಳಲ್ಲಿ ಮೊದಲ ದಿನದ ಬಹುತೇಕ ಶೋಗಳು ಹೌಸ್‌ಫುಲ್ ಆಗಿವೆ. ಕೆಲ ಕಂಪನಿಗಳು 'ಕೂಲಿ' ಚಿತ್ರಕ್ಕಾಗಿ ರಜೆಯನ್ನೂ ಘೋಷಿಸಿವೆ. ತಮಿಳುನಾಡಿನಲ್ಲಿ ಟಿಕೆಟ್ ದರ ಉಳಿದ ಕಡೆಗಳಿಂತ ತುಸು ಕಡಿಮೆ ಇದೆ. ಕರ್ನಾಟಕದಲ್ಲಿ ಜಯಣ್ಣ ಫಿಲ್ಮ್ಸ್ ಸಿನಿಮಾ ವಿತರಣೆ ಹಕ್ಕು ಪಡೆದುಕೊಂಡಿದೆ. ಬೆಂಗಳೂರಿನಲ್ಲಿ ಟಿಕೆಟ್ ದರ ₹150ರಿಂದ ₹1000 ತನಕವಿದೆ. ಏಕಪರದೆ ಚಿತ್ರಮಂದಿರಗಳು ಕೂಡ ₹400–₹500ಗೆ ಟಿಕೆಟ್ ಮಾರಾಟ ಮಾಡುತ್ತಿವೆ. '200ಕ್ಕೂ ಹೆಚ್ಚು ಏಕಪರದೆ ಚಿತ್ರಮಂದಿರಗಳಲ್ಲಿ 800ಕ್ಕೂ ಅಧಿಕ ಶೋಗಳಿವೆ. ಮಲ್ಟಿಪ್ಲೆಕ್ಸ್ ಪ್ರದರ್ಶನ ಸೇರಿ ರಾಜ್ಯದಲ್ಲಿ 2000ಕ್ಕೂ ಸ್ಕ್ರೀನ್‌ಗಳಲ್ಲಿ ಸಿನಿಮಾ ಪ್ರದರ್ಶನಗೊಳ್ಳಲಿದೆ' ಎಂದಿದೆ ವಿತರಣ ಸಂಸ್ಥೆ.

ಕೊನೆ ಹಂತದಲ್ಲಿ 'ಸರ್ಕಾರಿ ನ್ಯಾಯಬೆಲೆ ಅಂಗಡಿ'

ರಾಗಿಣಿ

ನಟಿ ರಾಗಿಣಿ ಮುಖ್ಯಭೂಮಿಕೆಯಲ್ಲಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಚಿತ್ರೀಕರಣ ಮುಕ್ತಾಯದ ಹಂತ ತಲುಪಿದೆ. 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಮತ್ತು ಸಾರ್ವಜನಿಕ ಪಡಿತರ ವ್ಯವಸ್ಥೆಯ ಸುತ್ತ ನಡೆಯುವ ಕಥಾಹಂದರವನ್ನು ಹೊಂದಿರುವ ಚಿತ್ರಕ್ಕೆ ಸಾತ್ವಿಕ ಪವನ ಕುಮಾರ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಗ್ರಾಮೀಣ ಭಾಗದಲ್ಲಿ ಪಡಿತರ ವಿತರಣೆಯಲ್ಲಿ ನಡೆಯುವ ಆಗು-ಹೋಗುಗಳ ಸುತ್ತ ಇಡೀ ಚಿತ್ರದ ಕಥೆ ಸಾಗುತ್ತದೆ. ಕನ್ನಡ ಚಿತ್ರರಂಗದಲ್ಲಿ ಇಲ್ಲಿಯವರೆಗೆ ಗ್ಲಾಮರಸ್ ಪಾತ್ರಗಳಲ್ಲಿ ಗಮನ ಸೆಳೆದಿದ್ದ ನಟಿ ರಾಗಿಣಿ ದ್ವಿವೇದಿ, ಇದೇ ಮೊದಲ ಬಾರಿಗೆ ಹಳ್ಳಿಯ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕುಮಾರ ಬಂಗಾರಪ್ಪ, ದೊಡ್ಡಣ್ಣ ಮೊದಲಾದವರು ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ' ಎಂದರು ನಿರ್ದೇಶಕರು.

'ಇದೊಂದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾ. ಹಳ್ಳಿ ಹುಡುಗಿಯೊಬ್ಬಳು ತನ್ನ ಊರಿನ ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ನಡೆಯುವ ಭ್ರಷ್ಟ ವ್ಯವಸ್ಥೆಯ ವಿರುದ್ಧ ಹೇಗೆ ಹೋರಾಡುತ್ತಾಳೆ ಎಂಬುದೇ ನನ್ನ ಪಾತ್ರ. ಮಂಡ್ಯ ಜಿಲ್ಲೆಯ ಹಳ್ಳಿಯ ಪರಿಸರದಲ್ಲಿ ಇಡೀ ಸಿನಿಮಾ ಮೂಡಿಬರುತ್ತಿದೆ. ಸಿನಿಮಾ ತುಂಬ ಚೆನ್ನಾಗಿ ಬರುತ್ತಿದೆ' ಎಂದರು ರಾಗಿಣಿ.

'ಹಳ್ಳಿಯ ಜನರಿಗೆ ಹತ್ತಿರವಾಗುವಂಥ ಕಥೆ ಈ ಸಿನಿಮಾದಲ್ಲಿದೆ. ಬಹು ಸಮಯದ ನಂತರ ನಾನು ಈ ಸಿನಿಮಾದಲ್ಲಿ ಹಳ್ಳಿಯ ಜನಸಾಮಾನ್ಯ ವ್ಯಕ್ತಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಆಹಾರ ಭದ್ರತೆಯ ಮೇಲೆ ಮಾಡಿರುವ ಈ ಸಿನಿಮಾದಲ್ಲಿ ಒಂದು ಸಂದೇಶವಿದೆ' ಎಂದರು ಕುಮಾರ ಬಂಗಾರಪ್ಪ

'ಜಯಶಂಕರ ಟಾಕೀಸ್' ಬ್ಯಾನರಿನಲ್ಲಿ ಶ್ರೀಮತಿ ತೇಜು ಮೂರ್ತಿ ಮತ್ತು ಎಸ್. ಪದ್ಮಾವತಿ ಬಂಡವಾಳ ಹೂಡಿದ್ದಾರೆ. ಬಿ. ರಾಮಮೂರ್ತಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಚಿತ್ರದ ಹಾಡುಗಳಿಗೆ ಅನಂತ ಆರ್ಯನ್ ಸಂಗೀತ ಸಂಯೋಜಿಸಿದ್ದು, ನಿರ್ದೇಶಕರೇ ಛಾಯಾಚಿತ್ರಗ್ರಹಣದ ಹೊಣೆ ಹೊತ್ತುಕೊಂಡಿದ್ದಾರೆ. ಮಂಡ್ಯ ಜಿಲ್ಲೆಯ ದೊಡ್ಡರಸಿನಕೆರೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ರಾಜಕಾರಣಿ ಎಲ್.ಆರ್. ಶಿವರಾಮೇಗೌಡ ಕೂಡ ಈ ಸಿನಿಮಾದ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

'ನೋಡಿದ್ದು ಸುಳ್ಳಾಗಬಹುದು' ಎಂದ ಹೊಸಬರು

ಪಲ್ಲವಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ನೋಡಿದ್ದು ಸುಳ್ಳಾಗಬಹುದು' ಚಿತ್ರದ 'ಕನಸುಗಳ ಮೆರವಣಿಗೆ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿಜಯ್ ಚಲಪತಿ ನಿರ್ದೇಶನದ ಚಿತ್ರವಿದು.

ಅನಿರುದ್ಧ್ ಶಾಸ್ತ್ರಿ ಬರೆದು, ಗುಮ್ಮಿನೆನಿ ವಿಜಯ್ ಸಂಗೀತ ಸಂಯೋಜಿಸಿರುವ ಈ ಹಾಡಿಗೆ ಅನಿರುದ್ಧ್ ಶಾಸ್ತ್ರಿ ಮತ್ತು ಪೃಥ್ವಿ ಭಟ್ ಧ್ವನಿಯಾಗಿದ್ದಾರೆ. 'ನನಗೆ ಹತ್ತು ವರ್ಷಗಳಿಂದ ಚಿತ್ರರಂಗದೊಂದಿಗೆ ನಂಟಿದೆ. 'ಪೊಗರು' ಸೇರಿದಂತೆ ಹಲವು ಚಿತ್ರಗಳಿಗೆ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ಸ್ವತಂತ್ರ ನಿರ್ದೇಶಕನಾಗಿ ಇದು ಮೊದಲ ಚಿತ್ರ. ಚಿತ್ರಕ್ಕೆ ಇದೇ ಶೀರ್ಷಿಕೆ ಏಕೆ? ಎಂಬುದು ಚಿತ್ರ ನೋಡಿದಾಗ ತಿಳಿಯುತ್ತದೆ. ಇದೊಂದು ನೈಜ ಘಟನೆ ಆಧಾರಿತ ಚಿತ್ರ. ಈಗಾಗಲೇ ಚಿತ್ರೀಕರಣ ಪೂರ್ಣವಾಗಿ, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಕನ್ನಡ ಹಾಗೂ ತೆಲುಗಿನಲ್ಲಿ ಚಿತ್ರ ಮೂಡಿಬಂದಿದೆ' ಎಂದರು ನಿರ್ದೇಶಕರು.

ಅನಿಲ್ ಕುಮಾರ್ ಕೆ.ಆರ್ ನಿರ್ಮಾಣ ಮಾಡುವುದರೊಂದಿಗೆ ನಾಯಕನಾಗಿಯೂ ನಟಿಸಿದ್ದಾರೆ. ಪಲ್ಲವಿ ನಾಯಕಿ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಗುಮ್ಮಿನೆನಿ ವಿಜಯ್ ಎರಡು ಹಾಡುಗಳಿಗೆ ಹಾಗೂ ಮಿಹಿರಾಮ್ಸ್ ಎರಡು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಕೆ.ವಿ.ಕಿರಣ್ ಛಾಯಾಚಿತ್ರಗ್ರಹಣ, ಶ್ರೀನಿವಾಸ್ ಕಲಾಲ್ ಸಂಕಲನವಿದೆ.

'ಕ್ರೀಡಾ ಕೇಂದ್ರ' ಕಾಮಗಾರಿ ನನೆಗುದಿಗೆ

ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ₹35 ಕೋಟಿ ವೆಚ್ಚದ ಯೋಜನೆ

• ಸತೀಶ ಬಿ.

ಹುಬ್ಬಳ್ಳಿ: ಆಟಗಾರರಿಗೆ ಉತ್ತಮ ಸೌಲಭ್ಯ ಒದಗಿಸಲು ಇಲ್ಲಿನ ರಾಜ ನಗರದಲ್ಲಿನ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ನಿರ್ಮಿಸಲಾಗುತ್ತಿರುವ 'ಕ್ರೀಡಾ ಕೇಂದ್ರ' (ಕ್ಲಬ್‌ಹೌಸ್) ಕಾಮಗಾರಿ ಎರಡೂವರೆ ವರ್ಷಗಳಿಂದ ನನೆಗುದಿಗೆ ಬಿದ್ದಿದೆ.

₹35 ಕೋಟಿ ಮೊತ್ತದ ಯೋಜನೆ ಇದಾಗಿದ್ದು, 2015-16ನೇ ಸಾಲಿನಲ್ಲಿ ಕಾಮಗಾರಿ ಆರಂಭವಾಗಿತ್ತು. 2022ರ ನವೆಂಬರ್‌ನಿಂದ ಕಾಮಗಾರಿ ಸ್ಥಗಿತವಾಗಿದೆ. ₹30 ಕೋಟಿ ಮೊತ್ತದ ಕಾಮಗಾರಿ ನಡೆದಿದ್ದು, ಚಾವಣಿಗೆ ಅಳವಡಿಸಿದ್ದ ಪಿಒಪಿ ಹಾಳಾಗಿದ್ದು, ಮಳೆ ನೀರು ಸೋರಿ ಗೋಡೆಗಳು ಪಾಚಿಗಟ್ಟಿವೆ. ಈಗಾಗಲೇ ಅಳವಡಿಸಿರುವ ಸಾಮಗ್ರಿಗಳು ಸಹ ಹಾಳಾಗಿವೆ.

ಆಟಗಾರರ ಡ್ರೆಸ್ಸಿಂಗ್ ಕೊಠಡಿ, ವೀಕ್ಷಕ ವಿವರಣೆಗಾರರ ಕೊಠಡಿ, ಈಜುಕೊಳ, ಆಟಗಾರರು ಉಳಿದುಕೊಳ್ಳಲು 60 ಬೆಡ್‌ಗಳ ಡಾರ್ಮೆಟರಿ, ಕ್ಲಬ್ ಸದಸ್ಯರಿಗಾಗಿ 22 ಕೊಠಡಿಗಳನ್ನು ನಿರ್ಮಿಸಲಾಗಿದೆ. ರೆಸ್ಟೋರೆಂಟ್, ಡೈನಿಂಗ್, ಕಿಚನ್, ಜಿಮ್, ಒಳವಿನ್ಯಾಸ ಸೇರಿದಂತೆ ಇನ್ನೂ ಕೆಲವು ಕಾಮಗಾರಿಗಳು ಬಾಕಿ ಇವೆ.

> **ಕಾಮಗಾರಿ ಪರಿಶೀಲನೆ ಬಾಕಿ ಇದ್ದು, ತಾಂತ್ರಿಕ ಕಾರಣಗಳಿಂದ ಕಾಮಗಾರಿ ಸ್ಥಗಿತವಾಗಿರಬಹುದು. ನನಗೆ ಹೆಚ್ಚಿನ ಮಾಹಿತಿ ಇಲ್ಲ. ಕಾಮಗಾರಿ ಯಾವಾಗ ಪ್ರಾರಂಭವಾಗುತ್ತದೆ ಎಂಬುದನ್ನು ಕೆಎಸ್‌ಸಿಎ ಅಧ್ಯಕ್ಷರನ್ನೇ ಕೇಳಬೇಕು**
> **ನಿಖಿಲ್ ಭೂಸದ್,**
> ನಿಮಂತ್ರಕ, ಕೆಎಸ್‌ಸಿಎ ಧಾರವಾಡ ವಲಯ

'ಪಂದ್ಯಗಳು ನಡೆದಾಗ ಆಟಗಾರರು, ಸಿಬ್ಬಂದಿ ಉಳಿದುಕೊಳ್ಳಲು ಜಿಮ್ಖಾನಾ ಕ್ಲಬ್, ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಬಾಡಿಗೆಗೆ ಪಡೆಯಲಾಗುತ್ತಿದೆ. ಕ್ರೀಡಾ ಕೇಂದ್ರದ ಕಾಮಗಾರಿ ಪೂರ್ಣಗೊಂಡರೆ ಇಲ್ಲಿಯೇ ಆಟಗಾರರಿಗೆ ವ್ಯವಸ್ಥೆ ಕಲ್ಪಿಸಬಹುದು. ವೆಚ್ಚ ಸಹ ಉಳಿತಾಯವಾಗುತ್ತದೆ' ಎಂದು ಕ್ರೀಡಾಪಟುಗಳು ತಿಳಿಸಿದರು.

'ಕೆಎಸ್‌ಸಿಎ ಪ್ರಸ್ತುತ ಆಡಳಿತ ಮಂಡಳಿ ಬಂದ ನಂತರ ಅಭಿವೃದ್ಧಿ ಸ್ಥಗಿತವಾಗಿದೆ. ಬೆಂಗಳೂರು ಆಚೆಗೆ ಇರುವ ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸಲು ಆಡಳಿತ ಮಂಡಳಿ ಆಸಕ್ತಿ ತೋರುತ್ತಿಲ್ಲ' ಎಂದು ಕೋಚ್ ಪ್ರಮೋದ್ ಕಾಮತ್ ತಿಳಿಸಿದರು.

'16.5 ಎಕರೆ ಕ್ರೀಡಾಂಗಣದ ಜಾಗ ಇದ್ದು, ಎಂಟು ಮುಖ್ಯ ಪಿಚ್, 10 ಅಭ್ಯಾಸ ಪಿಚ್ ಮತ್ತು 2 ಕಾಂಕ್ರೀಟ್ ಪಿಚ್‌ಗಳಿವೆ. ಶುಲ್ಕ ಪಾವತಿಸುತ್ತೇವೆ ಎಂದರೂ ಅಭ್ಯಾಸ ಪಂದ್ಯಗಳಿಗಾಗಿ ಕ್ರೀಡಾಂಗಣವನ್ನು ನೀಡುವುದಿಲ್ಲ. ಭಾರತ 'ಎ' ಮತ್ತು ನ್ಯೂಜಿಲೆಂಡ್ 'ಎ' ನಡುವಿನ ಪಂದ್ಯ, ಕೆಲವು ರಣಜಿ ಪಂದ್ಯಗಳನ್ನು ಹೊರತುಪಡಿಸಿದರೆ ಕಳೆದ ನಾಲ್ಕು ವರ್ಷಗಳಿಂದ ಬಿಸಿಸಿಐ ಪಂದ್ಯಗಳು ನಡೆದಿಲ್ಲ. ಇಲ್ಲಿನ ಮೂಲಸೌಕರ್ಯ ಕೊರತೆಯೇ ಅದಕ್ಕೆ ಕಾರಣ' ಎಂದು ದೂರಿದರು.



ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣದ ಕ್ರೀಡಾಕೇಂದ್ರದಲ್ಲಿ ಪಿಒಪಿ ಫಾಲ್ಸ್‌ಸೀಲಿಂಗ್ ಹಾಳಾಗಿದ್ದು, ನೀರು ಸೋರಿಕೆಯಾಗಿದೆ ಚಿತ್ರಗಳು: ಗೋವಿಂದರಾಜ ಜವಳಿ

'ಸದಸ್ಯತ್ವ ನೋಂದಣಿ ಸ್ಥಗಿತ'

ಕ್ರೀಡಾ ಕೇಂದ್ರ ನಿರ್ಮಾಣ ಕಾಮಗಾರಿ ಅಪೂರ್ಣಗೊಂಡಿರುವುದರಿಂದ ಸದಸ್ಯತ್ವ ನೋಂದಣಿ ಪ್ರಕ್ರಿಯೆ ಸಹ ಸ್ಥಗಿತವಾಗಿದೆ. ಹುಬ್ಬಳ್ಳಿ, ಬೆಳಗಾವಿ ಮತ್ತು ಬೆಂಗಳೂರು ಹೊರವಲಯದ ಆಲೂರು ಕ್ರೀಡಾಂಗಣದ ಕ್ರೀಡಾ ಕೇಂದ್ರಗಳಲ್ಲಿ ತಲಾ 250ರಂತೆ 750 ಜನರಿಗೆ ಸದಸ್ಯತ್ವ ನೀಡಲು ಉದ್ದೇಶಿಸಲಾಗಿತ್ತು. ಆಲೂರು ಕೇಂದ್ರದಲ್ಲಿ ಸದಸ್ಯತ್ವಕ್ಕೆ ₹10 ಲಕ್ಷ, ಹುಬ್ಬಳ್ಳಿಯಲ್ಲಿ ₹5 ಲಕ್ಷ ಮತ್ತು ಬೆಳಗಾವಿಯಲ್ಲಿ ₹5 ಲಕ್ಷ ನಿಗದಿಪಡಿಸಲಾಗಿತ್ತು.

ವಿದ್ಯಾಶಿಲ್ಪ ಅಕಾಡೆಮಿ, ಚಿನ್ಮಯ ವಿದ್ಯಾಲಯ ಮುಖಾಮುಖಿ

ಬೆಂಗಳೂರು: ವಿದ್ಯಾಶಿಲ್ಪ ಅಕಾಡೆಮಿ ಮತ್ತು ಚಿನ್ಮಯ ವಿದ್ಯಾಲಯ ತಂಡಗಳು ಇಲ್ಲಿ ನಡೆಯುತ್ತಿರುವ ಸೆಂಟನರಿ ಶೀಲ್ಡ್ 17 ವರ್ಷದೊಳಗಿನವರ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿದವು.

ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬುಧವಾರ ನಡೆದ ಮೊದಲ ಸೆಮಿಫೈನಲ್‌ನಲ್ಲಿ ವಿದ್ಯಾಶಿಲ್ಪ ಅಕಾಡೆಮಿಯು 5-1ರಿಂದ ಬಾಲ್ಡ್‌ವಿನ್ ಬಾಲಕರ ಶಾಲೆ ತಂಡವನ್ನು ಮಣಿಸಿತು.

ಟೂರ್ನಿಯ ಎರಡನೇ ಸೆಮಿಫೈನಲ್‌ನಲ್ಲಿ ಚಿನ್ಮಯ ವಿದ್ಯಾಲಯವು 5-3ರಿಂದ ಶೂಟೌಟ್‌ನಲ್ಲಿ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆ ವಿರುದ್ಧ ಜಯ ಗಳಿಸಿತು. ನಿಗದಿತ ವೇಳೆಯ ಆಟವು 1-1ರಿಂದ ಸಮವಾಗಿತ್ತು.

14 ವರ್ಷದ ಬಾಲಕರಿಗಾಗಿ ನಡೆಯುತ್ತಿರುವ ಎರಿಕ್ ವಾರ್ಘ್ ಸ್ಮಾರಕ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ವಿದ್ಯಾಶಿಲ್ಪ ಅಕಾಡೆಮಿಯು 1-0ಯಿಂದ ಚಿನ್ಮಯ ವಿದ್ಯಾಲಯ ಎದುರು ಗೆದ್ದಿತು. ಎರಡನೇ ಸೆಮಿಫೈನಲ್‌ನಲ್ಲಿ ಸೇಂಟ್ ಜೋಸೆಫ್ ತಂಡವು ಶೂಟ್‌ಔಟ್‌ನಲ್ಲಿ ಬಾಲ್ಡ್‌ವಿನ್ ತಂಡದ ವಿರುದ್ಧ 3-2 ಅಂತರದಿಂದ ಜಯಿಸಿತು.

ಫೈನಲ್ ಇಂದು:

17 ವರ್ಷದೊಳಗಿನವರು: ವಿದ್ಯಾಶಿಲ್ಪ ಅಕಾಡೆಮಿ–ಚಿನ್ಮಯ ವಿದ್ಯಾಲಯ (ಬೆಳಿಗ್ಗೆ 10.30)

14 ವರ್ಷದೊಳಗಿನವರು: ಸೇಂಟ್ ಜೋಸೆಫ್ ಶಾಲೆ – ವಿದ್ಯಾಶಿಲ್ಪ ಅಕಾಡೆಮಿ (ಬೆಳಿಗ್ಗೆ 9.30)

ಬಿಡ್ ಅನುಮೋದಿಸಿದ ಐಒಎ

ನವದೆಹಲಿ (ಪಿಟಿಐ): 2030ರ ಕಾಮನ್ವೆಲ್ತ್ ಕ್ರೀಡೆಗಳ ಆತಿಥ್ಯ ವಹಿಸಲು ಭಾರತ ಸಲ್ಲಿಸಿರುವ ಬಿಡ್‌ಅನ್ನು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಬುಧವಾರ ವಿಶೇಷ ಮಹಾಸಭೆಯಲ್ಲಿ ಅನುಮೋದಿಸಿತು.

'ಪದಕ ಗೆಲ್ಲುವ ಕ್ರೀಡೆಗಳನ್ನೂ ಸೇರ್ಪಡೆ ಮಾಡುವ ಮೂಲಕ ಭಾರತ ಒಳಗೊಳ್ಳುವಿಕೆಯೊಡನೆ ಕ್ರೀಡೆಗಳನ್ನು ನಡೆಸಲಿದೆ' ಎಂದು ಸಂಸ್ಥೆಯ ಉನ್ನತ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದರು.

ಅಹಮದಾಬಾದ್‌ಅನ್ನು ಆತಿಥ್ಯದ ನಗರವಾಗಿ ಹೆಸರಿಸಿ 2030ರ ಕ್ರೀಡೆಗಳನ್ನು ನಡೆಸಲು ಕೇಂದ್ರ ಸರ್ಕಾರ ಈಗಾಗಲೇ ಆಸಕ್ತಿಪತ್ರ ಸಲ್ಲಿಸಿದೆ. ಆದರೆ ಪ್ರಸ್ತಾವಗಳೊಂದಿಗೆ ಭಾರತವು ಆಗಸ್ಟ್ 31ರ ಗಡುವಿನ ಒಳಗೆ ಅಂತಿಮ ಬಿಡ್ ಸಲ್ಲಿಸಬೇಕಾಗುತ್ತದೆ.

ಅಹಮದಾಬಾದ್ ಜೊತೆಗೆ 2010ರಲ್ಲಿ ಆತಿಥ್ಯ ವಹಿಸಿದ್ದ ದೆಹಲಿ ಮತ್ತು ಭುವನೇಶ್ವರ ನಗರಗಳನ್ನೂ ಆತಿಥ್ಯಕ್ಕೆ ಪರಿಗಣಿಸಲಾಗುತ್ತದೆ ಎಂದು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಸುಮಾರು ಅರ್ಧಗಂಟೆ ನಡೆದ ಸಭೆಯ ನಂತರ ತಿಳಿಸಿದರು. ಅಂತಿಮವಾಗಿ ಆತಿಥ್ಯ ವಹಿಸುವ ನಗರ ಯಾವುದೆಂಬುದನ್ನು ಶೀಘ್ರವೇ ತಿಳಿಸಲಾಗುವುದು ಎಂದೂ ಹೇಳಿದರು.

'2026ರ ಗ್ಲಾಸ್ಗೊ ಕ್ರೀಡೆಗಳಲ್ಲಿ ಕೆಲವು ಆಟಗಳಿಗೆ ಕತ್ತರಿ ಹಾಕಲಾಗಿದೆ. ಆದರೆ ನಾವು 2010ರಲ್ಲಿ ನಡೆಸಿದಂತೆ ಪೂರ್ಣ ಪ್ರಮಾಣದಲ್ಲಿ ಕ್ರೀಡೆಗಳನ್ನು ನಡೆಸಲಿದ್ದೇವೆ' ಎಂದರು. ಗ್ಲಾಸ್ಗೊ ಕೂಟಕ್ಕೆ ಪ್ರಮುಖ ಕ್ರೀಡೆಗಳಾದ ಹಾಕಿ, ಬ್ಯಾಡ್ಮಿಂಟನ್, ಕುಸ್ತಿ, ಶೂಟಿಂಗ್ ಅನ್ನು ಕೈಬಿಡಲಾಗಿದೆ. ವೆಚ್ಚ ತಗ್ಗಿಸಲು ಆಯೋಜಕರು ಈ ನಿರ್ಧಾರಕ್ಕೆ ಬಂದಿದ್ದಾರೆ.

2030ರ ಆತಿಥ್ಯಕ್ಕೆ ಆಸಕ್ತಿ ತೋರಿದ್ದ ಕೆನಡಾ ಹಿಂದೆ ಸರಿದಿದೆ. ಹೀಗಾಗಿ ಭಾರತಕ್ಕೆ ಆತಿಥ್ಯ ದೊರೆಯುವ ಅವಕಾಶ ಸಾಧ್ಯತೆ ಹೆಚ್ಚಾಗಿದೆ.

ಪಿಕೆಎಲ್: ಯೋಧಾಸ್ ನಾಯಕರಾಗಿ ಸುಮಿತ್

ನವದೆಹಲಿ (ಪಿಟಿಐ): ಪ್ರತಿಭಾನ್ವಿತ ಡಿಫೆಂಡರ್, 26 ವರ್ಷ ವಯಸ್ಸಿನ ಸುಮಿತ್ ಸಂಗ್ವಾನ್ ಅವರನ್ನು ಪ್ರೊ ಕಬಡ್ಡಿ ಲೀಗ್‌ನ 12ನೇ ಆವೃತ್ತಿಯಲ್ಲಿ ಆಡುವ ತಂಡಕ್ಕೆ ನಾಯಕರನ್ನಾಗಿ ಯುಪಿ ಯೋಧಾಸ್ ಫ್ರಾಂಚೈಸಿಯು ಬುಧವಾರ ನೇಮಕ ಮಾಡಿದೆ. ಆಶು ಸಿಂಗ್ ಉಪನಾಯಕರಾಗಿದ್ದಾರೆ.

ಅನುಭವಿ ರೈಡರ್ ಪವನ್ ಸೆಹ್ರಾವತ್ ಅವರು ತಮಿಳ್ ತಲೈವಾಸ್ ತಂಡದ ನಾಯಕರಾಗಿ ನೇಮಕಗೊಂಡಿದ್ದಾರೆ. ಅರ್ಜುನ್ ದೇಸ್ವಾಲ್ ಉಪನಾಯಕರಾಗಿದ್ದಾರೆ.

ಪಟ್ನಾ ಪೈರೇಟ್ಸ್ ಫ್ರಾಂಚೈಸಿಯು ಅಂಕಿತ್ ಜಗ್ಲಾನ್ ಅವರನ್ನು ನಾಯಕರನ್ನಾಗಿ, ದೀಪಕ್ ಸಿಂಗ್ ಅವರನ್ನು ಉಪನಾಯಕರನ್ನಾಗಿ ಹೆಸರಿಸಿದೆ.

ಭಾರತ ಫುಟ್‌ಬಾಲ್ ತಂಡದ ಪೂರ್ಣಾವಧಿ ತರಬೇತುದಾರರಾಗಿ ಒಪ್ಪಂದಕ್ಕೆ ಸಹಿ

ಎರಡು ವರ್ಷ ಅವಧಿಗೆ ಖಾಲಿದ್ ಕೋಚ್

ನವದೆಹಲಿ (ಪಿಟಿಐ): ಖಾಲಿದ್ ಜಮೀಲ್ ಅವರು ಎರಡು ವರ್ಷಗಳ ಪೂರ್ಣ ಅವಧಿಗೆ ಭಾರತ ಸೀನಿಯರ್ ಫುಟ್‌ಬಾಲ್ ತಂಡದ ತರಬೇತುದಾರ ಹೊಣೆ ವಹಿಸಿಕೊಂಡಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಬುಧವಾರ ತಿಳಿಸಿದೆ. ಫಲಿತಾಂಶಗಳನ್ನು ಆಧರಿಸಿ ಮತ್ತೊಂದು ವರ್ಷಕ್ಕೆ ಮುಂದುವರಿಯುವ ಆಯ್ಕೆಯೂ ಅವರ ಮುಂದಿದೆ.

ಐಎಸ್‌ಎಲ್ ತಂಡವಾದ ಜಮ್‌ಶೆಡ್‌ಪುರ ತಂಡದ ಒಪ್ಪಂದವನ್ನು ಕೊನೆಗೊಳಿಸಿದ ನಂತರ ಅವರು ಎಐಎಫ್‌ಎಫ್ ಜೊತೆಗೆ ಪೂರ್ಣಾವಧಿ ಕೋಚ್ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ ಎಂದು ಫೆಡರೇಷನ್ ತಿಳಿಸಿದೆ.

ಬೆಂಗಳೂರಿನ ದ್ರಾವಿಡ್– ಪಡುಕೋಣೆ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ಆಗಸ್ಟ್ 15ರಿಂದ ತರಬೇತಿ ಶಿಬಿರ ನಡೆಸುವ ಮೂಲಕ ಅವರು ತಮ್ಮ ಕೆಲಸ ಆರಂಭಿಸಲಿದ್ದಾರೆ.

ತರಬೇತುದಾರರಾಗಿ ಅವರ ಪಾಲಿಗೆ ಸಿಎಎಫ್‌ಎ ನೇಷನ್ಸ್ ಕಪ್ ಟೂರ್ನಿಯು ಮೊದಲ ಸವಾಲು ಆಗಿದೆ. ಆ ಟೂರ್ನಿಯ ಬಿ ಗುಂಪಿನಲ್ಲಿರುವ ಭಾರತವು, ತಜಿಕಿಸ್ತಾನ (ಆ. 29ರಂದು), ಇರಾನ್ (ಸೆ. 1) ಮತ್ತು ಅಫ್ಗಾನಿಸ್ತಾನ (ಸೆ. 4) ತಂಡಗಳನ್ನು ಎದುರಿಸಲಿದೆ.

ಅಕ್ಟೋಬರ್‌ನಲ್ಲಿ ಎಎಫ್‌ಸಿಎ ಏಷ್ಯನ್ ಕಪ್ (2027ರ) ಅರ್ಹತಾ ಟೂರ್ನಿಯಲ್ಲಿ ಭಾರತ ಆಡಲಿದೆ. ಸಿಂಗಪುರದಲ್ಲಿ ಅಕ್ಟೋಬರ್ 9 ಮತ್ತು 14ರಂದು ಎರಡು ಪಂದ್ಯಗಳನ್ನು ಆಡಬೇಕಾಗಿದೆ.

'ರಾಷ್ಟ್ರೀಯ ತಂಡವನ್ನು ಕೋಚ್ ಆಗಿ ಮುನ್ನಡೆಸುವ ಹೊಣೆ ವಹಿಸಿರುವುದು ತಮಗೆ ಹೆಮ್ಮೆ ಮತ್ತು ಸಂತಸ ತಂದಿದೆ' ಎಂದು 48 ವರ್ಷ ವಯಸ್ಸಿನ ಜಮೀಲ್ ಪ್ರತಿಕ್ರಿಯಿಸಿದರು.

ಖಾಲಿದ್ ಜಮೀಲ್

ಸ್ಪೇನ್‌ನ ಮನೊಲೊ ಮಾರ್ಕ್ವೆಝ್ ಅವರು ಎಐಎಫ್‌ಎಫ್ ಒತೆ ಒಪ್ಪಂದವನ್ನು ಹೋದ ತಿಂಗಳು ಸಮ್ಮತಿಯೊಡನೆ ಕೊನೆಗೊಳಿಸಿದ ನಂತರ ಕೋಚ್ ಹುದ್ದೆ ತೆರವಾಗಿತ್ತು.

ಜಮೀಲ್ ಅವರು 2012ರ ನಂತರ ಸೀನಿಯರ್ ತಂಡಕ್ಕೆ ಕೋಚ್ ಆದ ಮೊದಲ ಭಾರತೀಯ ಎನಿಸಿದ್ದಾರೆ. ಆ ವರ್ಷ ಭಾರತದವರೇ ಆದ ಸಾವಿಯೊ ಮೆಡೀರಾ ಕೋಚ್ ಆಗಿದ್ದರು.

ಐಎಸ್‌ಎಲ್‌ನಲ್ಲಿ ಅವರು ಕೋಚ್ ಆಗಿ ಸಾಕಷ್ಟು ಅನುಭವ ಹೊಂದಿದ್ದಾರೆ. ಜಮ್‌ಷೆಡ್‌ಪುರ, ನಾರ್ತ್‌ಈಸ್ಟ್ ಯುನೈಟೆಡ್, ಐಜ್ವಾಲ್ ಎಫ್‌ಸಿ, ಈಸ್ಟ್ ಬೆಂಗಾಲ್, ಮೋಹನ್ ಬಾಗನ್ ಮತ್ತು ಮುಂಬೈ ಎಫ್‌ಸಿ ಅಂಥ ಪ್ರಮುಖ ತಂಡಗಳಿಗೆ ಅವರು ತರಬೇತುದಾರರಾಗಿ ಕೆಲಸ ಮಾಡಿದ್ದಾರೆ.

ಅದರಲ್ಲೂ 2016–17ನೇ ಸಾಲಿನಲ್ಲಿ ಅವರು ತರಬೇತುದಾರರಾಗಿದ್ದಾಗ ಐಜ್ವಾಲ್ ಎಫ್‌ಸಿ ಐಲೀಗ್ ಪ್ರಶಸ್ತಿ ಗೆದ್ದಿದ್ದು ಗಮನಸೆಳೆದಿತ್ತು. ಈ ವರ್ಷ ಅವರ ತರಬೇತಿಯಡಿ ಜಮ್‌ಷೆಡ್‌ಪುರ ತಂಡ ಸೂಪರ್ ಕಪ್ ಫೈನಲ್ ತಲುಪಿತ್ತು.

ಮಿಡ್‌ಫೀಲ್ಡರ್ ಆಗಿ ಜಮೀಲ್ ಭಾರತ ತಂಡದ ಪರ 15 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಸಂತೋಷ್ ಟ್ರೋಫಿಯಲ್ಲಿ ಮಹಾರಾಷ್ಟ್ರ ತಂಡವನ್ನು ಪ್ರತಿನಿಧಿಸಿದ್ದರು.

ಕನಿಕರ ವ್ಯಕ್ತಪಡಿಸಿದ ಬೈಚುಂಗ್ ಭುಟಿಯಾ

ಅತ್ಯಂತ ಕಠಿಣ ಸನ್ನಿವೇಶದಲ್ಲಿ ಭಾರತ ಫುಟ್‌ಬಾಲ್ ತಂಡದ ತರಬೇತು ಹೊಣೆ ವಹಿಸಿಕೊಂಡಿರುವ ಖಾಲಿದ್ ಜಮೀಲ್ ಅವರ ಬಗ್ಗೆ ದೇಶದ ದಿಗ್ಗಜ ಆಟಗಾರ ಬೈಚುಂಗ್ ಭುಟಿಯಾ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ.

'ಅವರು (ಜಮೀಲ್) ಬಹಳ ಬೇಡಿಕೆಗಳನ್ನು ಮುಂದಿಡುವ ಸಾಧ್ಯತೆಯಿಲ್ಲದ ಕಾರಣ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಅವರಿಗೆ ಆದ್ಯತೆ ನೀಡಿದೆ ಎಂದೂ ಲೇವಡಿ ಮಾಡಿದ್ದಾರೆ.

'ಎರಡು ವಿಶ್ವ ದರ್ಜೆಯ ಕೋಚ್‌ಗಳು ನಮ್ಮನ್ನು ಬಿಟ್ಟು ಹೊರನಡೆದರು. ಇಗೊರ್ ಸ್ಟಿಮಾಚ್ ಅವರು ಕ್ರೊವೇಷ್ಯಾ ತಂಡಕ್ಕೆ ಕೋಚ್ ಆಗಿದ್ದವರು. ಮನೊಲೊ ಮಾರ್ಕ್ವೆಝ್ ಅವರು ಮಹಾನ್ ತರಬೇತುದಾರರಲ್ಲಿ ಒಬ್ಬರಾಗಿದ್ದು, ಉತ್ತಮ ಹಿನ್ನೆಲೆ ಹೊಂದಿದವರು' ಎಂದು ಭುಟಿಯಾ ಅವರು ಫಿಡೆಲ್ ಕ್ಯಾಸ್ಟ್ರೊ ಸೆಂಟಿನರಿ ಫುಟ್‌ಬಾಲ್ ಕಪ್ ಪ್ರದರ್ಶನ ಪಂದ್ಯದ ನಂತರ ಪಿಟಿಐ ವಿಡಿಯೊಸ್‌ಗೆ ತಿಳಿಸಿದರು.

'ಈ ಇಬ್ಬರು ಕೋಚ್‌ಗಳಿಗೆ ಫೆಡರೇಷನ್ ಜೊತೆ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಈಗ ಫೆಡರೇಷನ್ ಹೇಳಿದ ಹಾಗೆ ಮಾಡುವ ವ್ಯಕ್ತಿಯನ್ನು ಕರೆತರುತ್ತಿದ್ದೀರಿ. ಇಂಥ ಪರಿಸ್ಥಿತಿಯಲ್ಲಿ ಕೋಚ್‌ಗಳು ಸ್ವತಂತ್ರವಾಗಿ ಯೋಚನೆ ಮಾಡುವುದಿಲ್ಲ ಮತ್ತು ಫೆಡರೇಷನ್ ಮುಂದೆ ಬೇಡಿಕೆಗಳನ್ನು ಇರಿಸುವುದಿಲ್ಲ' ಎಂದು ಹೇಳಿದರು.

'ದೇಶೀ ಕೋಚ್ ಆಗಿರುವ ಜಮೀಲ್ ಅವರು ರಾಷ್ಟ್ರೀಯ ತಂಡಕ್ಕೆ ಹೊಸಬರು. ತಂಡ ತುಂಬಾ ಸಂಕಷ್ಟದಲ್ಲಿರುವಾಗ ಈ ಹೊಣೆ ಹೊತ್ತುಕೊಂಡಿರುವ ಅವರ ಬಗ್ಗೆ ಕನಿಕರ ಮೂಡುತ್ತಿದೆ' ಎಂದು ಅವರು ಹೇಳಿದರು. ಮಂಗಳವಾರ ಸಂಸತ್ತಿನಲ್ಲಿ ಅಂಗೀಕಾರಗೊಂಡ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಯನ್ನು ಅವರು ಸ್ವಾಗತಿಸಿದರು.

ಕೊನೆಯ ಎಸೆತದಲ್ಲಿ ಹುಬ್ಬಳ್ಳಿಗೆ ಜಯ

ಮಹಾರಾಜ ಟ್ರೋಫಿ: ಮೊಹಮ್ಮದ್ ತಾಹಾ ಸತತ ಎರಡನೇ ಶತಕ

• ಆರ್.ಜಿತೇಂದ್ರ

ಮೈಸೂರು: ಕಡೆಯ ಎಸೆತದವರೆಗೂ ತೂಗುಯ್ಯಾಲೆಯಾಗಿದ್ದ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡವು ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ 2 ವಿಕೆಟ್‌ಗಳ ರೋಚಕ ಗೆಲುವು ದಾಖಲಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ20 ಟೂರ್ನಿಯ ಬುಧವಾರದ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ನೀಡಿದ 226 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಹುಬ್ಬಳ್ಳಿಯ ಎಸ್. ರಕ್ಷಿತ್ ಅವರು ಕಡೆಯ 3 ಎಸೆತಗಳಲ್ಲಿ 2 ಸಿಕ್ಸರ್, 1 ಬೌಂಡರಿ ಸಹಿತ 16 ರನ್ ಸಿಡಿಸಿ ತಂಡಕ್ಕೆ ಜಯ ತಂದಿತ್ತರು. ಮೈದಾನಕ್ಕೆ ನುಗ್ಗಿದ ಹುಬ್ಬಳ್ಳಿ ಆಟಗಾರರು ಸಂಭ್ರಮಾಚರಣೆ ನಡೆಸಿದರು.

ಪ್ರತೀಕ್ ಜೈನ್ ಎಸೆದ ಕಡೆಯ ಓವರ್‌ನಲ್ಲಿ ಹುಬ್ಬಳ್ಳಿ ಗೆಲುವಿಗೆ 17 ರನ್ ಬೇಕಿದ್ದು, ಮೊದಲ ಎಸೆತದಲ್ಲೇ ಸಮರ್ಥ್ ನಾಗರಾಜ್ ಗಾಯಗೊಂಡು ನಿವೃತ್ತರಾದರು. ಎರಡನೇ ಎಸೆತದಲ್ಲಿ ರಕ್ಷಿತ್ ಎರಡು ರನ್ ಗಳಿಸಿದರು. ಮೂರನೇ ಎಸೆತದಲ್ಲಿ ರಿತೇಶ್ ಭಟ್ಕಳ್ ರನೌಟ್ ಆದರು. ಕಡೆಗೆ ರಕ್ಷಿತ್ ಪಂದ್ಯದ ಗತಿ ಬದಲಿಸಿದರು.

ತಾಹಾ ಮತ್ತೊಂದು ಶತಕ: ಮಂಗಳವಾರವಷ್ಟೇ ಶತಕ ಸಿಡಿಸಿದ್ದ ಆರಂಭಿಕ ಆಟಗಾರ ಮೊಹಮ್ಮದ್ ತಾಹಾ ಬುಧವಾರ ಮತ್ತೊಂದು ಶತಕದ (101) ಮೂಲಕ ಹುಬ್ಬಳ್ಳಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. 53 ಎಸೆತದಲ್ಲಿ 8 ಬೌಂಡರಿ ಹಾಗೂ 7 ಸಿಕ್ಸರ್ ಸಹಿತ ಶತಕ ಬಾರಿಸಿದ ಅವರು, 17ನೇ ಓವರ್‌ನಲ್ಲಿ ಪ್ರತೀಕ್ ಎಸೆತದಲ್ಲಿ ಡೀಪ್ ಪಾಯಿಂಟ್‌ನಲ್ಲಿ ವಿದ್ಯಾಧರ ಪಾಟೀಲಗೆ ಕ್ಯಾಚಿತ್ತರು.

ರೋಹನ್ ಅರ್ಧಶತಕ: ಟಾಸ್ ಸೋತು ಬ್ಯಾಟ್ ಆರಂಭಿಸಿದ ಬೆಂಗಳೂರು ಬ್ಲಾಸ್ಟರ್ಸ್ ಪರ ಆರಂಭಿಕ ರೋಹನ್ ಪಾಟೀಲ (80) ಉಪಯುಕ್ತ ಕಾಣಿಕೆ ನೀಡಿದರು. ಲೀಲಾಜಾಲವಾಗಿ ಬ್ಯಾಟ್ ಬೀಸಿದ ಅವರು ಕೇವಲ 43 ಎಸೆತದಲ್ಲಿ 8 ಬೌಂಡರಿ ಹಾಗೂ 5 ಸಿಕ್ಸರ್ ಹೊಡೆದರು. ಮಯಾಂಕ್ ಅಗರವಾಲ್ (9) ಹಾಗೂ ಈ ಪಂದ್ಯದಲ್ಲಿ ತಂಡವನ್ನು ಮುನ್ನಡೆಸುತ್ತಿರುವ ಶುಭಾಂಗ್ ಹೆಗ್ಡೆ (9) ಬ್ಯಾಟಿಂಗ್‌ನಲ್ಲಿ ನಿರಾಸೆ ಮೂಡಿಸಿದರು. 7ನೇ ವಿಕೆಟ್‌ಗೆ ರೋಹನ್ ನವೀನ್ ಹಾಗೂ ಎಂ.ಜಿ. ನವೀನ್ ನಡುವೆ ಕೇವಲ 17 ಎಸೆತಗಳಲ್ಲಿ 54 ರನ್ ಜೊತೆಯಾಟವು ತಂಡದ ಸ್ಕೋರ್ ಹೆಚ್ಚಿಸಿತು.

ಸಂಕ್ಷಿಪ್ತ ಸ್ಕೋರ್: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 225 (ರೋಹನ್ ಪಾಟೀಲ 80 ಯಶ್‌ರಾಜ್ ಪೂಂಜ 43ಕ್ಕೆ 3, ಕೆ.ಸಿ. ಕಾರ್ಯಪ್ಪ 25ಕ್ಕೆ 2) **ಹುಬ್ಬಳ್ಳಿ ಟೈಗರ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 228 (ಮೊಹಮ್ಮದ್ ತಾಹಾ 101, ಅಭಿನವ್ ಮನೋಹರ್ 33, ಮೊಹಸೀನ್ ಖಾನ್ 24ಕ್ಕೆ2) **ಪಂದ್ಯದ ಆಟಗಾರ:** ಮೊಹಮ್ಮದ್ ತಾಹಾ

ಇಂದಿನ ಪಂದ್ಯಗಳು:

- ಮೈಸೂರು ವಾರಿಯರ್ಸ್ v/s ಮಂಗಳೂರು ಡ್ರ್ಯಾಗನ್ಸ್, ಮಧ್ಯಾಹ್ನ 3.15
- ಗುಲ್ಬರ್ಗ ಮಿಸ್ಟಿಕ್ಸ್ v/s ಬೆಂಗಳೂರು ಬ್ಲಾಸ್ಟರ್ಸ್, ಸಂಜೆ 7.15

ಬೆಂಗಳೂರು ಬ್ಲಾಸ್ಟರ್ಸ್ ಎದುರು ಕಡೆಯ ಎಸೆತದಲ್ಲಿ ಬೌಂಡರಿ ಸಿಡಿಸಿ ಗೆಲುವಿಗೆ ಕಾರಣರಾದ ಹುಬ್ಬಳ್ಳಿ ಟೈಗರ್ಸ್ ಆಟಗಾರ ಎಸ್. ರಕ್ಷಿತ್‌ರನ್ನು ಸಹ ಆಟಗಾರರು ಮುತ್ತಿ ಸಂಭ್ರಮಿಸಿದರು ಚಿತ್ರಗಳು: ಅನೂಪ್ ರಾಘ.ಟಿ.

ಮಂಗಳೂರು ಡ್ರ್ಯಾಗನ್ಸ್‌ಗೆ ಗೆಲುವು

ಮೈಸೂರು: ಕ್ರಾಂತಿಕುಮಾರ್ ಅಮೋಘ ಬೌಲಿಂಗ್ ನೆರವಿನಿಂದ ಮಂಗಳೂರು ಡ್ರ್ಯಾಗನ್ಸ್ ತಂಡವು ಬುಧವಾರ ನಡೆದ ಪಂದ್ಯದಲ್ಲಿ ಶಿವಮೊಗ್ಗ ಲಯನ್ಸ್ ಅನ್ನು 29 ರನ್ ಅಂತರದಿಂದ ಮಣಿಸಿತು.

ಮಂಗಳೂರು ನೀಡಿದ 180 ರನ್‌ಗಳ ಗುರಿ ಬೆನ್ನತ್ತಿದ್ದ ಶಿವಮೊಗ್ಗ ಪರ ಕೆ. ರೋಹಿತ್ (62) ಏಕಾಂಗಿ ಹೋರಾಟ ನಡೆಸಿದರು. ಕ್ರಾಂತಿಕುಮಾರ್ 36 ರನ್‌ಗೆ 5 ವಿಕೆಟ್ ಉರುಳಿಸಿ ಗಮನ ಸೆಳೆದರು.

ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ಪರ ವಿಕೆಟ್ ಕೀಪರ್ ಬಿ.ಆರ್. ಶರತ್ 31 ಎಸೆತದಲ್ಲಿ 70 ರನ್‌ಗಳ ಉಪಯುಕ್ತ ಕಾಣಿಕೆ ನೀಡಿದರು. ಶಿವಮೊಗ್ಗ ಪರ ವೇಗಿ ವಿ. ಕೌಶಿಕ್ 3 ವಿಕೆಟ್ ಉರುಳಿಸಿದರು.

ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 179 (ಬಿ.ಆರ್. ಶರತ್ 70, ಕೆ.ವಿ. ಅನೀಶ್, ವಿ. ಕೌಶಿಕ್ 23ಕ್ಕೆ 3, ಹಾರ್ದಿಕ್ ರಾಜ್ 28ಕ್ಕೆ 2) **ಶಿವಮೊಗ್ಗ ಲಯನ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 150 (ಕೆ. ರೋಹಿತ್ 62, ಕ್ರಾಂತಿಕುಮಾರ್ 36ಕ್ಕೆ 5, ಸಂತೋಷ್ ಸಿಂಗ್ 35ಕ್ಕೆ 2)

5 ವಿಕೆಟ್ ಪಡೆದ ಕ್ರಾಂತಿಕುಮಾರ್

ಚಟಿಕೆ ಸುದ್ದಿ

ಐಸಿಸಿ ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೆ ರೋಹಿತ್ ಶರ್ಮಾ

ದುಬೈ (ಪಿಟಿಐ): ಭಾರತ ತಂಡದ ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ ಅವರು ಕಳೆದ ಕೆಲವು ತಿಂಗಳುಗಳಿಂದ ಯಾವುದೇ ಅಂತರ ರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಆಡಿಲ್ಲ. ಆದರೂ ಐಸಿಸಿ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.

ಮೂರನೇ ಸ್ಥಾನದಲ್ಲಿದ್ದ ರೋಹಿತ್ ಅವರು ಒಂದು ಸ್ಥಾನ ಬಡ್ತಿ ಗಳಿಸಿ ಪಾಕಿಸ್ತಾನದ ಬಾಬರ್ ಆಜಂ ಅವರನ್ನು ಹಿಂದಿಕ್ಕಿದ್ದಾರೆ. ಈ ವಿಭಾಗದಲ್ಲಿ ಭಾರತದ ಶುಭಮನ್ ಗಿಲ್ ಅವರು ಅಗ್ರಸ್ಥಾನದಲ್ಲಿದ್ದಾರೆ. ನಾಲ್ಕನೇ ಸ್ಥಾನದಲ್ಲಿ ವಿರಾಟ್ ಕೊಹ್ಲಿ ಮುಂದುವರಿದಿದ್ದಾರೆ.

ರೋಹಿತ್ ಅವರ ಖಾತೆಯಲ್ಲಿ 756 ಅಂಕಗಳು ಮತ್ತು ಶುಭಮನ್ ಗಿಲ್ 784 ಅಂಕಗಳಿವೆ. ವಿರಾಟ್ ಅಂಕಗಳನ್ನು ಗಳಿಸಿದ್ದಾರೆ.

ರೋಹಿತ್ ಮತ್ತು ಕೊಹ್ಲಿ ಅವರು ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ಎದುರು ನಡೆಯಲಿರುವ 3 ಏಕದಿನ ಪಂದ್ಯಗಳ ಕ್ರಿಕೆಟ್ ಸರಣಿಯಲ್ಲಿ ಆಡಲು ಸಿದ್ಧತೆ ನಡೆಸುತ್ತಿದ್ದಾರೆ.

ಸುಶೀಲ್ ಜಾಮೀನು 'ಸುಪ್ರೀಂ'ನಲ್ಲಿ ವಜಾ

ನವದೆಹಲಿ (ಪಿಟಿಐ): ಇಲ್ಲಿನ ಛತ್ರಸಾಲ್ ಕ್ರೀಡಾಂಗಣದಲ್ಲಿ ಮಾಜಿ ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಅವರ ಕೊಲೆ ಪ್ರಕರಣದಲ್ಲಿ ಒಲಿಂಪಿಕ್ ಪದಕ ವಿಜೇತ ಸುಶೀಲ್ ಕುಮಾರ್ ಅವರಿಗೆ ನೀಡಲಾಗಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಗೊಳಿಸಿದೆ.

ಸಂಜಯ್ ಕರೋಲ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು, ಸುಶೀಲ್‌ಗೆ ಜಾಮೀನು ಮಂಜೂರು ಮಾಡಿದ ದೆಹಲಿ ಹೈಕೋರ್ಟ್‌ನ ಮಾರ್ಚ್ 4ರ ಆದೇಶವನ್ನು ತಳ್ಳಿಹಾಕಿತು. ಒಂದು ವಾರದೊಳಗೆ ಶರಣಾಗುವಂತೆ ಸುಶೀಲ್ ಅವರಿಗೆ ಸೂಚಿಸಲಾಗಿದೆ.

2021ರ ಮೇ 4ರಂದು ಸಾಗರ್ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಆರೋಪ ಸುಶೀಲ್ ಕುಮಾರ್ ಮತ್ತು ಇತರರ ಮೇಲೆ ಇದೆ.

ಇ.ಡಿ ವಿಚಾರಣೆಗೆ ರೈನಾ ಹಾಜರು

ನವದೆಹಲಿ (ಪಿಟಿಐ): ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಕ್ರಿಕೆಟಿಗ ಸುರೇಶ್ ರೈನಾ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ವಿಚಾರಣೆ ನಡೆಸಿದೆ.

ದೆಹಲಿಯಲ್ಲಿರುವ ಸಂಸ್ಥೆಯ ಕಚೇರಿಯ ಹೊರಗೆ ಇ.ಡಿ ಹಾಗೂ ಸಿಐಎಸ್‌ಎಫ್ ಸಿಬ್ಬಂದಿಯೊಂದಿಗೆ ರೈನಾ ಮಾತುಕತೆ ನಡೆಸಿರುವುದು ಕಂಡು ಬಂದಿದೆ.

'ಒನ್‌ಇಂಟುಬೆಟ್' ಹೆಸರಿನ ಬೆಟ್ಟಿಂಗ್ ಆ್ಯಪ್‌ಗೆ ಸಂಬಂಧಿಸಿದ ತನಿಖೆಯ ಭಾಗವಾಗಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಸುರೇಶ್ ರೈನಾ ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ.

ಮಾಸ್ ಮನರಂಜನೆಯ, ಶೋಲೆ ಚಲನಚಿತ್ರದ ಸುವರ್ಣ ಮಹೋತ್ಸವ ವರ್ಷವನ್ನು ಆಚರಿಸಲಾಗುತ್ತಿದೆ!

ಸೇಂಟ್ ಲೂಯಿ ರ‍್ಯಾಪಿಡ್ ಚೆಸ್: ಐದನೇ ಸ್ಥಾನದಲ್ಲಿ ಗುಕೇಶ್

ಸೇಂಟ್ ಲೂಯಿ (ಅಮೆರಿಕ) (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್, ಸೇಂಟ್ ಲೂಯಿ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯ ಎರಡನೇ ದಿನವಾದ ಮಂಗಳವಾರ ಹೆಚ್ಚೇನೂ ಗಮನ ಸೆಳೆಯಲಿಲ್ಲ. ಒಂದು ಪಂದ್ಯ ಸೋತ ಅವರು ಎರಡು ಡ್ರಾ ಮಾಡಿಕೊಂಡಿದ್ದು ಜಂಟಿ ಐದನೇ ಸ್ಥಾನ ಹಂಚಿಕೊಂಡಿದ್ದಾರೆ.

ಹತ್ತು ಮಂದಿ ಆಟಗಾರರು ಕಣದಲ್ಲಿರುವ ಈ ಟೂರ್ನಿಯು ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಕೊನೆಯ ಸ್ಥಾನದಲ್ಲಿದ್ದ ಸ್ಯಾಮ್ ಶಂಕ್ಲಾಂಡ್ (ಅಮೆರಿಕ) ಎದುರು ಆಘಾತ ಅನುಭವಿಸಿದ್ದ ಗುಕೇಶ್ ನಂತರ ಫ್ರೆಂಚ್ ಗ್ರ್ಯಾಂಡ್‌ಮಾಸ್ಟರ್ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಮತ್ತು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಡ್ರಾ ಮಾಡಿಕೊಂಡರು.

ಎರಡನೇ ದಿನದ ಕೊನೆಗೆ ಅಗ್ರ ಸ್ಥಾನವೂ ಬದಲಾಯಿತು. ಐದನೇ ಸುತ್ತಿನವರೆಗೆ ಮುನ್ನಡೆ ಸಾಧಿಸಿದ್ದ ಅಮೆರಿಕದ ಜಿಎಂ ಲೆವೊನ್ ಅರೋನಿಯನ್ ಅವರನ್ನು ದಿನದ ಕೊನೆಯ (ಆರನೇ) ಸುತ್ತಿನಲ್ಲಿ ಸೋಲಿಸಿದ ಅದೇ ದೇಶದ ಫ್ಯಾಬಿಯಾನೊ ಕರುವಾನ ಎರಡು ಪಾಯಿಂಟ್‌ಗಳ ಲೀಡ್ ಪಡೆದು ಅಗ್ರಸ್ಥಾನಕ್ಕೇರಿದರು.

ಡಿ.ಗುಕೇಶ್

ಗುಕೇಶ್ ಅವರ ರೀತಿಯಲ್ಲೇ ಅರೋನಿಯನ್ ಕೂಡ ಒಂದು ಪಂದ್ಯ ಸೋತು ಎರಡನ್ನು ಡ್ರಾ ಮಾಡಿಕೊಳ್ಳಬೇಕಾಯಿತು.

ರ‍್ಯಾಪಿಡ್ ವಿಭಾಗದಲ್ಲಿ ಇನ್ನು ಮೂರು ಸುತ್ತುಗಳಷ್ಟೇ ಬಾಕಿಯಿವೆ. ಕರುವಾನ (ಸಂಭವನೀಯ 12ರಲ್ಲಿ 10 ಪಾಯಿಂಟ್) ಈ ವಿಭಾಗ ಗೆಲ್ಲುವಂತೆ ಕಾಣುತ್ತಿದೆ. ಬ್ಲಿಟ್ಜ್ ವಿಭಾಗವು ಡಬಲ್ ರೌಂಡ್‌ರಾಬಿನ್ (18 ಸುತ್ತು) ಮಾದರಿಯಲ್ಲಿ ನಡೆಯಲಿದೆ.

ಅರೋನಿಯನ್ (8 ಪಾಯಿಂಟ್) ಅವರು ಸ್ವದೇಶದ ವೆಸ್ಲಿ ಸೊ ಅವರೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ವೇಷಿಯರ್ ಲಗ್ರಾವ್ (7) ನಾಲ್ಕನೇ ಸ್ಥಾನದಲ್ಲಿದ್ದಾರೆ. ಗುಕೇಶ್ ಮತ್ತು ಅಮೆರಿಕದ ಡೊಮಿಂಗೆಝ್ ಪೆರೆಝ್ (ತಲಾ 6) ನಂತರದ ಸ್ಥಾನದಲ್ಲಿದ್ದಾರೆ.

ಲಕ್ಷ್ಯ ಸೇನ್, ಸಿಂಧು ಮೇಲೆ ಭರವಸೆ

ಪ್ಯಾರಿಸ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಇದೇ 25ರಿಂದ ಆರಂಭವಾಗಲಿರುವ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ತಮ್ಮ ಮೊದಲ ಪಂದ್ಯದಲ್ಲಿ ಅವರು ವಿಶ್ವದ ಅಗ್ರಶ್ರೇಯಾಂಕದ ಆಟಗಾರ, ಚೀನಾದ ಶಿ ಯು ಕೀ ಅವರ ಸವಾಲು ಎದುರಿಸುವರು.

ಉಭಯ ಆಟಗಾರರು ಒಟ್ಟಾರೆ ಐದನೇ ಬಾರಿ ಮುಖಾಮುಖಿಯಾಗಲಿದ್ದಾರೆ. ಅದರಲ್ಲಿ ಶೀ ಅವರು 3–1ರ ಗೆಲುವಿನ ಫಲಿತಾಂಶ ಸಾಧಿಸಿದ್ದಾರೆ.

ಲಕ್ಷ್ಯ ಅವರು 2021ರ ಟೂರ್ನಿಯಲ್ಲಿ ಕಂಚಿನ ಪದಕ ಜಯಿಸಿದ್ದರು. ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಕೂಡ ಗೆದ್ದಿದ್ದರು. ಹೋದ ವರ್ಷ ಪ್ಯಾರಿಸ್ ಒಲಿಂಪಿಕ್ ಕೂಟದ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ತಲುಪಿದ್ದರು.

23 ವರ್ಷದ ಲಕ್ಷ್ಯ ಅವರು ಪ್ರಸಕ್ತ ಋತುವಿನಲ್ಲಿ ಉತ್ತಮ ಲಯದಲ್ಲಿ ಇಲ್ಲ. ಆಲ್ ಇಂಗ್ಲೆಂಡ್ ಓಪನ್‌ನಲ್ಲಿ ಅವರು ಕ್ವಾರ್ಟರ್‌ಫೈನಲ್ ತಲುಪಿದ್ದು, ಈ ಋತುವಿನಲ್ಲಿ ಮಾಡಿದ ಉತ್ತಮ ಸಾಧನೆಯಾಗಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ಅವರು ಈ ಟೂರ್ನಿಯಲ್ಲಿ ಫಿನ್ಲೆಂಡ್‌ನ ಜೋಕಿಮ್ ಓಲ್ಡಾರ್ಫ್ ವಿರುದ್ಧ ಆಡುವುದರೊಂದಿಗೆ ಅಭಿಯಾನ ಆರಂಭಿಸುವರು. ಅವರು ಎರಡನೇ ಸುತ್ತು ಪ್ರವೇಶಿಸಿದರೆ ಡೆನ್ಮಾರ್ಕಿನ ಎರಡನೇ ಶ್ರೇಯಾಂಕದ ಆ್ಯಂಡರ್ಸ್ ಅಂಟೊನ್ಸೆನ್ ವಿರುದ್ಧ ಆಡುವ ಸಾಧ್ಯತೆ ಇದೆ.

ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಈ ಹಿಂದೆ ಐದು ಪದಕಗಳನ್ನು ಗೆದ್ದಿರುವ ಪಿ.ವಿ. ಸಿಂಧು ಅವರಿಗೆ ಮೊದಲ ಸುತ್ತಿನಲ್ಲಿ ಸುಲಭದ ಸವಾಲು ಇದೆ. ಹೈದರಾಬಾದಿನ ಸಿಂಧು ಅವರು 66ನೇ ಶ್ರೇಯಾಂಕದ ಬಲ್ಗೇರಿಯಾ ದೇಶದ ಕಲೊಯಾನಾ ನಾಲಬಂಟೊವಾ ವಿರುದ್ಧ ಮೊದಲ ಪಂದ್ಯದಲ್ಲಿ ಆಡುವರು.

ಭಾರತದ ಲಕ್ಷ್ಯ ಸೇನ್

ಎರಡು ಬಾರಿ ಒಲಿಂಪಿಕ್ಸ್ ಪದಕವಿಜೇತ ಆಟಗಾರ್ತಿಯಾಗಿರುವ ಸಿಂಧು ಅವರು ಇತ್ತೀಚಿನ ಟೂರ್ನಿಗಳಲ್ಲಿ ಲಯ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ. 15ನೇ ಶ್ರೇಯಾಂಕದ ಸಿಂಧು ಅವರು ಇಂಡಿಯಾ ಓಪನ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದು ಈ ಸಲದ ಉತ್ತಮ ಸಾಧನೆಯಾಗಿದೆ.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಗೆ ಮೊದಲ ಸುತ್ತಿನ ಬೈ ಸಿಕ್ಕಿದೆ. ಎರಡನೇ ಸುತ್ತಿನಲ್ಲಿ ಅವರು ಭಾರತದ ಹರಿಹರನ್ ಅಂಶಕರುಣನ್ – ರುಬೇನ್ ಕುಮಾರ್ ಅಥವಾ ಚೈನಿಸ್ ತೈಪೆಯ ಲಿಯು ಕುವಾಂಗ್ ಹೆಂಗ್ ಮತ್ತು ಯಾಂಗ್ ಪೊ ಹಾನ್ ಅವರಲ್ಲಿ ಒಂದು ಜೋಡಿಯನ್ನು ಎದುರಿಸುವ ಸಾಧ್ಯತೆ ಇದೆ.

ರಾಧಾ ಮೋಡಿ ಭಾರತ ಎ ತಂಡಕ್ಕೆ ಜಯ

ಬ್ರಿಸ್ಬೇನ್ (ಪಿಟಿಐ): ಅರ್ಧಶತಕ ಗಳಿಸಿದ ಯಷ್ಟಿಕಾ ಭಾಟಿಯಾ ಮತ್ತು ನಾಯಕಿ ರಾಧಾ ಯಾದವ್ ಅವರ ಪರಿಣಾಮಕಾರಿ ದಾಳಿಯ ಬಲದಿಂದ ಭಾರತ ಎ ತಂಡವು ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಎ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

ಇಯಾನ್ ಹಿಲಿ ಓವಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ಎ ತಂಡವು ಅನಿಕಾ ಲಿರಾಯ್ಡ್ (ಅಜೇಯ 92; 90ಎ, 4X8, 6X1) ಅವರ ಅಮೋಘ ಬ್ಯಾಟಿಂಗ್ ಬಲದಿಂದ 47.5 ಓವರ್‌ಗಳಲ್ಲಿ 214 ರನ್ ಗಳಿಸಿತು. ಭಾರತದ ನಾಯಕಿ, ಸ್ಪಿನ್ನರ್ ರಾಧಾ ಯಾದವ್ (45ಕ್ಕೆ3) ದಾಳಿಯಿಂದ ಆತಿಥೇಯ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.

ಗುರಿ ಬೆನ್ನಟ್ಟಿದ ಭಾರತ ಎ ತಂಡಕ್ಕೆ ಯಷ್ಟಿಕಾ ಮತ್ತು ಶಫಾಲಿ ವರ್ಮಾ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 77 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ಧಾರಾ ಗುಜ್ಜರ್, ರಾಘವಿ ಬಿಷ್ಟ್ ಅವರು ಗೆಲುವಿನ ಸೌಧ ಕಟ್ಟಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ ಎ: 47.5 ಓವರ್‌ಗಳಲ್ಲಿ 214 (ಅನಿಕಾ ಲಿರಾಯ್ಡ್ ಔಟಾಗದೇ 92, ರಚೆಲ್ ಟ್ರೆನ್ನನ್ 51, ರಾಧಾ ಯಾದವ್ 45ಕ್ಕೆ3) ಭಾರತ ಎ: 42 ಓವರ್‌ಗಳಲ್ಲಿ 7ಕ್ಕೆ215 (ಯಷ್ಟಿಕಾ ಭಾಟಿಯಾ 59 ರಾಘವಿ ಬಿಷ್ಟ್ ಔಟಾಗದೇ 25, ಎಲ್ಲಾ ಹೇವಾರ್ಡ್ 46ಕ್ಕೆ2)

ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿ • ಅಗ್ರಸ್ಥಾನದಲ್ಲಿ ಕೀಮರ್

ಕಾರ್ತಿಕೇಯನ್‌ಗೆ ಮಣಿದ ವಿದಿತ್

ಚೆನ್ನೈ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಕಾರ್ತಿಕೇಯನ್ ಮುರಳಿ ಅವರು ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ಏಳನೇ ಸುತ್ತಿನ ತೀವ್ರ ಹೋರಾಟದ ಪಂದ್ಯದಲ್ಲಿ ತಮಗಿಂತ ಮೇಲಿನ ಕ್ರಮಾಂಕದ ವಿದಿತ್ ಗುಜರಾತಿ ಅವರನ್ನು ಸೋಲಿಸಿ ಗಮನ ಸೆಳೆದರು.

ಅಮೆರಿಕದ ಅವಾಂಡರ್ ಲಿಯಾಂಗ್ ಅವರನ್ನು ಸೋಲಿಸಿದ ಜರ್ಮನಿಯ ವಿನ್ಸೆಂಟ್ ಕೀಮರ್ ಅಗ್ರಸ್ಥಾನ ಬಲಪಡಿಸಿಕೊಂಡರಲ್ಲದೇ, ಚೊಚ್ಚಲ ಪ್ರಶಸ್ತಿಗೆ ಹತ್ತಿರವಾದರು.

ಇನ್ನು ಎರಡು ಸುತ್ತಿನ ಪಂದ್ಯಗಳಷ್ಟೇ ಉಳಿದಿವೆ. ಕಪ್ಪು ಕಾಯಿಗಳಲ್ಲಿ ಆಡಿ ಗೆದ್ದ ಕೀಮರ್ ಈ ಗೆಲುವಿನ ಮೂಲಕ 5.5 ಅಂಕ ಸಂಗ್ರಹಿಸಿದ್ದಾರೆ. ಅಗ್ರ ಶ್ರೇಯಾಂಕದ ಅರ್ಜುನ್ ಇರಿಗೇಶಿ ಮತ್ತು ಕಾರ್ತಿಕೇಯನ್ ಮುರಳಿ ತಲಾ 4 ಅಂಕ ಸಂಗ್ರಹಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ವಿದಿತ್ ಗುಜರಾತಿ (ಎಡಗಡೆ) ಜೊತೆ ಆಡುತ್ತಿರುವ ಕಾರ್ತಿಕೇಯನ್ ಮುರಳಿ

ಇರಿಗೇಶಿ ಏಳನೇ ಸುತ್ತಿನಲ್ಲಿ ಡಚ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ (3.5) ಜೊತೆ ಡ್ರಾ ಮಾಡಿಕೊಂಡರು. ಅಮೆರಿಕದ ರೇ ರಾಬ್ಸನ್ (2.5) ಅವರು ಭಾರತದ ನಿಹಾಲ್ ಸರಿನ್‌ಗೆ (3) ಮಣಿದರು. ಜೋರ್ಡನ್ ವಾನ್ ಫೋರಿಸ್ಟ್ (3.5) ಮತ್ತು ಭಾರತದ ವಿ.ಪ್ರಣವ್ (2.5) ನಡುವಣ ಪಂದ್ಯ ಡ್ರಾ ಆಯಿತು.

ಚಾಲೆಂಜರ್ ವಿಭಾಗದಲ್ಲಿ ಏಳನೇ ಸುತ್ತಿನ ನಂತರ ಎಂ.ಪ್ರಾಣೇಶ್ ಮತ್ತು ಲಿಯಾನ್ ಲ್ಯೂಕ್ ಮೆಂಡೋನ್ಸಾ ಅವರು ತಲಾ 5.5 ಅಂಕ ಸಂಗ್ರಹಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಅಭಿಮನ್ಯು ಪುರಾಣಿಕ್ (5) ಏಕಾಂಗಿಯಗಿ ಎರಡನೇ ಸ್ಥಾನದಲ್ಲಿದ್ದರೆ, ಅಧಿಬನ್ ಮತ್ತು ಇನಿಯನ್ (ತಲಾ 4) ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ದೀಪ್ತಾಯನ ಘೋಷ್ (3.5) ನಂತರದ ಸ್ಥಾನದಲ್ಲಿದ್ದಾರೆ.

ಮಾಸ್ಟರ್ಸ್ ಮತ್ತು ಚಾಲೆಂಜರ್ ವಿಭಾಗದಲ್ಲಿ ತಲಾ 10 ಆಟಗಾರರು ಕಣದಲ್ಲಿದ್ದಾರೆ.

ರಾಷ್ಟ್ರೀಯ ದಾಖಲೆ ಉತ್ತಮಪಡಿಸಿದ ಗುಲ್ವೀರ್

ನವದೆಹಲಿ (ಪಿಟಿಐ): ಭಾರತದ ಗುಲ್ವೀರ್ ಸಿಂಗ್ ಅವರು ಬುಡಾಪೆಸ್ಟ್‌ನಲ್ಲಿ ನಡೆದ ಜೂಲೈ ಈಸ್ತವಾನ್ ಮೆಮೊರಿಯಲ್ ಹಂಗೇರಿಯನ್ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರೀ ಟೂರ್ನಿಯಲ್ಲಿ 3000 ಮೀ. ಓಟದಲ್ಲಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಟೂರ್ ಗೋಲ್ಡ್ ಮಟ್ಟದ ಈ ಸ್ಪರ್ಧೆಯಲ್ಲಿ ಗುಲ್ವೀರ್ ಅವರು 7ನಿ.34.49 ಸೆಕೆಂಡುಗಳಲ್ಲಿ ಗುರಿ ತಲುಪಿ, ಐದನೇ ಸ್ಥಾನ ಪಡೆದರು. ಇದರೊಂದಿಗೆ, ರಾಷ್ಟ್ರೀಯ ದಾಖಲೆಯನ್ನು (7ನಿ.38.26ಸೆ.) ಮತ್ತಷ್ಟು ಉತ್ತಮಪಡಿಸಿಕೊಂಡರು. 27 ವರ್ಷ ವಯಸ್ಸಿನ ಗುಲ್ವೀರ್, 5,000 ಮೀ. (12ನಿ.59.77ಸೆ.) ಹಾಗೂ 10,000 ಮೀ. (27ನಿ.00.22ಸೆ.) ಓಟದಲ್ಲಿಯೂ ರಾಷ್ಟ್ರೀಯ ದಾಖಲೆಯನ್ನು ಹೊಂದಿದ್ದಾರೆ.